₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 21.12.2025 ಸಂಪುಟ: 68 ಸಂಚಿಕೆ: 229 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂಡರ್ 19 ಏಷ್ಯಾಕಪ್
ಇಂದು ಭಾರತ-ಪಾಕ್ ಫೈನಲ್

ಭಾನುವಾರ ದುಬೈನಲ್ಲಿ ಭಾರತ-ಪಾಕಿಸ್ತಾನ ತಂಡಗಳ 19 ವಯೋಮಿತಿ ಏಷ್ಯಾ ಕಪ್ ಕ್ರಿಕೆಟ್ ಫೈನಲ್ ನಡೆಯಲಿದೆ. ಅಜೇಯವಾಗಿ ಫೈನಲ್ ಪ್ರವೇಶಿಸಿರುವ ಆಯುಷ್ ಮ್ಹಾತ್ರೆ ನೇತೃತ್ವದ ಪ್ರಬಲ ಭಾರತ ತಂಡ 2ನೇ ಬಾರಿ ಕಪ್ ಗೆಲ್ಲುವ ವಿಶ್ವಾಸ ಹೊಂದಿದೆ. ಫರ್ಹಾನ್ ಯೂಸುಫ್ ನೇತೃತ್ವದ ಪಾಕಿಸ್ತಾನ ಲೀಗ್ ಹಂತದಲ್ಲಿ ಭಾರತದ ವಿರುದ್ಧ ಸೋತಿದೆ.

ಹೈಕಮಾಂಡ್ ಏನೋ ಹೇಳಿದೆ, ಸಂದರ್ಭ ಬಂದಾಗ ಹೇಳ್ತೇನೆ: ಡಿಕೆಶಿ
ಡಿಕೆಶಿ ಹೇಳಿಕೆ ಪ್ರಸ್ತಾಪಿಸಿದ್ದಕ್ಕೆ ಸಿಟ್ಟಾದ ಮುಖ್ಯಮಂತ್ರಿ ಸಿದ್ದರಾಮಯ್ಯ

ರಾಹುಲ್, ಸೋನಿಯಾ ಮೇಲೆ ಶಿವಕುಮಾರ್ ಒತ್ತಡ ತಂತ್ರ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಳಿಗಾಲದ ಅಧಿವೇಶನ ಮುಗಿಯುತ್ತಿದ್ದಂತೆ ನಿರೀಕ್ಷೆಯಂತೆ ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಕುರ್ಚಿ ಗುದ್ದಾಟ ಮುನ್ನೆಲೆಗೆ ಬಂದಿದೆ. ಬೆಳಗಾವಿ ಅಧಿವೇಶನ ಮುಗಿಯುವ ತನಕ ಒಂದಾಗಿ ಸಾಗಿ ಎನ್ನುವ ಸಂದೇಶವನ್ನು ಹೈಕಮಾಂಡ್ ನೀಡಿದ್ದರಿಂದ ಸಿಎಂ, ಡಿಸಿಎಂ ಇಬ್ಬರೂ ಮೌನಕ್ಕೆ ಶರಣಾಗಿದ್ದರು. ಆದರೆ ಅಧಿವೇಶನದ ಕೊನೆ ದಿನ ನನಗೆ ಹೈಕಮಾಂಡ್ ಬಲವಿದೆ, ಯಾವುದೇ ಒಪ್ಪಂದವಾಗಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಂತೆ, ಡಿ.ಕೆ.ಶಿವಕುಮಾರ್ ಮತ್ತೆ ತಮ್ಮ ತಂತ್ರಗಾರಿಕೆ ಶುರು ಮಾಡಿದ್ದು, ಇಬ್ಬರ ನಡುವೆ ಒಪ್ಪಂದವಾಗಿದೆ ಎಂದಿದ್ದು ಭಾರಿ ಕುತೂಹಲಕ್ಕೆ ಕಾರಣವಾಗಿತ್ತು.

ಸದ್ಯ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮೇಲೆ ಒತ್ತಡ ಹೇರುವುದೊಂದೇ ಶಿವಕುಮಾರ್‌ಗೆ ಉಳಿದಿರುವ ದಾರಿ ಎನ್ನಲಾಗಿದೆ. ಇನ್ನೊಂದು ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ್ ಹೇಳಿಕೆಯೊಂದಕ್ಕೆ ಪ್ರತಿಕ್ರಿಯೆ ಕೇಳಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಟ್ಟಾಗಿದ್ದಾರೆ.

ಇದೀಗ ಶನಿವಾರ ಬೆಳಗ್ಗೆ ಮಾತನಾಡಿರುವ ಡಿ.ಕೆ.ಶಿವಕುಮಾರ್, ನಮ್ಮ ಹೈಕಮಾಂಡ್ ನಾಯಕರು ಸಿಎಂ ಮತ್ತು ನನಗೆ ಇಬ್ಬರಿಗೂ ಏನೋ ಹೇಳಿದ್ದಾರೆ. ಸೂಕ್ತ ಸಮಯದಲ್ಲಿ ಕರೆಸುತ್ತೇವೆ ಎಂದೂ ಇಬ್ಬರಿಗೂ ಹೇಳಿದ್ದಾರೆ. ಆಗ ಇಬ್ಬರೂ ದಿಲ್ಲಿಗೆ ಹೋಗುತ್ತೇವೆ. ದೆಹಲಿಗೆ ಹೋಗುವುದಿದ್ದರೆ ನಿಮಗೂ (ಮಾಧ್ಯಮದವರಿಗೂ) ತಿಳಿಸುತ್ತೇವೆ. ನಿಮಗೆ ತಿಳಿಸದೇ ಏನೂ ಮಾಡುವುದಿಲ್ಲ. ನಾನು ಕದ್ದುಮುಚ್ಚಿ ಹೋಗುವುದಿಲ್ಲ ಎಂದಿದ್ದಾರೆ.

ರಾಹುಲ್ ಗಾಂಧಿಯಿಂದಲೇ ಪರಿಹಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆ ಹಾಗೂ ವಿಧಾನಪರಿಷತ್‌ನಲ್ಲಿ ನನಗೆ ಹೈಕಮಾಂಡ್ ಬಲವಿದೆ. ಯಾರೂ ಅಲ್ಲಾಡಿಸಲು ಆಗುವುದಿಲ್ಲ, ನಾನೇ ಮುಂದೆಯೂ ಮುಖ್ಯಮಂತ್ರಿ ಎನ್ನುವ ಹೇಳಿಕೆ ಕುತೂಹಲಕ್ಕೆ ಕಾರಣವಾಗಿದೆ. ಆದರೀಗ ದೆಹಲಿ ನಾಯಕರು ಈ ವಿಷಯ ದಲ್ಲಿ ಮೌನಕ್ಕೆ ಶರಣಾಗಿರುವುದರಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಮ್ಮ ಆಕಾಂಕ್ಷೆ ಈಡೇರಿಸಿಕೊಳ್ಳಲು ರಾಹುಲ್ ಗಾಂಧಿ ಅವರೊಂದೇ ಪರಿಹಾರ ಎನ್ನುವುದು ಖಚಿತವಾಗಿದೆ. ಆದ್ದರಿಂದ ಇದೀಗ ರಾಹುಲ್ ಹಾಗೂ ಸೋನಿಯಾ ಗಾಂಧಿ ಅವರ ಮೇಲೆ ಒತ್ತಡ ಹಾಕುವ ಲೆಕ್ಕಾಚಾರ ದಲ್ಲಿದ್ದಾರೆ ಎಂದು ತಿಳಿದುಬಂದಿದೆ.

> ನನಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪಕ್ಷದ ಹೈಕಮಾಂಡ್ ಏನೋ ಹೇಳಿದೆ. ಸೂಕ್ತ ಸಮಯದಲ್ಲಿ ಕರೆಸುತ್ತೇವೆ ಎಂದಿದ್ದಾರೆ. ಆಗ ಇಬ್ಬರೂ ದೆಹಲಿಗೆ ಹೋಗುತ್ತೇವೆ. ನಾನು ಕದ್ದುಮುಚ್ಚಿ ದೆಹಲಿಗೆ ಹೋಗುವುದಿಲ್ಲ.
>
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

> ಟಾಸ್ ಮಾಡಿದ ಸಮಯದಲ್ಲಿ ಸಿಎಂ-ಡಿಸಿಎಂ ಇಬ್ಬರೇ ಇದ್ದರು. ಅದು ದೆಹಲಿಯ ಫಿರೋಜ್ ಶಾ ಕೊಟ್ಲಾದ ಮೈದಾನದಲ್ಲಿ ಟಾಸ್ ಆಗಿದೆ. ಇಬ್ಬರೇ ಟಾಸ್ ಹಾಕಿದವರು. ಅದು ಹೆಡ್ಡೋ, ಟೇಲೋ ಅವರನ್ನೇ ಕೇಳಬೇಕು.
>
> **ಸತೀಶ್ ಜಾರಕಿಹೊಳಿ**
> ಲೋಕೋಪಯೋಗಿ ಸಚಿವ

ಏ ಯಾರ್‍ರೀ ಅದು: ಸಿಎಂ ಸಿಡಿಮಿಡಿ

ಬೆಳಗಾವಿಯ ಹುದಲಿಯಲ್ಲಿ ನಡೆದ ಕಾರ್ಯಕ್ರಮದ ಬಳಿಕ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಮಣ್ಣಿನ ಆರೋಗ್ಯ ಬಹಳ ಮುಖ್ಯ, ಮಣ್ಣು ಸಂರಕ್ಷಣೆಯಾಗಬೇಕು. ನೀರು ನಿರ್ವ ಹಣೆಯಾಗಬೇಕು. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಯೋಜನೆ ರೂಪಿಸುವುದಾಗಿ ಸಮಾಧಾನದಿಂದ ಹೇಳಿದರು. ಈ ನಡುವೆ ಪತ್ರಕರ್ತರು, ಹೈಕಮಾಂಡ್ ಕರೆ ಬಂದಿದೆ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ಕೇಳುತ್ತಿದ್ದಂತೆ, ಏ ಯಾರ್‍ರೀ ಅದು ಎಂದು ಗದರಿದ ಘಟನೆ ಬೆಳಗಾವಿಯಲ್ಲಿ ನಡೆದಿದೆ.

ರಾಜ್ಯಗಳು-ಕೇಂದ್ರ ಸರಕಾರದ ನಡುವೆ ಮಹತ್ವದ ಸಭೆ
ಮಂಗಳವಾರ ಡಿಕೆ ದಿಲ್ಲಿಗೆ, ಹೈಕಮಾಂಡ್ ಭೇಟಿ ನಿರೀಕ್ಷೆ

ನದಿ ಜೋಡಣೆ ಸಭೆ ಡಿಕೆಶಿ ಮತ್ತೆ ದಿಲ್ಲಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರಮಟ್ಟದಲ್ಲಿಯೇ ಬಹುನಿರೀಕ್ಷಿತ ನದಿ ಜೋಡಣೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಭಾಗವಹಿಸುವ ಉದ್ದೇಶದಿಂದ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಮಂಗಳವಾರ ದೆಹಲಿಗೆ ತೆರಳಲು ಸಜ್ಜಾಗಿದ್ದಾರೆ. ಈ ಬಾರಿಯ ದೆಹಲಿ ಭೇಟಿ ಅಧಿಕೃತ ಸರಕಾರಿ ಭೇಟಿಯಾಗಿದ್ದರೂ, ರಾಜ್ಯದಲ್ಲಿ ಭುಗಿಲೆದ್ದಿರುವ ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರನ್ನು ಭೇಟಿಯಾದರೂ ಅಚ್ಚರಿಯಿಲ್ಲ. ದೆಹಲಿ ನಾಯಕರನ್ನು ಭೇಟಿಯಾಗುವ ಬಗ್ಗೆ ಡಿಕೆ ಯಾವುದೇ ಸ್ಪಷ್ಟನೆ ನೀಡದಿದ್ದರೂ, ಆ ವೇಳೆಗೆ ವಿದೇಶದಿಂದ ರಾಹುಲ್ ಗಾಂಧಿ ವಾಪಸಾಗಿರುವುದರಿಂದ ಭೇಟಿಗೆ ಪ್ರಯತ್ನಿಸುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಈ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದು, ಕೇಂದ್ರ ಸರಕಾರ ಬಹುದಿನಗಳ ಬೇಡಿಕೆಯಂತೆ ರಾಷ್ಟ್ರಮಟ್ಟದಲ್ಲಿ ನದಿಗಳ ಜೋಡಣೆಗೆ ಪ್ರಕ್ರಿಯೆ ಆರಂಭಿಸಿದೆ. ಅದರ ಕುರಿತಂತೆ ಚರ್ಚಿಸಲು ವಿವಿಧ ರಾಜ್ಯಗಳ ಜಲಸಂಪನ್ಮೂಲ ಸಚಿವರಿಗೆ ಆಹ್ವಾನ ನೀಡಿದೆ. ಆದ್ದರಿಂದ ಭೇಟಿಗೆ ದೆಹಲಿಗೆ ತೆರಳುವುದಾಗಿ ಹೇಳಿದ್ದಾರೆ. ದೆಹಲಿಯ ಭೇಟಿಯ ವೇಳೆ ಕೇಂದ್ರ ಜಲಶಕ್ತಿ ಸಚಿವರನ್ನು ಮತ್ತು ಅರಣ್ಯ ಸಚಿವರನ್ನು ಭೇಟಿ ಮಾಡಿ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು, ಮಹಾದಾಯಿ ನದಿಗೆ ಅಡ್ಡಲಾಗಿ ಕಳಸಾ-ಬಂಡೂರಿ ಅಣೆಕಟ್ಟು ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಪರಿಸರ ಇಲಾಖೆಯ ಅನುಮತಿ ಹಾಗೂ ಇತರ ನೆರವುಗಳ ಬಗ್ಗೆ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. → 4

ಏನೇನು ಚರ್ಚೆ?

- ಕೇಂದ್ರ ಸರಕಾರದಿಂದ ರಾಷ್ಟ್ರಮಟ್ಟದಲ್ಲಿ ನದಿಗಳ ಜೋಡಣೆಗೆ ಪ್ರಕ್ರಿಯೆ ಆರಂಭ. ಈ ಕುರಿತು ಚರ್ಚೆಗೆ ವಿವಿಧ ರಾಜ್ಯಗಳ ಜಲ ಸಂಪನ್ಮೂಲ ಸಚಿವರಿಗೆ ಆಹ್ವಾನ
- ದೆಹಲಿ ಭೇಟಿ ವೇಳೆ ಶಿವಕುಮಾರ್‌ರಿಂದ ಕೇಂದ್ರ ಜಲಶಕ್ತಿ ಸಚಿವರು, ಅರಣ್ಯ ಸಚಿವರು, ಕೇಂದ್ರ ನಗರಾಭಿವೃದ್ಧಿ ಸಚಿವರ ಭೇಟಿ. ಹಲವು ವಿಚಾರಗಳ ಕುರಿತು ಮಾತುಕತೆ
- ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು, ಮಹಾದಾಯಿ ನದಿಗೆ ಅಡ್ಡಲಾಗಿ ಕಳಸಾ-ಬಂಡೂರಿ ಅಣೆಕಟ್ಟು ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಚರ್ಚೆ ನಿರೀಕ್ಷೆ
- ಅವಕಾಶ ಸಿಕ್ಕರೆ ಶಿವಕುಮಾರ್‌ರಿಂದ ಕಾಂಗ್ರೆಸ್ ಹೈಕಮಾಂಡ್ ಭೇಟಿಗೆ ಯತ್ನ. ಪಕ್ಷಕ್ಕಾಗಿ ತಾವು ಮಾಡಿದ ತ್ಯಾಗಗಳನ್ನು ಮನವರಿಕೆ ಮಾಡಿ ಕೊಡುವ ಸಾಧ್ಯತೆ: ಮೂಲಗಳು

ಬಿಜೆಪಿ ನಾಯಕ ಪುಣೆಯಲ್ಲಿ ಸಂಚಾರ?

ಶಾಸಕ ಬೈರತಿ ಪತ್ತೆಗೆ ಶೋಧ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ, ಬಿಜೆಪಿ ಶಾಸಕ ಬೈರತಿ ಬಸವ ರಾಜ್‌ಗೆ ಬಂಧನ ಭೀತಿ ಎದುರಾಗಿದೆ. ಶುಕ್ರ ವಾರ ಹೈಕೋರ್ಟ್ ತನಿಖೆಗೆ ನೀಡಿದ್ದ ತಡೆ ತೆರವು ಮತ್ತು ನಿರೀಕ್ಷಣಾ ಜಾಮೀನು ಅರ್ಜಿ ವಜಾ ಮಾಡಿದೆ. ಇದರ ಬೆನ್ನಲ್ಲೇ ಬೈರತಿ ಬಸವ ರಾಜ್ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ಸಂಪರ್ಕಕ್ಕೆ ಸಿಗುತ್ತಿಲ್ಲ. ಬಂಧನದ ಭೀತಿ ಹಿನ್ನೆಲೆಯಲ್ಲಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರಾ ಎಂಬ ಅನುಮಾನಗಳು ಹುಟ್ಟಿ ಕೊಂಡಿವೆ. ಸದ್ಯ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಸದ್ಯ ಅವರು ಗೋವಾ ಅಥವಾ ಮಹಾರಾಷ್ಟ್ರದ ಪುಣೆಯಲ್ಲಿರಬಹುದು ಎನ್ನಲಾಗಿದೆ.

2025 ಜುಲೈ 15ರಂದು ರಾತ್ರಿ ಬೆಂಗಳೂರಿನ ಭಾರತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹಲಸೂರು ಲೇಕ್ ಬಳಿ ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವನ ಬರ್ಬರ ಕೊಲೆ ನಡೆದಿತ್ತು. ಕೊಲೆಯಾದ ಬಿಕ್ಲು ಶಿವ ತಾಯಿ, ಮಾಜಿ ಸಚಿವ ಬೈರತಿ ಬಸವರಾಜ್ ಸೇರಿ ಹಲವರ ವಿರುದ್ಧ ದೂರು ನೀಡಿದ್ದರು. ಈ ಪ್ರಕರಣದಲ್ಲಿ ಬೈರತಿ ಬಸವರಾಜ್ ಎ5 ಆರೋಪಿಯಾಗಿ ಎರಡು ಬಾರಿ ವಿಚಾರಣೆ ಎದುರಿಸಿದ್ದಾರೆ. ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೆ ಹೋಗಿದ್ದ ಬೈರತಿ ಬಸವರಾಜ್, ಅಲ್ಲಿಂದಲೇ ನಾಪತ್ತೆಯಾಗಿದ್ದಾರೆ.

ತಿಮರೋಡಿ ಸೇರಿ ಐವರ ವಿರುದ್ಧ ಚೆನ್ನಯ್ಯ ದೂರು

ಬುರುಡೆ ಗ್ಯಾಂಗಿಗೆ ಸಂಕಷ್ಟ

ಬೆಳ್ತಂಗಡಿ: ಧರ್ಮಸ್ಥಳ ಬುರುಡೆ ಪ್ರಕರಣಕ್ಕೆ ಈಗ ಹೊಸ ತಿರುವು ಲಭಿಸಿದೆ. ಪ್ರಕರಣದ ಪ್ರಮುಖ ಸಾಕ್ಷಿ ಹಾಗೂ ದೂರುದಾರ ಚಿನ್ನಯ್ಯ ಅಲಿಯಾಸ್ ಚಿನ್ನ ಎಸ್., ತನಗೆ ಮತ್ತು ತನ್ನ ಪತ್ನಿಗೆ ಜೀವ ಬೆದರಿಕೆ ಇದೆ ಎಂದು ಆರೋಪಿಸಿ ಪೊಲೀಸ್ ರಕ್ಷಣೆ ಕೋರಿದ್ದಾರೆ. ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಹೊರಬಂದಿರುವ ಚಿನ್ನಯ್ಯ, ತನಗೆ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠಲ ಗೌಡ, ಜಯಂತ್ ಹಾಗೂ ಸಮೀರ್ ಎಂ.ಡಿ. ಎಂಬವರಿಂದ ಜೀವ ಬೆದರಿಕೆ ಬರುವ ಸಾಧ್ಯತೆಯಿದೆ ಎಂದು ಅವರು ಬೆಳ್ತಂಗಡಿ ಠಾಣೆಗೆ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಚಿನ್ನಯ್ಯನ ದೂರು ಸ್ವೀಕರಿಸಿದ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲು ಮಾಡಿದ್ದಾರೆ. ಧರ್ಮಸ್ಥಳದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಗುಟ್ಟಾಗಿ ಹೂತುಹಾಕಲಾಗಿದೆ ಎಂಬ ಗಂಭೀರ ಆರೋಪ ಮಾಡಿ ಚಿನ್ನಯ್ಯ ಸುದ್ದಿಯಾಗಿದ್ದರು. ಅವರು ಬುರುಡೆಯೊಂದನ್ನು ಹಿಡಿದು ಕಾಣಿಸಿಕೊಂಡು ದೊಡ್ಡ ಸುದ್ದಿಯಾಗಿತ್ತು. ಇದನ್ನು ಎಸ್‌ಐಟಿ ತನಿಖೆ ಮಾಡಿ, ಬುರುಡೆಯೇ ಸುಳ್ಳು ಎಂದು ಸಾಬೀತಾಗಿತ್ತು. ಆತ ಹೇಳಿದ ಕಡೆ ಎಲ್ಲೂ ಬುರುಡೆಗಳು ಸಿಕ್ಕಿರಲಿಲ್ಲ.

ಗಡಿಭಾಗದಲ್ಲಿ ಪ್ರತಿಭಟನಾ ಮೆರವಣಿಗೆ

ಭಾರತ ಗಡಿಯಲ್ಲಿ ಕಟ್ಟೆಚ್ಚರ

ಢಾಕಾ: ಢಾಕಾ: ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿ ನಾಯಕ ಉಸ್ಮಾನ್ ಶರೀಫ್ ಹಾದಿ ಹತ್ಯೆ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ, ಅಕ್ಷರಶಃ ನಿಯಂತ್ರಣ ತಪ್ಪುತ್ತಿದೆ. ಇಂಕ್ವಿಲಾಬ್ ಪೋರಂ ಮತ್ತು ಜಮಾತ್ ಉಗ್ರಗಾಮಿಗಳು ಶುಕ್ರವಾರ ಬಾಂಗ್ಲಾದೇಶದ ಬೆನಪೋಲ್‌ನಿಂದ ಭಾರತದ ಗಡಿಯವರೆಗೆ ಮೆರವಣಿಗೆ ನಡೆಸಿ ಪ್ರತಿಭಟಿಸಿದ್ದಾರೆ. ಪ್ರತಿಭಟನಾಕಾರರು ಗಡಿಭಾಗಕ್ಕೆ ನುಗ್ಗುತ್ತಿರುವುದರಿಂದ, ಭಾರತೀಯ ಸೇನೆ ಕಟ್ಟೆಚ್ಚರ ಘೋಷಣೆ ಮಾಡಿದೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವಂತೆ ಭಾರತವನ್ನು ಒತ್ತಾಯಿಸಿದ ಪ್ರತಿಭಟನಾಕಾರರು, ಭಾರತ ವಿರೋಧಿ ಘೋಷಣೆಗಳನ್ನು ಕೂಗಿದ್ದಾರೆ. ಏತನ್ಮಧ್ಯೆ, ಚಟ್ಟೋಗ್ರಾಮ್‌ನಲ್ಲಿರುವ ಚಂದ್ರನಾಥ ದೇವಸ್ಥಾನದ ಹೊರಗೆ, ಧಾರ್ಮಿಕ ಘೋಷಣೆಗಳನ್ನು ಕೂಗುತ್ತಾ, ಕೋಮುದ್ವೇಷವನ್ನು ಹರಡುವ ವ್ಯವಸ್ಥಿತ ಷಡ್ಯಂತ್ರ ಕೂಡ ನಡೆದಿದೆ.

7 ಆರೋಪಿ ಸೆರೆ: ಬಾಂಗ್ಲಾದೇಶದ ಮೈಮನ್ಸಿಂಗ್ ಜಿಲ್ಲೆಯ ಭಾಲುಕಾ ಪ್ರದೇಶದಲ್ಲಿ ಶುಕ್ರವಾರ ನಡೆದ ಹಿಂದೂ ಯುವಕ ದೀಪುಚಂದ್ರ ದಾಸ್ ಕ್ರೂರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ 7 ಜನರನ್ನು ಬಂಧಿಸಲಾಗಿದೆ ಎಂದು ಮಧ್ಯಂತರ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಶನಿವಾರ ದೃಢಪಡಿಸಿದ್ದಾರೆ. ಮೊದಲೇ ಅವರು ಕಠಿಣಕ್ರಮದ ಎಚ್ಚರಿಕೆ ನೀಡಿದ್ದರು.

ಇಸ್ರೋ ಪರೀಕ್ಷೆ ಯಶಸ್ವಿ

ಚೆನ್ನೈ: ಮೊದಲ ಬಾರಿ ಮಾನವಸಹಿತ ಅಂತರಿಕ್ಷ ಯಾನಕ್ಕೆ ಸಿದ್ಧವಾಗುತ್ತಿರುವ ಭಾರತೀಯ ಬಾಹ್ಯಾ ಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ಗಗನ ಯಾತ್ರಿಗಳು ಸುರಕ್ಷಿತವಾಗಿ ಭೂಮಿಗೆ ಇಳಿಯುವ ಅಭ್ಯಾಸ ಕ್ಕಾಗಿ ಡ್ರೋಗ್ ಪ್ಯಾರಾಚೂಟ್ ಅರ್ಹತಾ ಪರೀಕ್ಷೆಯನ್ನು ಯಶಸ್ವಿ ಯಾಗಿ ನಡೆಸಿದೆ. ಗಗನಯಾನ ಸಿಬ್ಬಂದಿಯಿರುವ ಘಟಕದ ವೇಗನಿಯಂತ್ರಣ ವ್ಯವಸ್ಥೆಯ ನಿರ್ಣಾಯಕ ಹಂತವಾದ ಡ್ರೋಗ್ ಪ್ಯಾರಾಚೂಟ್‌ಗಳ ಅರ್ಹತಾ ಪರೀಕ್ಷೆಗಳ ಸರಣಿಯನ್ನು ಯಶಸ್ವಿ ಯಾಗಿ ಪೂರ್ಣಗೊಳಿಸಲಾಗಿದೆ ಎಂದು ಇಸ್ರೋ ಶನಿವಾರ ಘೋಷಿಸಿದೆ. ಡಿಸೆಂಬರ್ 18 ಮತ್ತು 19ರಂದು ಚಂಡೀಗಢದ ಟರ್ಮಿನಲ್ ಬ್ಯಾಲಿಸ್ಟಿಕ್ಸ್ ಸಂಶೋಧನಾ ಪ್ರಯೋಗಾಲಯದಲ್ಲಿ ಪರೀಕ್ಷೆಗಳನ್ನು ನಡೆಸಲಾಯಿತು.

ಇಮ್ರಾನ್ ಪತ್ನಿಗೆ ಜೈಲು

ಇಸ್ಲಾಮಾಬಾದ್: ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆಗೊಳಗಾದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಮಾಜಿ ಪತ್ನಿ ಬುಶ್ರಾ ಬೀಬಿಗೆ ಪಾಕಿಸ್ತಾನದ ನ್ಯಾಯಾಲಯ ತಲಾ 17 ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ಹೊರಡಿಸಿದೆ. ಈ ಪ್ರಕರಣವು 2021ರಲ್ಲಿ ಸೌದಿ ಸರಕಾರದಿಂದ ಮಾಜಿ ದಂಪತಿ ಪಡೆದ ಉಡುಗೊರೆಗಳಲ್ಲಿನ ವಂಚನೆಯ ಕುರಿತಾಗಿದೆ. ಇಮ್ರಾನ್ ಖಾನ್ ಮತ್ತು ಬುಶ್ರಾ ಅವರಿಗೆ ಪಾಕಿಸ್ತಾನ ದಂಡ ಸಂಹಿತೆಯ ಸೆಕ್ಷನ್ 409 (ಕ್ರಿಮಿನಲ್ ನಂಬಿಕೆ ಉಲ್ಲಂಘನೆ) ಅಡಿಯಲ್ಲಿ 10 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯ ವಿವಿಧ ವಿಧಿಗಳಡಿ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ನ್ಯಾಯಾಲಯವು ಅವರೆಲ್ಲರಿಗೂ ತಲಾ 16.4 ಮಿಲಿಯನ್ ದಂಡವನ್ನೂ ವಿಧಿಸಿದೆ.

ಮೋದಿ ವಾಕ್‌ಪ್ರಹಾರ



ಗುವಾಹಟಿ: ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ನುಸುಳುಕೋರರನ್ನು ಚುನಾವಣಾ ಪ್ರಕ್ರಿಯೆಯಿಂದ ಹೊರಗಿಡಲು ಪ್ರಯತ್ನಿಸುತ್ತಿದ್ದರೆ, ದೇಶದ್ರೋಹಿಗಳು ಈ ನುಸುಳುಕೋರರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಗುವಾಹಟಿ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಉದ್ಘಾಟನೆಯ ಬಳಿಕ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಅವರು, ನುಸುಳುಕೋರರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ. ಅರಣ್ಯವನ್ನು ಕಬಳಿಸಿ, ಅಸ್ಸಾಮ್‌ನ ಭದ್ರತೆ ಮತ್ತು ಅಸ್ಮಿತೆಗೆ ಅಡ್ಡಿಯಾಗಿರುವ ನುಸುಳುಕೋರರನ್ನು ಕಾಂಗ್ರೆಸ್ ದಶಕಗಳಿಂದ ರಕ್ಷಿಸಿಕೊಂಡು ಬಂದಿದೆ ಎಂದರು.

41 ನಕ್ಸಲರು ಶರಣು

ಹೈದರಾಬಾದ್: ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ 'ಕಂಪನಿ ಪ್ಲಟೂನ್ ಸಮಿತಿ' ಮತ್ತು 'ವಿಭಾಗ ಮಟ್ಟದ ಸಮಿತಿ'ಯ 6 ಹಿರಿಯ ನಕ್ಸಲ್ ನಾಯಕರು ಸೇರಿದಂತೆ ಒಟ್ಟು 41 ಮಾವೋವಾದಿ ಹೋರಾಟಗಾರರು ಶಸ್ತ್ರಾಸ್ತ್ರ ತ್ಯಜಿಸಿ ತೆಲಂಗಾಣ ಪೊಲೀಸರಿಗೆ ಶರಣಾಗಿದ್ದಾರೆ. 41 ನಕ್ಸಲರೂ ಹಿಂಸೆಯ ಹಾದಿ ಕೈಬಿಟ್ಟು ಸಮಾಜದ ಮುಖ್ಯವಾಹಿನಿಗೆ ಸೇರಲು ಬಯಸಿ ಶರಣುಬಂದರು ಎಂದು ತೆಲಂಗಾಣ ಪೊಲೀಸ್ ಮಹಾನಿರ್ದೇಶಕ ಬಿ.ಶಿವಧರ್ ರೆಡ್ಡಿ ತಿಳಿಸಿದ್ದಾರೆ. ಶರಣಾದ ನಕ್ಸಲರ ಕಡೆಯಿಂದ 1 ಬಂದೂಕು, 3 ಎಕೆ-47 ರೈಫಲ್‌ಗಳು ಮತ್ತು ಐದು ಎಸ್‌ಎಲ್‌ಆರ್ ಬಂದೂಕು ಸೇರಿದಂತೆ 24 ವಿವಿಧ ಬಗೆಯ ಶಸ್ತ್ರಾಸ್ತ್ರಗಳು ಪೊಲೀಸರ ವಶಕ್ಕೆ ಬಂದಿವೆ. 733 ಗುಂಡುಗಳನ್ನೂ ಹಸ್ತಾಂತರಿಸಿದರು.

ಶುಕ್ರವಾರ ತಡರಾತ್ರಿ ಅಸ್ಸಾಮ್‌ನ ಹೊಜಾಯಿಯಲ್ಲಿ ಭೀಕರ ಘಟನೆ | ಜೀವಾಪಾಯವಿಲ್ಲದೇ ಪ್ರಯಾಣಿಕರು ಪಾರು

ರೈಲಿಗೆ ಡಿಕ್ಕಿ ಹೊಡೆದು 8 ಆನೆಗಳ ದುರ್ಮರಣ

ಗುವಾಹಟಿ: ಅಸ್ಸಾಮ್‌ನ ಹೊಜಾಯಿ ಜಿಲ್ಲೆಯಲ್ಲಿ ಶುಕ್ರವಾರ ತಡರಾತ್ರಿ ಭೀಕರ ರೈಲು-ಆನೆ ಡಿಕ್ಕಿ ಸಂಭವಿಸಿದೆ. 8 ಆನೆಗಳು ಮೃತಪಟ್ಟಿವೆ. ಇನ್ನೊಂದು ಮರಿ ಆನೆ ಗಾಯಗೊಂಡಿದೆ. ಮಿಜೋರಾಮ್‌ನ ಸೈರಾಂಗ್-ನವದೆಹಲಿಯನ್ನು ಸಂಪರ್ಕಿಸುವ ರಾಜಧಾನಿ ಎಕ್ಸ್‌ಪ್ರೆಸ್‌ಗೆ ತಡರಾತ್ರಿ 2.17 ಗಂಟೆಗೆ ಆನೆಗಳು ಗುಂಪು ಅಡ್ಡ ಬಂದಿದ್ದರಿಂದ ದುರಂತ ಸಂಭವಿಸಿದೆ. ಆನೆಗಳು ದಿಢೀರ್ ನುಗ್ಗಿದ್ದನ್ನು ಗಮನಿಸಿದ ಚಾಲಕ ತುರ್ತು ಬ್ರೇಕನ್ನು ಒತ್ತಿದರೂ ಉಪಯೋಗವಾಗಿಲ್ಲ. ಈ ಘಟನೆ ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಮತ್ತೊಂದು ಸಂಘರ್ಷ ಎಂದು ಬಣ್ಣಿಸಲಾಗಿದೆ.

ಈ ದುರ್ಘಟನೆಯಿಂದ ರೈಲಿನ 5 ಬೋಗಿಗಳು ಹಾಗೂ ರೈಲಿನ ಎಂಜಿನ್ ಹಳಿ ತಪ್ಪಿದ್ದು, ರೈಲು ಸಂಚಾರಕ್ಕೆ ಅಡಚಣೆಯಾಗಿದೆ. ಅಪಘಾತದಿಂದ ಹಲವು ರೈಲು ಮಾರ್ಗಗಳನ್ನು ಬದಲಾವಣೆ ಮಾಡಲಾಗಿದೆ. ರೈಲು ಸಂಚಾರ ದಟ್ಟಣೆ ಸಂಭವಿಸಿದೆ. ಇದೇ ಮಾರ್ಗದಲ್ಲಿ ಹೊರಟಿದ್ದ ಇತರೆ ರೈಲುಗಳನ್ನು ಉತ್ತರಪ್ರದೇಶ ಮಾರ್ಗವಾಗಿ ಕಳುಹಿಸಿಕೊಡಲಾಗಿದೆ. ಅಸ್ಸಾಮ್ ಮತ್ತು ಈಶಾನ್ಯದ ಇತರ ಭಾಗಗಳಿಗೆ ರೈಲು ಸಂಚಾರಕ್ಕೆ ತೊಂದರೆಯಾಗಿದ್ದು, ಹಾನಿಗೊಳಗಾದ ಬೋಗಿಗಳ ಪ್ರಯಾಣಿಕರನ್ನು ರೈಲಿನ ಇತರ ಖಾಲಿ ಬೋಗಿಗಳಿಗೆ ಸ್ಥಳಾಂತರಿಸಲಾಗಿದೆ. ಆದರೆ ಘಟನೆಯಲ್ಲಿ ಯಾವುದೇ ಪ್ರಯಾಣಿಕರ ಜೀವಹಾನಿಯಾಗಿಲ್ಲ, ಎಂದು ಈಶಾನ್ಯ ಗಡಿನಾಡು ರೈಲ್ವೆ ವಕ್ತಾರರು ತಿಳಿಸಿದ್ದಾರೆ. ಸೈರಾಂಗ್-ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಮಿಜೋರಾಮ್‌ನ ಸೈರಾಂಗ್‌ನಿಂದ (ಐಜ್ವಾಲ್‌ಗೆ ಸನಿಹದ ಜಾಗ) ದೆಹಲಿಯ ಆನಂದ್ ವಿಹಾರ್ ನಿಲ್ದಾಣವನ್ನು ಸಂಪರ್ಕಿಸುತ್ತದೆ. ಶನಿವಾರ ಬೆಳಗ್ಗೆ 6.15ಕ್ಕೆ ಮತ್ತೆ ಸಂಚಾರ ಆರಂಭಿಸಲಾಗಿದೆ. ಗುವಾಹಟಿಯಲ್ಲಿ ಮತ್ತೆ ಅಗತ್ಯವಿರುವ ಬೋಗಿಗಳನ್ನು ಜೋಡಿಸಲಾಗಿದೆ.

5 ವರ್ಷದಲ್ಲಿ 79 ಆನೆ ಸಾವು

ಆನೆಗಳು ಸಾಮಾನ್ಯವಾಗಿ ಗುಂಪುಗುಂಪಾಗಿ ಚಲಿಸುತ್ತವೆ. ಅಪಾಯ ಬಂದಾಗಲೂ ಅವು ಗುಂಪು ಬಿಡುವುದಿಲ್ಲ. ದಿಢೀರನೆ ಮಾರ್ಗಕ್ಕೆ ಅಡ್ಡ ಬಂದ ಆನೆಗಳನ್ನು ನೋಡಿ, ಅಪಘಾತ ತಡೆಯಲು ಚಾಲಕ ಸರ್ವಪ್ರಯತ್ನ ಮಾಡಿ ದ್ದಾರೆ. ಆದರೂ ಡಿಕ್ಕಿಯನ್ನು ತಪ್ಪಿಸಲಾಗದ ಪರಿಣಾಮ, ರೈಲು ಹಳಿ ತಪ್ಪಿದೆ. ಈ ಹೊಡೆತಕ್ಕೆ ಸಿಕ್ಕಿದ ಆನೆಗಳ ದೇಹದ ಭಾಗಗಳು ಹಳಿಗಳ ಮೇಲೆ ಹರಡಿಕೊಂಡಿವೆ. ಅಧಿಕಾರಿಗಳ ಪ್ರಕಾರ, ಈ ದುರ್ಘಟನೆ ನಡೆದ ಸ್ಥಳವು ಆನೆಗಳ ಸಂಚಾರಕ್ಕೆ ನಿರ್ದಿಷ್ಟವಾಗಿ ಗುರುತಿಸಲಾದ ಕಾರಿಡಾರ್ ಅಲ್ಲ. ಆದರೂ ಆನೆಗಳು ಈ ದಾರಿಯಲ್ಲಿ ಬಂದಿವೆ.

ಕಳೆದ 5 ವರ್ಷಗಳಲ್ಲಿ ದೇಶಾದ್ಯಂತ ಕನಿಷ್ಠ 79 ಆನೆಗಳು ರೈಲು ಡಿಕ್ಕಿಯಲ್ಲಿ ಸಾವನ್ನಪ್ಪಿವೆ ಎಂದು ಪರಿಸರ ಸಚಿವಾಲಯ ಆಗಸ್ಟ್‌ನಲ್ಲಿ ಸಂಸತ್ತಿಗೆ ತಿಳಿಸಿತ್ತು.

ಹೇಗಾಯ್ತು?

- ಶುಕ್ರವಾರ ತಡರಾತ್ರಿ (ಶನಿವಾರ ಮುಂಜಾನೆ) 2.17 ಗಂಟೆಗೆ ಸೈರಾಂಗ್-ದೆಹಲಿ ಸಂಪರ್ಕಿಸುವ ರಾಜಧಾನಿ ಎಕ್ಸ್ ಪ್ರೆಸ್ ಟ್ರೈನಿಗೆ ಆನೆಗಳು ಡಿಕ್ಕಿ
- ಆನೆಗಳು ದಿಢೀರ್ ಅಡ್ಡ ಬರುತ್ತಿರುವುದನ್ನು ಗಮನಿಸಿ ಕಡೆಯಲ್ಲಿ ತುರ್ತು ಬ್ರೇಕ್ ಹಾಕಲು ಚಾಲಕ ಯತ್ನ, ಭೀಕರ ದುರಂತ ತಪ್ಪಿಸಲು ವಿಫಲ
- ಹಳಿ ತಪ್ಪಿದ ರೈಲು, ಕಳಚಿಕೊಂಡ 5 ಬೋಗಿಗಳು, ರೈಲು ಸಂಚಾರ ದಟ್ಟಣೆ, ಹಲವು ಟ್ರೈನುಗಳು ಉತ್ತರಪ್ರದೇಶದ ಮಾರ್ಗಗಳಿಗೆ ಸ್ಥಳ ಬದಲಾವಣೆ
- ಬೆಳಗ್ಗೆ 6.15ಕ್ಕೆ ಮತ್ತೆ ರೈಲು ಸಂಚಾರ ಆರಂಭ, ಗುವಾಹಟಿಯಲ್ಲಿ ಟ್ರೈನಿಗೆ ಹೆಚ್ಚುವರಿ ಬೋಗಿ ಜೋಡಣೆ, ಪ್ರಯಾಣಿಕರಿಗೆ ಬೇರೆ ಕೋಚ್‌ಗಳಲ್ಲಿ ವ್ಯವಸ್ಥೆ

ಸೊಂಪಾದ ಪುಟಗಳು



ಸುಲ್ತಾನ್ ಕಬೂಸ್ : ಒಮಾನಿನ ಕನ್ನಡಿಗರಿಗೂ ಆರಾಧ್ಯ ದೈವ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ವಾಹ್ ವಾಹ್ ಜೀ ರಾಮ್ ಜೀ... ಸಬ್ ಕೋ ಸನ್ಮತಿ ದೇದೋಜಿ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ



ಜೀವನದಲ್ಲಿ ಎಷ್ಟೇ ದೊಡ್ಡ ಸೋಲು ಎದುರಾದರೂ ಎದೆಗುಂದಬಾರದು, ಏಕೆಂದರೆ ಸೂರ್ಯ ಮುಳುಗುವುದು ನಾಳೆ ಮತ್ತೆ ಪ್ರಕಾಶಮಾನವಾಗಿ ಹುಟ್ಟುವುದಕ್ಕಾಗಿಯೇ ಹೊರತು ಕಳೆದುಹೋಗಲು ಅಲ್ಲ. ಇಂದಿನ ನಿಮ್ಮ ಕಷ್ಟಗಳೇ ನಾಳೆ ನಿಮ್ಮನ್ನು ಬಲಿಷ್ಠ ವ್ಯಕ್ತಿಯನ್ನಾಗಿ ರೂಪಿಸುತ್ತವೆ.

ವಕ್ರತುಂಡೋಕ್ತಿ

ಮೊಬೈಲ್ ಬ್ಯಾಟರಿ ಮತ್ತು ತಿಂಗಳ ಸಂಬಳ ಎರಡೂ ಒಂದೇ; ಬರೋಕೆ (ಚಾರ್ಜ್ ಆಗೋಕೆ) ಗಂಟೆಗಟ್ಟಲೆ ಬೇಕು, ಆದ್ರೆ ಖಾಲಿಯಾಗೋಕೆ ನಿಮಿಷ ಸಾಕು!

ಮೊಟ್ಟೆ ಸುರಕ್ಷಿತ: ಕೇಂದ್ರ ಆಹಾರ ಪ್ರಾಧಿಕಾರ ಸ್ಪಷ್ಟನೆ

ದೆಹಲಿ: ದೇಶದಲ್ಲಿರುವ ಮೊಟ್ಟೆಗಳು ಸೇವನೆಗೆ ಸುರಕ್ಷಿತವಾಗಿವೆ. ಮೊಟ್ಟೆಗಳಲ್ಲಿ ಕ್ಯಾನ್ಸರ್ ಕಾರಕ ಅಂಶಗಳಿವೆ ಎಂದು ಆರೋಪಿಸುವ ವರದಿಗಳಿಗೆ ವೈಜ್ಞಾನಿಕ ಆಧಾರಗಳಿಲ್ಲ ಎಂದು ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಹೇಳಿದೆ. ಈ ವರದಿಗಳು ಜನರನ್ನು ತಪ್ಪು ದಾರಿಗೆ ಎಳೆಯುವುದಲ್ಲದೆ, ಅನಗತ್ಯವಾಗಿ ಆತಂಕವನ್ನು ಸೃಷ್ಟಿ ಮಾಡಿದೆ ಎಂದು ಹೇಳಿದೆ. ಮೊಟ್ಟೆಗಳಲ್ಲಿ ನೈಟ್ರೋಫ್ಯೂರಾನ್ ಮೆಟಾಬೊಲೈಟ್ ಅಂಶ ಪತ್ತೆಯಾಗಿದೆ. ಇದು ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ವರದಿಗಳು ಹರಿದಾಡಿದ್ದವು. ಕರ್ನಾಟಕ ಸೇರಿ ದೇಶಾದ್ಯಂತ ಆತಂಕ ಸೃಷ್ಟಿಯಾಗಿತ್ತು.

ಇಂದು ಧ್ಯಾನ ದಿನಾಚರಣೆ

ನ್ಯೂಯಾರ್ಕ್: ಭಾನುವಾರ 2ನೇ 'ವಿಶ್ವ ಧ್ಯಾನ ದಿನ ಆಚರಣೆ' ಹಮ್ಮಿಕೊಳ್ಳಲಾಗಿದ್ದು, ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀಶ್ರೀ ರವಿಶಂಕರ್ ಗುರೂಜಿ ವಿಶ್ವಸಂಸ್ಥೆಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ್ದಾರೆ. ಭಾರತ, ಶ್ರೀಲಂಕಾ, ಮೆಕ್ಸಿಕೊ, ನೇಪಾಳ, ವಿಶ್ವಸಂಸ್ಥೆಯ ಕಾಯಂ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶಗಳಿಲ್ಲ' - ಆಹಾರ ಪ್ರಾಧಿಕಾರ



ಸಮಾಚಾರ ಸಣ್ಣದಲ್ಲ

ಪಲ್ಸ್ ಪೋಲಿಯೋ ಲಸಿಕೆಗೆ ಇಂದು ಚಾಲನೆ

ಬೀದರ್: ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ ಅವರು ಡಿ.21 ರಂದು ಬೆಳಗ್ಗೆ 8 ಗಂಟೆಗೆ ಓಯಸ್ಟರ್ ಸ್ಕೂಲ್ ಆಫ್ ಎಕ್ಸಲೆನ್ಸ್ ಗವಾನ್ ಚೌಕ್ ಬೀದರ್ ನಲ್ಲಿ ಐದು ವರ್ಷದೊಳಗಿನ ಮಕ್ಕಳಿಗೆ ಜಿಲ್ಲಾ ಮಟ್ಟದ ರಾಷ್ಟ್ರೀಯ ಪಲ್ಸ್ ಪೋಲೀಯೊ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಎಲ್ಲಾ ಆರೋಗ್ಯ ಇಲಾಖೆಯ ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೀದರ್: ಔರಾದ್ ಉಪ-ವಿಭಾಗದ ಕಮಲನಗರ ಶಾಖೆಯಲ್ಲಿ 33/11ಕೆವಿ ಕಮಲ ನಗರ ಉಪಕೇಂದ್ರದಿಂದ ಬರುವ ಫೀಡರಗಳಾದ 11ಕೆವಿ ಎಕ್ಸಪ್ರೇಸ್, 11ಕೆವಿ ಸ್ಟೋನ್ ಕ್ರಶರ್,11ಕೆವಿ ಹೋರಂಡಿ ಐ.ಪಿ, 11ಕೆವಿ ಕಾಳಗಾಪೂರ ಎನ್.ಜೆ.ವೈ, ಮತ್ತು 11ಕೆವಿ ಸೋನಾಳ ಐ.ಪಿ ಡಿ. 22 ರಂದು ಬೆಳಗ್ಗೆ 10 ರಿಂದ 1 ಗಂಟೆಯ ವರೆಗೆ 11ಕೆವಿ ಎಕ್ಸಪ್ರೇಸ್, 11ಕೆವಿ ಸ್ಟೋನ್ ಕ್ರಶರ್,11ಕೆವಿ ಹೋರಂಡಿ ಐ.ಪಿ, 11ಕೆವಿ ಕಾಳಗಾಪೂರ ಎನ್.ಜೆ.ವೈ, ಮತ್ತು 11ಕೆವಿ ಸೋನಾಳಐ.ಪಿ ಫೀಡರಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಬೀದರ್ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನೀಯರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.29ರಂದು ಕುವೆಂಪು ಜನ್ಮದಿನ: ಕವಿಗೋಷ್ಠಿ

ಯಾದಗಿರಿ: ಪ್ರಸಕ್ತ ಸಾಲಿನ 2025ರ ಡಿ 29 ರಂದು ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆ ನಿಮಿತ್ಯ ವಿಶ್ವಮಾನವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಅವರು ತಿಳಿಸಿದ್ದಾರೆ. ಜಿಲ್ಲಾಡಳಿತ, ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆದಿಂದ ಅಂದು ಜಿಲ್ಲೆಯ ಎಲ್ಲಾ ಸಾಹಿತಿ ಕಲಾವಿದರುಗಳಿಗೆ ಕವಿಗೋಷ್ಠಿಯನ್ನು ಏರ್ಪಡಿಸಲಾಗುತ್ತಿದೆ. ಹಿನ್ನೆಲೆ ಜಿಲ್ಲೆಯ ಎಲ್ಲ ಆಸಕ್ತ ಸಾಹಿತಿ ಕವಿಗಳು ಈ ಕಾರ್ಯಕ್ರಮದಲ್ಲಿ ಕುವೆಂಪುರವರ ಕುರಿತ ಸ್ವ ರಚಿತ ಕವಿತೆಗಳ ಕಾವ್ಯ ವಾಚನ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಾರಿ ಹುಟ್ಟುಹಬ್ಬ ಬೇಡ: ಶಾಸಕ ಮನವಿ

ಸುರಪುರ: ಈ ಬಾರಿ ಅತಿವೃಷ್ಟಿಯಿಂದ ನಮ್ಮ ಪ್ರದೇಶದ ಅನೇಕ ರೈತರು ಬೆಳೆ ನಷ್ಟದಿಂದಾಗಿ ತೀವ್ರ ಕಷ್ಟ ಅನುಭವಿಸುತ್ತಿದ್ದಾರೆ.ರೈತರ ಈ ನೋವಿನ ಸಂದರ್ಭದಲ್ಲಿ

ಅದ್ದೂರಿಯಾಗಿ ಜನ್ಮದಿನಾಚರಣೆಗಳು ಸೂಕ್ತ ವಲ್ಲ ಎಂಬ ಭಾವನೆಯಿಂದ ನನ್ನ ಜನ್ಮದಿನವನ್ನು ಆಚರಿಸಿ ಕೊಳ್ಳದಿರಲು ನಾನು ನಿರ್ಧರಿಸಿದ್ದೇನೆ ಎಂದು ಶಾಸಕ ರಾಜಾ ವೇಣು ಗೋಪಾಲ ನಾಯಕ ತಿಳಿಸಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರೈತರು ನಮ್ಮ ನಾಡಿನ ಬೆನ್ನೆಲುಬು, ಅವರ ಕಷ್ಟಕ್ಕೆ ಸ್ಪಂದಿಸಿ ಅವರೊಂದಿಗೆ ನಿಲ್ಲುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ನನ್ನ ಬೆಂಬಲಿಗರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಯಾವುದೇ ರೀತಿಯ ಜನ್ಮದಿನ ಆಚರಣೆ, ಸಭೆ ಸಮಾರಂಭ, ಕೇಕ್ ಕತ್ತರಿಸುವುದು, ಬ್ಯಾನರ್ ಗಳು ಮತ್ತು ಹಾರಗಳನ್ನು ಆಯೋಜಿಸದೆ, ಆ ದಿನವನ್ನು ರೈತರಿಗೆ ಹಾಗೂ ಅಗತ್ಯವಿರುವ ಬಡ ಜನರಿಗೆ ನೆರವಾಗುವ ಮತ್ತು ಸಮಾಜಮುಖಿ ಕಾರ್ಯಗಳಿಗಾಗಿ ಮೀಸಲಿಡಬೇಕೆಂದು ಮನವಿ ಮಾಡುತ್ತೇನೆ.ರೈತರ ಸಂಕಷ್ಟ ನಿವಾರಣೆಗೆ ಸರಕಾರದಿಂದ ಅಗತ್ಯ ಪರಿಹಾರ ದೊರಕಿಸುವ ಬಗ್ಗೆ ನಾನು ನಿರಂತರವಾಗಿ ಪ್ರಯತ್ನಿಸುತ್ತಿದ್ದೇನೆ. ಎಂದು ತಿಳಿಸಿದ್ದಾರೆ.

ಅಗಲಿದ ಜೀವ

ನಿಂಗಮ್ಮ ಜಡಿ

ಯಾದಗಿರಿ: ಜಿಲ್ಲೆಯ ವಡಗೇರಾ ಪಟ್ಟಣದ ಹಿರಿಯ ಜೀವ ನಿಂಗಮ್ಮ ಜಡಿ (88) ಶನಿವಾರ ಸಂಜೆ ಅನಾರೋಗ್ಯದಿಂದ ನಿಧನ ಹೊಂದಿದ್ದರು. ಮೃತರು

ನಾಲ್ವರು ಪುತ್ರಿಯರು,ಇಬ್ಬರು ಪುತ್ರರು ಸೇರಿ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಸಾಯಂಕಾಲ 4 ಗಂಟೆಗೆ ಪಟ್ಟಣದ ಅವರ ಸ್ವಂತ ಜಮೀನಿನಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

{ **ಶರಣಗೌಡ ಕಂದಕೂರ** } ಶಾಸಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಲ್ಯಾಣ ಕರ್ನಾಟಕ ಉತ್ಸವದ ವೇಳೆ ಕೆಕೆ ಭಾಗಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವ ಕುರಿತು ನೀಡಿದ ಭರವಸೆ ಇಂದಿಗೂ ಈಡೇರಿಸಿಲ್ಲ. ಕೆಕೆಆರ್‌ಡಿಬಿಗೆ 224 ಎಂಜಿನಿಯರಗಳ ಅವಶ್ಯಕತೆ ಇದೆ.ಆದರೆ, ಕೇವಲ 22 ಎಂಜಿನಿಯರಗಳು ಮಾತ್ರ ಇದ್ದಾರೆ. ಇದರಿಂದ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ. ಕಾರಣ ಕೂಡಲೇ ಸಚಿವಾಲಯ ಸ್ಥಾಪನೆ ಮಾಡಬೇಕು.



ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ | 15 ದಿನದಲ್ಲಿ ಸುಸಜ್ಜಿತ ಕಟ್ಟಡಕ್ಕೆ ಸ್ಥಳಾಂತರಿಸಲು ಸೂಚನೆ

ಅವ್ಯವಸ್ಥೆಯ ಆಗರ ಶಹಾಪುರದ ಅಂಬೇಡ್ಕರ್‌ವಸತಿ ಶಾಲೆ

ಶಹಾಪುರ: ನಗರದ ಹಳೆಪೇಠೆ ಬಡಾವಣೆಯಲ್ಲಿನ ಡಾ.ಬಿ.ಆರ್ ಅಂಬೇಡ್ಕರ್‌ವಸತಿ ಶಾಲೆಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ ನೀಡಿ ವಸತಿಯ ಸ್ಥಿತಿ ಗತಿ ಪರಿಶೀಲಿಸಿದರು.

ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ಶಾಲೆಯ, ವಸತಿ ನಿಲಯ, ಊಟದ ಮನೆ, ಶೌಚಾಲಯ, ಸ್ನಾನದ ಕೋಣೆ ವಾತಾವರಣ ಪರಿಶೀಲಿಸಿದರು. ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಬೇಕು. ಮತ್ತು ವಿದ್ಯಾರ್ಥಿಗಳು ಗೈರಾಗುವ ಮುನ್ನ ಸರಿಯಾದ ಮಾಹಿತಿ ಪಡೆದು ಕಳುಹಿಸಿಕೊಡಬೇಕು ಹಾಗೂ 15 ದಿನಗಳಲ್ಲಿ ಸುಸಜ್ಜಿತ ಕಟ್ಟಡಕ್ಕೆ ಸ್ಥಳಾಂತರಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಚನ್ನಬಸಪ್ಪನವರಿಗೆ ಖಡಕ್ ಆಗಿ ಸೂಚಿಸಿದರು. 247 ಮಕ್ಕಳ ದಾಖಲಾತಿಯಲ್ಲಿ 204 ಮಕ್ಕಳು ಮಾತ್ರ ಹಾಜರಾತಿ ಇದ್ದು, ಇನ್ನೂಳಿದ ಮಕ್ಕಳು ಗೈರಾಗಿರುವುದಕ್ಕೆ ಪ್ರಾಚಾರ್ಯರಿಂದ ಮಾಹಿತಿ ಪಡೆದರು.

ಶಾಲೆ ಬಿಟ್ಟ ಮಕ್ಕಳ ಕುರಿತು ಕ್ರಮ ಕೈಗೊಳ್ಳಲು ತಿಳಿಸಿದರು, ಒಟ್ಟು 26 ಮಕ್ಕಳು ಶಾಲೆಯಿಂದ ಹೊರಗುಳಿದಿರುವುದಾಗಿ ಉಪ ನಿರ್ದೇಶಕರಿಂದ ಮಾಹಿತಿ ಪಡೆದುಕೊಂಡು ಪಾಲಕರಿಂದ ಮಾಹಿತಿ ಪಡೆದು ವಾರದಲ್ಲಿ ವರದಿ ಸಲ್ಲಿಸುವಂತೆ ತಾಕೀತು ಮಾಡಿದರು. ಹಾಗೂ ನಗರದ ಪೊಲೀಸ್ ಠಾಣೆಗೂ ಬೇಟಿ ನೀಡಿ ಮಕ್ಕಳ ರಕ್ಷಣೆಗೆ ವಿಶೇಷ ಗಮನ ಕೊಡಿ ಮತ್ತು ಪೋಕ್ಸೊಗಳಂತಹ ಕಾಯಿದೆಗಳ ಕುರಿತು ಮಕ್ಕಳಿಗೆ ಮಾಹಿತಿ ಒದಗಿಸುವ ಕೆಲಸ ಮಾಡಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಿದ್ದಣ್ಣ ಅಣಬಿ, ಹಣಮಂತ್ರಾಯ ಸೊಮಾಪುರಿ, ಹಿಂದುಳಿದ ವರ್ಗದ ಅಧಿಕಾರಿ ಚೆನ್ನಪ್ಪಗೌಡ ಚೌಧ್ರಿ, ಸಿಡಿಪಿಒ ಮಲ್ಲಣ್ಣ ದೇಸಾಯಿ ಸೇರಿದಂತೆ ಅಧಿಕಾರಿಗಳು ಇದ್ದರು. ತಾಲೂಕಿನ ಬೇವಿನಹಳ್ಳಿ ಕ್ರಾಸ್ ಹತ್ತಿರವಿರುವ ಮೂರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶುಕ್ರವಾರ ರಾತ್ರಿ ವಾಸ್ತವ್ಯ ಹೂಡಿದರು. ಈ ವೇಳೆ ಪ್ರಾಚಾರ್ಯ ಶ್ರೀಶೈಲ ತಳವಾರ ಜತೆಗಿದ್ದರು.

ನಗರದ ಹಳೆಪೇಠೆ ಬಡಾವಣೆಯಲ್ಲಿನ ಡಾ.ಬಿ.ಆರ್‌ಅಂಬೇಡ್ಕರ್‌ವಸತಿ ಶಾಲೆಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಭೇಟಿ ನೀಡಿದರು.

ಅನಧಿಕೃತ ಶಾಲೆ, ಕೋಚಿಂಗ್ ಸೆಂಟರ್ ಮುಚ್ಚುವಲ್ಲಿ ಮೀನ ಮೇಷ

ಮಕ್ಕಳ ಆಯೋಗದ ಸದಸ್ಯರಾಗಿದ್ದ ಶಶಿಧರ ಕೋಸಂಬೆ ಪ್ರಸ್ತುತ ಆಯೋಗದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು, ಅಧ್ಯಕ್ಷರಾದ ಮೇಲೆ ಮೊದಲ ಬಾರಿಗೆ ನಗರಕ್ಕೆ ಬಂದಿದ್ದ ಅವರು ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುತ್ತಾರೆ ಎನ್ನುವ ನಿರೀಕ್ಷೆ ಹೊತ್ತಿದ್ದ ನಮಗೆ ಭಾರಿ ನಿರಾಸೆ ಆಗಿದೆ ಎಂದು ನಮ್ಮ ಕರ್ನಾಟಕ ಸೇನೆಯ ತಾಲೂಕ ಅಧ್ಯಕ್ಷ ಸಿದ್ದು ಪಟ್ಟೇದಾರ ಆರೋಪಿಸಿದ್ದಾರೆ.

ಅನಧೀಕೃತ ಕೊಚಿಂಗ್ ಶಾಲೆ, ವಸತಿಗಳ ವಿರುದ್ಧ ಕಳೆದ ಎರಡು ವರ್ಷದಿಂದ ನಡೆದಿರುವ ನಮ್ಮ ಹೋರಾಟಕ್ಕೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಬೆಂಬಲ ಸಿಗುತ್ತದೆ, ಸಮಸ್ಯೆ ಪರಿಹಾರ ಸಿಗುತ್ತದೆ ಎನ್ನುವ ಆಸೆಯಲ್ಲಿ ಇದ್ದ ನಮಗೆ ಶಶಿಧರ ಕೋಸಂಬೆ ಮುಗಿಗೆ ತುಪ್ಪ ಸವರುವ ಹಾಗೆ ತಟ್ಟನೆ ಬಂದು ಕ್ರಮ ಕೈಗೊಳ್ಳದೆ ಹೋಗಿದ್ದಾರೆ. ಅಧ್ಯಕ್ಷರು ಬೇಟಿ ನೀಡಿದ ವಸತಿ ಶಾಲೆಯ ಪಕ್ಕದಲ್ಲೇ ಅನಧೀಕೃತ ಶಾಲೆ ಇದ್ದು, ಅದರ ಕುರಿತು ಅವರ ಗಮನಕ್ಕೆ ತಂದರೂ ಸಹ ಹಾಗೇ ಹೋಗಿರುವುದು ನೋಡಿದರೆ, ಇಲ್ಲಿನ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಆಯೋಗದ ನಡುವೆ ಒಳ ಒಪ್ಪಂದವಾಗಿರಬಹುದೇ ಎನ್ನುವ ಅನುಮಾನ ಮೂಡುತ್ತಿದೆ.

-ಭೀಮಣ್ಣ ಶಖಾಪುರ, ನಮ್ಮ ಕರ್ನಾಟಕ ಸೇನೆ ರಾಜ್ಯ ಪ್ರಧಾನ ಸಂಚಾಲಕ

ಪ್ರಚಾರಕ್ಕಾಗಿ ಹಾಸ್ಟೇಲ್ ವಾಸ್ತವ್ಯ ಬೇಡ

ವಸತಿ ನಿಲಯಗಳಲ್ಲಿನ ಮಕ್ಕಳ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರ ಸಂಬಂಧ ಸರಕಾರದ ಗಮನ ಸೆಳೆಯಲು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗವು ಹಾಸ್ಟೆಲ್ ವಾಸ್ತವ್ಯ ಎಂಬ ವಿಶೇಷ ಅಭಿಯಾನ ಮಾಡುತ್ತಿದ್ದು ಇದು ಕೇವಲ ಪ್ರಚಾರಕ್ಕಷ್ಟೇ ಸಿಮೀತವಾದಂತಿದೆ ಎಂದು ಪ್ರಜ್ಞಾವಂತರು ದೂರಿದ್ದಾರೆ. ಎಲ್ಲಿಯೂ ಸಹ ಮುಕ್ತ ಸಮಲೋಚನೆ ಮಾಡದೇ ಸುಮ್ಮನೆ ಸರಕಾರದ ಹಣವನ್ನು ಅಧಿಕಾರಿಗಳು, ಆಯೋಗದವರು ವ್ಯರ್ಥ ಮಾಡುತ್ತಿದ್ದು, ಇದರಿಂದ ಕಾರ್ಯ ವೈಖರಿಯಲ್ಲಿ ಏನೂ ಬದಲಾಗದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧ ಚರ್ಚೆಗಳು ನಡೆಯುತ್ತಿದೆ.

ಮಕ್ಕಳ ವಿಶ್ವಾಸದೊಂದಿಗೆ ಅಧ್ಯಯನ

ಯಾದಗಿರಿ: ಆತ್ಮವಿಶ್ವಾಸದೊಂದಿಗೆ ಮಕ್ಕಳು ಶ್ರದ್ಧಾ ಭಕ್ತಿಯಿಂದ ಅಭ್ಯಾಸ ಮಾಡಿದಲ್ಲಿ ಜೀವನದಲ್ಲಿ ಯಶಸ್ವಿ ಕಂಡುಕೊಳ್ಳಲು ಸಾಧ್ಯ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಸಲಹೆ ನೀಡಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಇಂದು ಮಕ್ಕಳೊಂದಿಗೆ ಸಂವಾದ ನಡೆಸಿದ ಅವರು, ಮಕ್ಕಳು ಒತ್ತಡಕ್ಕೆ ಒಳಗಾಗದೇ ಶ್ರದ್ಧಾ ಭಕ್ತಿಯಿಂದ ಓದಬೇಕು.ಯಾವದೇ ಸಂಕೋಚವನ್ನು ಇಟ್ಟು ಕೊಳ್ಳದೆ ಆತ್ಮವಿಶ್ವಾಸದಿಂದ ಮುಂದು ವರೆಯುವಂತೆ ಅವರು ಸಲಹೆ ನೀಡಿದರು.

ಜಿಲ್ಲೆಯ ವಿವಿಧ ಗ್ರಾಮಗಳ ಮಕ್ಕಳಿಗೆ ಶಿಕ್ಷಕರ ಕೊರತೆ,ಶಾಲಾ ವೇಳಾಪಟ್ಟಿ ಅನ್ವಯ ಬಸ್ ಗಳ ಬಿಡುಗಡೆ ಅನುಸೂಚಿಗಳ ಹೆಚ್ಚಳ, ಶಾಲೆಗಳಿಗೆ ಕುಡಿಯುವ ನೀರು , ಶೌಚಾಲಯಗಳ ವ್ಯವಸ್ಥೆ ಕಲ್ಪಿಸಬೇಕು. ಡಿಡಿಪಿಐ, ರಸ್ತೆ ಸಾರಿಗೆ ಸಂಸ್ಥೆಯ ಡಿವಿಸಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆಯಿಂದ ಸ್ಥಳ ಭೇಟಿ ನೀಡಿ ಈ ಸಮಸ್ಯೆಗಳನ್ನು ಪರಿಹರಿಸುವಂತೆ ಅವರು ಸೂಚನೆ ನೀಡಿದರು. ಸಂವಾದ ಸಂದರ್ಭದಲ್ಲಿ ಮಕ್ಕಳ ಸಮಸ್ಯೆಗಳನ್ನು ಆಲಿಸಿದ ಅವರು ಮಕ್ಕಳ ಅಧ್ಯಯನಕ್ಕೆ ಪೂರಕ ವಾತಾವರಣ ನಿರ್ಮಿಸುವ ಕಾರ್ಯ ಸಂಬಂಧಿಸಿದ ಅಧಿಕಾರಿಗಳು ಮಾಡುವಂತೆ ಅವರು ಸೂಚಿಸಿದರು. ಶಿಕ್ಷಕರಿಂದ ಶಾಲೆಗಳಲ್ಲಿ ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ ನೀಡಬಾರದು.

ಗ್ರಾಮಗಳ ಶಾಲಾ , ಬಸ್ ನಿಲ್ದಾಣಗಳ ವ್ಯಾಪ್ತಿಯಲ್ಲಿ ಪೊಲೀಸ್ ಬೀಟ್ ಹೆಚ್ಚಿಸಿ ರಕ್ಷಣೆ ನೀಡಬೇಕು.ಪೊಲೀಸ್ ಇಲಾಖೆಯಿಂದ ತೆರೆದ ಮನೆ ಕಾರ್ಯಕ್ರಮ ನಡೆಯುವಂತೆ ನೋಡಿಕೊಳ್ಳಲು ಅವರು ಸೂಚಿಸಿ ತೆಗೆದುಕೊಂಡ ಪರಿಹಾರೋಪಾಯಗಳ ವರದಿಯನ್ನು ಎರಡು ವಾರದೊಳಗೆ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಸಂವಾದದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಶಿರಸಗಿ, ಡಿಡಿಪಿಐ ಚನ್ನಬಸಪ್ಪ ಮುಧೋಳ,ಡಿಹೆಚ್ಒ ಮಹೇಶ್ ಬಿರಾದಾರ ಉಪಸ್ಥಿತರಿದ್ದರು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತಿ ಜ.1ಕ್ಕೆ

ಯಾದಗಿರಿ: ಜಿಲ್ಲಾಡಳಿತ , ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಜ. 1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತಿ ಅರ್ಥ ಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಿಸುವ ಕುರಿತು ಸಹಾಯಕ ಆಯುಕ್ತ ಶ್ರೀಧರ್‌ಗೋಟುರ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ನಗರದ ಸರಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಮಧ್ಯಾಹ್ನ 1 ಗಂಟೆಗೆ ಈ ಜಯಂತಿ ಆಯೋಜಿಸಲು, ಜಕಣಾಚಾರಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಲು,ವೇದಿಕೆ, ಆಸನದ ವ್ಯವಸ್ಥೆ, ಶಿಷ್ಟಾಚಾರದಂತೆ ಗಣ್ಯರನ್ನು, ಉಪನ್ಯಾಸಕರನ್ನು ಆಹ್ವಾನಿಸಲು ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಹಾಯಕ ಆಯುಕ್ತ ಶ್ರೀಧರ್ ಗೋಟುರ್ ಕಾರ್ಯಕ್ರಮದ ಸಂದರ್ಭದಲ್ಲಿ , ಸೂಕ್ತ ಪೊಲೀಸ್ ಬಂದೋಬಸ್ತ್, ವೇದಿಕೆ ಸಿದ್ಧತೆ ನೋಡಿಕೊಳ್ಳಲು , ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಆಮಂತ್ರಣ ಪತ್ರಿಕೆ ವಿತರಿಸುವ ವ್ಯವಸ್ಥೆಗೆ ಸೂಚಿಸಲಾಯಿತು. ಕಾರ್ಯಕ್ರಮವನ್ನು ತಾಲೂಕ ಮಟ್ಟದಲ್ಲಿ ಶಾಲಾ, ಕಾಲೇಜು, ಗ್ರಾಮ ಪಂಚಾಯತಿ, ವಿವಿಧ ಕಚೇರಿಗಳಲ್ಲಿ ಈ ಜಯಂತಿ ಆಚರಣೆ, ಮುಖ್ಯ ಕಾರ್ಯಕ್ರಮಕ್ಕೆ, ಅಗತ್ಯ ಸಿದ್ದತೆ ಮಾಡಿಕೊಳ್ಳಲು

ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಸಮಾಜದ ಮೂಲಕ ಹಮ್ಮಿಕೊಳ್ಳಲಾಗುವ ಮೆರವಣಿಗೆ ಕಾರ್ಯಕ್ರಮ ಮುಂಚಿತವಾಗಿ ಜಿಲ್ಲಾಡಳಿತಕ್ಕೆ ಈ ಕುರಿತು ಮಾಹಿತಿ ನೀಡಲು ಸೂಚಿಸಿದರು. ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉತ್ತರದೇವಿ ಸ್ವಾಗತಿಸಿದರು. ವಿಶ್ವಕರ್ಮ ತಡಿಬಿಡಿ, ಶಿವಣ್ಣ ವಿಶ್ವಕರ್ಮ,ದೇವಿಂದ್ರಪ್ಪ ವಿಶ್ವಕರ್ಮ,ಶಿವಕುಮಾರ್,ಚಂದ್ರ ಶೇಖರ್ ಪತ್ತಾರ, ಹಣಮಂತರಾಯ್ ವಿಶ್ವಕರ್ಮ,ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಿಸುವ ಕುರಿತು ಸಭೆನಡೆಯಿತು. ವಿಶ್ವಕರ್ಮ ತಡಿಬಿಡಿ, ಶಿವಣ್ಣ ವಿಶ್ವಕರ್ಮ ಇದ್ದರು.

ಪ್ರಜಾಸೌಧ ವಿರೋಧಿ ಹೋರಾಟ 5ನೇ ದಿನಕ್ಕೆ

ಶಹಾಪುರ: ನಗರದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಪ್ರಜಾಸೌಧ ನಿರ್ಮಾಣ ಮಾಡದಂತೆ ವಿವಿಧ ಸಂಘಟನೆಗಳ ಆಶ್ರಯ ದಲ್ಲಿ ನಡೆಯುತ್ತಿರುವ ಅನೀರ್ಧಿಷ್ಠಾವಧಿ ಧರಣಿಗೆ ವಕೀಲರ ಸಂಘ, ದ.ಸಂ.ಸ, ವಿವಿಧ ರೈತ ಪರ ಸಂಘಟನೆಗಳು ಬೆಂಬಲಿಸಿದರು.

ವಕೀಲರ ಸಂಘದ ಉಪಾಧ್ಯಕ್ಷ ವಾಸುದೇವ ಕಟ್ಟಿಮನಿ ಮಾತನಾಡಿ ಶೈಕ್ಷಣಿಕ ಪ್ರಗತಿಗಾಗಿ ಮೀಸಲಿರುವ ಸ್ಥಳದಲ್ಲಿ ಪ್ರಜಾಸೌಧ ನಿರ್ಮಾಣ ಮಾಡಕೂಡದ. ಒಂದು ವೇಳೆ ಪ್ರಜಾಸೌಧ ನಿರ್ಮಾಣವಾದರೆ ನಿತ್ಯ ನಡೆಯುವ ಹೋರಾಟಗಳು, ಮುಂದಾಗುವ ಮಳಿಗೆಗಳಿಂದ ಮುಂದೆ ವಿದ್ಯಾರ್ಥಿಗಳಿಗೆ ತೊಂದರೆ ಯಾಗಲಿದೆ. ಮತ್ತು ಹಳೇ ತಹಸೀಲ್ದಾರ್ ಸ್ಥಳದಲ್ಲಿ ಪ್ರಜಾಸೌಧ ಬೇಡವಾದರೆ ನಗರದ ಬೇರೆಡೆ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನಿರ್ಮಿಸಿಕೊಡಿ. ಅಭಿವೃದ್ದಿಗೆ ನಮ್ಮ ವಿರೋಧವಿಲ್ಲ ಆದರೆ ಶೈಕ್ಷಣಿಕವಾಗಿರುವ ಸ್ಥಳದಲ್ಲಿ ಪ್ರಜಾಸೌಧ ನಿರ್ಮಿಸಬಾರದು ಎಂದರು.

ಈ ಸಂದರ್ಭದಲ್ಲಿ ವಕೀಲ ಸದಸ್ಯರು, ಹೋರಾಟಗಾರರು ಇದ್ದರು.



ನಗರದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಪ್ರಜಾಸೌಧ ನಿರ್ಮಾಣ ಮಾಡದಂತೆ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಮನವಿ ಸಲ್ಲಿಸಲಾಯಿತು.

ಲೋಕ್‌ಅದಾಲತ್: 46,116 ಪ್ರಕರಣ ಇತ್ಯರ್ಥ

ಬೀದರ್: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಡಿ.13 ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ 46,116 ಪ್ರಕರಣಗಳನ್ನು ಇತ್ಯರ್ಥಪಡಿಸಿ ಒಟ್ಟು 21.92.14,606 ರೂಪಾಯಿಗಳ ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಬೀದರ್ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಸ್.ಬಿ. ರಹಮಾನ್ ಅವರು ತಿಳಿಸಿದರು.

ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಬಾಕಿಯಿರುವ ಒಟ್ಟು 13.902 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, 13,41,40,509 ರು.ಗಳ ಹಣವನ್ನು ಕಕ್ಷಿದಾರರಿಗೆ ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ. ಹಾಗೂ 32,214 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು ಹಾಗೂ ಕಕ್ಷಿದಾರರಿಗೆ 8,50,74,097 ರು.ಗಳ ಹಣವನ್ನು ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಾಧ್ಯಾಂತ ಈ ಲೋಕ ಆದಾಲತ್ ನಲ್ಲಿ ವೈವಾಹಿಕ ವ್ಯಾಜ್ಯವನ್ನು ಇತ್ಯರ್ಥಪಡಿಸಿ ಸಂದಾನದ ಮೂಲಕ 09 ಜೋಡಿ ದಂಪತಿಗಳನ್ನು ರಾಜಿ ಸಂಧಾನದ ಮೂಲಕ ಒಂದು ಮಾಡಲಾಗಿದೆ ಹಾಗೂ ನ್ಯಾಯಲಯಗಳಲ್ಲಿ ಬಾಕಿ ಇರುವ ಒಟ್ಟು 13 ಹಳೆಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಈ ಲೋಕ ಅದಾಲತ್ ನಿಂದಾಗಿ ಜಿಲ್ಲೆಯ ಪ್ರಕರಣಗಳಿಗೆ ಸಂಬಂಧಪಟ್ಟ ಕಕ್ಷಿದಾರರಿಗೆ ತುಂಬಾ ಲಾಭವಾಗಿದೆ. ಮುಂದಿನ ಲೋಕ ಅದಾಲತ್ ಲಾಭವನ್ನು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಕ್ಷಿದಾರರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ಮಾತನಾಡಿ, ಹಳ್ಳಿಯ ಜನರಿಗೆ ಇದು ಒಂದು ಉತ್ತಮ ಅವಕಾಶವಾಗಿದ್ದು, ಸ್ಥಳದಲ್ಲಿಯೇ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು

ಶಾಸಕರ ಗ್ರಾಮ ಸಂಚಾರ ಯಾವ ಪುರುಷಾರ್ಥಕ್ಕೆ

ಬೀದರ್: ಜಿಲ್ಲೆಯ ಔರಾದ್ ಕ್ಷೇತ್ರದ ಶಾಸಕ ಪ್ರಭು ಚವಾಣ್ ಗ್ರಾಮ ಸಂಚಾರ ನಡೆಸುತ್ತಿರುವುದು ಯಾವ ಪುರುಷಾರ್ಥಕ್ಕಾಗಿ, ಜನರ ಸಮಸ್ಯೆ ಪರಿಹರಿಸುವುದಕ್ಕೋ ಅಥವಾ ಸಮಸ್ಯೆ ಸೃಷ್ಟಿಸುವುದಕ್ಕೋ ಎಂದು

ಮುಖಂಡ ದೀಪಕ್ ಪಾಟೀಲ ಚಾಂದೋರಿ ಪ್ರಶ್ನಿಸಿದ್ದಾರೆ.

ಶಾಸಕರೊಂದಿಗೆ ಅಧಿಕಾರಿಗಳು ಗ್ರಾಮ ಸಂಚಾರಕ್ಕೆ ತೆರಳುತ್ತಿದ್ದರಿಂದ ತಾಲೂಕು ಕಚೇರಿಗಳಲ್ಲಿ ಅಧಿಕಾರಿಗಳು ಸಿಗುತ್ತಿಲ್ಲ. ಇದರಿಂದ ಸಾರ್ವಜನಿಕರ ಕೆಲಸ, ಕಾರ್ಯಗಳಿಗೆ ತೊಂದರೆ ಉಂಟಾಗುತ್ತಿದೆ ಎಂದು ದೂರಿದ್ದಾರೆ.

ಶಾಸಕರು ತೋರಿಕೆಗೆ ಹಾಗೂ ಪ್ರಚಾರಕ್ಕಾಗಿ 2009 ರಿಂದ ಗ್ರಾಮ ಸಂಚಾರ ನಡೆಸುತ್ತಿದ್ದಾರೆ.

ಜನರಿಗೆ ಏನೇನೂ ಉಪಯೋಗ ಆಗಿಲ್ಲ ಎಂದು ಆರೋಪಿಸಿದ್ದಾರೆ. ಸಂಚಾರ ವೇಳೆ ಜನರ ಅಹವಾಲುಗಳು ಎಷ್ಟು ಬಂದಿವೆ. ಎಷ್ಟು ಬಗೆಹರಿಸಲಾಗಿದೆ. ಎಷ್ಟು ಅರ್ಜಿಗಳು ಬಾಕಿ ಇವೆ ಎಂಬುದ್ದರ ವಿವರ ನೀಡಬೇಕು ಎಂದು ಸವಾಲು ಹಾಕಿದ್ದಾರೆ. ಹೆಸರಿಗೆ ಮಾತ್ರ ಇದು ಗ್ರಾಮ ಸಂಚಾರ. ಇಲ್ಲಿ ಜನರ ಅಹವಾಲು ಆಲಿಸುವುದಕ್ಕೆ ಸಮಯವೇ ಇಲ್ಲ. ಒಂದೇ ದಿನ ಹಲವು ಗ್ರಾಮಗಳಲ್ಲಿ ಇದು, ನಡೆಯುತ್ತಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ. ಕ್ಷೇತ್ರದಲ್ಲಿ ಬಹಳಷ್ಟು ರಸ್ತೆಗಳು ಹಾಳಾಗಿವೆ. ವಾಹನಗಳ ಸಂಚಾರ ದುರಸ್ತವಾಗಿದೆ. ರಸ್ತೆ ದುರಸ್ತಿಗೆ ಆದ್ಯತೆ ಕೊಡುವುದು ಬಿಟ್ಟು ಕಮಿಷನ್ ಹಣಕ್ಕಾಗಿ ಶಾಸಕರು 2023-24 ಹಾಗೂ 2024-25ನೇ ಸಾಲಿನಲ್ಲಿ ಶಾಲಾ ಕೋಣೆ ದುರಸ್ತಿ, ಕೊಳವೆಬಾವಿ ಕೊರೆಸುವುದು ಹಾಗೂ ಸೋಲಾರ್‌ಪ್ಯಾನಲ್ ಅಳವಡಿಕೆಗಾಗಿ ಕೆ.ಆರ್ .ಐ.ಡಿ.ಎಲ್.ಗೆ ರು. 40 ಕೋಟಿ ಅನುದಾನ ಕೊಟ್ಟಿದ್ದಾರೆ ಎಂದು ದೂರಿದ್ದಾರೆ.

ಅಧಿಕಾರಿಗಳು ಸ್ಪಂದಿಸಲು ಕ್ರಮಕೈಗೊಳ್ಳಲಿ ಶಾಸಕರಿಗೆ ಜನರ ಬಗ್ಗೆ ನಿಜವಾದ ಕಳಕಳಿ ಇದ್ದರೆ, ಅವರ ಸಮಸ್ಯೆ ಬಗೆಹರಿಸುವ ಇಚ್ಛಾಶಕ್ತಿ ಇದ್ದರೆ ಗ್ರಾಮ ಹಾಗೂ ಹೋಬಳಿ ಮಟ್ಟದಲ್ಲಿ ಗ್ರಾಮ ವಾಸ್ತವ್ಯ ಮಾಡಬೇಕು. ತಾಲ್ಲೂಕು ಕಚೇರಿಗಳಲ್ಲಿ ಜನರ ಕೆಲಸ ಕಾರ್ಯಗಳಿಗೆ ಅಧಿಕಾರಿಗಳು ಸ್ಪಂದಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಇಂದು ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿ

ಹುಣಸಗಿ: ಪ್ರತಿಯೊಬ್ಬ ಪೋಷಕರು ಐದು ವರ್ಷದೊಳಗಿನ ತಮ್ಮ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ ಎಂದು ಆರೋಗ್ಯ ನೀರಿಕ್ಷಣಾಧಿಕಾರಿ ಸಾವಿತ್ರಿ ಚಿನವಾಲ ಹೇಳಿದರು. ಪಟ್ಟಣದ ನಮ್ಮೂರ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಜಾಗೃತಿ ಜಾಥ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೆ ಪೋಲಿಯೋ ಲಸಿಕೆ ಹಾಕಿಸಿ ಮಕ್ಕಳ ಅಂಗವಿಕಲತೆ ನಿರ್ಮೂಲನೆ ಮಾಡಬೇಕು ಅದಕ್ಕಾಗಿ ಡಿ.21 ಬೆಳಗ್ಗೆ 7.30 ರಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಪೋಲಿಯೋ ಲಸಿಕೆ ಹಾಕಲಾಗುತ್ತದೆ. ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿರುವ ಮಕ್ಕಳಿಗೆ ಲಸಿಕೆ ಹಾಕಿಸಬೇಕೆಂದು ಜಾಗೃತಿ ಅಭಿಯಾನದ ಮೂಲಕವೂ ಜನರ ಗಮನ ಸೆಳೆಯಲಾಗಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಚಂದ್ರಪ್ರಭ, ಆಶಾ ಕಾರ್ಯಕರ್ತೆ ಸುಧಾ ಬಿರದಾರ,ರೇಣುಕಾ ಬಜೆಂತ್ರಿ,ಶಿವಕುಮಾರ ಬಂಡೋಳಿ ಇದ್ದರು.

ಉದ್ದು, ಸೋಯಾ ಖರೀದಿಸಿದ ಹಣ ಪಾವತಿಸಿ

ಬೀದರ್: ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಲ್ಲಿ ರೈತರಿಂದ ಹೆಸರು, ಉದ್ದು ಹಾಗೂ ಸೋಯಾ ಖರೀದಿಸಿದ್ದು, ಇಲ್ಲಿಯ ವರೆಗೆ ರೈತರಿಗೆ ಹಣ ಪಾವತಿಯಾಗಿಲ್ಲ. ರೈತರು ಸಂಕಷ್ಟದಲ್ಲಿ ಇದ್ದಾರೆ ಶೀಘ್ರದಲ್ಲೇ ಹಣ ಪಾವತಿಗೆ ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಸಿದ್ರಾಮಯ್ಯ ಎಸ್.ಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಬೆಂಗಳೂರು, ಜಿಲ್ಲಾ ಘಟಕ ಬೀದರ್ ಜಿಲ್ಲೆಯ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರದ ಮುಖಾಂತರ ಸೋಯಾ, ಅವರೆ ಖರೀದಿಸುತ್ತಿದ್ದು ಖರೀದಿ ಕೇಂದ್ರದಲ್ಲಿ ಖರೀದಿಸಿರುವ ಪ್ರಮಾಣ ಅನುಗುಣವಾಗಿ ಬ್ಯಾಗಗಳ ಹಾಗೂ ಟ್ರಾನ್ಸ್‌ಪೋಟೇಷನ್ ಕೊರತೆಯಿಂದಾಗಿ ಸಕಾಲದಲ್ಲಿ ರೈತರಿಗೆ ಹಣ ಪಾವತಿಯಾಗದೆ ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರಾದ ದೇವಿಕಾ. ಆರ್,ಜಿಲ್ಲಾ ಕೃಷಿಕ ಸಮಾಜದ ಉಪಾಧ್ಯಕ್ಷ ಉಮಕಾಂತ ವಿ, ರಾಜ್ಯ ಪ್ರತಿನಿಧಿ ವಿಶ್ವನಾಥ ಪಾಟೀಲ ಮಾಡಗೋಳ, ಖಜಾಂಚಿ ಗೋವಿಂದರೆಡ್ಡಿ, ಪ್ರಧಾನ ಕಾರ್ಯದರ್ಶಿಕ್ಷಿ, ಸಂಗಮೇಶ ವಾಲೆ, ಜಿಲ್ಲಾ ಕೃಷಿಕ ಸಮಾಜದ ಎಲ್ಲ ಕಾರ್ಯಕಾರಿಣಿ ಸದಸ್ಯರು ಸೇರಿದಂತೆ ಕೃಷಿ ವಿಜ್ಞಾನ ಕೇಂದ್ರ, ಬೀದರ, ಕೃಷಿ ಸಂಶೋಧನಾ ಕೇಂದ್ರ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಪಾಲನಾ ಇಲಾಖೆ, ಕೃಷಿ ಮಾರುಕಟ್ಟೆ ಇಲಾಖೆ, ಕೆ.ಎಸ್.ಎಸ್.ಸಿ, ಹಾಗೂ ಮಾರಾಟ ಮಹಾ ಮಂಡಳಿ ಹಾಗೂ ಮಿನುಗಾರಿಕೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯುತ್ಸವ ನಾಳೆ

ಭಾಲ್ಕಿ: ಶಿಕ್ಷಣ ಸಂಸ್ಥೆ ಕಟ್ಟಿ, ಪ್ರಸಾದ ನಿಲಯ ಸ್ಥಾಪಿಸಿ ಸಾವಿರಾರೂ ಜನರ ಬಾಳು ಬೆಳಗಿಸಿದ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ಹಿರೇಮಠ ಸಂಸ್ಥಾನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಡಿ.22 ರಂದು ಬಸವ ನಡಿಗೆ, ಷಟಸ್ಥಲ ಧ್ವಜರೋಹಣ, ತೊಟ್ಟಿಲ ಕಾರ್ಯಕ್ರಮ, ವಿವಿಧ ಸ್ಪರ್ಧೆಗಳ ಉದ್ಘಾಟನೆ,ಗ್ರಂಥ ಲೋಕಾರ್ಪಣೆ ಸೇರಿ ದಿನ ವೀಡಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ನಾಡಿನ ವಿವಿಧ ಮಠಾಧೀಶರು, ರಾಜಕೀಯ ಮುಖಂಡರು, ಗಣ್ಯರು, ಸಾಹಿತಿಗಳು, ಕಲಾವಿದರು ಪಾಲ್ಗೊಳ್ಳಲಿದ್ದು.

ಹಾನಗಲ್ ಕುಮಾ ರೇಶ್ವರ ಉಚಿತ ಪ್ರಸಾದ ನಿಲಯ, ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಬಡ ಜನರ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವುದರ ಜತೆಗೆ ನಮ್ಮಂತ ಹವರನ್ನು ಸ್ವಾಮೀಜಿ ಆಗಿಸಿ ಸಮಾಜಕ್ಕೆ ಅರ್ಪಿಸಿದ ಶ್ರೇಯ ಡಾ.ಚನ್ನಬಸವ ಪಟ್ಟದ್ದೇವರಿಗೆ ಸಲ್ಲುತ್ತದೆ. ಕೊಡುಗೆ ಎಷ್ಟೇ ಸ್ಮರಿಸಿದರೂ ಕೂಡ ಕಡಿಮೆ ಆಗುತ್ತದೆ. ಯುವ ಪೀಳಿಗೆಗೆ ಸಾರುವ ಸದಾಶಯ ದೊಂದಿಗೆ ಜಯಂತ್ಯುತ್ಸವ ನೆಪದಲ್ಲಿ ಅನೇಕ ವಿಧಾಯಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಬಸವಬೆಳವಿ ಚರಂತೇಶ್ವರ ವಿರಕ್ತಮಠದ ಶರಣಬಸವ ಸ್ವಾಮೀಜಿ ಅನುಭಾವ ನೀಡಲಿದ್ದಾರೆ. ಸಂಸದ ಸಾಗರ ಖಂಡ್ರೆ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಮಾಜಿ ಶಾಸಕ ಪ್ರಕಾಶ ಖಂಡ್ರೆ ಅಧ್ಯಕ್ಷತೆ ವಹಿಸುವರು. ನಾರಂಜಾ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ಡಿ.ಕೆ.ಸಿದ್ರಾಮ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯ ಮಕ್ಕಳು ನಡೆಸಿ ಕೊಡುವ ಶಿವಯೋಗಿ ಸಿದ್ಧರಾಮೇಶ್ವರ ನಾಟಕ ಪ್ರದರ್ಶನದೊಂದಿಗೆ ದಿನದ ಎಲ್ಲ ಕಾರ್ಯಕ್ರಮಗಳಿಗೆ ತೆರೆ ಬೀಳಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಾಲಿಂಗ ಸ್ವಾಮೀಜಿ, ಹಿರಿಯ ಮುಖಂಡ ಸೋಮನಾಥಪ್ಪ ಅಷ್ಟೂರೆ, ಪ್ರವಚನ ಸೇವಾ ಸಮಿತಿ ಅಧ್ಯಕ್ಷ ಶಿವಕುಮಾರ ಕಮಠಾಣೆ, ಆಡಳಿತಾಧಿಕಾರಿ ಮೋಹನ ರೆಡ್ಡಿ ಇದ್ದರು. ಜಿಲ್ಲಾ ಉಸ್ತುವಾರಿ ಈಶ್ವರ ಖಂಡ್ರೆ ಉದ್ಘಾಟನೆ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ ಜಯಂತ್ಯುತ್ಸವ ನಿಮಿತ್ತ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ವಿವಿಧ ಸ್ಪರ್ಧೆಗಳು ಜರುಗಲಿವೆ. ಸಾಯಂಕಾಲ 5 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದರು. ನವಲಗುಂದ ಸಂಸ್ಥಾನ ಗವಿಮಠದ ಬಸವಲಿಂಗ ಸ್ವಾಮೀಜಿ, ರಾಣೆಬೆನ್ನೂರು ವಿರಕ್ತಮಠದ ಶಿವಯೋಗೀಶ್ವರ ಸ್ವಾಮೀಜಿ ಸಮಾರಂಭದ ನೇತೃತ್ವ ವಹಿಸುವರು.

ಹಿರೇಮಠ ಸಂಸ್ಥಾನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿದರು. ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಮಹಾಲಿಂಗ ಸ್ವಾಮೀಜಿ, ಸೋಮನಾಥಪ್ಪ ಅಷ್ಟೂರೆ, ಶಿವಕುಮಾರ ಕಮಠಾಣೆ, ಮೋಹನ ರೆಡ್ಡಿ ಇದ್ದರು.

ಡಾ.ಎಸ್.ಬಿ.ದುರ್ಗೆಗೆ ಕಾಯಕ ಪ್ರಶಸ್ತಿ

ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ಬಸವಕಲ್ಯಾಣ ಮೂಲದ ವಿಶ್ವಬಸವಧರ್ಮ ಟ್ರಸ್ಟ್ ನ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ಅವರಿಗೆ 2025ನೇ ಸಾಲಿನ ಡಾ.ಚನ್ನಬಸವ ಪಟ್ಟದ್ದೇವರು ಕಾಯಕ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ನಾರಂಜಾ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ಡಿ.ಕೆ.ಸಿದ್ರಾಮ ಪ್ರಶಸ್ತಿ ದಾಸೋಹಿಗಳಾಗಿದ್ದಾರೆ ಎಂದು ಗುರುಬಸವ ಪಟ್ಟದ್ದೇವರು ತಿಳಿಸಿದರು.

ಇಂದಿನಿಂದ 4 ದಿನ ಪಲ್ಸ್ ಪೋಲಿಯೋಗೆ ಸಹಕರಿಸಿ

ಬೀದರ್: ಡಿ.21 ರಿಂದ 24 ರವರೆಗೆ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಬೀದರ್‌ನಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ವಾಹನಗಳ ರ್‍ಯಾಲಿಗೆ ಜಿಲ್ಲೆಯ ನೋಡಲ್ ಅಧಿಕಾರಿ ಡಾ.ಇಂದುಮತಿ ಕಾಮಶೆಟ್ಟಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಐದು ವರ್ಷದೊಳಗಿನ 2,13,372 (ಗ್ರಾಮೀಣ ಮತ್ತು ನಗರ ಪ್ರದೇಶ ಸೇರಿ) ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಧ್ಯಾನೇಶ್ವರ ನೀರಗುಡೆ ಮಾತನಾಡಿ, ಒಟ್ಟು 1077- ತಂಡಗಳನ್ನು ರಚಿಸಲಾಗಿದೆ. ಎಲ್ಲಾ ಮಕ್ಕಳಿಗೆ ಪೋಲಿಯೋ ಹಾಕಿಸಿ ಬಿಟ್ಟು ಹೋದ ಮಕ್ಕಳನ್ನು ತಂಡ ಗಳಿಂದ ಮನೆ ಭೇಟಿ ಸಂದರ್ಭದಲ್ಲಿ ತಪ್ಪದೇ ಎರಡು ಹನಿ ಲಸಿಕೆ ಹಾಕುವಂತೆ ಜಿಲ್ಲೆಯ ಎಲ್ಲಾ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂ ಡಿರುತ್ತಾರೆ ಎಂದು ತಿಳಿಸಿದರು.

ಡಾ. ರಾಜಶೇಖರ ಪಾಟೀಲ, ಡಾ. ಶಂಕ್ರೆಪ್ಪಾ ಬೊಮ್ಮಾ, ಡಾ. ಅನೀಲ ಚಿಂತಾಮಣಿ, ಡಾ. ದಿಲಿಪ್ ಡೊಂಗರೆ, ಡಾ.ಕಿರಣಪಾಟೀಲ, ಡಾ. ಸಂಗರೆಡ್ಡಿ ತಾಲೂಕಾ ಆರೋಗ್ಯ ಅಧಿಕಾರಿಗಳು,. ಉಮೇಶ ಬಿರಾದರ, ಲೋಕೇಶ ಸಲಗರ, ಶಿವಶಂಕರ ಬೇಮಳಗಿ, ಗುರುನಾಥ ಕವಳೆ, ದೇವಿದಾಸ, ಜಿಲ್ಲಾ ಆರ್.ಸಿ.ಹೆಚ್. ವಿಭಾಗದ ಎಲ್ಲಾ ಸಿಬ್ಬಂದಿಗಳು ಹಾಗೂ ಬೀದರ ನಗರ ಪ್ರದೇಶದ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಹನುಮನ ಮಂದಿರದ ವರ್ಧಂತಿ ಉತ್ಸವ 25ಕ್ಕೆ

ಕಲಬುರಗಿ: ನಗರದ ಪ್ರಶಾಂತ ನಗರದಲ್ಲಿರುವ ಶ್ರೀ ಹನುಮನ ಮಂದಿರದ 37ನೇ ವರ್ಷದ ವರ್ಧಂತಿ ಉತ್ಸವವನ್ನು ಡಿ. 25 ರಂದು ಅತ್ಯಂತ ಸಡಗರದಿಂದ ಆಚರಿಸಲಾಗುವುದು ಎಂದು ಅರ್ಚಕ ಗುಂಡಾಚಾರ್ಯ ಜೋಶಿ ನರಿಬೋಳ ತಿಳಿಸಿದ್ದಾರೆ. ಉತ್ಸವದ ಅಂಗವಾಗಿ ಡಿ.23 ರಿಂದ 25 ರವರೆಗೆ ಪ್ರತಿದಿನ ಸಂಜೆ 5.30ಕ್ಕೆ ಪಂ. ವೆಂಕಣ್ಣಾಚಾರ್ಯ ಪೂಜಾರ್ ಅವರಿಂದ ರಾಮಾಯಣ ಪ್ರವಚನ ಜರುಗಲಿದೆ. ವಿಶೇಷವಾಗಿ ಡಿ. 23 ರಂದು ಸಂಜೆ 6 ಗಂಟೆಗೆ ಶ್ರೀ ಪ್ರಶಾಂತ ಹನುಮಾನ ಮಿತ್ರ ಮಂಡಳಿಯವರಿಂದ 'ಶ್ರೀ ಜಗನ್ನಾಥ ದಾಸರು'' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಹಳ್ಳೇರಾವ ಕೆಂಭಾವಿ ಅವರು ನಾಟಕಕ್ಕೆ ಸಂಗೀತ ಸೇವೆ ಸಲ್ಲಿಸಲಿದ್ದಾರೆ. ಡಿ. 25 ರಂದು ವರ್ಧಂತಿ ನಿಮಿತ್ತ ಬೆಳಗ್ಗೆ ಪಂಚಾಮೃತ ಅಭಿಷೇಕ, ಅಲಂಕಾರ ಹಾಗೂ ಸಾಮೂಹಿಕ ಸತ್ಯ ನಾರಾಯಣ ಪೂಜೆ ನಡೆಯಲಿದೆ. ನಂತರ ನಗರದ ವಿವಿಧ ಸಂಘಗಳಿಂದ ಸಾಮೂಹಿಕ ಪಾರಾಯಣ, ಭಜನಾ ಮಂಡಳಿಗಳೊಂದಿಗೆ ಪಲ್ಲಕ್ಕಿ ಉತ್ಸವ ಹಾಗೂ ಪ್ರಸಾದ ವಿತರಣೆ ಜರುಗಲಿದೆ. ಸಂಜೆ ದೀಪೋತ್ಸವದೊಂದಿಗೆ ಉತ್ಸವ ಸಂಪನ್ನಗೊಳ್ಳಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಜಿಲ್ಲೆಯಾದ್ಯಂತ ಆರು ಖರೀದಿ ಕೇಂದ್ರ ಸ್ಥಾಪನೆ

ಕಲಬುರಗಿ: ಪ್ರಸಕ್ತ 2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆ ಯಡಿ ಮುಂಗಾರು ಹಂಗಾಮಿನ ಎಫ್ಎಕ್ಯೂ ಗುಣಮಟ್ಟದ ಮೆಕ್ಕೆ ಜೋಳ ರೈತರಿಂದ ಖರೀದಿಗೆ ಜಿಲ್ಲೆಯಾದ್ಯಂತ 6 ಖರೀದಿ ಕೇಂದ್ರ ಸ್ಥಾಪಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತದ ಕಲಬುರಗಿ ಶಾಖಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಪ್ರತಿ ಕ್ವಿಂಟಾಲ್‌ಗೆ 2,400 ರು. ಗಳಂತೆ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಾಗುವ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ಎಕರೆಗೆ 12 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 50 ಕ್ವಿಂಟಾಲ್ ಮೆಕ್ಕೆಜೋಳ ಉತ್ಪನ್ನವನ್ನು ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಲಬುರಗಿ ಸಂಸ್ಥೆಯನ್ನು ರಾಜ್ಯ ಖರೀದಿ ಸಂಸ್ಥೆಯಾಗಿ ನೇಮಿಸಲಾಗಿದೆ. ಮೆಕ್ಕೆಜೋಳ ನೋಂದಣಿ ಮತ್ತು ಖರೀದಿಗೆ ಜಿಲ್ಲೆಯಾದ್ಯಂತ 6 ಖರೀದಿ ಕೇಂದ್ರಗಳು ಗುರುತಿಸಲಾಗಿದ್ದು, ಕೂಡಲೆ ರೈತ ಬಾಂಧವರು ಏಕಕಾಲದಲ್ಲಿ ನಡೆಯುವ ನೋಂದಣಿ ಮತ್ತು ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ನಾಳೆ ಮಹಾನಗರ ಪಾಲಿಕೆ ಸಾಮಾನ್ಯ ಸಭೆ

ಕಲಬುರಗಿ: ಕಲಬುರಗಿ ಮಹಾನಗರ ಪಾಲಿಕೆಯ ಸರ್ವ ಸದಸ್ಯರ ಸಾಮಾನ್ಯ ಸಭೆ ಡಿ. 22 ರಂದು ಬೆಳಗ್ಗೆ 11 ಗಂಟೆಗೆ ಮಹಾಪೌರರಾದ ವರ್ಷಾ ರಾಜೀವ ಜಾನೆ ಅವರ ಅಧ್ಯಕ್ಷತೆಯಲ್ಲಿ ನಗರದ ಇಂದಿರಾ ಸ್ಮಾರಕ ಭವನ (ಟೌನ್ ಹಾಲ್) ನಲ್ಲಿ ನಡೆಯಲಿದೆ ಎಂದು ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಗುವಿವಿ ಅಂತರ ಮಹಾವಿದ್ಯಾಲಯಗಳ ಯುವ ಜನೋತ್ಸವ | ಜಾಲತಾಣಗಳ ಮೇಲೆ ಭವಿಷ್ಯ ನಿರ್ಧರಿಸಬೇಡಿ: ಸಿನಿಮಾ ನಟ ಪ್ರಕಾಶ್ ರಾಜ್

ಯುವ ಜನತೆ ಮೊಬೈಲ್‌ಗಳಿಂದ ಹೊರಬನ್ನಿ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಇಂದಿನ ಯುವ ಸಮುದಾಯ ಮೊಬೈಲ್ ಸೇರಿದಂತೆ ಸೋಷಿಯಲ್ ಮೀಡಿಯಾ ಎಂಬ ಗುಂಗಿನಿಂದ ಹೊರ ಬರಬೇಕಿದೆ. ಸಾಮಾಜಿಕ ಜಾಲತಾಣದ ಮೇಲೆ ನಿಮ್ಮ ಭವಿಷ್ಯ ನಿರ್ಧರಿಸಬೇಡಿ ಎಂದು ಬಹುಭಾಷಾ ಸಿನಿಮಾ ನಟ ಪ್ರಕಾಶ್ ರಾಜ್ ಯುವ ಸಮುದಾಯಕ್ಕೆ ಕರೆ ನೀಡಿದರು.

ಶನಿವಾರ ಗುಲಬರ್ಗಾ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ನಡೆದ 2025-26ನೇ ಶೈಕ್ಷಣಿಕ ಸಾಲಿನ ಗುಲಬರ್ಗಾ ವಿಶ್ವವಿದ್ಯಾಲಯ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ ಡೊಳ್ಳು ಬಾರಿಸುವ ಮೂಲಕ ವಿದ್ಯುಕ್ತ ಚಾಲನೆ ನೀಡಿ ಮಾತನಾಡಿದ ಅವರು, ಲೈಕ್-ಡಿಸ್ ಲೈಕ್‌ನಿಂದ ಭವಿಷ್ಯ-ಬದುಕು ಕಟ್ಟಿಕೊಳ್ಳಲಾಗುವುದಿಲ್ಲ. ಕುಟುಂಬಸ್ಥರು, ನೆರ ಹೊರೆಯವರೊಂದಿಗೆ ಬೆರೆಯಿರಿ. ನಾವು ನಾವಾಗಿರೋಣ. ಆ ನಿಟ್ಟಿನಲ್ಲಿ ಸಾಗೋಣ ಎಂದರು.

ಯುವಜನೋತ್ಸವ ಕಾರ್ಯಕ್ರಮ ಒಳ್ಳೆಯ ಕವಿ, ನಟ, ಕಲಾವಿದನನ್ನು ಮಾಡಲು ಸಾಧ್ಯವಿಲ್ಲ. ಆದರೆ ಒಬ್ಬ ಪರಿಪಕ್ವತೆಯ ಮನುಷ್ಯನಾಗಿ ಮಾಡಬಹುದುದು. ಸರ್ವಾಂಗೀಣ ಅಭಿವೃದ್ಧಿಗೆ ವ್ಯಕ್ತಿತ್ವ ವಿಕಸನ ತುಂಬಾ ಅವಶ್ಯಕ. ಅದು ಇಂತಹ ಯುವಜನೋತ್ಸವದಲ್ಲಿ ಸರ್ವರೊಂದಿಗೆ ಬೆರೆಯುವಿಕೆಯಿಂದ ಸಿಗುತ್ತದೆ ಎಂಬುದನ್ನು ಮರೆಯದಿರಿ ಎಂದು ಯುವ ಸಮುದಾಯಕ್ಕೆ ಕಿವಿಮಾತು ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಡಾ. ಬಿ. ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ನಡೆದ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದಲ್ಲಿ ಬಹುಭಾಷಾ ಸಿನಿಮಾ ನಟ ಪ್ರಕಾಶ್ ರಾಜ್ ಮಾತನಾಡಿದರು.

ಇಂದು ಸುಳ್ಳಿನ ಮಾರುಕಟ್ಟೆಯ ಪ್ರಪಂಚದಲ್ಲಿ ನಾವಿದ್ದೇವೆ. ಬಡವ-ಶ್ರೀಮಂತನನ್ನು ಕೇವಲ 'ಬ್ರ್ಯಾಂಡ್' ಮೇಲೆ ಅಳೆಯಲಾಗುತ್ತಿದೆ. ಈ ದೇಶವನ್ನು ನೀವು ಮುಂದೆ ನಡೆಸಬೇಕಿದೆ. ಇಂತಹ ಅಂತೆ-ಕಂತೆ ಸುಳ್ಳಿನಿಂದ ಹೊರಬನ್ನಿ. ಇಂದು ರಾಜಕಾರಣ ಧರ್ಮದ ಮೇಲೆ ಸಾಗಿದ್ದು, ಇದು ತುಂಬಾ ಅಪಾಯಕಾರಿ. ದುಡಿಯುವ ವರ್ಗಕ್ಕೆ ಉದ್ಯೋಗ ಬೇಕು. ಬಸವಣ್ಣ, ಅಂಬೇಡ್ಕರ್, ಗಾಂಧಿ ತತ್ವ ಪಾಲಿಸಿ ಸಂವಿಧಾನ ಪಾಲಿಸಿ ಎಂದು ಪ್ರಕಾಶ್ ರಾಜ್ ಮಾರ್ಮಿಕವಾಗಿ ನುಡಿದರು.

ಗುಲಬರ್ಗಾ ವಿವಿಯ ಕುಲಪತಿ ಪ್ರೊ. ಶಶಿಕಾಂತ್ ಉಡಿಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಸಮಾಜವನ್ನು ಬದಲಾಯಿಸುವ ಶಕ್ತಿ ಇರುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಬೇಕು. ಯುವಜನೋತ್ಸದಲ್ಲಿ ಭಾಗಿಯಾಗುವ ಯುವಕರು, ಸ್ಥಳೀಯ ಕಲೆ ಹಾಗೂ ಸಾಹಿತ್ಯದ ಬಗ್ಗೆ ಅರಿಯಬೇಕು. ಪ್ರತಿಭೆ ಹೊರಹೊಮ್ಮಿಸಲು ಯುವಜನೋತ್ಸವ ಸಹಕಾರಿಯಾಗಲಿದೆ. ಇಂದಿಲ್ಲಿ ಬೇರೆ ಬೇರೆ ಮಹಾ ವಿದ್ಯಾಲಯಗಳಿಂದ ಬಂದಿರುವ ವಿದ್ಯಾರ್ಥಿಗಳಿಂದ ಗುಲಬರ್ಗಾ ವಿವಿಯಲ್ಲಿ ಮತ್ತೆ ಕಲರವ ಮೂಡಿದೆ. ಉತ್ಸಾಹದಿಂದ ಹಾಗೂ ಸ್ಪರ್ಧಾ ಮನೋಭಾವದಿಂದ ಪಾಲ್ಗೊಳ್ಳಿ ಎಂದು ಶುಭ ಹಾರೈಸಿದರು.

ವಿವಿ ಕುಲಸಚಿವ ಪ್ರೊ. ರಮೇಶ ಲಂಡನಕರ್, ಕಲೆ ಸಾಹಿತ್ಯ, ಸಂಸ್ಕೃತಿ ಸಮಾಜದ ಪ್ರತಿಬಿಂಬವಾಗಿದೆ. ಇಂದಿನ ಬಹುತೇಕ ಯುವಜನತೆ ಡಿಜಿಟಲ್ ತಂತ್ರಜ್ಞಾನದಲ್ಲಿ ಮುಳುಗಿದ್ದಾರೆ. ಮೊಬೈಲ್‌ಗಳಿಗೆ ಬಲಿಯಾಗಿದ್ದಾರೆ. ಯುವಕರನ್ನು ಅದರಿಂದ ಹೊರತರಲು ಗುಲಬರ್ಗಾ ವಿವಿಯು ಪ್ರತಿವರ್ಷ ಯುವಜನೋತ್ಸವ ಕಾರ್ಯಕ್ರಮ ಆಯೋಜನೆ ಮಾಡುವ ಮೂಲಕ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ವಿದ್ಯಾವಿಷಯಕ ಪರಿಷತ್ ಸದಸ್ಯ ಕೆ. ಸಿದ್ದಪ್ಪ, ಮೌಲ್ಯಮಾಪನ ಕುಲಸಚಿವ ಡಾ. ಎನ್.ಜಿ. ಕಣ್ಣೂರ, ಸಿಡಿಕೇಟ್ ಸದಸ್ಯ ರಾಘವೇಂದ್ರ ಭೈರಪ್ಪ, ಸೇರಿ ವಿವಿಧ ನಿಕಯಗಳ ಮುಖ್ಯಸ್ಥರು, ಪ್ರಾಧ್ಯಪಕರು ಹಾಗೂ ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅದ್ದೂರಿ ಮೆರವಣಿಗೆ, ಕಲಾ ಪ್ರದರ್ಶನ

ಯುವಜನೋತ್ಸವದ ಆರಂಭಕ್ಕೂ ಮುನ್ನ ವಿವಿಯ ಪ್ರಾಣಿಶಾಸ್ತ್ರ ವಿಭಾಗದಿಂದ ಡಾ. ಬಿ.ಆರ್. ಅಂಬೇಡ್ಕರ್ ಭವನದವರೆಗೆ ವಿವಿಧ ಸಾಂಸ್ಕೃತಿಕ ಕಲಾಮೇಳದೊಂದಿಗೆ ಅದ್ದೂರಿ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಸ್ಥಳೀಯ ಜಾನಪದ ಕಲಾ ತಂಡಗಳ ನೃತ್ಯ, ವಾದ್ಯ ಮೇಳ ಹಾಗೂ ವಿವಿಧ ವೇಷಭೂಷಣ ತೊಟ್ಟ ವಿದ್ಯಾರ್ಥಿಗಳು ಭಾಗವಹಿಸಿ ಸಂಭ್ರಮಿಸಿದರು. ಯುವಜನೋತ್ಸದ ಮೆರವಣಿಗೆಯಲ್ಲಿ ವಿವಿಧ ಸ್ಥಳೀಯ ಸಾಂಸ್ಕೃತಿಕ ಅನಾವರಣಗೊಂಡಿತು.

> ಇಂದಿನ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಮ್ಮ ನೆಲಮೂಲದ ಕಲೆಗಳಾದ ಜೋಗತಿ ಕುಣಿತ, ಜಾನಪದ ಕುಣಿತ, ಬಾಂಗಡ ಕುಣಿತಗಳು ತನ್ನ ಮೂಲ ಸ್ವರೂಪ ಕಳೆದುಕೊಳ್ಳುವ ರೀತಿಯಲ್ಲಿ ಕಲೆಯನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇದು ಬೇಸರದ ಸಂಗತಿಯಾಗಿದೆ. ಯುವಕರು, ನಮ್ಮ ಮೂಲ ಕಲಾ ಪದ್ಧತಿಗಳನ್ನು ಅರ್ಥೈಸಿಕೊಂಡು ಪ್ರದರ್ಶನ ಮಾಡಿದರೆ, ನಿಜವಾದ ಜಾನಪದ ಸಂಸ್ಕೃತಿ ಉಳಿಯಲು ಸಾಧ್ಯವಾಗಲಿದೆ.
> - ಪ್ರೊ. ಶಶಿಕಾಂತ್ ಉಡಿಕೇರಿ, ಕುಲಪತಿ, ಗುಲಬರ್ಗಾ ವಿಶ್ವವಿದ್ಯಾಲಯ

ರೈತ ಮುಖಂಡ ಪಾಟೀಲ್ ಹೊಲದಲ್ಲಿ ಎಳ್ಳಮಾವಾಸ್ಯೆ ಸಡಗರ

ಚಿಂಚೋಳಿ: ತಾಲೂಕಿನಾದ್ಯಂತ ಎಳ್ಳಮಾವಾಸ್ಯೆ ಹಬ್ಬವನ್ನು ರೈತಾಪಿ ವರ್ಗ ಅತ್ಯಂತ ಸಂಭ್ರಮದಿಂದ ಆಚರಿಸಿದರು. ಇದೇ ಸಂದರ್ಭದಲ್ಲಿ ನಾಗಇದ್ಲಾಯಿ ಗ್ರಾಮದ ಪ್ರಮುಖ ರೈತ ಮುಖಂಡ ಉದಯಕುಮಾರ್ ಮಾಲಿ ಪಾಟೀಲ್ ಅವರು ತಮ್ಮ ಹೊಲದಲ್ಲಿ ಹಿತೈಷಿಗಳಿಗಾಗಿ ವಿಶೇಷ ಔತಣಕೂಟ ಏರ್ಪಡಿಸುವ ಮೂಲಕ ಹಬ್ಬದ ಸಡಗರಕ್ಕೆ ಸಾಕ್ಷಿಯಾದರು.

ಭೂಮಿ ತಾಯಿಗೆ ಕೃತಜ್ಞತೆ ಸಲ್ಲಿಸುವ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಉದಯಕುಮಾರ್ ಪಾಟೀಲ್ ಅವರು, ಎಳ್ಳಮಾವಾಸ್ಯೆಯು ರೈತ ಕುಟುಂಬಗಳಿಗೆ ಅತ್ಯಂತ ಮಹತ್ವದ ಹಬ್ಬವಾಗಿದೆ. ಭೂಮಿ ತಾಯಿಯು ನಮಗೆ ಸಮೃದ್ಧ ಬೆಳೆ ನೀಡಿ ಸಲಹಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಲು ಹೊಲದಲ್ಲಿ 'ಚರಗ' ಚೆಲ್ಲುವ ಸಂಪ್ರದಾಯ ನಡೆಸಲಾಗುತ್ತದೆ. ಎಳ್ಳು-ಬೆಲ್ಲ ಹಾಗೂ ವಿಶೇಷ ಖಾದ್ಯಗಳನ್ನು ಸಮರ್ಪಿಸುವ ಮೂಲಕ ರೈತರು ಭೂಮಿತಾಯಿಯನ್ನು ಆರಾಧಿಸುತ್ತಾರೆ ಎಂದು ಹಬ್ಬದ ಮಹತ್ವವನ್ನು ವಿವರಿಸಿದರು.

ಉದಯ ಕುಮಾರ್ ಪಾಟೀಲ್ ಅವರು ಏರ್ಪಡಿಸಿದ್ದ ಈ ಸ್ನೇಹಕೂಟದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿದ್ದರು. ಬಿಜೆಪಿ ಹಿರಿಯ ಮುಖಂಡ ಭೀಮಶೆಟ್ಟಿ

ರೈತ ಮುಖಂಡ ಉದಯ ಕುಮಾರ್ ಮಾಲಿ ಪಾಟೀಲ್‌ರವರ ಹೊಲದಲ್ಲಿ ಎಳ್ಳಮಾವಾಸ್ಯೆ ಹಬ್ಬವನ್ನು ಆಚರಿಸಲಾಯಿತು.

ಮುರುಡ, ವಕೀಲ ಶ್ರೀಮಂತ ಕಟ್ಟಿಮನಿ, ಕೆ. ಎಂ. ಬಾರಿ, ಹಿರಿಯ ಪತ್ರಕರ್ತ ಶಾಮರಾವ ಓಂಕಾರ, ಜಗನ್ನಾಥ ಶೇರಿಕಾರ, ಮಹೇಬೂಬ್ ಶಾ ಅಣವಾರ ಹಾಗೂ ಚಾಂದ ಚಾವೂಸ್ ಉಪಸ್ಥಿತರಿದ್ದರು.

ಅಲ್ಲದೆ, ಕಂದಾಯ ನಿರೀಕ್ಷಕ ಕೇಶವ ಕುಲಕರ್ಣಿ, ಕಾರ್ತಿಕ್ ಸಜ್ಜನ್, ಅರಣ್ಯ ಅಧಿಕಾರಿ ಸಿದ್ದಾರೂಢ ಹೊಕ್ಕಂಡಿ, ರಾಜಶೇಖರ ಹಿತ್ತಲ್, ಶಂಕರಯ್ಯ ಮಠಪತಿ ಮತ್ತು ವಿಜಯ ಕುಮಾರ ಮಾಲಿ ಪಾಟೀಲ್ ಅವರು ಪಾಲ್ಗೊಂಡು ಸಜ್ಜೆಯ ರೊಟ್ಟಿ ಹಾಗೂ ಶೇಂಗಾ ಹೋಳಿಗೆಯ ಸವಿಯನ್ನು ಸವಿದರು.

ಬೆಂಬಲ ಬೆಲೆ: ಖರೀದಿ ಪ್ರಕ್ರಿಯೆ ಆರಂಭ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ರೈತರಿಂದ ತೊಗರಿ ಖರೀದಿಸಲು ಸರಕಾರ ಅಧಿಕೃತ ಆದೇಶ ಹೊರಡಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಡಿ. 17ರಂದು ಹೊರಬಿದ್ದಿರುವ ಈ ಆದೇಶದನ್ವಯ ರೈತರು ಇಂದಿನಿಂದಲೇ ನೋಂದಣಿ ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಾಗಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಖರೀದಿ ನಡೆಯಲಿದೆ. ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಮೂಲಕ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದ್ದಾರೆ.

ಜಿಲ್ಲೆಯ ಒಟ್ಟು 141 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಹಾಗೂ ಎಫ್‌ಪಿಒ ಕೇಂದ್ರಗಳಲ್ಲಿ ಪಿಒಎಸ್ ಯಂತ್ರಗಳ ಮೂಲಕ ರೈತರ ನೋಂದಣಿ ನಡೆಯಲಿದೆ. ನೋಂದಣಿಗೆ

2026ರ ಮಾರ್ಚ್ 6 ಕೊನೆಯ ದಿನವಾಗಿದ್ದು, ಖರೀದಿ ಪ್ರಕ್ರಿಯೆಯು ಮಾ. 16 ರವರೆಗೆ ಮುಂದು ವರೆಯಲಿದೆ. ನೋಂದಣಿ ಸಮಯದಲ್ಲಿ ರೈತರ 'ಬಯೋ ಮೆಟ್ರಿಕ್' ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದ್ದಾರೆ.

ನೇರ ನಗದು ವರ್ಗಾವಣೆ: ರೈತರಿಂದ ಖರೀದಿಸಿದ ಉತ್ಪನ್ನದ ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಡಿಬಿಟಿ ಪೋರ್ಟಲ್ ಮೂಲಕ ಜಮಾ ಮಾಡಲಾಗುವುದು. ಒಂದು ವೇಳೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಹೆಚ್ಚಿನ ದರವಿದ್ದಲ್ಲಿ, ಎನ್‌ಎಎಫ್‌ಇಡಿ ಸಂಸ್ಥೆಯು ಮುಕ್ತ ಮಾರುಕಟ್ಟೆ ಅಥವಾ ಇ-ಆಕ್ಷನ್ ಮೂಲಕ ಹೆಚ್ಚಿನ ದರದಲ್ಲಿ ಬಫರ್‌ಸ್ಟಾಕ್ ಉದ್ದೇಶಕ್ಕಾಗಿ ಖರೀದಿ ಮಾಡಲಿದೆ ಎಂದು ಸಚಿವರು ವಿವರಿಸಿದ್ದಾರೆ.

ರೈತರು ಹೆಚ್ಚಿನ ಮಾಹಿತಿಗಾಗಿ 9449864446 ಅಥವಾ 9964474444 (ದ್ವಿದಳ ಧಾನ್ಯ ಮಂಡಳಿ) ಸಂಪರ್ಕಿಸಿ, ಈ ಯೋಜನೆಯ ಸದುಪಯೋಗ ಪಡೆಯಬೇಕೆಂದು ಸಚಿವರು ಮನವಿ ಮಾಡಿದ್ದಾರೆ.

ನಾಳೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಕಲಬುರಗಿ: ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗ-1ರಲ್ಲಿ ಬರುವ 110/11ಕೆವಿ ನಂದೂರ ಇಂಡಸ್ಟ್ರಿಯಲ್ ಏರಿಯಾ ಫೀಡರ್‌ಗಳ ವ್ಯಾಪ್ತಿಯಲ್ಲಿನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಡಿ.21 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗ-1ರ ಕಾರ್ಯ ನಿರ್ವಾಹಕ ಎಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

110/11ಕೆವಿ ನಂದೂರ ಇಂಡಸ್ಟ್ರಿಯಲ್ ಏರಿಯಾ ಫೀಡರ್‌ಗಳು: ಎಫ್-1 ವುಮೆನ್ಸ್ ಪಾರ್ಕ್, ಎಫ್-2 ಭಾರತ ಇಂಡಸ್ಟ್ರಿ, ಎಫ್-10 ನಂದೂರ ಐಪಿ, ಎಫ್-11 ಐಒಸಿಎಲ್, ಎಫ್-12 ಎಮ್‌ಆರ್‌ಎಫ್. **ಗ್ರಾಮಗಳು:** ನಂದೂರ(ಕೆ), ನಂದೂರ(ಬಿ), ಬಾಪುನಾಯ ಕತಾಂಡಾ, ಜಾಪೂರ ಮತ್ತು ಧರ್ಮಾಪುರ, ಕೆಐಡಿಬಿ ನಂದೂರ ಇಂಡಸ್ಟ್ರಿಯಲ್ ಏರಿಯಾ ಫೇಸ್ 1 ಕಲಬುರಗಿ, ಕೆಐಡಿಬಿ ನಂದೂರ ಇಂಡಸ್ಟ್ರಿಯಲ್ ಏರಿಯಾ ಫೇಸ್ 2 ಕಲಬುರಗಿ.

ಚಂಪಾ, ಕಣವಿ ಅವರ ಸಂಪುಟಗಳ ಲೋಕಾರ್ಪಣೆ 23ಕ್ಕೆ

ಕಲಬುರಗಿ: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಹಿರಿಯ ಸಾಹಿತಿಗಳಾದ ಡಾ. ಚೆನ್ನವೀರ ಕಣವಿ ಹಾಗೂ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಅವರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ ಹಾಗೂ ಉಚಿತ ಪುಸ್ತಕ ವಿತರಣಾ ಸಮಾರಂಭವನ್ನು ಡಿ. 23 ರಂದು ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಧಿಕಾರದ ಸದಸ್ಯ ಬಿ.ಎಚ್. ನಿರಗುಡಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಗುಲಬರ್ಗಾ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಭವನದಲ್ಲಿ ಮಂಗಳವಾರ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಜರುಗಲಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಅವರು ಕಾರ್ಯಕ್ರಮ ಉದ್ಘಾಟಿಸಿ, ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಖ್ಯಾತ ಸಾಹಿತಿ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು ಜಿಲ್ಲೆಯ ಶಾಲಾ-ಕಾಲೇಜುಗಳಿಗೆ ಉಚಿತ ಪುಸ್ತಕಗಳನ್ನು ವಿತರಿಸಲಿದ್ದಾರೆ. ಇದೇ ಸಂದರ್ಭದಲ್ಲಿ 'ಮನೆಗೊಂದು ಗ್ರಂಥಾಲಯ' ಜಿಲ್ಲಾ ಜಾಗೃತ ಸಮಿತಿ ಸದಸ್ಯರಿಗೆ ಅರ್ಹತಾ ಪತ್ರಗಳನ್ನು ವಿತರಿಸಲಾಗುವುದು ಎಂದರು.

ಹಿರಿಯ ಸಾಹಿತಿ ಡಾ. ಬಸವರಾಜ ಸಬರದ ಅವರು ಸಂಪುಟಗಳ ಕುರಿತು ಆಶಯ ಭಾಷಣ ಮಾಡಲಿದ್ದಾರೆ. ಅತಿಥಿಗಳಾಗಿ ಪ್ರೊ. ಎಚ್.ಟಿ. ಪೋತೆ, ಸುರೇಶ ಜಂಗೆ, ಉದಯ ಬಿ. ಪಾಟೀಲ್ ಹಾಗೂ ಮೃತರ ಕುಟುಂಬಸ್ಥರಾದ ನೀಲಾ ಪಾಟೀಲ್ ಮತ್ತು ಪ್ರಿಯದರ್ಶಿ ಕಣವಿ ಪಾಲ್ಗೊಳ್ಳಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೋರಿದ್ದಾರೆ.

ರಾಮ್ ಜಿ ಮಸೂದೆ ವಾಪಸ್‌ಗೆ ಪ್ರತಿಭಟನೆ

ಕಲಬುರಗಿ: ಕೇಂದ್ರ ಸರಕಾರದ ವಿಬಿ ಜಿ ಮತ್ತು ರಾಮ್ ಜಿ ಮಸೂದೆ ವಾಪಸ್ ಪಡೆದು, ಮನರೇಗಾ ಮುಂದುವರಿಸಲು ಆಗ್ರಹಿಸಿ ಡಿ.22 ರಂದು ಸಂಸದರ ಕಚೇರಿ ಎದುರು ಗ್ರಾಮೀಣ ಕೂಲಿ ಕಾರ್ಮಿಕರ ಸಂಟನೆಯಿಂದ ಪ್ರತಿಭಟಿಸಲಾಗುವುದು ಎಂದು ಸಂಟನೆ ಗುರುರಾಜ ಪಾಟೀಲ್ ಹೇಳಿದರು.

ಕಾರ್ಮಿಕರ ಸಂಘಟನೆಗಳ ಜತೆ ಚರ್ಚಿಸದೇ ಮಸೂದೆ ಜಾರಿ ಮಾಡಿದ್ದು, ಇದರಿಂದ ಕೂಲಿ ಕಾರ್ಮಿಕರಿಗೆ ತೊಂದರೆಗಳಿವೆ. ಪ್ರತಿ ವರ್ಷ ರಾಜ್ಯವಾರು ಬಜೆಟ್ ಹಂಚಿಕೆ ಕೇಂದ್ರ ಸರಕಾರ ನಿರ್ಣಯಿಸಲಿದೆ. ಹೆಚ್ಚುವರಿ ಅನುದಾನ ರಾಜ್ಯ ಸರಕಾರ ಭರಿಸಬೇಕು ಎಂದಿದೆ.

ಪ್ರತಿ ರಾಜ್ಯದಲ್ಲಿ ಮಾನವ ದಿನಗಳ ಸೃಜನೆ ಮೇಲೆ ಮಿತಿ ಹೇರುತ್ತಿರುವುದು, ಕೂಲಿ ಕಾರ್ಮಿಕರ ವಿರೋಧಿ ನಡೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಈ ಸಂದರ್ಭದಲ್ಲಿ ಸಂಟನೆಯ ಶರಣಗೌಡ, ಸುನೀಲ, ನೀಲಮ್ಮ, ಪವಿತ್ರಾ ಇತರರಿದ್ದರು.

ಇಂದಿನಿಂದ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ

ಕಾಳಗಿ: ತಾಲೂಕಿನಲ್ಲಿ ಡಿ. 21 ರಿಂದ 24ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವಂತೆ ತಹಸೀಲ್ದಾರ್ ಪೃಥ್ವಿರಾಜ್ ಪಾಟೀಲ ಪೋಷಕರಿಗೆ ಕರೆ ನೀಡಿದ್ದಾರೆ.

ತಾಲೂಕು ಪಲ್ಸ್ ಪೋಲಿಯೋ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಒಟ್ಟು 8,892 ಮಕ್ಕಳಿಗೆ ಎರಡು ಹನಿ ಪೋಲಿಯೋ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿ ವ್ಯಾಪಕ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ. ಅಭಿಯಾನದ ಯಶಸ್ಸಿಗಾಗಿ ಒಟ್ಟು 50 ಬೂತ್ ಮಟ್ಟದ ತಂಡಗಳನ್ನು ರಚಿಸಲಾಗಿದೆ. ಪ್ರಯಾಣದಲ್ಲಿರುವ ಮಕ್ಕಳಿಗೂ ಲಸಿಕೆ ಲಭ್ಯವಾಗುವಂತೆ ಬಸ್ ನಿಲ್ದಾಣಗಳಲ್ಲಿ 4 ಸಂಚಾರಿ ತಂಡಗಳನ್ನು ನಿಯೋಜಿಸಲಾಗಿದೆ. 11 ಜನ ಆರೋಗ್ಯ ಮೇಲ್ವಿಚಾರಕರು ಸಂಪೂರ್ಣ ಪ್ರಕ್ರಿಯೆಯ ಉಸ್ತುವಾರಿ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ

ಕಾಳಗಿ ತಾಲೂಕು ಪಲ್ಸ್ ಪೋಲಿಯೋ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ತಹಸೀಲ್ದಾರ್ ಪೃಥ್ವಿರಾಜ್ ಪಾಟೀಲ್ ಮಾತನಾಡಿದರು.

ಕೇಂದ್ರಗಳು ಹಾಗೂ ಅಂಗನವಾಡಿಗಳಲ್ಲಿ ಲಸಿಕಾ ಕೇಂದ್ರಗಳನ್ನು ತೆರೆಯಲಾಗುವುದು. ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಆರೋಗ್ಯ ಇಲಾಖೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ನಿರಂತರ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಬಸಲಿಂಗಪ್ಪ ಡಿಗ್ಗಿ, ಸಮುದಾಯ ಆರೋಗ್ಯ ಕೇಂದ್ರದ ಆಡಳಿತಾಧಿಕಾರಿ ಅಂಬರೀಶ್ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಚಿವರ ಸ್ವಕ್ಷೇತ್ರದಲ್ಲಿ ಅಕ್ರಮ ಮದ್ಯ ಮಾರಾಟದ ಹಾವಳಿ!

ಕರ್ಚಖೇಡದಲ್ಲಿ ಸರಕಾರಿ ಜಾಗದಲ್ಲಿ ಮದ್ಯದಂಗಡಿ | ತೆರವುಗೊಳಿಸದಿದ್ದರೆ ಹೋರಾಟ | ಬಿಜೆಪಿ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಜಿಲ್ಲೆಯ ಸೇಡಂ ವಿಧಾನಸಭಾ ಕ್ಷೇತ್ರದ ಕರ್ಚಖೇಡ ಗ್ರಾಮದ ಸರಕಾರಿ ಜಾಗದಲ್ಲಿ ಅಕ್ರಮ ಸಾರಾಯಿ (ಮದ್ಯ) ಅಂಗಡಿ ರಾಜಾರೋಷವಾಗಿ ನಡೆಯುತ್ತಿದ್ದು, ಅಕ್ರಮ ಚಟುವಟಿಕೆ ತಡೆಗಟ್ಟುವ ನಿಟ್ಟಿನಲ್ಲಿ ಹಾಕಲಾಗಿರುವ ಸಿಸಿ ಕ್ಯಾಮರಾ ಕಿತ್ತು ಹಾಕಿ ದರ್ಪ ತೋರಲಾಗಿದೆ. ಇದಕ್ಕೆ ವೈದ್ಯಕೀಯ ಶಿಕ್ಷಣ ಸಚಿವರ ಕುಮ್ಮಕ್ಕು ಬೇರೆ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ಅಕ್ರಮ ಮದ್ಯದಂಡಗಿ ಪಕ್ಕವೇ ಶಾಲೆ, ಆಸ್ಪತ್ರೆ ಮತ್ತು ಬಸ್ ನಿಲ್ದಾಣವಿದೆ. ಹೀಗಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಪದೇಪದೇ ಮಾನಹಾನಿ ಪ್ರಕರಣ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿದ್ದರೆ ಅದನ್ನು ಅಕ್ರಮ ಮದ್ಯದಂಡಗಿ ನಡೆಸುತ್ತಿರುವ ಕಾಂಗ್ರೆಸ್ ಮುಖಂಡ ತುಳಜಪ್ಪಾ ಹಡಪದ ಹಾಗೂ ಅವರ ಮಗ ಆನಂದ ಹಡಪದ ಸೇರಿಕೊಂಡು ಕಿತ್ತು ಹಾಕಿದ್ದಾರೆ. ಕ್ಯಾಮರಾ ಕಿತ್ತು ಹಾಕಿರುವ ಕೃತ್ಯದ ದೃಶ್ಯ ಮೊಬೈಲ್‌ದಲ್ಲಿ ಸೆರೆಯಾಗಿದ್ದನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಸಮಾಜ ಸೇವಕಿ ಸಂತೋಷಿರಾಣಿ ಪಾಟೀಲ್ ತೇಲ್ಲೂಕ್ರ ಮಾತನಾಡಿದರು.

ಕ್ಯಾಮರಾ ಕಿತ್ತು ಹಾಕಿದ್ದನ್ನು ವಿಚಾರಿಸಲು ಹಾಗೂ ಮತ್ತೆ ಅಳವಡಿಕೆಗೆ ಮುಂದಾದ ಪಿಡಿಒ ಹಾಗೂ ಸಿಪಿಐ ಅವರಿಗೆ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಫೋನ್ ಮಾಡಿ ಅಕ್ರಮ ಮದ್ಯದ ಮಾರಾಟ ಪರ ನಿಂತಿದ್ದಲ್ಲದೇ ಸಾರ್ವಜನಿಕ ಹಿತಾಸಕ್ತಿ ಬಲಿ ಕೊಡಲಾಗಿದೆ ಎಂದು ಬಿಜೆಪಿ ಮುಖಂಡರು ಹಾಗೂ ಸಮಾಜ ಸೇವಕಿ ಸಂತೋಷಿರಾಣಿ ಪಾಟೀಲ್ ತೇಲ್ಲೂರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದೂರಿದರು. ಸಚಿವರು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸದೇ ಪಕ್ಷದ ಮುಖಂಡರನ್ನು ಕಾಪಾಡುತ್ತಿರುವುದು ಅದರಲ್ಲೂ ಅಕ್ರಮ ಮದ್ಯದಂಗಡಿಗೆ ಬೆಂಬಲವಾಗಿ ನಿಂತಿರುವುದು ಅತ್ಯಂತ ನಾಚಿಗೇಡಿತನ ಸಂಗತಿಯಾಗಿದೆ ಎಂದು ಸಂತೋಷಿರಾಣಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ರಮ ಮದ್ಯದಂಗಡಿಯಲ್ಲೇ ಮದ್ಯ ಕುಡಿದವರು ಪಕ್ಕದಲ್ಲೇ ಇರುವ ಶಾಲೆ ಬಸ್ ನಿಲ್ದಾಣ, ಶಾಲೆಗಳಲ್ಲೇ ಮಲಗಿ ಅವಾಂತರ ಸೃಷ್ಟಿಸುತ್ತಿದ್ದಾರೆ. ಹೀಗಾಗಿ ಗ್ರಾಮದಲ್ಲಿ ಆತಂಕವೇ ಸೃಷ್ಟಿಯಾಗುತ್ತಿದೆ. ಆದ್ದರಿಂದ ಅಕ್ರಮ ಮದ್ಯದಂಗಡಿ ತಕ್ಷಣ ತೆರವುಗೊಳಿಸಿ ಜತೆಗೆ ಸಿಸಿ ಕ್ಯಾಮರಾ ಅಳವಡಿಸದಿದ್ದರೆ ಡಿ. 24ರಂದು ಗ್ರಾಮಸ್ಥರೊಂದಿಗೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶೈಲಜಾ ಹಿತ್ತಲ್, ತಿಪ್ಪಣ್ಣ ಕುಂಬಾರ, ನರಸರೆಡ್ಡಿ, ಗುರುರಾಜ ಕುಲಕರ್ಣಿ, ಮಲ್ಲಪ್ಪ ಸಕ್ರಿ, ಓಂಪ್ರಕಾಶ ಪಾಟೀಲ್‌ಸೇರಿ ಇತರರಿದ್ದರು.

> ಕರ್ಚಖೇಡದಲ್ಲಿನ ಸರಕಾರಿ ಜಾಗದಲ್ಲಿ ಅಕ್ರಮವಾಗಿರುವ ಮದ್ಯದಂಗಡಿ ತೆರವುಗೊಳಿಸು ನಿಟ್ಟಿನ ಹೋರಾಟದಂತೆ ಸೇಡಂ ಕ್ಷೇತ್ರದಲ್ಲಿನ ಇತರ ಅಕ್ರಮ ಮದ್ಯದ ಅಂಗಡಿಗಳ ವಿರುದ್ಧವೂ ಕ್ರಮಕ್ಕೆ ಆಗ್ರಹಿಸಿ ಪ್ರಬಲ ಹೋರಾಟ ಕೈಗೊಳ್ಳಲು ಹಿಂದೇಟು ಹಾಕಲಾಗದು.
> - ಸಂತೋಷಿರಾಣಿ, ಸಮಾಜ ಸೇವಕಿ

ಹಿರಿಯ ಪತ್ರಕರ್ತ ದೊಡ್ಡ ಬೊಮ್ಮಯ್ಯ ಇನ್ನಿಲ್ಲ

ಬೆಂಗಳೂರು: ಹಿರಿಯ ಪತ್ರಕರ್ತ ಹಾಗೂ ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಉಪಾಧ್ಯಕ್ಷ ದೊಡ್ಡ ಬೊಮ್ಮಯ್ಯ (63) ಅವರು ಡಿ.20ರಂದು ನಿಧನರಾಗಿದ್ದಾರೆ.

ಮೂಲತಃ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ರೊಪ್ಪ ಗ್ರಾಮದ ದೊಡ್ಡಯ್ಯ ಮತ್ತು ಚಿಕ್ಕಮ್ಮ ದಂಪತಿಯ ಪುತ್ರರಾದ ದೊಡ್ಡ ಬೊಮ್ಮಯ್ಯ ಅವರು ಈ ಮೊದಲು ಸಂಜೆವಾಣಿ ಮತ್ತು ಪ್ರಸ್ತುತ ಇಂದು ಸಂಜೆ ಪತ್ರಿಕೆಯ ವರದಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಕಾಶವಾಣಿ ಮತ್ತು ದೂರದರ್ಶನ ಅರೆಕಾಲಿಕ ಸಹಾಯಕ ಸುದ್ದಿ ಸಂಪಾದಕರಾಗಿ ಕೆಲಸ ಮಾಡಿದ್ದರು. ಸುಮಾರು 30 ವರ್ಷ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದ ಅವರು, ಅಪಾರ ಆತ್ಮೀಯ ಬಳಗ ಗಳಿಸಿಕೊಂಡಿದ್ದರು.

ಬೆಳಗಾವಿಯ ಚಳಿಗಾಲ ಅಧಿವೇಶನದ ಕಾರ್ಯ ಕಲಾಪಗಳ ವರದಿಗಾಗಿ ತೆರಳಿದ್ದ ಅವರು ಡಿ.20 ರಂದು ಬೆಳಗ್ಗೆ ಬೆಂಗಳೂರಿಗೆ ವಾಪಸಾಗಿದ್ದರು. ಕೆಎಸ್‌ಆರ್‌ಟಿಸಿ ಬಸ್ ಇಳಿದು, ಬಾಗಲೂರಿನಲ್ಲಿರುವ ತಮ್ಮ ಮನೆ ತಲುಪಲು ಬಿಎಂಟಿಸಿ ಬಸ್ ಹತ್ತಿದ್ದ ಸಂದರ್ಭದಲ್ಲಿ ತೀವ್ರ ಹೃದಯಾಘಾತವಾಗಿದೆ. ಸಹಪ್ರಯಾಣಿಕರು ಉಪಚರಿಸಿದ ಹೊರತಾಗಿಯೂ ಬಸ್‌ನಲ್ಲಿಯೇ ನಿಧನ ಹೊಂದಿದ್ದಾರೆ.

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಮತ್ತು ಪ್ರೆಸ್ ಕ್ಲಬ್ ಪದಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದ ಬೊಮ್ಮಯ್ಯ ಅವರ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ರಮೇಶ್‌ಪಾಳ್ಯ, ಸಂಘದ ಪದಾಧಿಕಾರಿಗಳು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ವರದಿಗಾರರ ಕೂಟದ ಅಧ್ಯಕ್ಷ ಆರ್.ಟಿ.ವಿಠಲಮೂರ್ತಿ ಮತ್ತಿತರ ಹಿರಿಯ ಪತ್ರಕರ್ತರು ಶೋಕ ವ್ಯಕ್ತಪಡಿಸಿದ್ದಾರೆ.

ನದಿ ಜೋಡಣೆ ಸಭೆ ಡಿಕೆಶಿ ದಿಲ್ಲಿ ಯಾತ್ರೆ

← ಮೊದಲ ಪುಟದಿಂದ

ಈ ದೆಹಲಿ ಭೇಟಿ ವೇಳೆ, ಕೇಂದ್ರ ನಗರಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿ ಕೆಲ ವಿಚಾರಗಳನ್ನು ಚರ್ಚಿಸುವೆ. ಸಂಸದರ ಜೊತೆ ಕೇಂದ್ರ ಸಚಿವರನ್ನು ಭೇಟಿ ಮಾಡಬೇಕಿತ್ತು. ಆದರೆ ಸದ್ಯಕ್ಕೆ ಸಮಯ ಇಲ್ಲ. ಹಾಗಾಗಿ ತಾವೊಬ್ಬರೇ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ವಿಚಾರಣೆಗೂ ಹಾಜರ್

ಈ ನಡುವೆ ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರದ ಭೇಟಿಯ ಸಮಯದಲ್ಲಿ ದೆಹಲಿ ಪೊಲೀಸರ ಮುಂದೆ ಹಾಜರಾಗಿ ಹೇಳಿಕೆ ನೀಡುವುದಾಗಿ ಸ್ಪಷ್ಟಪಡಿಸಿದ್ದಾರೆ. ದೆಹಲಿ ಪೊಲೀಸರು ಖುದ್ದು ಹಾಜರಾಗಿ ಹೇಳಿಕೆ ನೀಡುವಂತೆ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಸಂಸದ ಡಿ.ಕೆ. ಸುರೇಶ್ ಅವರಿಗೆ ನೋಟಿಸ್ ನೀಡಿದ್ದರು. ಕಳೆದ ಸೋಮವಾರ ದೆಹಲಿಗೆ ಭೇಟಿ ನೀಡಿದ ಡಿ.ಕೆ. ಶಿವಕುಮಾರ್ ಮತಗಳ್ಳತನದ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿ, ದೆಹಲಿ ಪೊಲೀಸರನ್ನು ಭೇಟಿಯಾಗದೆ ವಾಪಸ್ ಬಂದಿದ್ದರು. ಈಗ ಮಂಗಳವಾರ ದೆಹಲಿಗೆ ತೆರಳಿ ಅಲ್ಲಿನ ಪೊಲೀಸರ ಮುಂದೆ ಹೇಳಿಕೆ ನೀಡುವುದಾಗಿ ತಿಳಿಸಿದ್ದಾರೆ.

> **ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತಂತೆ ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಪ್ರಕರಣವನ್ನು ವಿಚಾರಣಾ ನ್ಯಾಯಾಲಯ ರದ್ದುಗೊಳಿಸಿದೆ. ಆದರೂ ದೆಹಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅದರ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದೇವೆ.**
> -**ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಕರ್ನಾಟಕ ಸರ್ಕಾರ
(ಆಯುಷ್ ಇಲಾಖೆ)
ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ಬೃಂದಾವನ ಬಡಾವಣೆ, ಕೆ.ಆರ್.ಎಸ್.ರಸ್ತೆ,ಮೈಸೂರು–570 020.
Email ID:gncymchospital2017@gmail.com
Ph. No.0821-2512121
ಸಂಖ್ಯೆ:ಜಿಎನ್‌ಸಿ&ಹೆಚ್/10/ಸರಬ/2025–26 ದಿನಾಂಕ: 18.12.2025

ಇ–ಟೆಂಡರ್ ಆಹ್ವಾನ ಪ್ರಕಟಣೆ

ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮೈಸೂರು., ಇಲ್ಲಿಗೆ ಅಗತ್ಯವಾಗಿ ಬೇಕಾದ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮೈಸೂರು, ಇಲ್ಲಿನ ಸ್ವಚ್ಛತೆ/ಭದ್ರತೆ ಮತ್ತು ಇತರೆ ಹಾಗೂ ಡಾಟಾ ಎಂಟ್ರಿ ಆಪರೇಟರ್/ವಾಹನ ಚಾಲಕ ಕೆಲಸಗಳಿಗಾಗಿ ಗ್ರೂಪ್–ಸಿ ಮತ್ತು ಡಿ ಸಿಬ್ಬಂದಿಗಳ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಸಲುವಾಗಿ ಕೆಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ನಿಗಧಿತ ದಿ: 15.12.2025 ರಿಂದ 30.12.2025ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸುವುದು ಇ–ಟೆಂಡರ್ ಅಂದಾಜು ಮೊತ್ತ ರೂ.90.00 ಲಕ್ಷಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಪ್ರಾಚಾರ್ಯರು
DIPR/DDMYS/1387/KSMCA/788/2025-26

ಪುರಸಭಾ ಕಾರ್ಯಾಲಯ, ಮಧುಗಿರಿ
ಟೌನ್‌ಹಾಲ್ ರಸ್ತೆ, ಮಧುಗಿರಿ, ತುಮಕೂರು ಜಿಲ್ಲೆ 572132
ದೂರವಾಣಿ : 08137 – 282328, 283866,
ಇ–ಮೇಲ್ : ka.madhugiri.tmc@gmail.com
ವೆಬ್‌ಸೈಟ್ : www.madhugiritown.town.gov.in
ಸಂಖ್ಯೆ : ಪು.ಮ./ಕಿ.ಅ./ಟೆಂಡರ್ ಪ್ರಕಟಣೆ/ಸಿ.ಆರ್./07/2025–26
ದಿನಾಂಕ : 19–12–2025

ಟೆಂಡರ್ ಪ್ರಕಟಣೆ

ಮಧುಗಿರಿ ಪುರಸಭೆಯಲ್ಲಿ ಟೆಂಡರ್ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಯ ವಿವರ ಈ ಕೆಳಕಡಂತೆ ಇರುತ್ತದೆ.

2018–19 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿ ಇಂಡೆಂಟ್ ನಂ. : 01) DMA/2025-26/BD/WORK-INDENT-52067/ Call-2, ಅಂದಾಜು ಮೊತ್ತ : ರೂ. 55.00 ಲಕ್ಷ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 03–01–2026 ರ ಸಂಜೆ 5.30 ಗಂಟೆವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–01–2026 ರ ಸಂಜೆ 5.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06–01–2026 ರ ಸಂಜೆ 5.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆ ಖುದ್ದಾಗಿ ಅಥವಾ ವಿಳಾಸ : www.kppp.karnataka.gov.in ರಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶ್ರೀ. ಗೋಟೂರು ಶಿವಪ್ಪ, ಆಡಳಿಧಾರಿಕಾರಿ, ಪುರಸಭೆ ಮಧುಗಿರಿ.
ಸಹಿ/– ಶ್ರೀ. ಸುರೇಶ್ ಎಸ್. ಮುಖ್ಯಾಧಿಕಾರಿ, ಪುರಸಭೆ ಮಧುಗಿರಿ.
ಡಿಐಪಿಆರ್/ತುಮಕೂರು/63/ಮಣಿಪಾಲ್/25–26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142
ಫೋನ್ ನಂ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಪ್ರಕಟಣೆ ಸಂಖ್ಯೆ: 17/2025–26
ದಿನಾಂಕ : 16.12.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 13.75 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.4.23 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 02 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 19.12.2025 ಮಧ್ಯಾಹ್ನ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 31.12.2025 ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.01.2026 ಸಂಜೆ 4.00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ,
ಎಡೆಯೂರು
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/653/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಕೆ.ಪಿ.ಪಿ–ಪೋರ್ಟಲ್ ಮೂಲಕ)

ಐಎಫ್‌ಟಿ ಸಂಖ್ಯೆ. 31/2025–26 ದಿನಾಂಕ : 18.12.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 ನಿಯುವುದನ್ವಯ ಲೋಕೋಪಯೋಗಿ ಇಲಾಖೆಯುಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿವಮೊಗ್ಗ ನಗರದ ಲೋಕೋಪಯೋಗಿ ಇಲಾಖೆಯ ಹಳೆಯ ಸರ್ಕ್ಯೂಟ್ ಹೌಸ್‌ನ ಮೇಲ್ಚಾವಣಿ ಮತ್ತು ಕಟ್ಟಡದ ಇತರೆ ದುರಸ್ಥಿ ಕಾಮಗಾರಿ (ಇಂಡೆಂಟ್ ನಂ.28811)ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 89.18 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ.1.785 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ನಮೂದಿಸಿರುವಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ:18–12–2025 ರಿಂದ 25–12–2025ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 25–12–2025ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ:26–12–2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 27–12–2025 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.105–12/ ಝೇಂಕಾರ್/2025–26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/5476 ದಿನಾಂಕ: 19/12/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ/Call-2

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ:– ನಿರ್ವಹಣಾ ವೆಚ್ಚ ಅಡಿ 1 ಕಾಮಗಾರಿ ಗುತ್ತಿಗೆ ಇಟ್ಟ ಮೊತ್ತ ರೂ. 160.00 ಲಕ್ಷ ಇರುವ ಕಾಮಗಾರಿಗಳಿಗೆ KPP Portal ಮುಖಾಂತರ Services ನಲ್ಲಿ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ದಿನಾಂಕ:22–12–2025. ರಂದು (ಪೂರ್ವಹ್ನ 11.00 ಗಂಟೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:24–12–2025(ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 26–12–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 29–12–2025 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1513/KSMCA/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಎಂಎಆರ್‌ಸಿ/2025–26/4832 ದಿನಾಂಕ :19–12–2025

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯುಲ್ಲಿನ ಕಾವುಗಾರಿಯುನ್ನು ಅಂತರ್ಜಾಲದ ವುೂಲಕ ವೆಬ್ ಸೈಟ್ ವಿಳಾಸ https:kppp.karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT29120	7625.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **31–12–2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **10–01–2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19–01–2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **20–01–2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/813/ಕೆಎಸ್‌ಎಂಸಿಎ/2025–26

3 ವರ್ಷಗಳಲ್ಲಿ 400 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ

16 ಸಾವಿರ ಪ್ರಕರಣಗಳಲ್ಲಿ ಎಂಟು ಸಾವಿರ ಪೆಡ್ಲರ್‌ಗಳ ಬಂಧನ
ಬೆಂಗಳೂರಿನಲ್ಲಿಯೇ ಶೇ.50ಕ್ಕಿಂತ ಹೆಚ್ಚು ಡ್ರಗ್ ಕೇಸ್ ದಾಖಲು

ಬೆಂಗಳೂರು: ಡ್ರಗ್ಸ್ ಮುಕ್ತ ಕರ್ನಾಟಕ ಘೋಷವಾಕ್ಯದೊಂದಿಗೆ ಕರ್ನಾಟಕ ಗೃಹ ಇಲಾಖೆಯು ಡ್ರಗ್ಸ್ ವಿರುದ್ಧ ಸಮರ ಸಾರಿದ್ದರೂ, ಕರ್ನಾಟಕದಲ್ಲಿ ಮಾದಕವಸ್ತು ಮಾರಾಟ ಎಗ್ಗಿಲ್ಲದೇ ಸಾಗಿದೆ. ಕಳೆದ ಮೂರು ವರ್ಷಗಳಲ್ಲಿ 400 ಕೋಟಿ ರು. ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ ಎಂದು ಅಂಕಿ–ಅಂಶದಿಂದ ಬಹಿರಂಗವಾಗಿದೆ.

ಕಳೆದ ಮೂರು ವರ್ಷದ ಅವಧಿಯಲ್ಲಿ ಕರ್ನಾಟಕದಲ್ಲಿ ಬರೋಬ್ಬರಿ 16 ಸಾವಿರಕ್ಕೂ ಹೆಚ್ಚು ಡ್ರಗ್ಸ್ ಮಾರಾಟ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಪೆಡ್ಲರ್‌ಗಳನ್ನು ಬಂಧಿಸಲಾಗಿದೆ. ಡ್ರಗ್ ಮಾರಾಟದಲ್ಲಿ ರಾಜಧಾನಿ ಬೆಂಗಳೂರು ಹಾಗೂ ಮಂಗಳೂರು ನಗರ ಜಿಲ್ಲೆಗಳೇ ಅತಿಹೆಚ್ಚು ಪಾಲನ್ನು ಹೊಂದಿರುವುದು ಆತಂಕಕಾರಿ ವಿಷಯವಾಗಿದೆ.

ಡ್ರಗ್ಸ್ ಮಾರಾಟ ಹಾಗೂ ಸೇವನೆಗೆ ರಾಜ್ಯ ಸರಕಾರವು ಹಲವು ಕ್ರಮವಹಿಸಿದ ಹೊರತಾಗಿಯೂ, ಡ್ರಗ್ಸ್ ಮಾರಾಟದ ಜಾಲ ವರ್ಷದಿಂದ ವರ್ಷಕ್ಕೆ ಜಿಲ್ಲಾ ವ್ಯಾಪ್ತಿಯಲ್ಲಿಯೂ ಹೆಚ್ಚಾಗುತ್ತಿದೆ. ಸಿಂಥೆಟಿಕ್ ಡ್ರಗ್ಸ್‌ಗೆ ಹೋಲಿಸಿದರೆ, ಗಾಂಜಾ ಮಾರಾಟ ರಾಜ್ಯದ ಹಲವು ಜಿಲ್ಲೆಗಳಿಗೆ ವ್ಯಾಪಿಸಿರುವುದು ಆತಂಕಕ್ಕೆ ಕಾರಣವಾಗಿದೆ. ಇನ್ನು ಡ್ರಗ್ಸ್ ದಂಧೆಗೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳೇ ಬೆಂಬಲಿಸಿರುವ ಆರೋಪ ಕೇಳಿಬಂದಿದ್ದು, ಕಳೆದ ಎರಡು ವರ್ಷಗಳಲ್ಲಿ ಡ್ರಗ್ ದಂಧೆಕೋರರ ಜತೆ ಶಾಮೀಲಾಗಿ ಅಯಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಹಾವಳಿಯನ್ನು ತಡೆಯಲು ವಿಫಲರಾದ 26 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಹಿಂದುಳಿದ ಜಿಲ್ಲೆಗಳಲ್ಲಿಯೇ ಕಡಿಮೆ: ಯಾದಗಿರಿ, ಕೊಪ್ಪಳ, ಕಲಬುರಗಿ, ವಿಜಯಪುರ ಸೇರಿದಂತೆ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳು ಶಿಕ್ಷಣ, ಅಭಿವೃದ್ಧಿ, ಕೈಗಾರಿಕೋದ್ಯಮದಲ್ಲಿ ಹಿನ್ನಡೆಯಾಗಿತ್ತು. ಕೇವಲ ಇದಿಷ್ಟೇ ಅಲ್ಲದೇ, ಗಾಂಜಾ ಮಾರಾಟದಲ್ಲಿಯೂ ಈ ಜಿಲ್ಲೆಗಳು ಹಿಂದುಳಿದೆ ಎನ್ನುವುದೇ ಸಮಾಧಾನಕರ ಸಂಗತಿಯಾಗಿದೆ. ಕಲ್ಯಾಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಡ್ರಗ್ಸ್ ಮಾರಾಟ ಪ್ರಕರಣ ಎರಡಂಕಿ ದಾಟದಿರುವುದು ಸಮಾಧಾನಕರ ಸಂಗತಿ.

ಹುಬ್ಬಳ್ಳಿ–ಧಾರವಾಡ ಶಾಸಕ ಅಬ್ಬಯ್ಯ ಪ್ರಸಾದ್ ಅವರು ಡ್ರಗ್ಸ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಲು ಕಾರಣವೇನು ಎಂದು ಕೇಳಿರುವ ಪ್ರಶ್ನೆಗೆ, ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು, ಯುವಜನರಲ್ಲಿ ನಶೆಗೆ ಹೆಚ್ಚುತ್ತಿರುವ ಆಸಕ್ತಿ, ಪಾರ್ಟಿ ಸಂಸ್ಕೃತಿ, ಮಾನಸಿಕ ಒತ್ತಡ, ಮನಃಶಾಂತಿ ಮತ್ತು ಮೌಲ್ಯಗಳ ಕೊರತೆ ಕಾರಣ ಎಂದಿದ್ದಾರೆ. ಇದರೊಂದಿಗೆ ಡ್ರಗ್ಸ್ ವ್ಯವಹಾರದಲ್ಲಿ ಅತಿ ದೊಡ್ಡಮಟ್ಟದ ಹಣದ ಹರಿವು ಇರುವುದು ಹಾಗೂ ನಿರುದ್ಯೋಗ, ಬಡತನ, ಮೋಜು–ಮಸ್ತಿ ಗೀಳು ಇರುವ ಯುವಕರು ಹಣಕ್ಕಾಗಿ ಸುಲಭವಾಗಿ ಈ ದಂಧೆಗೆ ಸೆಳೆಯಲ್ಪಡುತ್ತಾರೆ ಎಂದಿದ್ದಾರೆ.

ಮಟ್ಟಹಾಕಲು ಕೈಗೊಂಡಿರುವ ಕ್ರಮಗಳೇನು?

- ಎನ್‌ಡಿಪಿಎಸ್ ಪೋರ್ಟ್‌ಲ್‌ನಲ್ಲಿ ಪೆಡ್ಲರ್‌ಗಳ ಮಾಹಿತಿ ಹಾಕಿ, ಅವರ ಚಲನವಲನದ ಮೇಲೆ ಕಣ್ಣು
- ಡ್ರಗ್ಸ್ ಹಾವಳಿಯಿಂದಾಗುವ ಸಮಸ್ಯೆ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವುದು
- ಡ್ರಗ್ಸ್ ಪ್ರಕಣದಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲು ಕ್ರಮ
- ಅಕ್ರಮ ದಾಸ್ತಾನು, ಸಾಗಾಣಿಕೆ ಇರುವ ಭಾಗದಲ್ಲಿ ಪೊಲೀಸರಿಂದ ವಿಶೇಷ ಗಸ್ತು

ದಾಖಲಾದ ಪ್ರಕರಣ

ವರ್ಷ	ದಾಖಲಾದ ಪ್ರಕರಣ	ಪೆಡ್ಲರ್‌ಗಳ ಬಂಧನ
2023	6,768	3,069
2024	4,168	2,466
2025	5,930	2,598
ಒಟ್ಟು	16,866	8,133

ಶೇ.50ರಷ್ಟು ಪ್ರಕರಣ ಬೆಂಗಳೂರಲ್ಲೇ ದಾಖಲು

ಡ್ರಗ್ಸ್ ಜಾಲವನ್ನು ನಿಯಂತ್ರಿಸಲು ಬೆಂಗಳೂರು ನಗರದಲ್ಲಿ ಗೃಹ ಇಲಾಖೆ ಮಾಡುತ್ತಿರುವ ಸರ್ವಪ್ರಯತ್ನದ ಹೊರತಾಗಿಯೂ ರಾಜ್ಯದಲ್ಲಿ ದಾಖಲಾಗಿರುವ ಒಟ್ಟು ಪ್ರಕರಣಗಳ ಪೈಕಿ ಶೇ.50ರಷ್ಟು ಪ್ರಕರಣ ಬೆಂಗಳೂರು ನಗರ ವ್ಯಾಪ್ತಿಯಲ್ಲಿಯೇ (ಶೇ.59) ದೂರುಗಳು ದಾಖಲಾಗಿದೆ. ಮೂಲಗಳ ಪ್ರಕಾರ ಬೆಂಗಳೂರಿನಲ್ಲಿ ಕಳೆದ ಮೂರು ವರ್ಷದಲ್ಲಿ 5,114 ಪ್ರಕರಣಗಳು ದಾಖಲಾಗಿದ್ದು, 2333 ಮಂದಿ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ. 2023ರಲ್ಲಿ 5,272 ಕೆಜಿ ಗಾಂಜಾ, 135.76 ಕೆಜಿ ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ಪಡೆಯಲಾಗಿದ್ದು ಇದರ ಮೊತ್ತ 103 ಕೋಟಿ ರು. ಆಗಿದೆ. ಇನ್ನು 2024ರಲ್ಲಿ 1,884.79 ಕೆಜಿ ಗಾಂಜಾ, 72.19 ಕೆಜಿ ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ಪಡೆಯಲಾಗಿದ್ದು, ಇದರ ಮೊತ್ತ 318 ಕೋಟಿ ಮೌಲ್ಯವಾಗಿದೆ. ಇನ್ನು ಪ್ರಸಕ್ತ ವರ್ಷ 1,381 ಕೆಜಿ ಗಾಂಜಾ, 76 ಕೆಜಿ ಸಿಂಥೆಟಿಕ್ ಡ್ರಗ್ಸ್ ವಶಕ್ಕೆ ಪಡೆಯಲಾಗಿದ್ದು, ಇದರ ಮೊತ್ತ 163.35 ಕೋಟಿ ರು. ಆಗಿದೆ ಎಂದು ತಿಳಿದುಬಂದಿದೆ.

ಅತಿ ಹೆಚ್ಚು ಡ್ರಗ್ಸ್ ವಶಪಡಿಸಿಕೊಂಡ ಜಿಲ್ಲೆಗಳು

ಜಿಲ್ಲೆ	ಪ್ರಕರಣದ ಸಂಖ್ಯೆ
ಬೆಂಗಳೂರು ನಗರ	5,114
ಮಂಗಳೂರು ನಗರ	2,461
ಶಿವಮೊಗ್ಗ	1,101
ಚಿಕ್ಕಮಗಳೂರು	721

ಪೆಟ್ರೋಲ್ ಸುರಿದುಕೊಂಡು ಬಿಜೆಪಿ ಕಾರ್ಯಕರ್ತೆ ಆತ್ಮಹತ್ಯೆ

ಕಲಬುರಗಿ: ಕಲಬುರಗಿ ದಕ್ಷಿಣ ಮತಕ್ಷೇತ್ರದ ಬಿಜೆಪಿ ಮಹಿಳಾ ಕಾರ್ಯಕರ್ತೆಯೊಬ್ಬರು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ದುರ್ಘಟನೆ ಸಂಭವಿಸಿದೆ.

ನಗರದ ಬ್ರಹ್ಮಪೂರ ಬಡಾವಣೆಯ ನಿವಾಸಿ ಜ್ಯೋತಿ ಪಾಟೀಲ್ (35) ಎಂಬುವವರು ಶುಕ್ರವಾರ ತಡರಾತ್ರಿ ನಂದಿಕೂರ ಗ್ರಾಮದ ಬಿಜೆಪಿ ಕಾರ್ಯಕರ್ತ ಮಲ್ಲಿನಾಥ್ ಬಿರಾದಾರ್ ಎಂಬುವವರ ಮನೆಗೆ ತೆರಳಿ, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ನೇಹ, ದಂಧೆ ಮತ್ತು ದ್ವೇಷ: ಮೃತ ಜ್ಯೋತಿ ಪಾಟೀಲ್ ಕಳೆದ ಹಲವು ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯರಾಗಿದ್ದರು. ಈ ವೇಳೆ ನಂದಿಕೂರ ಗ್ರಾಮದ ಬಿಜೆಪಿ ಕಾರ್ಯಕರ್ತ ಮಲ್ಲಿನಾಥ್ ಬಿರಾದಾರ್ ಪರಿಚಯವಾಗಿತ್ತು. ಆರಂಭದಲ್ಲಿ ಸ್ನೇಹದಿಂದಿದ್ದ ಇವರು, ನಂತರ ಜತೆಗೂಡಿ ಪ್ಲಾಟ್ ಮಾರಾಟ ಹಾಗೂ ಸಣ್ಣಪುಟ್ಟ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ನಡೆಸುತ್ತಿದ್ದರು. ಈ ಹಣಕಾಸಿನ ವ್ಯವಹಾರವೇ ಇಬ್ಬರ ನಡುವಿನ ಜಗಳಕ್ಕೆ ಮೂಲ ಕಾರಣ ಎನ್ನಲಾಗುತ್ತಿದೆ. ಶುಕ್ರವಾರ ಮಧ್ಯಾಹ್ನ ಇಬ್ಬರ ನಡುವೆ ತೀವ್ರ ಮಾತಿನ ಚಕಮಕಿ ನಡೆದಿತ್ತು ಎಂದು ತಿಳಿದುಬಂದಿದೆ.

ರಾತ್ರಿ ನಡೆದಿದ್ದೇನು?: ಜಗಳದ ಬಳಿಕ ತೀವ್ರ ನೊಂದಿದ್ದ ಜ್ಯೋತಿ ಪಾಟೀಲ್, ರಾತ್ರಿ ವೇಳೆ ಪೆಟ್ರೋಲ್ ಹಿಡಿದುಕೊಂಡು ನಂದಿಕೂರ ಗ್ರಾಮದಲ್ಲಿರುವ ಮಲ್ಲಿನಾಥ್ ಮನೆಗೆ ತೆರಳಿದ್ದಾರೆ. ನಿನ್ನ ಪತಿ ಎಲ್ಲಿದ್ದಾನೆ? ಎಂದು ಮಲ್ಲಿನಾಥ್ ಪತ್ನಿಯೊಂದಿಗೆ ಜಗಳವಾಡಿದ ಜ್ಯೋತಿ, ನೋಡನೋಡುತ್ತಿದ್ದಂತೆಯೇ ತಮ್ಮ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾರೆ. ಬೆಂಕಿಯ ಕೆನ್ನಾಲಿಗೆಗೆ ತುತ್ತಾದ ಜ್ಯೋತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪತಿಯಿಂದ ಕೊಲೆ ಆರೋಪ: ಈ ಸಾವಿನ ಕುರಿತು ಮೃತಳ ಪತಿ ಚಿದಾನಂದ ಗಂಭೀರ ಆರೋಪ ಮಾಡಿದ್ದಾರೆ. ನನ್ನ ಪತ್ನಿಯದ್ದು ಆತ್ಮಹತ್ಯೆಯಲ್ಲ, ಇದೊಂದು ವ್ಯವಸ್ಥಿತ ಕೊಲೆ. ನಮಗೆ ಸ್ವಂತ ಮನೆ, ಜಮೀನು ಎಲ್ಲವೂ ಇದೆ. ಆಕೆ ಆತ್ಮಹತ್ಯೆ ಮಾಡಿಕೊಳ್ಳುವ ಅಗತ್ಯವಿರಲಿಲ್ಲ. ಪೆಟ್ರೋಲ್ ಹಿಡಿದು ಅವರ ಮನೆಗೆ ಹೋಗಿ ಸಾಯಲು ಹೇಗೆ ಸಾಧ್ಯ? ಮಲ್ಲಿನಾಥ್ ಅವರೇ ಆಕೆಯನ್ನು ಕೊಲೆ ಮಾಡಿದ್ದಾರೆ. ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಆರೋಪಿಯ ಬಂಧನ: ಮೃತಳ ಕುಟುಂಬದ ದೂರಿನ ಮೇರೆಗೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಫರತಾಬಾದ್ ಪೊಲೀಸರು, ಮಲ್ಲಿನಾಥ್ ಬಿರಾದಾರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ

ಅತ್ಯಾಚಾರಿ ಸ್ವಾಮೀಜಿಗೆ 35 ವರ್ಷ ಜೈಲು ಶಿಕ್ಷೆ

ಬೆಳಗಾವಿ: ಮಠಕ್ಕೆ ಬಂದ ಭಕ್ತೆಯನ್ನು ಸ್ವಾಮೀಜಿಯೊಬ್ಬ ತನ್ನ ಕಾರಿನಲ್ಲಿ ಕರೆದೊಯ್ದು ಅತ್ಯಾಚಾರ ಎಸಗಿದ್ದ ಪ್ರಕರಣ ಸಾಬೀತಾಗಿದ್ದು, ಆರೋಪಿಗೆ 35 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ಒಂದು ಲಕ್ಷ ರು. ದಂಡ ವಿಧಿಸಿ ಬೆಳಗಾವಿ ಪೋಕ್ಸೋ ನ್ಯಾಯಾಲಯ ಆದೇಶ ನೀಡಿದೆ.

ರಾಯಬಾಗ ತಾಲೂಕಿನ ಮೇಖಳಿ ಗ್ರಾಮದ ರಾಮ ಮಂದಿರ ಮಠದ ಹಠಯೋಗಿ ಲೋಕೇಶ್ವರ ಸ್ವಾಮೀಜಿ ಮೇ 13ರಂದು ಮಠಕ್ಕೆ ಬಂದಿದ್ದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ತನ್ನ ಕಾರಿನಲ್ಲಿ ಕರೆದೊಯ್ದಿದ್ದ. ನಂತರ ರಾಯಚೂರು, ಬಾಗಲಕೋಟೆ ಸೇರಿದಂತೆ ಅನೇಕ ಸ್ಥಳಗಳಲ್ಲಿ ಸುತ್ತಾಡಿಸಿ ಅತ್ಯಾಚಾರ ಎಸಗಿ ಕೊನೆಗೆ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಬಸ್ ನಿಲ್ದಾಣದಲ್ಲಿ ಯುವತಿಯನ್ನು ಬಿಟ್ಟು ಪರಾರಿಯಾಗಿದ್ದ. ಈ ಕುರಿತು ಅಪ್ರಾಪ್ತ ಬಾಲಕಿಯ ಕುಟುಂಬದವರು ಬಾಗಲಕೋಟೆ ಮಹಿಳಾ ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿದ್ದರು. ತದನಂತರ ಬೆಳಗಾವಿ ಜಿಲ್ಲೆಯ ಮೂಡಲಗಿ ಪೊಲೀಸ್ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಿ ಮೇ 24ರಂದು ಅತ್ಯಾಚಾರ ಆರೋಪಿ ಸ್ವಾಮಿಯನ್ನು ಪೊಲೀಸರು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದರು. ಪ್ರಕರಣ ಕುರಿತು ವಿಚಾರಣೆ ನಡೆಸಿದ್ದ ಬೆಳಗಾವಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ಶೀಘ್ರಗತಿ ಪೋಕ್ಸೊ ನ್ಯಾಯಾಲಯ ಒಟ್ಟು 8 ಸಾಕ್ಷಿ, 78 ದಾಖಲೆಗಳ ಆಧಾರದ ಮೇಲೆ ಹಠಯೋಗಿ ಲೋಕೇಶ್ವರ ಸ್ವಾಮಿ ಮೇಲಿನ ಆರೋಪ ಸಾಬೀತಾಗಿವೆ ಎಂದು ತೀರ್ಪು ನೀಡಿದ್ದು ಶನಿವಾರ ಶಿಕ್ಷೆ ಪ್ರಕಟಿಸಿದೆ.

ಆರೋಪಿಗೆ ಒಟ್ಟು 35 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ಒಂದು ಲಕ್ಷ ರು. ದಂಡ ವಿಧಿಸಿ ಕೋರ್ಟ್ ಆದೇಶ ನೀಡಿದೆ. ನೊಂದ ಬಾಲಕಿಗೆ ಜಿಲ್ಲಾ ಕಾನೂನು ಪ್ರಾಧಿಕಾರದಿಂದ 4 ಲಕ್ಷ ರು.ಪರಿಹಾರ ಧನ ಪಡೆಯಲು ನ್ಯಾಯಾಲಯ ಆದೇಶಿಸಿದೆ. ನ್ಯಾಯಾಧೀಶೆ ಸಿ.ಎಂ. ಪುಷ್ಪಲತಾ ಪ್ರಕರಣದ ವಿಚಾರಣೆ ನಡೆಸಿದ್ದರು. ಅಭಿಯೋಜಕ ಎಲ್.ವಿ.ಪಾಟೀಲ್ ಸರಕಾರದ ಪರವಾಗಿ ವಾದ ಮಂಡಿಸಿದ್ದರು.

ಕಲಬುರಗಿ ಜಿಲ್ಲೆಯ ಚಿತ್ತಾಪುರ ಮೂಲದ ಸ್ವಾಮೀಜಿ

ಮೂಲತಃ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಲೋಕೇಶ್ವರ ಶಾಬಣ್ಣ ಭಂಗಿ ಹೆಸರಿನ ಸ್ವಾಮೀಜಿ ಕಳೆದ ಎಂಟು ವರ್ಷಗಳ ಹಿಂದೆ ರಾಯಬಾಗ ತಾಲೂಕಿನ ಮೇಖಳಿ ಗ್ರಾಮದಲ್ಲಿ ಎಂಟು ಎಕರೆ ಸರಕಾರಿ ಜಮೀನು ಅತಿಕ್ರಮಣ ಮಾಡಿಕೊಂಡು ಮಠ ನಿರ್ಮಿಸಿದ್ದ. ಕೆಲ ವರ್ಷಗಳ ಹಿಂದೆಯೇ ಸ್ವಾಮೀಜಿ ವಿರುದ್ಧ ಗ್ರಾಮಸ್ಥರು ಸಿಡಿದೆದ್ದಿದ್ದರು. ಯಾವುದೇ ಪ್ರಯೋಜನ ಆಗಿರಲಿಲ್ಲ. ಈತನ ವಿರುದ್ಧ ಅತ್ಯಾಚಾರ ಆರೋಪ ಕೇಳಿಬರುತ್ತಿದ್ದಂತೆಯೇ ಕಳೆದ ಮೇನಲ್ಲಿ ಮಠವನ್ನು ನೆಲಸಮ ಮಾಡಲಾಗಿತ್ತು. ಕೊನೆಗೂ ನ್ಯಾಯಾಲಯ ಆರೋಪಿಗೆ ತಕ್ಕ ಶಿಕ್ಷೆ ನೀಡಿದ್ದು ಜನ ನಿಟ್ಟುಸಿರು ಬಿಡುವಂತಾಗಿದೆ.

ಸಮಾಚಾರ ಸಣ್ಣದಲ್ಲ

ಇಂದು ರಾಜ್ಯಾದ್ಯಂತ ಪೋಲಿಯೋ ಲಸಿಕೆ

ಬೆಂಗಳೂರು: ರಾಜ್ಯದಾದ್ಯಂತ ಭಾನುವಾರ (ಡಿ. 21) ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಹಮ್ಮಿಕೊಳ್ಳಲಾಗಿದ್ದು, 0-5 ವರ್ಷದೊಳಗಿನ 62.40 ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಿದೆ. ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಬೆಳಗ್ಗೆ 10.45ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಕ್ಕಳಿಗೆ ಸಾಂಕೇತಿಕವಾಗಿ ಪೋಲಿಯೋ ಹನಿಗಳನ್ನು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ರಾಷ್ಟ್ರೀಯ ಲಸಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ 11,34,588 ಮಕ್ಕಳು ಸೇರಿ ರಾಜ್ಯಾದ್ಯಂತ 62,40,114 ಮಕ್ಕಳಿಗೆ ಲಸಿಕೆ ಹಾಕಲಾಗುವ ಗುರಿ ಹೊಂದಿದ್ದು, ಅದಕ್ಕಾಗಿ 33,258 ಬೂತ್‌ಗಳನ್ನು ರಚಿಸಿದ್ದು, 1,030 ಸಂಚಾರಿ ತಂಡಗಳು, 2,096 ಟ್ರಾನ್ಸಿಸ್ಟ್ ತಂಡಗಳು, 1,13,115 ಲಸಿಕಾ ಕಾರ್ಯಕರ್ತರು, 7,322 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ಬೂತ್‌ಗಳಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ನಡೆದ ಬಳಿಕ ಡಿ.22ರಿಂದ ಮೂರು ದಿನ ಮನೆ ಮನೆ ಭೇಟಿ ಕಾರ್ಯಕ್ರಮ ನಡೆಯಲಿದೆ. ವಲಸೆ, ಕೊಳಗೇರಿ ನಿವಾಸಿಗಳ ಮಕ್ಕಳಿಗೆ ಲಸಿಕೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಕಳೆದ ಬಾರಿ ಮಾರ್ಚ್‌ನಲ್ಲಿ ಶೇ.102 ಗುರಿ ಸಾಧಿಸಲಾಗಿತ್ತು. ಈ ಬಾರಿಯೂ ನೂರರಷ್ಟು ಗುರಿ ಸಾಧಿಸುವ ನಿಟ್ಟಿನಲ್ಲಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಆರೋಗ್ಯ ಇಲಾಖೆ ಕ್ರಮ ವಹಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನರೇಗಾ ಹೆಸರು ಬದಲಿಗೆ ಕಾರ್ಯಸೂಚಿ

ಕುಂದಾಪುರ: ಯುಪಿಎ ಸರಕಾರದ ಅವಧಿಯಲ್ಲಿ ಜಾರಿಗೆ ಬಂದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾವಣೆ ನೆಪದಲ್ಲಿ ಯೋಜನೆಯ ಸ್ವರೂಪ ಹಾಗೂ ಉದ್ದೇಶವನ್ನು

ಬದಲಾಯಿಸಲು ಕೇಂದ್ರ ಸರಕಾರ ಮುಂದಾಗಿದೆ ಎಂದು ಮುಖಂಡ ಕೆ. ಜಯಪ್ರಕಾಶ್ ಹೆಗ್ಡೆ ಆರೋಪಿಸಿದ್ದಾರೆ. ಯೋಜನೆಯ ಹೆಸರು ಬದಲಾಯಿಸುವ ಮೂಲಕ ಮಹಾತ್ಮ ಗಾಂಧೀಜಿ ಹೆಸರನ್ನು ದೇಶದ ಜನರ ಮನಸ್ಸಿನಿಂದ ಅಳಿಸಬಹುದು ಎಂಬ ಭ್ರಮೆಯಲ್ಲಿ ಕೇಂದ್ರ ಸರಕಾರ ಇದೆ. ಬದಲಾವಣೆಯಾಗಿರುವ ಯೋಜನೆ ಯಲ್ಲಿ ಹೊಸ ನಿಬಂಧನೆಗಳನ್ನು ಹಾಕಲಾಗಿದ್ದು, ರಾಜ್ಯ ಸರಕಾರ ಯೋಜನೆಯ ಒಟ್ಟು ವೆಚ್ಚದ ಶೇ.40ರಷ್ಟು ಭರಿಸಬೇಕು, ಇಂಟರ್‌ನೆಟ್ ಆಧಾರಿತ ಕೂಲಿಕಾರರ ಹಾಜರಾತಿ ಕಡ್ಡಾಯಗೊಳಿಸಬೇಕು ಮುಂತಾದವು ಬಡ ಕೂಲಿಕಾರರಿಗೆ ತೊಡಕಾಗುವ ಅವೈಜ್ಞಾನಿಕ ಅಂಶಗಳು ಎಂದು ದೂರಿದ್ದಾರೆ.

ಹೃದಯಾಘಾತಕ್ಕೆ ಮತ್ತೆ ಇಬ್ಬರು ಬಲಿ

ಹಾಸನ: ಜಿಲ್ಲೆಯಲ್ಲಿ ಹಠಾತ್ ಹೃದಯಾಘಾತಕ್ಕೆ ಶಿಕ್ಷಕಿ ಸೇರಿ ಇಬ್ಬರು ಬಲಿಯಾಗಿದ್ದಾರೆ. ಮೃತರನ್ನು ಅರಕಲಗೂಡು ತಾಲೂಕಿನ ದೊಡ್ಡಳ್ಳಿ ಗ್ರಾಮದ ಸುಧಾಮಣಿ (58) ಹಾಗೂ ಹೊಳೆನರಸೀಪುರ

ಹೋಬ ಳಿಯ ಗುಲಗಂಜಿಹಳ್ಳಿ ಗ್ರಾಮದ ಯುವಕ ಪರಮೇಶ್(35) ಮೃತರು. ಸುಧಾಮಣಿ ಅವರು ಅದೇ ಗ್ರಾಮದ ಸರಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ದ್ದರು. ಅವರು ನಿವೃತ್ತಿಯಾ ಗಲು ಇನ್ನೆರಡು ವರ್ಷ ವಷ್ಟೇ ಬಾಕಿಯಿತ್ತು. ಶನಿವಾರ ಬೆಳಗ್ಗೆ ಮನೆ ಯಲ್ಲಿ ಮಲಗಿದ್ದ ವೇಳೆ ಹಠಾತ್ ಹೃದಯಾಘಾತ ಸಂಭವಿಸಿ ಅಲ್ಲೇ ಕೊನೆ ಯುಸಿರೆಳೆದಿದ್ದಾಳೆ. ಹೊಳೆನರಸೀಪುರ ಪಟ್ಟಣದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡು ತ್ತಿದ್ದ ಪರಮೇಶ್, ಮಧ್ಯರಾತ್ರಿ 2 ಗಂಟೆ ಸಮಯ ದಲ್ಲಿ ಮಲಗಿದಲ್ಲಿಯೇ ಹಠಾತ್ ಹೃದಯಾಘಾತ ವಾಗಿ ಸಾವನ್ನಪ್ಪಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹಲವು ತಿಂಗಳ ನಂತರ ಮತ್ತೆ ಹೃದಯಾಘಾತ ಪ್ರಕರಣ ಮರುಕಳಿಸಿರುವುದು ಆತಂಕ ಮೂಡಿಸಿದೆ.

ಬುದ್ಧಿಮಾಂದ್ಯ ಮಕ್ಕಳ ಮೇಲೆ ಕ್ರೌರ್ಯ

ಬಾಗಲಕೋಟೆ: ಬಾಗಲಕೋಟೆಯ ನವನಗರ ದಲ್ಲಿರುವ ವಿಶೇಷ ಚೇತನ ಮಕ್ಕಳ ವಸತಿ ಶಾಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳ ಮೇಲೆ ಶಿಕ್ಷಕ ದಂಪತಿ ಅಕ್ಷಯ್ ಹಾಗೂ ಪತ್ನಿ ಮಾಲಿನಿ ಎಂಬುವವರು ಮನಬಂದಂತೆ ಹಲ್ಲೆ ನಡೆಸಿ, ಕಾಲಿನಿಂದ ತುಳಿದು ಚಿತ್ರಹಿಂಸೆ ನೀಡಿದ್ದಾರೆ. ಶಿಕ್ಷಕರ ಕ್ರೌರ್ಯದ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಮಹಾರಾಷ್ಟ್ರ ಮೂಲದವರಾದ ಶಿಕ್ಷಕ ಅಕ್ಷಯ್, ಪತ್ನಿ ಮಾಲಿನಿ ವಸತಿ ಶಾಲೆಯಲ್ಲಿ ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದು, ಸಹ ಶಿಕ್ಷಕ ವಿಶಾಲ್ ಎಂಬಾತ ಕೂಡ ಹಲ್ಲೆ ನಡೆಸಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ. ಬಾಗಲಕೋಟೆಯ ನವ ನಗರ ಠಾಣೆಯಲ್ಲಿ ಶಾಲೆ ವಿರುದ್ಧ ದೂರು ದಾಖಲಾ ಗಿದೆ. ಈ ಕುರಿತು ಎಸ್‌ಪಿ ಸಿದ್ದಾರ್ಥ ಗೋಯಲ್ ಪ್ರತಿಕ್ರಿಯಿಸಿದ್ದು, ಘಟನೆ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ. ಅಕ್ಷಯ್, ಆತನ ಪತ್ನಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದರು.

ಬಾಗಲಕೋಟೆಯ ನವನಗರದಲ್ಲಿರುವ ವಿಶೇಷ ಚೇತನ ಮಕ್ಕಳ ವಸತಿ ಶಾಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳ ಮೇಲೆ ಶಿಕ್ಷಕ ದಂಪತಿ ಚಿತ್ರಹಿಂಸೆ ನೀಡಿ ಕ್ರೌರ್ಯ ಮೆರೆದಿರುವುದು.

ಕಾಫಿ ಸಂಶೋಧನಾ ಕೇಂದ್ರದ ಶತಮಾನೋತ್ಸವ ಸಮಾರಂಭ ಉದ್ಘಾಟಿಸಿದ ಕೇಂದ್ರ, ಇಂಧನ ಸಚಿವ ಪ್ರಲ್ಹಾದ್ ಜೋಶಿ

ಭಾರತೀಯ ಕಾಫಿ ಮಾರುಕಟ್ಟೆ ವೃದ್ಧಿಗೆ ಪ್ರಯತ್ನ

ಅನಿಲ್ ಎಚ್.ಟಿ. ಬಾಳೆಹೊನ್ನೂರು

ದೇಶೀಯವಾಗಿ ಮಾತ್ರವಲ್ಲದೇ ಜಾಗತಿಕವಾಗಿಯೂ ಭಾರತೀಯ ಕಾಫಿಗೆ ಬೇಡಿಕೆ ಕಂಡುಕೊಳ್ಳುವಲ್ಲಿ ಕೇಂದ್ರ ಸರಕಾರ ಮಹತ್ವದ ಹೆಜ್ಜೆಯನ್ನಿರಿಸಿದ್ದು, ಸಂಶೋಧನೆ, ಮಾರುಕಟ್ಟೆ ವಿಸ್ತರಣೆ ಬಗ್ಗೆಯೂ ಗಂಭೀರ ಚಿಂತನೆ ನಡೆದಿದೆ ಎಂದು ಕೇಂದ್ರ ಇಂಧನ ಸಚಿವ ಪ್ರಲ್ಹಾದ್ ಜೋಶಿ ಭರವಸೆ ನೀಡಿದರು.

ಇಲ್ಲಿನ ರಾಷ್ಟ್ರೀಯ ಕಾಫಿ ಸಂಶೋಧನಾ ಮಂಡಳಿಯ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ರಕ್ಷಣಾ ಪಡೆಯಂತೆಯೇ ಕಾಫಿ ಸೇರಿದಂತೆ ದೇಶದ ವಾಣಿಜ್ಯ ಬೆಳೆಗಳಿಗೆ ಆತ್ಮ ನಿರ್ಭರ್ ಯೋಜನೆಯಡಿ ಯಾರದ್ದೇ ಹಂಗಿಲ್ಲದ ಸ್ವಾವಲಂಬಿ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಭಾರತದ ಕಾಫಿ ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಜನತೆ, ಉದ್ಯಮಿಗಳ ಮನಗೆದ್ದಿದೆ. ಹೀಗಿರುವಾಗ ಭವಿಷ್ಯದಲ್ಲಿಯೂ ಭಾರತದ ಕಾಫಿಗೆ ಉತ್ತಮ ಮಾರುಕಟ್ಟೆ ದೊರಕುವುದು ನಿಸ್ಸಂಶಯ ಎಂದರು.

ದೇಶದ ಜಿಡಿಪಿ ಪ್ರಗತಿಯು ಶೇ.6.5 ರಿಂದ 7ಕ್ಕೆ ಹೆಚ್ಚಾಗಿದೆ. 330 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಯಲ್ಲಿಯೂ ಪ್ರಗತಿಯಾಗಿದೆ. ವಿದೇಶಕ್ಕೆ ಭಾರತದ ಉತ್ಪನ್ನ ಸಾಗಣೆಗಾಗಿ ದೇಶೀಯ ಬಂದರುಗಳಲ್ಲಿಯೂ ವಿಳಂಬರಹಿತವಾಗಿ ಕ್ಲಿಯರೆನ್ಸ್ ದೊರಕುವ ವ್ಯವಸ್ಥೆಯಾಗಿದೆ. ದೇಶೀಯ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಯೋಜನೆ ಜಾರಿಗೊಳ್ಳುತ್ತಿದೆ. ಭಾರತ ವಿಶ್ವದಲ್ಲಿಯೇ 4ನೇ ಆರ್ಥಿಕ ಶಕ್ತಿಶಾಲಿ ದೇಶವಾಗಿ ಹೊರಹೊಮ್ಮಿದೆ ಎಂದರು.

ಇಂಧನ ಕ್ಷೇತ್ರದಲ್ಲಿ ಅಂತಾರಾಜ್ಯಗಳ ನಡುವೆ ವಿದ್ಯುತ್ ಹಂಚಿಕೆ ವ್ಯವಸ್ಥೆ ಜಾರಿಯಲ್ಲಿದ್ದು, ಈ ಮೂಲಕ ಒನ್ ನೇಷನ್-ಒನ್ ಸನ್-ಒನ್ ಗ್ರಿಡ್ ಯೋಜನೆ ಯಶಸ್ವಿಯಾಗಿ ಜಾರಿಯಾಗಿದೆ. ದೇಶೀಯವಾಗಿ 330 ಕಂಪನಿಗಳು ಮೊಬೈಲ್ ಉತ್ಪಾದನಾ ಘಟಕಗಳನ್ನು ತೆರೆದಿವೆ. ಕಾಫಿ ಉತ್ಪಾದನೆಯಲ್ಲಿ ಜಾಗತಿಕವಾಗಿ ಭಾರತ 7ನೇ ಸ್ಥಾನದಲ್ಲಿದ್ದು ರಫ್ತು ಪ್ರಮಾಣದಲ್ಲಿ 6ನೇ ಸ್ಥಾನದಲ್ಲಿದೆ. ಜಾಗತಿಕವಾಗಿ ಮಾರುಕಟ್ಟೆ ಬೇಡಿಕೆ ಕಂಡುಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಮಲೆನಾಡು ಜಿಲ್ಲೆಯ ಬಿಎಸ್‌ಎನ್‌ಎಲ್ ಟವರ್‌ಗಳಿಗೆ ರಾಜ್ಯ ಸರಕಾರ ವಿದ್ಯುತ್ ಸಂಪರ್ಕ ನೀಡಲು ಮುಂದಾಗಬೇಕು. ಕಾಡಾನೆ ದಾಳಿಯಿಂದ ಕಾಫಿ ಜಿಲ್ಲೆಗಳ ಬೆಳೆಗಾರರರನ್ನು ಪಾರು ಮಾಡುವುದು ನಮ್ಮ ಆದ್ಯತೆ ಎಂದು ಹೇಳಿದರು.

ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಮಾತನಾಡಿ, ಕಾಫಿ ಬೆಳೆಗಾರರು ಶ್ರೀಮಂತರು ಎಂದು ಎಲ್ಲರೂ ಹೇಳುತ್ತಾರೆ. ಇಂತಹವರಿಗೆ ಈ ಬೆಳೆಗಾರರ ಸಮಸ್ಯೆಗಳ ಅರಿವಾಗುತ್ತಲೇ ಇಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಭಾರತೀಯ ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವಂದ ಮಾತನಾಡಿ, 280 ಎಕರೆ ವಿಸ್ತಾರದ ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರವು ಹೆಗ್ಗಳಿಕೆಗೆ ಪಾತ್ರವಾಗಿದೆ. ದೇಶದಾದ್ಯಂತ 10 ಸಾವಿರ ಕಾಫಿ ಕ್ಯೂಯೆಕ್ಸ್ ಪ್ರಾರಂಭಿಸಲಾಗುತ್ತಿದೆ. ರಾಜ್ಯದಲ್ಲಿ 500 ಮಹಿಳೆಯರಿಗೆ ಕಾಫಿ ತಯಾರಿಕೆಯ ತರಬೇತಿ ನೀಡಿ ಕ್ಯೂಯೋಕ್‌ಗೆ ನೇಮಿಸಲಾಗುತ್ತದೆ. ಪ್ರಸ್ತುತ 1.50 ಲಕ್ಷ ಮೆಟ್ರಿಕ್ ಟನ್ ಆಂತರಿಕವಾಗಿ ಬಳಕೆಯಾಗುತ್ತಿರುವ ಕಾಫಿಯನ್ನು ಶೀಘ್ರ 2 ಲಕ್ಷ ಟನ್‌ಗೆ ಹೆಚ್ಚಿಸುವ ಗುರಿ ಇದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜೀವರಕ್ಷಕ್ ಮತ್ತು ಶತಾಬ್ದಿ ಎಂಬ ಎರಡು ಹೊಸ ಕಾಫಿ ತಳಿಯನ್ನು ಭಾರತೀಯ ಕಾಫಿ ಮಂಡಳಿಯಿಂದ ಬಿಡುಗಡೆ ಮಾಡಲಾಯಿತು. ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್, ಕಾಫಿ ಮಂಡಳಿ ಕೊಡಗು ಉಪ ನಿರ್ದೇಶಕ ಡಾ.ಚಂದ್ರಶೇಖರ್, ಡಾ.ಕೆ.ಶ್ರೀದೇವಿ, ತೋಟಗಾರಿಕಾ ಕೇಂದ್ರದ ನಿರ್ದೇಶಕ ಮುರಳೀಧರ್, ಪ್ಲಾಂಟರ್ ಅಸೋಸಿಯೇಷನ್ ಅಧ್ಯಕ್ಷ ನಂದಾಬೆಳ್ಯಪ್ಪ, ನಿರ್ದೇಶಕ ಮೋಹನ್ ದಾಸ್, ಉಪಾಸಿ ಮಾಜಿ ಅಧ್ಯಕ್ಷ ವಿನೋದ್ ಶಿವಪ್ಪ ಇದ್ದರು.

ರಾಷ್ಟ್ರೀಯ ಕಾಫಿ ಸಂಶೋಧನಾ ಮಂಡಳಿಯ ಶತಮಾನೋತ್ಸವ ಸಮಾರಂಭದಲ್ಲಿ ಜೀವರಕ್ಷಕ್, ಶತಾಬ್ದಿ ಹೊಸ ತಳಿಯನ್ನು ಬಿಡುಗಡೆಗೊಳಿಸಲಾಯಿತು.

ಕೊಡಗಿನಲ್ಲಿ ಎಸ್‌ಐಆರ್ ಜಾರಿಗೊಳಿಸಲು ಒತ್ತಾಯ

ಕಾಫಿ ತೋಟಗಳಲ್ಲಿ ಹೆಚ್ಚಾಗುತ್ತಿರುವ ವಲಸೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಮತದಾರರ ವಿಶೇಷ ಪರಿಷ್ಕರಣೆ ಕೈಗೊಳ್ಳು

ವಂತೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಒತ್ತಾ ಯಿಸಿದ್ದಾರೆ. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಲಸೆ ಕಾರ್ಮಿಕ ರಾಗಿ ಬಾಂಗ್ಲಾದೇಶದವರು ಹೆಚ್ಚಾಗಿ ಕಂಡುಬಂದಿದ್ದು, ಖಂಡಿತವಾಗಿಯೂ ಇದು ಆತಂಕದ ಬೆಳವಣಿಗೆಯಾಗಿದೆ. ಕಳ್ಳದಾರಿಯಲ್ಲಿ ಭಾರತ ಪ್ರವೇಶಿಸಿ ಕಾಫಿ ತೋಟ ಸೇರಿಕೊಂಡವರನ್ನು ಎಸ್‌ಐಆರ್ ವ್ಯವಸ್ಥೆಯಡಿ ಗುರುತಿಸಿ ನಿಯಮಾನುಸಾರ ರಾಜಮಾರ್ಗ ತೋರಿಸಲೇಬೇಕಾಗಿದೆ ಎಂದು ಹೇಳಿದರು.

ನನ್ನ ಕಚೇರಿಗೆ ಬಂದವರಿಗೆ ಕೂರ್ಗ್ ಕಾಫಿಯನ್ನು ನೀಡುತ್ತೇನೆ. ಎಲ್ಲರೂ ಈ ಕಾಫಿ ಸ್ವಾದವನ್ನು ಮೆಚ್ಚುತ್ತಾರೆ. ವಿದೇಶಿ ಗಣ್ಯರು ಬಂದಾಗಲೂ ಕೊಡಗಿನ ಕಾಫಿಯನ್ನೇ ವಿತರಿಸಿದ್ದೇನೆ. ಗಣ್ಯರಿಗೆ ಕಾಫಿ ಪೌಡರ್ ಕೊಡುಗೆಯಾಗಿ ನೀಡುವ ಮೂಲಕ ಕಾಫಿಯ ಪ್ರಮೋಷನ್ ಮಾಡುವವರಲ್ಲಿ ನಾನೂ ಒಬ್ಬ. ನೀವೆಲ್ಲರೂ ಕಾಫಿಯನ್ನೇ ಅತಿಥಿಗಳಿಗೆ ಕೊಡುಗೆಯಾಗಿ ನೀಡಿದ್ದೇ ಆದಲ್ಲಿ ಕಾಫಿಯ ಪ್ರಚಾರ ಸುಲಭ ಸಾಧ್ಯವಾಗಲಿದೆ.

– **ಪ್ರಲ್ಹಾದ್ ಜೋಶಿ** ಕೇಂದ್ರ ಸಚಿವ

ಕಾಫಿಯಲ್ಲಿ ರೋಗನಿರೋಧಕ ತಳಿಗಳು ಹೆಚ್ಚಾಗಬೇಕು. ಮಣ್ಣಿನ ಫಲವತ್ತತೆ ನಾಶಗೊಳಿಸುವ ರಾಸಾಯನಿಕಗಳ ಬಳಕೆ ಕಡಮೆಯಾಗಬೇಕು. ವಿದೇಶಗಳಲ್ಲಿಯೂ ಕೊಡಗು, ಚಿಕ್ಕಮಗಳೂರಿನಂತಹ ಸುಂದರ ಜಿಲ್ಲೆಗಳು ಬೇರೆಲ್ಲೂ ಇಲ್ಲ. ಕಾಫಿ ಕೃಷಿಯೂ ಇದಕ್ಕೆ ಕಾರಣವಾಗಿರಬಹುದು. ನಾನೂ ಕೊಡಗಿನಿಂದ ಬಂದವನಾಗಿದ್ದು, ಕಾಫಿ ಬಗ್ಗೆ ಹೆಚ್ಚಿನ ಮಾಹಿತಿ ಕೊಡಗಿನಿಂದಲೇ ದೊರಕಿದೆ.

– **ಕೆ.ಜೆ.ಜಾರ್ಜ್** ಇಂಧನ ಸಚಿವ

ಭವಿಷ್ಯದ ಕೃಷಿಯಾಗಿ ಕಾಫಿ

ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ವಿಡಿಯೋ ಸಂದೇಶವೊಂದನ್ನು ಕಳುಹಿಸಿದ್ದು, ಅರೇಬಿಕಾದಿಂದ ಮಾನ್ಸೂನ್ ಮಲಬಾರ್‌ನವರೆಗೂ ಭಾರತದ ಕಾಫಿಯು ವಿಶ್ವದಲ್ಲಿಯೇ ಸ್ವಾದಿಷ್ಟ, ಗುಣಮಟ್ಟದ ಕಾಫಿಯಾಗಿ

ಖ್ಯಾತವಾಗಿದೆ. ಇತ್ತೀಚಿಗೆ ಯುನೈಟೆಡ್ ಕಿಂಗ್‌ಡಮ್, ಓಮನ್, ಸೇರಿದಂತೆ ವಿವಿಧ ದೇಶಗಳೊಂದಿಗೆ ಭಾರತೀಯ ಕಾಫಿ ವಹಿವಾಟಿಗೆ ಒಪ್ಪಂದವಾಗಿದೆ. ಕಾಫಿಯ ಭವಿಷ್ಯದ ದೃಷ್ಟಿಯಿಂದ ಇದೊಂದು ಮಹತ್ವದ ಒಪ್ಪಂದ. ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಮೋದಿಯವರು ಕಾಫಿಯನ್ನು ಉಲ್ಲೇಖಿಸಿದ ಬಳಿಕ ಕಾಫಿಗೆ ಜಾಗತಿಕವಾಗಿ ಬೇಡಿಕೆ ಹೆಚ್ಚಾಗಿದ್ದು ಗಮನಾರ್ಹ ವಿಚಾರ. ಹೊಸ ಜಿಲ್ಲೆಗಳು ಮತ್ತು ಆದಿವಾಸಿ ಜನತೆಯಿರುವ ಪ್ರದೇಶಗಳನ್ನು ಗುರುತು ಮಾಡಲಾಗುತ್ತದೆ. ಕೋಲ್ಡ್ ಬ್ರೀವ್ ಕಾಫಿ ಮತ್ತು ರೆಡಿ ಟು ಡ್ರಿಂಕ್ ಕಾಫಿಯಂತಹ ಯುವಪೀಳಿಗೆಯ ಮೆಚ್ಚುಗೆಯ ಕಾಫಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಮುಂದಿನ ಪೀಳಿಗೆಗೆ ಯಾವುದು ಬೇಕು ಎಂಬುದನ್ನು ಗಮನದಲ್ಲಿರಿಸಿಕೊಂಡು ಕಾಫಿಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತೇವೆ. ಇಂಡಿಯನ್ ಬ್ರಾಂಡ್ ಕಾಫಿಗೆ ಉತ್ತಮ ಬೇಡಿಕೆಯಿದೆ. ಭಾರತೀಯ ಕಾಫಿಯನ್ನು ವಿಶ್ವವ್ಯಾಪಿ ರಫ್ತು ಮಾಡಲಾಗುತ್ತದೆ. ಖಂಡಿತವಾಗಿ ಕಾಫಿ ಮುಂದಿನ ಪೀಳಿಗೆಯ ಕೃಷಿಯಾಗುವುದರಲ್ಲಿ ಸಂಶಯ ಬೇಡ ಎಂದು ಹೇಳಿದ್ದಾರೆ.

ಕಲಬುರಗಿ, ಹುಬ್ಬಳ್ಳಿಯಲ್ಲಿ ಶೀಘ್ರ ಫಿಲ್ಮ್ ಸಿಟಿ ಸ್ಥಾಪನೆ

ಕಲಬುರಗಿ: ಕನ್ನಡ ಚಲನಚಿತ್ರೋದ್ಯಮದ ವಿಸ್ತರಣೆ ಹಾಗೂ ಪ್ರಾದೇಶಿಕ ಕಲಾವಿದರಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಕಲಬುರ್ಗಿ ಮತ್ತು ಹುಬ್ಬಳ್ಳಿಯಲ್ಲಿ ಫಿಲ್ಮ್ ಸಿಟಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ ಅಧ್ಯಕ್ಷ ಮಹಿಬೂಬ ಪಾಷ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ಅಗತ್ಯವಿರುವ ಭೂಮಿ ಮಂಜೂರು ಮಾಡುವಂತೆ ಈಗಾಗಲೇ ಆಯಾ ಜಿಲ್ಲಾಡಳಿತಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೆಂಗಳೂರಿನ ಕಂಠೀರವ ಸ್ಟುಡಿಯೋ ಮಾದರಿಯಲ್ಲೇ ಈ ಸಣ್ಣ ಫಿಲ್ಮ್ ಸಿಟಿಗಳು ತಲೆಯೆತ್ತಲಿವೆ ಎಂದರು.

ವಿಜಯನಗರ, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಸುಸಜ್ಜಿತ ಸ್ಟುಡಿಯೋಗಳನ್ನು ಸ್ಥಾಪಿಸುವ ಯೋಜನೆ ಇದೆ. ಇದರಿಂದ ಸ್ಥಳೀಯವಾಗಿ ಚಿತ್ರೀಕರಣಕ್ಕೆ ಅನುಕೂಲವಾಗುವುದಲ್ಲದೆ, ವ್ಯಾಪಾರ ಹಾಗೂ ಪ್ರವಾಸೋದ್ಯಮಕ್ಕೂ ಹೆಚ್ಚಿನ ಉತ್ತೇಜನ ಸಿಗಲಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ನಮ್ಮ ಪ್ರಮುಖ ಗುರಿ ಎಂದು ಹೇಳಿದರು.

ಕನ್ನಡ ಸಿನಿಮಾಗಳಿಗೆ ಡಿಜಿಟಲ್ ವೇದಿಕೆ ಕಲ್ಪಿಸಲು ಶ್ರೀ ಕಂಠೀರವ ಸ್ಟುಡಿಯೋಸ್ ವತಿಯಿಂದ ಹೊಸ ಓಟಿಟಿ ಪ್ಲಾಟ್‌ಫಾರ್ಮ್ ಸಿದ್ಧಪಡಿಸ ಲಾಗುತ್ತಿದ್ದು, ಜನವರಿ ಅಥವಾ ಫೆಬ್ರವರಿಯಲ್ಲಿ ಲೋಕಾರ್ಪಣೆಗೊಳ್ಳಲಿದೆ.

– **ಮಹಿಬೂಬ ಪಾಷ** ಕಂಠೀರವ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷ

ಮುಳ್ಳಯ್ಯನಗಿರಿಯ ಮೇಲೆ ಹೆಲಿಟೂರಿಸಂಗೆ ಎನ್‌ಜಿಟಿ ತಡೆ

ಚಿಕ್ಕಮಗಳೂರು: ಕ್ರಿಸ್‌ಮಸ್ ಮತ್ತು ವರ್ಷಾಂತ್ಯಕ್ಕೆ ಬರುವ ಪ್ರವಾಸಿಗರಿಗಾಗಿ ಆಯೋಜಿಸಿದ್ದ ಹೆಲಿಟೂರಿಸಂಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ತಾತ್ಕಾಲಿಕ ತಡೆ ನೀಡಿದೆ.

ಎ.ಯೋಗೇಶ್ವರನ್ ಮತ್ತು ಬಿ.ಪೂಂಗಳಲಿ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮಂಡಳಿ, ಮಧ್ಯಂತರ ಆದೇಶ ಹೊರಡಿಸಿದೆ.

ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಸಾಲು, ಕಳಸ ಮತ್ತು ಮೂಡಿಗೆರೆ ಸುತ್ತ ಹೆಲಿಕಾಪ್ಟರ್ ಹಾರಾಟ ನಡೆಸಿ ಪ್ರವಾಸಿಗರಿಗೆ ಆಗಸದಿಂದ ಗಿರಿಗಳ ದರ್ಶನ ಮಾಡಿಸಲು ಜಿಲ್ಲಾ ಪ್ರವಾಸೋದ್ಯಮ ಸಮಿತಿ ಮುಂದಾಗಿದೆ. ಮುಳ್ಳಯ್ಯನಗಿರಿಗೆ ಹೊಂದಿಕೊಂಡಂತೆ ಭದ್ರಾ ವನ್ಯಜೀವಿ ಪ್ರದೇಶ ಇದೆ. ಕಳಸ ಮತ್ತು ಮೂಡಿಗೆರೆಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ಹೊಂದಿಕೊಂಡಿವೆ. ಹೆಲಿ ಟೂರಿಸಂ ನಡೆಸಿದರೆ ವನ್ಯಜೀವಿಗಳ ಆವಾಸಕ್ಕೆ ತೊಂದರೆಯಾಗಲಿದೆ. ಅದರಲ್ಲೂ ಪಕ್ಷಿಗಳು ಗೂಡು ಕಟ್ಟುವ ಸಮಯ ಆಗಿರುವುದರಿಂದ



ಹೆಲಿಕಾಪ್ಟರ್ ಹಾರಾಟದ ಶಬ್ದ ತೊಂದರೆ ಉಂಟು ಮಾಡಲಿದೆ. ಪರಿಸರ ಸೂಕ್ಷ್ಮ ಪ್ರದೇಶ ಆಗಿರುವುದರಿಂದ ಹೆಲಿ ಟೂರಿಸಂಗೆ ಅವಕಾಶ ನೀಡಬಾರದು ಎಂದು ಅರ್ಜಿದಾರರು ವಾದ ಮಂಡಿಸಿದ್ದಾರೆ. ಪ್ರತಿವಾದಿ ವಕೀಲರು ವಿವರಣೆ ನೀಡಲು ಸಮಯ ಕೇಳಿದರು. ವಿಚಾರಣೆ ನಡೆಸಿದ ನ್ಯಾಯಮಂಡಳಿ, ಪರಿಸರ ಸೂಕ್ಷ್ಮ ವಿಷಯ ಆಗಿರುವುದರಿಂದ ಮಧ್ಯಂತರ ಆದೇಶ ನೀಡಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಿದೆ. ಮುಳ್ಳಯ್ಯನಗಿರಿ ಮೇಲ್ಭಾಗದಲ್ಲಿ ಹೆಲಿಕಾಪ್ಟರ್ ಹಾರಾಟ ನಡೆಸಬಾರದು. ಚಿಕ್ಕಮಗಳೂರು ನಗರದಲ್ಲಿ ಹೆಲಿಕಾಪ್ಟರ್ ಹಾರಾಟಕ್ಕೆ ಅನುಮತಿ ನೀಡಲಾಗುವುದು ಎಂದು ವಿವರಿಸಿ, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದೆ.

ಆಸ್ಪತ್ರೆಯಲ್ಲಿ ₹24 ಲಕ್ಷ ಬೆಲೆ ಬಾಳುವ ಯಂತ್ರಗಳ ನಾಪತ್ತೆ

ಹಾಸನ: ಬೇಲೂರು ತಾಲೂಕು ಆಸ್ಪತ್ರೆಯಲ್ಲಿ 24 ಲಕ್ಷ ರು. ಗೂ ಹೆಚ್ಚು ಬೆಲೆಬಾಳುವ ವಸ್ತುಗಳ ಕಳವು ಆರೋಪ ಕೇಳಿಬಂದಿದೆ. ಸ್ಕ್ಯಾನಿಂಗ್ ಮಷಿನ್, ವೆಂಟಿಲೇಟರ್, ಮಾನಿಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು ಸೇರಿ ಇತರೆ ವಸ್ತುಗಳು ಕಳವು ಆಗಿವೆ.

ಆಸ್ಪತ್ರೆಗೆ ಹಂತ ಹಂತವಾಗಿ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಹಾಗೂ ಗರ್ಭಿಣಿಯರು ಆಗಮಿಸುವ ಹಿನ್ನೆಲೆ ಸ್ಕ್ಯಾನಿಂಗ್ ಮಷಿನ್, ವೆಂಟಿಲೇಟರ್‌ಗಳನ್ನು ಕಳೆದ ಎರಡು ವರ್ಷಗಳ ಹಿಂದೆ ಖರೀದಿ ಮಾಡಲಾಗಿತ್ತು. ಇದಕ್ಕೆ ಸಂಬಂಧಪಟ್ಟ ವೈದ್ಯರು ಹಾಗೂ ಸಿಬ್ಬಂದಿ ಕೊರತೆಯಿದ್ದು, ಹೊಸದಾಗಿ ನೇಮಕ ಮಾಡಲು ಡಿಎಚ್‌ಒ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ವೇಳೆ ವಸ್ತುಗಳು ಕಳವಾಗಿರುವುದು ಕಂಡು ಬಂದಿದೆ. ಕೂಡಲೇ ಸಿಸಿಟಿವಿ ಪರಿಶೀಲನೆ ನಡೆಸಿದ್ದು ಆಸ್ಪತ್ರೆಯ ಸಿಬ್ಬಂದಿ ಪ್ರದೀಪ್ ಹಾಗೂ ಖಾಸಗಿ ಆಸ್ಪತ್ರೆ ಚಾಲಕ ಸೂಫಿಯಾನ್ ಸ್ಕ್ಯಾನಿಂಗ್ ಮಷಿನ್ ತೆಗೆದುಕೊಂಡು ಹೋಗುತ್ತಿರುವುದು ಬೆಳಕಿಗೆ ಬಂದಿದೆ. ಈ ಕಳ್ಳತನದ ಹಿಂದೆ ಆಸ್ಪತ್ರೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಖಾಸಗಿ ಅಂಬ್ಯುಲೆನ್ಸ್ ಚಾಲಕ ಸೇರಿದಂತೆ ದೊಡ್ಡ ಜಾಲವೇ ಇದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ.

ನೂತನ ವೈದ್ಯರಿಗೆ ಕೊಠಡಿ ನೀಡಲು ಪರಿಶೀಲನೆ ನಡೆಸುತ್ತಿದ್ದೆವು. ಆಗ ಸ್ಕ್ಯಾನಿಂಗ್ ರೂಂ ನೋಡಿದಾಗ ಮಷಿನ್ ಇರಲಿಲ್ಲ. ಸಿಬ್ಬಂದಿಯನ್ನು ಪ್ರಶ್ನಿಸಿದಾಗ ಅದು ಕೆಟ್ಟು ಹೋಗಿದ್ದು, ರಿಪೇರಿಗೆ ಕಳುಹಿಸಲಾಗಿದೆ. ಈ ಬಗ್ಗೆ ತನಿಖೆ ನಡೆಸಲಾಗುವುದು.

– **ಜಯಲಕ್ಷ್ಮೀ** ಶಸ್ತ್ರಚಿಕಿತ್ಸಕಿ

ಭಾರತವು ಶೇ.90ರಷ್ಟು ಕೃಷಿ ಮೇಲೆಯೇ ಅವಲಂಬಿತ: ಸಿದ್ದರಾಮಯ್ಯ

ರಸಗೊಬ್ಬರ ಬಳಕೆ ಕಡಿಮೆ ಮಾಡಬೇಕಿದೆ

ಹುದಲಿ ಗ್ರಾಮದಲ್ಲಿ ಶನಿವಾರ ಆಯೋಜಿಸಿದ್ದ ಕಬ್ಬು ಬೆಳೆಯುವ ಪ್ರದೇಶದಲ್ಲಿ ಮಣ್ಣಿನ ಆರೋಗ್ಯ ಮತ್ತು ನೀರಿನ ಸಮಗ್ರ ನಿರ್ವಹಣೆ ಯೋಜನೆಯನ್ನು ಸಿಎಂ ಸಿದ್ದರಾಮಯ್ಯ, ಸಚಿವರಾದ ಸತೀಶ್ ಜಾರಕಿಹೊಳಿ, ಚೆಲುವರಾಯಸ್ವಾಮಿ, ಲಕ್ಷ್ಮೀ ಹೆಬ್ಬಾಳಕರ್, ಶಿವಾನಂದ ಪಾಟೀಲ್ ಉದ್ಘಾಟಿಸಿದರು.

ಬೆಳಗಾವಿ: ರೈತರು ರಸಗೊಬ್ಬರ ಬಳಕೆಯನ್ನು ಕಡಿಮೆ ಮಾಡಬೇಕಾಗಿದೆ. ರಸಗೊಬ್ಬರ ಬಳಕೆಯಿಂದ ಹೆಚ್ಚಿನ ಇಳುವರಿ ಬರುತ್ತದೆ ಎಂಬ ತಪ್ಪು ಕಲ್ಪನೆಯಿಂದ ಹೊರಬರಬೇಕಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಹುದಲಿ ಗ್ರಾಮದಲ್ಲಿ ಶನಿವಾರ ಆಯೋಜಿಸಿದ್ದ ಕಬ್ಬು ಬೆಳೆಯುವ ಪ್ರದೇಶದಲ್ಲಿ ಮಣ್ಣಿನ ಆರೋಗ್ಯ ಮತ್ತು ನೀರಿನ ಸಮಗ್ರ ನಿರ್ವಹಣೆ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ರೈತ ಪರವಾಗಿದ್ದು, ಕಬ್ಬು ಬೆಳೆಯುವ ಪ್ರದೇಶದಲ್ಲಿ ಮಣ್ಣಿನ ಆರೋಗ್ಯ ಮತ್ತು ನೀರಿನ ಸಮಗ್ರ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಭೂಮಿ ಜೀವದ ತೊಟ್ಟಿಲು, ಇಂತಹ ಜೀವದ ತೊಟ್ಟಿಲನ್ನು ಬಂಜೆ ಮಾಡಬಾರದು ಎಂದು ಹೇಳಿದರು.

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಶೇ.90ರಷ್ಟು ಕೃಷಿ ಮೇಲೆಯೇ ಅವಲಂಬಿತವಾಗಿದೆ. ರೈತರಿಗೆ ಬೇಕಾದ ಸಹಾಯ ಮಾಡುವುದು ಸರಕಾರಗಳ ಜವಾಬ್ದಾರಿಯಾಗಿದೆ. ನೀರಿನ ನಿರ್ವಹಣೆ ಕುರಿತು ಪ್ರತಿಯೊಬ್ಬರು ತಿಳಿದುಕೊಂಡು ನೀರನ್ನು ಮಿತವಾಗಿ ಬಳಸಬೇಕು. ಈ ಕುರಿತು ಕೃಷಿ ಇಲಾಖೆ ಪ್ರತಿ ರೈತರ ಹತ್ತಿರ ಹೋಗಿ ಇಲಾಖೆಯಿಂದ ಪರಿಚಯಿಸಲಾಗುವ ಹೊಸ ತಳಿಗಳ ಕುರಿತು ಮಾಹಿತಿ ನೀಡಬೇಕು. ಕಳೆದ ಆಯವ್ಯಯಲ್ಲಿ ಘೋಷಿಸಿದಂತೆ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿಯೇ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ವ್ಯವಸಾಯ ಮಾಡಲಾಗುತ್ತಿದೆ. ಅಲ್ಲಿನ ರೈತರು ಕೃಷಿ ಇಲಾಖೆಯಿಂದ ಜಾರಿಯಲ್ಲಿರುವ ಸಾಕಷ್ಟು ಯೋಜನೆಗಳ ಲಾಭ ಪಡೆದು ಅಭಿವೃದ್ಧಿಪರ ಕೃಷಿ ಮಾಡುತ್ತಿದ್ದಾರೆ. ಕೃಷಿ ಇಲಾಖೆ ಅಧಿಕಾರಿ, ಸಿಬ್ಬಂದಿ ಕ್ಷೇತ್ರಗಳಿಗೆ ಭೇಟಿ ನೀಡಿ ರೈತರಿಗೆ ಹೊಸ ಹೊಸ ತಂತ್ರಜ್ಞಾನ ಬಳಕೆ, ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳುವ ಕುರಿತು ಜಾಗೃತಿ ಮೂಡಿಸಬೇಕು ಎಂದರು.

ರೈತರು ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಮೂಲಕ ಉತ್ತಮ ಇಳುವರಿ ಜತೆಗೆ ಹೆಚ್ಚಿನ ಆದಾಯ ಪಡೆಯಲು ಮುಂದಾಗಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರಕಾರವು ಸಬ್ಸಿಡಿ ಮೂಲಕ ಹೊಸ ಯಂತ್ರೋಪಕರಣಗಳನ್ನು ವಿತರಿಸುತ್ತಿದೆ.

– **ಸಿದ್ದರಾಮಯ್ಯ** ಸಿಎಂ

ಬಿಗ್‌ಬಾಸ್ ಸ್ಪರ್ಧಿ ಚೈತ್ರಾ ಕುಂದಾಪುರಗೆ ನ್ಯಾಯಾಲಯ ಆದೇಶ

ತಂದೆಗೆ ಕಿರುಕುಳ ನೀಡುವಂತಿಲ್ಲ

ಕುಂದಾಪುರ: ತಂದೆಗೆ ಯಾವುದೇ ರೀತಿ ದೈಹಿಕ, ಮಾನಸಿಕ ಹಿಂಸೆ ನೀಡುವಂತಿಲ್ಲ. ಅವರು ಮನೆಯಲ್ಲಿ ನಿರ್ಭೀತಿಯಿಂದ

ಇರಲು ಅವಕಾಶ ಮಾಡಿಕೊಡಬೇಕೆಂದು ಇಲ್ಲಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಬಿಗ್‌ಬಾಸ್ ಖ್ಯಾತಿಯ ಚೈತ್ರಾ ಕುಂದಾಪುರ ಅವರಿಗೆ ಆದೇಶ ಮಾಡಿದೆ.

ಪತ್ನಿ ಹಾಗೂ ಮಗಳು ಚೈತ್ರಾ ಸೇರಿಕೊಂಡು ಮನೆಯ ದಾಖಲೆಗಳನ್ನು ಅವರ ಹೆಸರಿಗೆ ವರ್ಗಾಯಿಸುವಂತೆ ಒತ್ತಡ ಹೇರಿದ್ದು, ಅದನ್ನು ನಿರಾಕರಿಸಿದ ಕಾರಣ ಕೊಲೆ ಬೆದರಿಕೆ ಹಾಕಿ ದ್ದಾರೆ. ಈ ಕಾರಣಕ್ಕೆ ಮಂಗಳೂರಿನ ಹೊಟೇಲ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದು, ಹಿರಿಯ ಮಗಳನ್ನು ಭೇಟಿಯಾಗಲು ಆಗಾಗ ಊರಿಗೆ ಬರುತ್ತಿದ್ದೆ. ಸದ್ಯ ಚೈತ್ರಾ ಹಾಗೂ ಆಕೆಯ ತಾಯಿ ಸ್ವಂತ ಮನೆಗೆ ಪ್ರವೇಶಿಸಲು ಬಿಡದೆ, ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದಾರೆ. ನನ್ನ ಮನೆಯಲ್ಲಿ ವಾಸಿಸಲು ಅವಕಾಶ ನೀಡಬೇಕೆಂದು ಕೋರಿ ಹಿರಿಯ ನಾಗರಿಕರ ಪಾಲನೆ ಹಾಗೂ ಕಲ್ಯಾಣ ಕಾಯಿದೆ ಅನ್ವಯ ಪರಿಹಾರ ಕೋರಿ ನ್ಯಾಯಮಂಡಳಿಯಲ್ಲಿ ಬಾಲಕೃಷ್ಣ ನಾಯಕ್ (71) ಪ್ರಕರಣ ದಾಖಲಿಸಿದ್ದರು. ವಾದ ವಿವಾದ ಆಲಿಸಿದ ಸಹಾಯಕ ಕಮಿಷನರ್ ರಶ್ಮಿ ಎಸ್.ಆರ್. ಬಾಡಿಗೆ ಹಣದ ಕುರಿತು ಯಾವುದೇ ದಾಖಲೆ ಸಲ್ಲಿಸಿಲ್ಲ. ಪ್ರಸ್ತುತ ಈ ಮನೆಯಲ್ಲಿ ಚೈತ್ರಾ ವಾಸಿಸುತ್ತಿಲ್ಲ. ಆದರೆ ಈ ಹಿಂದೆ ಪ್ರಕರಣ ದಾಖಲಾಗಿದೆ. ಆದ್ದರಿಂದ ಇನ್ಮುಂದೆ ತಂದೆ ಅವರ ಮನೆಯಲ್ಲಿ ವಾಸಿಸಲು ತೊಂದರೆ ಮಾಡಬಾರದು. ದೈಹಿಕ, ಮಾನಸಿಕ ಹಿಂಸೆ ನೀಡಬಾರದು. ಅವರ ಸ್ವತ್ತಿನ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸೂಕ್ತ ಮುಚ್ಚಳಿಕೆ ನೀಡಬೇಕು ಎಂದು ಆದೇಶಿಸಿದ್ದಾರೆ.

ಮಂಗನ ಕಾಯಿಲೆ: ಪರಿಹಾರಕ್ಕೆ ಒತ್ತಾಯ

ಕೇಂದ್ರ ಸಚಿವ ಜೆ.ಪಿ.ನಡ್ಡಾಗೆ ಮನವಿ ಸಲ್ಲಿಸಿದ ಸಂಸದ ಬಿ.ವೈ.ರಾಘವೇಂದ್ರ

ಶಿವಮೊಗ್ಗ: ಮಲೆನಾಡು ಪ್ರದೇಶದ ರೈತರು, ಅರಣ್ಯ ವಾಸಿಗಳು ಹಾಗೂ ಗ್ರಾಮೀಣ ಸಮುದಾಯ ಗಳು ವರ್ಷಗಳಿಂದ ಎದುರಿಸುತ್ತಿರುವ ಮಂಗನ ಕಾಯಿಲೆಗೆ ಶಾಶ್ವತ ಮತ್ತು ವೈಜ್ಞಾನಿಕ ಪರಿಹಾರ ದೊರಕಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದಾರೆ. ಈ ಸಂಬಂಧ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರನ್ನು ರಾಘವೇಂದ್ರ ಭೇಟಿಯಾಗಿ, ಸಮಗ್ರ ಚರ್ಚೆ ನಡೆಸಿದ್ದಾರೆ.

ಮಂಗನ ಕಾಯಿಲೆಯಿಂದ ಆಗುತ್ತಿರುವ ಜೀವ ಹಾನಿ ಹಾಗೂ ಜನಜೀವನದ ಮೇಲೆ ಬೀರುವ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಿ, ಪರಿಣಾಮಕಾರಿ ಲಸಿಕೆ ಅಭಿವೃದ್ಧಿಗೆ ತ್ವರಿತ ಕ್ರಮ, ಐಸಿಎಂಆರ್ ಹಾಗೂ ಎನ್‌ಐವಿ ಮೂಲಕ ಸಂಶೋಧನೆಗೆ ವೇಗ, ಶಿವಮೊಗ್ಗದಲ್ಲಿ ಎನ್‌ಐವಿ ಉಪಕೇಂದ್ರ ಸ್ಥಾಪನೆ ಮತ್ತು ಪ್ರಾದೇಶಿಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸುವಿಕೆ ಕುರಿತು ಕೇಂದ್ರ ಸಚಿವರ ಗಮನಕ್ಕೆ ತಂದಿರುವುದಾಗಿ ಅವರು ತಿಳಿಸಿದ್ದಾರೆ. ಮಲೆನಾಡಿನ ಜನರು ಇನ್ಮುಂದೆ ಭಯದಲ್ಲಿ ಬದುಕುವ ಪರಿಸ್ಥಿತಿ ಬಾರದಂತೆ, ಒನ್ ಹೆಲ್ತ್ ದೃಷ್ಟಿಕೋನದ ಅಡಿಯಲ್ಲಿ ಕೇಂದ್ರ ಸರಕಾರದಿಂದ ಶಾಶ್ವತ ಪರಿಹಾರ ದೊರಕಿಸುವಂತೆ ಮನವಿ ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರಿಗೆ ಸಂಸದ ಬಿ.ವೈ. ರಾಘವೇಂದ್ರ ಮನವಿ ಸಲ್ಲಿಸಿದರು.

ಮಂಗನ ಕಾಯಿಲೆ ನಿರ್ಮೂಲನೆಗೆ ಅಗತ್ಯವಾದ ವೈಜ್ಞಾನಿಕ ನೆರವು, ಆರ್ಥಿಕ ಬೆಂಬಲ ಹಾಗೂ ಎಲ್ಲ ಅಗತ್ಯ ಕ್ರಮ ಅತ್ಯಂತ ಶೀಘ್ರವಾಗಿ ಕೈಗೊಳ್ಳುವುದಾಗಿ ಕೇಂದ್ರ ಸರಕಾರದಿಂದ ಖಚಿತ ಭರವಸೆ ನೀಡಲಾಗಿದೆ. ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ಈ ಮಹತ್ವದ ವಿಷಯಕ್ಕೆ ತಕ್ಷಣ ಸ್ಪಂದಿಸಿ, ಪರಿಣಾಮಕಾರಿ ಕ್ರಮಗಳನ್ನು ಜಾರಿಗೊಳಿಸುವುದಾಗಿ ತಿಳಿಸಿದ್ದಾರೆ.

– **ಬಿ.ವೈ.ರಾಘವೇಂದ್ರ** ಸಂಸದ

ಸುಲ್ತಾನ್ ಕಬೂಸ್: ಒಮಾನಿನ ಕನ್ನಡಿಗರಿಗೂ ಆರಾಧ್ಯ ದೈವ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಒಮಾನ್ ದೇಶದ ರಾಜಧಾನಿ ಮಸ್ಕತ್‌ನಲ್ಲಿರುವ ಯಾರೇ ಕನ್ನಡಿಗರ ಜತೆ ಮಾತಾಡಿ, ಅವರು ದಿವಂಗತ ಸುಲ್ತಾನ್ ಕಬೂಸ್ ಬಿನ್ ಸೈದ್ ಅಲ್ ಸೈದ್ ಬಗ್ಗೆ ಅಭಿಮಾನದಿಂದ ಮಾತಾಡುತ್ತಾರೆ. ಅವರ ಬಗ್ಗೆ ಹತ್ತಾರು ಕಥೆ, ಪ್ರಸಂಗಗಳನ್ನು ಹೇಳುತ್ತಾರೆ. ಅಷ್ಟೇ ಅಲ್ಲ, ಯಾವ ಕನ್ನಡಿಗರ ಮನೆಗಳಿಗೆ ಹೋದರೂ, ಪ್ರವೇಶ ದ್ವಾರದಲ್ಲಿ ಸುಲ್ತಾನ್ ಕಬೂಸ್ ಅವರ ದೊಡ್ಡ ಭಾವಚಿತ್ರವನ್ನು ಕಾಣಬಹುದು. ಅವರು ಬದುಕಿದ್ದಾಗ ಮತ್ತು ನಂತರ ಒಮಾನಿನ ಜನ ಅವರನ್ನು ದೇವರಂತೆ ಕಂಡಿದ್ದು ಸುಳ್ಳಲ್ಲ.

ಸುಲ್ತಾನ ಕಬೂಸ್ ಕೇವಲ ಒಬ್ಬ ರಾಜನಾಗಿರಲಿಲ್ಲ, ಅವರು ಆಧುನಿಕ ಒಮಾನ್‌ನ ಶಿಲ್ಪಿ. ಅರಬ್ ಜಗತ್ತಿನಲ್ಲಿ ಅತಿ ಹೆಚ್ಚು ಕಾಲ ಅಂದರೆ ಸುಮಾರು 50 ವರ್ಷಗಳ ಕಾಲ ಆಳ್ವಿಕೆ ನಡೆಸಿದ ನಾಯಕ ಎಂಬ ಹೆಗ್ಗಳಿಕೆ ಇವರದ್ದು. 2020ರಲ್ಲಿ ಅವರು ನಿಧನರಾದಾಗ, ಇಡೀ ದೇಶವೇ ಕಣ್ಣೀರು ಹಾಕಿತ್ತು. ಜಗತ್ತಿನ ಎಲ್ಲ ದೇಶಗಳ ನಾಯಕರೂ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇದಕ್ಕೆ ಕಾರಣ ಅವರ ವ್ಯಕ್ತಿತ್ವ ಮತ್ತು ಅವರು ಸಾಮ್ರಾಜ್ಯ ಕಟ್ಟಿದ ರೀತಿ. ಸಾಮಾನ್ಯವಾಗಿ ಅರಬ್ ಶೇಖ್ ಎಂದರೆ ತೈಲ ಬಾವಿ, ಚಿನ್ನದ ಕಾರುಗಳು, ವೈಭವೋಪೇತ ಜೀವನ ಎಂದು ನಾವು ಅಂದುಕೊಳ್ಳುತ್ತೇವೆ. ಆದರೆ ಸುಲ್ತಾನ್ ಕಬೂಸ್ ಇವೆಲ್ಲಕ್ಕಿಂತ ಭಿನ್ನವಾಗಿದ್ದರು. ಅವರು ಶಾಂತಿಪ್ರಿಯರು, ಸಂಗೀತ ಆರಾಧಕರು, ವಿಶಿಷ್ಟ ಚಿಂತನೆಯುಳ್ಳವರಾಗಿದ್ದರು. ಅವರು ಭಾರತಕ್ಕೆ ಅತ್ಯಾಪ್ತರಾಗಿದ್ದರು.

ಸುಲ್ತಾನ್ ಕಬೂಸ್ ಅವರಿಗೆ ಭಾರತದ ಬಗ್ಗೆ ವಿಶೇಷವಾದ ಪ್ರೀತಿ ಇತ್ತು ಎನ್ನುವುದು ಅನೇಕರಿಗೆ ತಿಳಿದಿಲ್ಲ. ಅವರ ಆರಂಭಿಕ ಶಿಕ್ಷಣ ನಡೆದದ್ದೇ ಭಾರತದಲ್ಲಿ. ಕಬೂಸ್ ಅವರು ಪುಣೆಯ ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಅಚ್ಚರಿಯ ಸಂಗತಿಯೆಂದರೆ, ಭಾರತದ ಮಾಜಿ ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರು ಪುಣೆಯಲ್ಲಿ ಕಬೂಸ್ ಅವರಿಗೆ ಪಾಠ ಹೇಳಿಕೊಟ್ಟ ಗುರುಗಳಾಗಿದ್ದರು!

ಕಬೂಸ್ ಅವರು ಸುಲ್ತಾನ್ ಆದ ನಂತರ ಒಮ್ಮೆ ಭಾರತಕ್ಕೆ ಭೇಟಿ ನೀಡಿದ್ದರು. ಆಗ ಶಂಕರ್ ದಯಾಳ್ ಶರ್ಮಾ ಅವರು ಭಾರತದ ರಾಷ್ಟ್ರಪತಿಯಾಗಿದ್ದರು. ವಿಮಾನ ನಿಲ್ದಾಣದಲ್ಲಿ ಪ್ರೋಟೋಕಾಲ್ (ಶಿಷ್ಟಾಚಾರ) ಪ್ರಕಾರ, ರಾಷ್ಟ್ರಪತಿಗಳು ಯಾರನ್ನೂ ಬರಮಾಡಿಕೊಳ್ಳಲು ಹೋಗುವುದಿಲ್ಲ. ಆದರೆ, ತನ್ನ ಶಿಷ್ಯ ಬರುತ್ತಿದ್ದಾನೆ ಎಂದು ತಿಳಿದ ಶರ್ಮಾ ಅವರು ನಿಯಮ ಮುರಿದು ವಿಮಾನದ ಬಾಗಿಲವರೆಗೂ ಹೋದರು. ಇದನ್ನು ಕಂಡ ಸುಲ್ತಾನ್ ಕಬೂಸ್, ತಾನು ರಾಜನೆಂಬುದನ್ನೂ ಮರೆತು, ಶರ್ಮಾ ಅವರ ಕಾಲಿಗೆ ಬಿದ್ದು ನಮಸ್ಕರಿಸಿದ್ದರು. ಇದು ಭಾರತೀಯ ಸಂಸ್ಕೃತಿಯ ಮೇಲಿನ ಅವರ ಗೌರವಕ್ಕೆ ಸಾಕ್ಷಿ. ಅದೇ ರೀತಿ ಡಾ. ಶರ್ಮಾ ಅವರು ಒಮಾನಿಗೆ ಭೇಟಿ ನೀಡಿದಾಗ, ವಿಮಾನ ನಿಲ್ದಾಣಕ್ಕೆ ಹೋಗಿ ತಮ್ಮ ಗುರುವನ್ನು ಸುಲ್ತಾನ್ ಕಬೂಸ್ ಬರಮಾಡಿಕೊಂಡಿದ್ದರು. ವಿಮಾನ ನಿಲ್ದಾಣದಿಂದ ಖುದ್ದಾಗಿ ತಾವೇ ಕಾರನ್ನು ಡ್ರೈವ್ ಮಾಡಿಕೊಂಡು ಡಾ.ಶರ್ಮಾ ಅವರನ್ನು ತಮ್ಮ ಅರಮನೆಗೆ ಕರೆದುಕೊಂಡು ಬಂದಿದ್ದರು.

ಇಂದು ನಾವು ನೋಡುವ ಒಮಾನ್ ಸುಂದರ ರಸ್ತೆಗಳು, ಕಟ್ಟಡಗಳಿಂದ ಕೂಡಿದೆ. ಆದರೆ 1970ರಲ್ಲಿ ಕಬೂಸ್ ಅವರು ಅಧಿಕಾರಕ್ಕೆ ಬರುವ ಮೊದಲು ಒಮಾನ್ ಸ್ಥಿತಿ ಮಧ್ಯಕಾಲೀನ ಯುಗದಂತಿತ್ತು. ಅವರ ತಂದೆ ಸೈದ್ ಬಿನ್ ತೈಮೂರ್ ಅವರ ಆಳ್ವಿಕೆ ಅತ್ಯಂತ ಕಠೋರವಾಗಿತ್ತು. ಆಗ ಇಡೀ ಒಮಾನ್ ದೇಶದಲ್ಲಿ ಇದ್ದದ್ದು ಕೇವಲ ಮೂರು ಸರಕಾರಿ ಶಾಲೆಗಳು! ಇಡೀ ದೇಶದಲ್ಲಿ ಇದ್ದ ಡಾಂಬರು ರಸ್ತೆ ಕೇವಲ 10 ಕಿಮೀ ಮಾತ್ರ- ಅದು ಮಸ್ಕತ್‌ನಿಂದ ಅರಮನೆಗೆ ಹೋಗುವ ದಾರಿ. ದೇಶದಲ್ಲಿ ರೇಡಿಯೋ ಕೇಳುವುದು, ಸನ್ ಗ್ಲಾಸ್ ಧರಿಸುವುದು ನಿಷೇಧವಾಗಿತ್ತು. ರಾತ್ರಿ ವೇಳೆ ಕತ್ತಲಾದ ಮೇಲೆ ನಗರದ ಗೇಟುಗಳನ್ನು ಮುಚ್ಚಲಾಗುತ್ತಿತ್ತು. ವಿದ್ಯುತ್ ಪೂರೈಕೆ ಕೇವಲ ಕೆಲವೇ ಶ್ರೀಮಂತರ ಮನೆಗಳಲ್ಲಿತ್ತು. ಒಮಾನ್ ಅನ್ನು 'ಕತ್ತಲ ದೇಶ' ಎಂದೇ ಕರೆಯುತ್ತಿದ್ದರು.

ತಮ್ಮ ತಂದೆಯ ಆಳ್ವಿಕೆಯಲ್ಲಿ ದೇಶದ ಪ್ರಗತಿ ಕುಂಠಿತವಾಗುತ್ತಿರುವುದನ್ನು ಕಂಡ ಸುಲ್ತಾನ್ ಕಬೂಸ್, 1970ರಲ್ಲಿ ಬ್ರಿಟಿಷರ ಸಹಾಯದೊಂದಿಗೆ ಒಂದು 'ರಕ್ತರಹಿತ ಕ್ರಾಂತಿ' ನಡೆಸಿದರು. ತಂದೆಯನ್ನು ಅಧಿಕಾರದಿಂದ ಕೆಳಗಿಳಿಸಿ, ದೇಶದ ಚುಕ್ಕಾಣಿ ಹಿಡಿದರು. ಅಂದು ಅವರು ರೇಡಿಯೋ ಮೂಲಕ ದೇಶವಾಸಿಗಳಿಗೆ ಹೇಳಿದ್ದು ಇಷ್ಟೇ: ''ನನ್ನ ಜನರೇ, ನಾನು ನಿಮಗೆ ಹೊಸ ಕನಸನ್ನು ಸಾಕಾರ ಮಾಡಿ ತೋರಿಸುತ್ತೇನೆ, ಹೊಸ ಯುಗವನ್ನು ನೀಡುತ್ತೇನೆ''.

ಅಕ್ಷರಶಃ ಅವರು ನುಡಿದಂತೆ ನಡೆದರು. ಮೂರೇ ಶಾಲೆಗಳಿದ್ದ ದೇಶದಲ್ಲಿ ಸಾವಿರಾರು ಶಾಲೆಗಳನ್ನು ತೆರೆದರು. ಹತ್ತು ಕಿಮೀ ರಸ್ತೆಯಿದ್ದ ದೇಶದಲ್ಲಿ ಹೈವೇಗಳ ಜಾಲವನ್ನೇ ನಿರ್ಮಿಸಿದರು. ತೈಲ ಸಂಪತ್ತನ್ನು ಸಂಪೂರ್ಣವಾಗಿ ದೇಶದ ಅಭಿವೃದ್ಧಿಗೆ ಬಳಸಿದರು. ಅರಬ್ ರಾಷ್ಟ್ರಗಳಲ್ಲಿ ಸದಾ ಒಂದಿಲ್ಲೊಂದು ಯುದ್ಧ, ಜಗಳಗಳು ಇದ್ದೇ ಇರುತ್ತಿತ್ತು. ಆದರೆ ಸುಲ್ತಾನ್ ಕಬೂಸ್ ಅವರ ವಿದೇಶಾಂಗ ನೀತಿ ಬಹಳ ವಿಶಿಷ್ಟವಾಗಿತ್ತು. ಅವರ ನೀತಿಯ ಹೆಸರು- 'ಎಲ್ಲರೊಂದಿಗೂ ಸ್ನೇಹ, ಯಾರೊಂದಿಗೂ ದ್ವೇಷವಿಲ್ಲ' (Friend to all, enemy to none). ಅಮೆರಿಕ ಮತ್ತು ಇರಾನ್ ಎರಡೂ ಬದ್ಧ ವೈರಿಗಳು. ಆದರೆ ಈ ಎರಡೂ ದೇಶಗಳ ಜತೆ ಉತ್ತಮ ಬಾಂಧವ್ಯ ಹೊಂದಿದ್ದ ಏಕೈಕ ನಾಯಕ ಅಂದ್ರೆ, ಕಬೂಸ್. ಅಮೆರಿಕದ ಒತ್ತೆಯಾಳುಗಳು ಇರಾನ್‌ನಲ್ಲಿ ಸಿಕ್ಕಿಹಾಕಿಕೊಂಡಾಗ, ಅವರನ್ನು ಬಿಡುಗಡೆಗೊಳಿಸಲು ಮಧ್ಯಸ್ಥಿಕೆ ವಹಿಸಿದ್ದು ಇದೇ ಸುಲ್ತಾನ್ ಕಬೂಸ್. ಅರಬ್ ಜಗತ್ತಿನಲ್ಲಿ ಒಮಾನ್ ಅನ್ನು 'ಸ್ವಿಜರ್ಲೆಂಡ್' ಎಂದು ಕರೆಯಲಾಗುತ್ತದೆ. ಏಕೆಂದರೆ ಇದು ತಟಸ್ಥ ನೀತಿಯನ್ನು ಅನುಸರಿಸುತ್ತದೆ. ಒಮಾನ್ ಯಾರೊಂದಿಗೂ ಕಾದಾಡುವುದಿಲ್ಲ. ಯಾರ ಜತೆಗೂ ತಕರಾರು ಇಲ್ಲ. ಇದ್ದರೆ ಪ್ರೀತಿ-ವಿಶ್ವಾಸ ಮಾತ್ರ.

ಸಾಮಾನ್ಯವಾಗಿ ಅರಬ್ ರಾಜರು ಒಂಟೆ ಓಟ ಅಥವಾ ಗಿಡುಗಗಳ (ಫಾಲ್ಕನ್) ಮೇಲೆ ಆಸಕ್ತಿ ಹೊಂದಿರುತ್ತಾರೆ. ಆದರೆ ಸುಲ್ತಾನ್ ಕಬೂಸ್ ಅವರಿಗೆ 'ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ' ಅಂದರೆ ಪಂಚಪ್ರಾಣ. ಅವರು ಸ್ವತಃ ಉತ್ತಮ ಆರ್ಗನ್ ವಾದಕರಾಗಿದ್ದರು. ಮಸ್ಕತ್ ನಗರದಲ್ಲಿ ಅವರು 'ರಾಯಲ್ ಒಪೇರಾ ಹೌಸ್' ನಿರ್ಮಿಸಿದರು. ಇದು ಇಡೀ ಮಧ್ಯಪ್ರಾಚ್ಯದಲ್ಲಿಯೇ ಅತ್ಯಂತ ಸುಂದರ ಮತ್ತು ಏಕೈಕ ಒಪೇರಾ ಹೌಸ್ ಎನಿಸಿಕೊಂಡಿದೆ. ಅವರು 'ರಾಯಲ್ ಒಮಾನ್ ಸಿಂಫನಿ ಆರ್ಕೆಸ್ಟ್ರಾ'ವನ್ನು ಸ್ಥಾಪಿಸಿದರು. ಇದರ ವಿಶೇಷವೇನೆಂದರೆ, ಇದರಲ್ಲಿರುವ ಎಲ್ಲ ವಾದಕರೂ ಒಮಾನ್ ದೇಶದವರೇ ಆಗಿರಬೇಕು ಎಂಬ ನಿಯಮ ಮಾಡಿದರು. ಇದಕ್ಕಾಗಿ ಯುವಕರಿಗೆ ವಿದೇಶದಿಂದ ತಜ್ಞರನ್ನು ಕರೆಸಿ ತರಬೇತಿ ಕೊಡಿಸಿದರು.

ಸುಲ್ತಾನ್ ಕಬೂಸ್ ಅವರಿಗೆ ಸುಗಂಧ ದ್ರವ್ಯಗಳೆಂದರೆ ಎಲ್ಲಿಲ್ಲದ ಪ್ರೀತಿ. ಜಗತ್ತಿನ ಅತ್ಯುತ್ತಮ ಸುಗಂಧ ದ್ರವ್ಯ ತಮ್ಮ ದೇಶದಿಂದಲೇ ಬರಬೇಕು ಎಂದು ಅವರು ಬಯಸಿದರು. 1983ರಲ್ಲಿ ಅವರು 'ಅಮುವಾಜ್' ಎಂಬ ಪರ್ಫ್ಯೂಮ್ ಬ್ರಾಂಡ್ ಅನ್ನು ಸ್ಥಾಪಿಸಿದರು. ಇದನ್ನು 'ದಿ ಗಿಫ್ಟ್ ಆಫ್ ಕಿಂಗ್ಸ್' ಎಂದು ಕರೆಯಲಾಗುತ್ತದೆ. ಒಮಾನ್‌ನಲ್ಲಿ ದೊರೆಯುವ ಬೆಲೆಬಾಳುವ ಸಾಂಬ್ರಾಣಿ ಮತ್ತು ವಿಶೇಷ ಹೂವುಗಳನ್ನು ಬಳಸಿ ಇದನ್ನು ತಯಾರಿಸಲಾಗುತ್ತದೆ. ವಿಶ್ವದ ಅತ್ಯಂತ ದುಬಾರಿ ಪರ್ಫ್ಯೂಮ್‌ಗಳಲ್ಲಿ ಇದೂ ಒಂದು. ಆರಂಭದಲ್ಲಿ ಇದನ್ನು ಕೇವಲ ರಾಜರು ತಮ್ಮ ಅತಿಥಿಗಳಿಗೆ ಉಡುಗೊರೆಯಾಗಿ ನೀಡಲು ತಯಾರಿಸುತ್ತಿದ್ದರು, ನಂತರ ಇದು ಮಾರುಕಟ್ಟೆಗೆ ಬಂತು.

ಸುಲ್ತಾನ್ ಕಬೂಸ್ ಅವರ ವೈಯಕ್ತಿಕ ಜೀವನವೂ ನಿಗೂಢವಾಗಿತ್ತು. ಅವರು 1976ರಲ್ಲಿ ತಮ್ಮ ಸಂಬಂಧಿಯನ್ನೇ ಮದುವೆಯಾಗಿದ್ದರು. ಆದರೆ ಮೂರೇ ವರ್ಷದಲ್ಲಿ ಆ ಮದುವೆ ವಿಚ್ಛೇದನದಲ್ಲಿ ಅಂತ್ಯವಾಯಿತು. ಆನಂತರ ಅವರು ಮದುವೆಯಾಗಲಿಲ್ಲ ಮತ್ತು ಅವರಿಗೆ ಮಕ್ಕಳಿರಲಿಲ್ಲ. ಒಬ್ಬ ರಾಜನಿಗೆ ಮಕ್ಕಳಿಲ್ಲದಿದ್ದರೆ ಮುಂದಿನ ರಾಜ ಯಾರು ಎಂಬ ಪ್ರಶ್ನೆ ಬರುವುದು ಸಹಜ. ಆದರೆ ಕಬೂಸ್ ಈ ಬಗ್ಗೆ ಬಹಿರಂಗವಾಗಿ ಯಾರ ಹೆಸರನ್ನೂ ಹೇಳಿರಲಿಲ್ಲ. ಇದು ದೇಶದಲ್ಲಿ ಗೊಂದಲ ಉಂಟುಮಾಡಬಹುದೇ ಎಂಬ ಆತಂಕವಿತ್ತು.

ಆದರೆ ಸುಲ್ತಾನರು ಬಹಳ ಬುದ್ಧಿವಂತಿಕೆಯಿಂದ ಒಂದು ವ್ಯವಸ್ಥೆ ಮಾಡಿದ್ದರು. ಸುಲ್ತಾನ್ ಕಬೂಸ್ ತೀರಿಕೊಂಡ ನಂತರ ಮುಂದಿನ ರಾಜ ಯಾರಾಗಬೇಕು ಎಂಬುದನ್ನು ಅವರು ನಿರ್ಧರಿಸಿದ್ದರು, ಆದರೆ ಅದನ್ನು ಯಾರಿಗೂ ಹೇಳಿರಲಿಲ್ಲ! ಅವರು ಎರಡು ಪ್ರತ್ಯೇಕ ಲಕೋಟೆಗಳಲ್ಲಿ ತಮ್ಮ ಉತ್ತರಾಧಿಕಾರಿಯ ಹೆಸರನ್ನು ಬರೆದಿಟ್ಟಿದ್ದರು. ಒಂದು ಮಸ್ಕತ್‌ನಲ್ಲಿ ಮತ್ತು ಇನ್ನೊಂದು ಸಲಾಲಾ ಅರಮನೆಯಲ್ಲಿ. ನಿಯಮದ ಪ್ರಕಾರ, ರಾಜ ಕುಟುಂಬದ ಹಿರಿಯರು ಸೇರಿ ಮೂರು ದಿನಗಳಲ್ಲಿ ಹೊಸ ರಾಜನನ್ನು ಆಯ್ಕೆ ಮಾಡಬೇಕು. ಒಂದು ವೇಳೆ ಅವರಿಗೆ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದರೆ ಮಾತ್ರ ಸುಲ್ತಾನರು ಬರೆದಿಟ್ಟ ಲಕೋಟೆಯನ್ನು ತೆರೆಯಬೇಕು ಎಂದು ಆದೇಶವಿತ್ತು.

ಆದರೆ, ಸುಲ್ತಾನ್ ಕಬೂಸ್ ಮೇಲಿದ್ದ ಅಪಾರ ಗೌರವದಿಂದ, ಅವರು ತೀರಿಕೊಂಡ ತಕ್ಷಣ ರಾಜ ಕುಟುಂಬದವರು ಸಭೆ ನಡೆಸಿ, 'ನಾವು ಯಾರನ್ನೂ ಆಯ್ಕೆ ಮಾಡುವುದಿಲ್ಲ, ಸುಲ್ತಾನರ ಆಯ್ಕೆಯೇ ಅಂತಿಮ' ಎಂದು ನಿರ್ಧರಿಸಿ ಲಕೋಟೆಯನ್ನು ತೆರೆದರು. ಅದರಲ್ಲಿ ಅವರ ದಾಯಾದಿ ಸಹೋದರ ಹೈದಮ್ ಬಿನ್ ತಾರಿಕ್ ಅವರ ಹೆಸರಿತ್ತು. ಹೀಗೆ ಅತ್ಯಂತ ಶಾಂತಿಯುತವಾಗಿ ಅಧಿಕಾರ ಹಸ್ತಾಂತರವಾಯಿತು.

ಒಮಾನ್ ದೇಶವು ಗಲ್ಫ್ ರಾಷ್ಟ್ರಗಳಲ್ಲೇ ಅತ್ಯಂತ ಸ್ವಚ್ಛವಾದ ದೇಶ ಎಂದು ಹೆಸರುವಾಸಿಯಾಗಿದೆ. ಇದಕ್ಕೆ ಕಾರಣ ಸುಲ್ತಾನ್ ಕಬೂಸ್ ಅವರ ಕಟ್ಟುನಿಟ್ಟಿನ ನಿಯಮಗಳು.

ಒಮಾನ್‌ನಲ್ಲಿ ಕಾರುಗಳು ಗಲೀಜಾಗಿದ್ದರೆ ಪೊಲೀಸರು ದಂಡ ಹಾಕುತ್ತಾರೆ! ಇದು ಸುಲ್ತಾನರ ಆದೇಶವಾಗಿತ್ತು. ನಗರ ನೋಡಲು ಸುಂದರವಾಗಿ ಕಾಣಬೇಕು ಎಂಬುದು ಅವರ ಹಂಬಲ. ಅವರು ಸ್ವತಃ ತಮ್ಮ ಕಾರನ್ನು ಚಲಾಯಿಸಿಕೊಂಡು ದೇಶದ ಮೂಲೆ ಮೂಲೆಗೆ ಹೋಗುತ್ತಿದ್ದರು. ಇದನ್ನು 'ಮೀಟ್ ದಿ ಪೀಪಲ್' (ಜನಸಂಪರ್ಕ) ಪ್ರವಾಸ ಎನ್ನಲಾಗುತ್ತಿತ್ತು. ಹಳ್ಳಿಯ ಸಾಮಾನ್ಯ ಜನರ ಬಳಿ ಕುಳಿತು ಅವರ ಕಷ್ಟಗಳನ್ನು ಆಲಿಸುತ್ತಿದ್ದರು.

ಸುಲ್ತಾನ್ ಕಬೂಸ್ ಕೇವಲ ಒಬ್ಬ ಆಡಳಿತಗಾರನಾಗಿರಲಿಲ್ಲ, ಅವರು ಒಮಾನ್ ದೇಶದ ಪಾಲಿಗೆ ಒಬ್ಬ ತಂದೆಯಂತಿದ್ದರು. 50 ವರ್ಷಗಳ ಕಾಲ ಆಳ್ವಿಕೆ ನಡೆಸಿ, ಮಧ್ಯಕಾಲೀನ ಕತ್ತಲಲ್ಲಿದ್ದ ದೇಶವನ್ನು ಆಧುನಿಕ ಜಗತ್ತಿನ ಮುಂಚೂಣಿಗೆ ತಂದ ಅವರ ಸಾಧನೆ ಅಪ್ರತಿಮ. ಯುದ್ಧಗಳಿಂದ ಜರ್ಜರಿತವಾದ ಮಧ್ಯಪ್ರಾಚ್ಯದಲ್ಲಿ ಶಾಂತಿಯ ದ್ವೀಪದಂತೆ ಒಮಾನ್ ಅನ್ನು ರೂಪಿಸಿದ ಅವರ ಧೀಮಂತ ವ್ಯಕ್ತಿತ್ವ ಮತ್ತು ಚಾಕಚಕ್ಯತೆ ಇತಿಹಾಸದಲ್ಲಿ ಸದಾ ಹಸಿರಾಗಿರುತ್ತದೆ. ಭಾರತದೊಂದಿಗೆ ಅವರು ಹೊಂದಿದ್ದ ಆತ್ಮೀಯ ಸಂಬಂಧವಂತೂ ಎರಡು ದೇಶಗಳ ನಿರಂತರ ಸ್ನೇಹಕ್ಕೆ ಭದ್ರಬುನಾದಿ ಹಾಕಿದೆ.

ಪ್ರಾರ್ಥನಾ ಮಂದಿರವಲ್ಲ, ಕಲಾಕೃತಿ

ಸುಲ್ತಾನ್ ಕಬೂಸ್ ಅವರ ಜೀವನ ಒಂದು ತೆರೆದ ಪುಸ್ತಕವಿದ್ದಂತೆ, ಪುಟ ತಿರುಗಿಸಿದಷ್ಟು ಹೊಸ ಮತ್ತು ರೋಚಕ ಸಂಗತಿಗಳು ಸಿಗುತ್ತವೆ. ಮಸ್ಕತ್‌ನಲ್ಲಿರುವ 'ಸುಲ್ತಾನ್ ಕಬೂಸ್ ಗ್ರಾಂಡ್ ಮಾಸ್ಕ್' ಕೇವಲ ಪ್ರಾರ್ಥನಾ ಮಂದಿರವಲ್ಲ, ಅದೊಂದು ಕಲಾಕೃತಿ. ಇದನ್ನು ನಿರ್ಮಿಸುವಾಗ ಸುಲ್ತಾನರು ಜಗತ್ತಿನ ಅತ್ಯುತ್ತಮವಾದದ್ದೇ ಇಲ್ಲಿರಬೇಕು ಎಂದು ಬಯಸಿದ್ದರು. ಈ ಮಸೀದಿಯ ಪ್ರಮುಖ ಆಕರ್ಷಣೆ ಅಲ್ಲಿರುವ ನೆಲಹಾಸು.

ಇದನ್ನು ಇರಾನ್ ದೇಶದ 600 ಪರಿಣತ ನೇಕಾರರು ಸೇರಿ ಬರೋಬ್ಬರಿ 4 ವರ್ಷಗಳ ಕಾಲ ಕೈಯಿಂದಲೇ ನೇಯ್ದರು! ಇದು ಒಂದೇ ತುಂಡಿನ ಕಾರ್ಪೆಟ್ ಆಗಿದ್ದು, 21 ಟನ್ ತೂಕವಿತ್ತು. ಇತ್ತೀಚೆಗೆ ಅಬುಧಾಬಿಯ ಮಸೀದಿ ಇದನ್ನು ಮೀರಿಸುವವರೆಗೂ ಇದೇ ಜಗತ್ತಿನ ಅತಿದೊಡ್ಡ ಕಾರ್ಪೆಟ್ ಆಗಿತ್ತು. ಮಸೀದಿಯ ಮಧ್ಯಭಾಗದಲ್ಲಿ ತೂಗುಹಾಕಿರುವ ದೀಪಗುಚ್ಛವು 800 ಟನ್ ತೂಕವಿದೆ. ಇದರಲ್ಲಿ 6 ಲಕ್ಷಕ್ಕೂ ಹೆಚ್ಚು ಸ್ವರೋವ್ಸ್ಕಿ ಹರಳುಗಳನ್ನು ಬಳಸಲಾಗಿದೆ.

ಇತರೆ ಅರಬ್ ರಾಷ್ಟ್ರಗಳಲ್ಲಿ ಅನ್ಯ ಧರ್ಮದ ಪ್ರಾರ್ಥನಾ ಮಂದಿರಗಳಿಗೆ ಅನುಮತಿ ಸಿಗುವುದು ಕಷ್ಟ. ಆದರೆ ಸುಲ್ತಾನ್ ಕಬೂಸ್, ಒಮಾನ್‌ನಲ್ಲಿ ನೆಲೆಸಿರುವ ಭಾರತೀಯರಿಗೆ ಮತ್ತು ಇತರರಿಗೆ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದರು. ಮಸ್ಕತ್‌ನಲ್ಲಿರುವ ಪುರಾತನ ಶಿವನ ದೇವಾಲಯ ಮತ್ತು ಕೃಷ್ಣನ ದೇವಾಲಯಕ್ಕೆ ಸುಲ್ತಾನರು ರಕ್ಷಣೆ ನೀಡಿದ್ದರು. ಅಷ್ಟೇ ಅಲ್ಲ, ಕ್ರಿಶ್ಚಿಯನ್ ಚರ್ಚ್‌ಗಳನ್ನು ಕಟ್ಟಲು ಸರಕಾರದಿಂದಲೇ ಜಾಗವನ್ನು ಉಡುಗೊರೆಯಾಗಿ ನೀಡಿದ್ದರು. ಒಮ್ಮೆ ಮಸ್ಕತ್‌ಗೆ ಭೇಟಿ ನೀಡಿದ್ದ ಪೋಪ್ ಅವರು, ಸುಲ್ತಾನರ ಈ ಉದಾರ ಗುಣವನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಅವರು ವಿಲಾಸಿ ನೌಕೆ ಹೊಂದಿದ್ದರು!

ಸುಲ್ತಾನ್ ಕಬೂಸ್ ಅವರಿಗೆ ಸಮುದ್ರಯಾನ ಇಷ್ಟವಿದ್ದ ಕಾರಣ, ಅವರು 'ಅಲ್ ಸೈದ್' ಹೆಸರಿನ ಬೃಹತ್ ನೌಕೆಯನ್ನು (Yacht) ಹೊಂದಿದ್ದರು. ಇದು ಜಗತ್ತಿನ ಅತಿದೊಡ್ಡ ವಿಲಾಸಿ ನೌಕೆಗಳಲ್ಲಿ ಒಂದು. ಇದರ ವಿಶೇಷವೇನೆಂದರೆ, ಇದು ಕೇವಲ ಐಷಾರಾಮಿ ಹಡಗಲ್ಲ. ಇದರೊಳಗೆ ಒಂದು ದೊಡ್ಡ ಕನ್ಸರ್ಟ್ ಹಾಲ್ ಇದೆ! 50-60 ಜನ ಸಂಗೀತಗಾರರ ತಂಡ ಹಡಗಿನ ಒಳಗೆ ಕುಳಿತು ಲೈವ್ ಆಗಿ ಸಂಗೀತ ನುಡಿಸಬಲ್ಲಷ್ಟು ದೊಡ್ಡ ವೇದಿಕೆ ಇದರಲ್ಲಿದೆ. ಸುಲ್ತಾನರು ಸಮುದ್ರದ ಮಧ್ಯೆ ಪ್ರಯಾಣಿಸುವಾಗಲೂ ತಮ್ಮಿಷ್ಟದ ಶಾಸ್ತ್ರೀಯ ಸಂಗೀತವನ್ನು ಆನಂದಿಸುತ್ತಿದ್ದರು.

2007ರಲ್ಲಿ 'ಗೋನು' ಎಂಬ ಭೀಕರ ಚಂಡಮಾರುತ ಒಮಾನ್ ಕರಾವಳಿಗೆ ಅಪ್ಪಳಿಸಿತ್ತು. ಮಸ್ಕತ್ ನಗರವೇ ನೀರಿನಲ್ಲಿ ಮುಳುಗಿತ್ತು. ಆಗ ಸುಲ್ತಾನ್ ಕಬೂಸ್ ಅರಮನೆಯಲ್ಲಿ ಕೂರಲಿಲ್ಲ. ಅವರು ತಕ್ಷಣವೇ ರಕ್ಷಣಾ ಕಾರ್ಯಕ್ಕೆ ಇಳಿದರು. ವಿಶೇಷವೆಂದರೆ, ಚಂಡಮಾರುತದಿಂದ ಆದ ನಷ್ಟವನ್ನು ಭರಿಸಲು ಅವರು ವಿದೇಶಗಳಿಂದ ಯಾವುದೇ ಆರ್ಥಿಕ ಸಹಾಯವನ್ನು ಪಡೆಯಲು ನಿರಾಕರಿಸಿದರು. ''ನನ್ನ ದೇಶದ ಜನರನ್ನು ರಕ್ಷಿಸುವ ಶಕ್ತಿ ನನಗಿದೆ'' ಎಂದು ಹೇಳಿ, ಸ್ವಂತ ಬೊಕ್ಕಸದಿಂದಲೇ ಇಡೀ ನಗರವನ್ನು ಕೆಲವೇ ತಿಂಗಳುಗಳಲ್ಲಿ ಮರುನಿರ್ಮಿಸಿದರು.

ಕಬೂಸ್ ಅವರು ರಾಜರಾಗಿದ್ದರೂ, ಕಾನೂನು ಎಲ್ಲರಿಗೂ ಒಂದೇ ಎಂದು ನಂಬಿದ್ದರು. ಅವರು ಮಸ್ಕತ್ ನಗರದಲ್ಲಿ ಕಾರಿನಲ್ಲಿ ಹೋಗುವಾಗ, ಟ್ರಾಫಿಕ್ ಸಿಗ್ನಲ್ ಬಿದ್ದರೆ ತಮ್ಮ ಬೆಂಗಾವಲು ಪಡೆಯನ್ನೂ ನಿಲ್ಲಿಸುತ್ತಿದ್ದರು. ಕೆಂಪು ದೀಪ ಹಸಿರಾಗುವವರೆಗೂ ರಾಜರ ಕಾರು ಸಾಮಾನ್ಯರ ಕಾರಿನಂತೆಯೇ ಕಾಯುತ್ತಿತ್ತು! ಇದು ಅಲ್ಲಿನ ಜನರಿಗೆ ಅವರ ಮೇಲಿದ್ದ ಗೌರವವನ್ನು ಇಮ್ಮಡಿಗೊಳಿಸಿತ್ತು.

ಒಮಾನ್‌ನಲ್ಲಿ ಮರ ಕಡಿಯುವುದನ್ನು ಅವರು ಕಟ್ಟುನಿಟ್ಟಾಗಿ ನಿಷೇಧಿಸಿದ್ದರು. ಮರುಭೂಮಿಯ ದೇಶದಲ್ಲಿ ಹಸಿರು ಉದ್ಯಾನವನಗಳನ್ನು ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಕೊನೆಯಲ್ಲಿ ಏಕಾಂಗಿ

ಅಷ್ಟು ದೊಡ್ಡ ಸಾಮ್ರಾಜ್ಯ ಕಟ್ಟಿದ ಸುಲ್ತಾನರ ವೈಯಕ್ತಿಕ ಜೀವನ ಕೊನೆಯಲ್ಲಿ ಬಹಳ ಒಂಟಿಯಾಗಿತ್ತು. ಅವರಿಗೆ ಕ್ಯಾನ್ಸರ್ ಕಾಯಿಲೆ ಇತ್ತು. ಚಿಕಿತ್ಸೆಗಾಗಿ ಅವರು ಜರ್ಮನಿಗೆ ಹೋಗುತ್ತಿದ್ದರು. ಆದರೆ ಕೊನೆಯ ದಿನಗಳಲ್ಲಿ ಅವರು ಯಾರನ್ನೂ ಹೆಚ್ಚು ಭೇಟಿಯಾಗುತ್ತಿರಲಿಲ್ಲ. ಅವರು ತೀರಿಕೊಂಡಾಗ ಅವರ ಅಂತ್ಯಕ್ರಿಯೆ ಅತ್ಯಂತ ಸರಳವಾಗಿ ನಡೆಯಿತು.

ಬಂಗಾರದ ಗೋರಿ ಅಥವಾ ಸ್ಮಾರಕಗಳನ್ನು ಕಟ್ಟದಂತೆ ಅವರು ಮೊದಲೇ ಹೇಳಿದ್ದರು. ಮಸ್ಕತ್‌ನ ರಾಯಲ್ ಸ್ಮಶಾನದಲ್ಲಿ ಸಾಮಾನ್ಯ ಕಲ್ಲಿನ ಗುರುತಿನೊಂದಿಗೆ ಅವರನ್ನು ಮಣ್ಣು ಮಾಡಲಾಯಿತು.

ಸುಲ್ತಾನ್ ಕಬೂಸ್ ಅವರು ಭಾರತದ ಪುಣೆಯಲ್ಲಿ ಕಲಿತ ಶಿಸ್ತು, ಬ್ರಿಟನ್‌ನಲ್ಲಿ ಕಲಿತ ಮಿಲಿಟರಿ ತರಬೇತಿ ಮತ್ತು ಅರಬ್ ಮಣ್ಣಿನ ಸಂಸ್ಕೃತಿ- ಈ ಮೂರನ್ನೂ ಬೆರೆಸಿ ಒಮಾನ್ ಎಂಬ ಸುಂದರ ದೇಶವನ್ನು ಕಟ್ಟಿದರು. ಅವರೊಬ್ಬ ರಾಜನಿಗಿಂತ ಹೆಚ್ಚಾಗಿ ಒಬ್ಬ 'ದಾರ್ಶನಿಕ' ಆಗಿದ್ದರು.

ಕೋಮಲ ಕುಸುಮವು ಕಠೋರವೆನಿಸುವ ಕಥಾನಕಗಳು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಥವಾ ಮೃದು ವಸ್ತು ಹಿಂಸಿತುಂ ಮೃದುನೈವಾರಭತೇ ಪ್ರಜಾಂತಕಃ...'' ಮತ್ತು ''ಸಾವಲ್ಲಿಗೆ ಕಯ್ದುವಾಯ್ತು ನೆಯ್ದಿಲ ಕುಸುಮಂ...'' ಈ ಎರಡು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ. ಸಂಸ್ಕೃತ/ಕನ್ನಡ ಸಾಹಿತ್ಯವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ತಲಾ ಐದೋ ಹತ್ತೋ ಅಂಕಗಳ ಸುದೀರ್ಘ ಉತ್ತರವನ್ನು ಬಯಸುವ ಪ್ರಶ್ನೆಯ ರೀತಿಯಲ್ಲಿರುವ ಸವಾಲಿದು. ನಾನು ಸಾಹಿತ್ಯವಿದ್ಯಾರ್ಥಿಯಲ್ಲ, ಈ ವಾಕ್ಯಗಳಿರುವ ಸಾಹಿತ್ಯಕೃತಿಗಳನ್ನು ಪೂರ್ಣವಾಗಿ ಓದಿರುವವನಂತೂ ಅಲ್ಲವೇಅಲ್ಲ. ಆದರೂ ಒಂದು ಪ್ರಯತ್ನವೆಂಬಂತೆ ಈ ಎರಡು ವಾಕ್ಯಗಳನ್ನೇ ಇಂದಿನ ಅಂಕಣದ ಹೂರಣಕ್ಕೆ ಕಚ್ಚಾ ಸಾಮಗ್ರಿಯಾಗಿ ಆಯ್ದುಕೊಂಡಿದ್ದೇನೆ. ಇವುಗಳಿಗೆ ಯಥಾಶಕ್ತಿ ನ್ಯಾಯವೊದಗಿಸಬೇಕು ಎಂದುಕೊಂಡಿದ್ದೇನೆ.

ನನಗೆ ಈ ಆಲೋಚನೆ ಏಕೆ ಮತ್ತು ಹೇಗೆ ಬಂತೆಂಬುದನ್ನೂ ತಿಳಿಸುತ್ತೇನೆ. ಲಾಂಗೂಲಾಚಾರ್ಯರ (ಪಾ.ವೆಂ ಆಚಾರ್ಯರ) ಹರಟೆ ಬರಹಗಳ ಸಂಕಲನ 'ಪ್ರಹಾರ' ಓದುತ್ತಿದ್ದೆ. ಅದು ಲೋಕಶಿಕ್ಷಣ ಟ್ರಸ್ಟ್‌ನವರ ಪ್ರಕಟಣೆ. 1965ರಲ್ಲಿ, ಅಂದರೆ ನಾನು ಹುಟ್ಟುವುದಕ್ಕಿಂತಲೂ ಮೊದಲೇ, ಪ್ರಕಟವಾಗಿರುವ ಪುಸ್ತಕ. ಅದರಲ್ಲಿ ಕೊನೆಯ ಲೇಖನ ''ಬ್ರಹ್ಮ ಹೂ ಎಂದ'' ಎಂಬ ಶೀರ್ಷಿಕೆಯದು. ''ಜಗತ್ತಿನಲ್ಲಿ ಯಾವ ದೇಶವಾದರೂ ಪುಷ್ಪಪ್ರಜ್ಞೆಯುಳ್ಳದ್ದಿದ್ದರೆ ಅದು ಭಾರತ. ಇಲ್ಲಿ ಕವಿಗಳು ಪುಷ್ಪವನ್ನು ಜೀವಾಳವಾಗಿ ಮಾಡಿಕೊಂಡಿದ್ದಾರಷ್ಟೇ ಅಲ್ಲ, ಇಲ್ಲಿನ ದೇವರಿಗೆ ಕೂಡ ಹೂವಿಲ್ಲದೆ ನಡೆಯುವಂತಿಲ್ಲ...'' ಎಂದು ಆರಂಭವಾಗುವ ಆ ಲಲಿತಪ್ರಬಂಧದಲ್ಲಿ ಲಾಂಗೂಲಾಚಾರ್ಯರು ಬೇರೆ ಬೇರೆ ದೇವರುಗಳ ಪುಷ್ಪಪ್ರೇಮ, ಬೇರೆಬೇರೆ ಕವಿಗಳಿಂದ ಪುಷ್ಪೋಲ್ಲೇಖಗಳು, ಹೆಂಗಳೆಯರು ಹೂಮಾಲೆ ಕಟ್ಟುವ ಬೇರೆ ಬೇರೆ ರೀತಿಗಳು, ಹೂವುಗಳಂತೆ ಅವುಗಳ ಹೆಸರುಗಳೂ ಮೃದುಮಧುರವಾಗಿರುವುದು, ಒಂದೊಂದು ಹೂವಿನ ಹೆಸರನ್ನು ನೆನಪಿಸಿಕೊಂಡಾಗಲೂ ಅದರ ಪರಿಮಳ ಮನಸ್ಸಲ್ಲೇ ಮೂಡುವುದು... ಇತ್ಯಾದಿಯನ್ನೆಲ್ಲ ಸೋದಾಹರಣವಾಗಿ ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಅದರಲ್ಲಿ ನನ್ನನ್ನು ವಿಶೇಷವಾಗಿ ಆಕರ್ಷಿಸಿದ್ದು- ಮೃದುತ್ವಕ್ಕೆ, ಕೋಮಲತೆಗೆ ರೂಪಕವೆನಿಸುವ ಕುಸುಮವೂ ಕೆಲವೊಮ್ಮೆ ಹೇಗೆ ಕಠೋರವೆನಿಸಬಹುದು ಎಂಬುದಕ್ಕೆ ಲಾಂಗೂಲಾಚಾರ್ಯರು ಸಂಕ್ಷಿಪ್ತವಾಗಿ ಪ್ರಸ್ತಾವಿಸಿದ ಕೆಲವು ನಿದರ್ಶನಗಳು. ಅದು ಲೇಖನದ ಕ್ಲೈಮಾಕ್ಸ್. ಅದನ್ನು ಅವರ ವಾಕ್ಯಗಳಲ್ಲೇ ಓದಿದರೆ ಚೆನ್ನ.

''ನೀವು ಜನ್ನನ ಯಶೋಧರಚರಿತ ಓದಿದ್ದೀರಾ? ಅದರಲ್ಲಿ ಒಂದು ಕೌತುಕದ ಪ್ರಸಂಗವಿದೆ. ಆಗಿನ ಕಾಲದಲ್ಲಿ ಅರಸರು ತಾವರೆಯ ದೇಟು ಸಹಿತ ಮೊಗ್ಗೆಯನ್ನು ಕೈಯಲ್ಲಿ ಹಿಡಿದುಕೊಂಡೇ ತಿರುಗುತ್ತಿದ್ದರೆಂದು ತೋರುತ್ತದೆ. ಈ ಲೀಲಾಕಮಲದಿಂದ ಯಶೋಧರನು ರಾಣಿಗೆ ಮೆತ್ತಗೆ ಹೊಡೆಯುತ್ತಾನೆ. ರಾಣಿ ಅಷ್ಟಕ್ಕೇ ಮೂರ್ಛೆ ಹೋಗುತ್ತಾಳೆ. ಕೋಮಲತೆಗೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ? ಆದರೆ ಅವಳ ವಿಟ- ಆನೆಮಾವುತ ಹಿಂದಿನರಾತ್ರಿ ಸಿಟ್ಟಿಗೆದ್ದು ಅವಳನ್ನು ಕಟ್ಟಿಗೆಯಿಂದ ಬಡಿದಾಗ ಏನೂ ಆಗಿದ್ದಿಲ್ಲವಂತೆ. ಪ್ರೀತಿಪಾತ್ರನ ಕೊರಡೆಪೆಟ್ಟೂ ಗಂಡನ ಪುಷ್ಪತಾಡನಕ್ಕಿಂತ ಅವಳಿಗೆ ಮೃದುವೆನಿಸಿತು! ಹೂವಿನೊಡನೆ ಹೆಣೆದ ಕವಿಕಲ್ಪನೆಗಳಲ್ಲೆಲ್ಲ ಅತಿ ಕಟು-ಮಧುರವಾದದ್ದು ಇಂದುಮತಿಯ ಮರಣಪ್ರಸಂಗ. ಆಕೆ, ಆಕಾಶದಿಂದ ಬಿದ್ದ ಒಂದು ಹೂಮಾಲೆಯ ಪೆಟ್ಟಿನಿಂದು ಸಾಯುತ್ತಾಳೆ. ಈ ಪ್ರಸಂಗವನ್ನು ಕುರಿತು ಕಾಳಿದಾಸ ಬರೆದ ಪಂಕ್ತಿಯು ವಿಶ್ವಸಾಹಿತ್ಯದ ಅದ್ವಿತೀಯ ರತ್ನವೆಂದು ನನ್ನೆಣಿಕೆ. ಅವನು ಹೇಳುತ್ತಾನೆ: 'ಅಥವಾ ಮೃದು ವಸ್ತು ಹಿಂಸಿತುಂ ಮೃದುನೈವಾರಭತೇ ಪ್ರಜಾಂತಕಃ'- ಮೃದುವಾದ ವಸ್ತುವನ್ನು ಹಿಂಸಿಸಲು ಯಮ ಮೃದುವಾದ ಆಯುಧವನ್ನೇ ಪ್ರಯೋಗಿಸುತ್ತಾನೇನೋ!''

ಪಾ.ವೆಂ. ಆಚಾರ್ಯರು ಇವೆರಡೂ ಕಥಾನಕಗಳನ್ನು ತಮ್ಮ ಪುಷ್ಪಪ್ರಬಂಧದಲ್ಲಿ ವೆರಿವೆರಿ ಬ್ರೀಫ್ ಆಗಿ 'ಟಚ್-ಆ್ಯಂಡ್-ಗೋ' ಎಂಬಂತೆ ಉಲ್ಲೇಖಿಸಿದ್ದಾರೆ. ಆದರೆ ಇವುಗಳನ್ನು ಬೆಂಬತ್ತಿದರೆ, ಅಗೆದು-ಬಗೆದು ನೋಡಿದರೆ ಎರಡು ಅದ್ಭುತವಾದ ಪುರಾಣಕಥೆಗಳು ನಮ್ಮೆದುರಿಗೆ ತೆರೆದುಕೊಳ್ಳುತ್ತವೆ! ಅವುಗಳನ್ನೀಗ ಆಸ್ವಾದಿಸೋಣ.

'ಯಶೋಧರ ಚರಿತೆ' ಎಂಬ ಪುಸ್ತಕದ ಪಿಡಿಎಫ್ ನನ್ನ ಸಂಗ್ರಹದಲ್ಲಿದೆ. ಇದು ಮೈಸೂರು ವಿಶ್ವವಿದ್ಯಾಲಯವು ಕನ್ನಡ ಗ್ರಂಥಮಾಲೆ ಸರಣಿಯಲ್ಲಿ 1943ರಲ್ಲಿ (ಅಂದರೆ ಭಾರತ ಸ್ವಾತಂತ್ರ್ಯಪೂರ್ವದಲ್ಲಿ) ಪ್ರಕಟಿಸಿದ ಗ್ರಂಥ. ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯನವರು ಪ್ರಧಾನಸಂಪಾದಕರಾಗಿದ್ದ ಆ ಸರಣಿಯಲ್ಲಿ ಜನ್ನನ ಯಶೋಧರ ಚರಿತೆಯನ್ನು ಕುರಿತ ಈ ಪುಸ್ತಕವನ್ನು ಬರೆದವರು ಕೆ.ವಿ. ರಾಘವಾಚಾರ್. ಕಥಾಸಾರಾಂಶ, ಪುಸ್ತಕದಿಂದ ಯಥಾವತ್ತಾಗಿ ಎತ್ತಿಕೊಂಡದ್ದು, ಹೀಗಿದೆ (ಇಲ್ಲಿರುವ ಗ್ರಾಂಥಿಕ ಕನ್ನಡಭಾಷೆ/ಶೈಲಿ ಓದಿ ಅರ್ಥೈಸಿಕೊಳ್ಳುವುದು ತುಸು ಕಷ್ಟವಾದರೂ, ಕಥೆಯ ಗಾಢತೆಯು ನಮ್ಮ ಅನುಭವಕ್ಕೆ ಬರಲು ಈ ಭಾಷೆಯಲ್ಲಿ ಓದುವುದೇ ಲೇಸು):

''ಯಶೌಘನು ಅವಂತಿದೇಶದ ಉಜ್ಜಯಿನೀಪುರದ ಅರಸು. ಅವನ ಮಡದಿ ಚಂದ್ರಮತಿ. ಅವರ ಮಗ ಯಶೋಧರ. ಅವನ ಮನಃಪ್ರಿಯೆ ಅಮೃತಮತಿ. ಯಶೌಘ ಒಮ್ಮೆ ಕನ್ನಡಿಯಲ್ಲಿ ತಲೆನರೆ ಕಂಡು ನಿರ್ವೇಗಗೊಂಡು ಮಗನಿಗೆ ಪಟ್ಟಕಟ್ಟಿ ತಪಸ್ಸಿಗೆ ಹೋಗುತ್ತಾನೆ. ಯಶೋಧರ ಅಮೃತಮತಿಯರು ಖಚರ ದಂಪತಿಗಳಂತೆ ಕಂಗೊಳಿಸಿ ವಿಹರಿಸುತ್ತಿರುತ್ತಾರೆ. ಒಮ್ಮೆ ಆ ಹೃದಯಪ್ರಿಯರು ಸೆಜ್ಜೆಮನೆಯ ಮಂಚದ ಮೇಲೆ ಮಲಗಿರುವಾಗ ನಲ್ನಿಶೆಯ ನಿಶ್ಶಬ್ದತೆಯಲ್ಲಿ ಅಮೃತಮತಿಗೆ ಇನಿದನಿಯೊಂದು ಕೇಳಿಬರುತ್ತದೆ. ಪಕ್ಕದ ಗಜಶಾಲೆಯ ಮಾವಟಿಗನು ತನ್ನ ವಿನೋದಕ್ಕೆ ಹಾಡಿಕೊಳ್ಳುತ್ತಿದ್ದ ಆ ಹಾಡಿನಿಂದ ಅಮೃತಮತಿಯ ನಿದ್ದೆ ತಿಳಿಯುತ್ತದೆ. ನಿದ್ದೆ ತಿಳಿದು ಆಲಿಸಿ, ಅರಸಿಯು ರಾಗದ ಸವಿಗೆ ಒಳಸೋತು, ಗೀತೆ ಮುಟ್ಟಿದ ಮನವನ್ನೇ ತೊಟ್ಟನೆ ಪಸಾಯದಾನ ಕೊಟ್ಟುಬಿಡುತ್ತಾಳೆ. ಅತಿ ನೂತನ ಗೀತದ ರಾಗಗಳು ಒಂದರಮೇಲೊಂದು ಕಿವಿಗೆ ಸೊದೆಯೆರೆಯುತ್ತಿರಲು, ರಾಣಿಯ ರಾಗ ಕೆರಳಿ ಅವನನ್ನು ನೋಡುವ ಕೂಡುವ ಚಿಂತೆ ಕಡಲುವರಿಯುತ್ತದೆ. ಬೆಳಗಾಗುವುದೇ ತಡ ತನ್ನ ಮನದ ಕೆಳದಿಗೆ ಮನಬಿಚ್ಚಿ ಹೇಳಿ ಅವಳನ್ನು ಗೀತದ ಕಣಿಯನಲ್ಲಿಗೆ ಕಳಿಸುತ್ತಾಳೆ. ಅವಳು ಹೋಗಿ ಒಬ್ಬ ಅಷ್ಟವಂಕನನ್ನು ನೋಡಿ ಹೇಸಿ, ವಿಧಿಯನ್ನು ಬೈದಿಡುತ್ತಾಳೆ. ಮಾತಾಡದೆಯೆ ಮರಳುತ್ತಾಳೆ. ಕೆಳದಿಯ ದಾರಿಯೇ ಕಣ್ಣಾಗಿ ನಿಂತಿದ್ದ ರಾಣಿಯ ಬಳಿ ಬಂದು 'ಇಂಥ ಕಾಮದೇವನನ್ನು ಎಲ್ಲಿ ಹುಡುಕಿ ಒಲಿದೆ?' ಎಂದು ವ್ಯಂಗ್ಯವಾಗಿ ನುಡಿಯುತ್ತಾಳೆ. ಕಾಮದ ಕೆರಳಿನಿಂದ ಮರುಳುಮತಿಯಾದ ರಾಣಿ ಆ ವ್ಯಂಗ್ಯ ತಿಳಿಯಲಾರದೆ ನಲಿದು, ನೂತನ ನಲ್ಲನ ಚೆಲುವನ್ನು ಕೇಳಲು ತವಕಿಸುತ್ತಾಳೆ. ಅಷ್ಟವಂಕನ ವಿಕಾರ ವರ್ಣನೆಯನ್ನು ಕೇಳಿ ಪುಳಿಂದನ ಕಣೆಗಟ್ಟಿ ನಿಂತ ವನಹರಿಣಿಯಂತೆ ನಿಶ್ಚೇಷ್ಟಳಾಗುತ್ತಾಳೆ. ಆದರೂ, ಕೈಮೀರಿದ ಕಾಮೋದ್ರೇಕದ ಭರದಿಂದ ತಪ್ಪಿಸಿಕೊಳ್ಳಲಾರದವಳಾಗಿ, ಪೊಲ್ಲಮೆಯೇ ಲೇಸು, ನಲ್ಲರ ಮೆಯ್ಯೊಳೆಂದು ಮರುಗಳಿಗೆಯೇ ಸಮಾಧಾನ ತಂದುಕೊಳ್ಳುತ್ತಾಳೆ. ದೂತಿಗೆ ಲಂಚ ಕೊಟ್ಟು ಮಾವಟಿಗನನ್ನು ಹೊಂದಿಸಿಕೊಂಡು ಹಗಲಿರುಳೂ ತನ್ನ ಬಿಡುಹೊತ್ತನ್ನೆಲ್ಲ ಅವನಲ್ಲಿಯೇ ಕಳೆಯುತ್ತಿರುತ್ತಾಳೆ. ಬೇವನ್ನು ಮೆಚ್ಚಿದ ಕಾಗೆಗೆ ಮಾವು ಇಳಿದಾಗುವಂತೆ, ಅಮೃತಮತಿಗೆ ಬರುಬರುತ್ತ ಯಶೋಧರನಲ್ಲಿ ಅನುರಾಗ ಬತ್ತುತ್ತದೆ.

ಇದರ ಮರ್ಮವನ್ನು ತಿಳಿಯಬೇಕೆಂದು ದೊರೆ ಒಂದಿರುಳು ನಿದ್ದೆ ಬಂದವನಂತೆ ಮಲಗಿರಲು, ರಾಣಿ ಮೆಲ್ಲನೆ ತೋಳ ಸೆರೆಬಿಡಿಸಿಕೊಂಡು ಜಾರನಲ್ಲಿಗೆ ನುಸುಳುತ್ತಾಳೆ. ಅವಳು ಅರಿಯದಂತೆ ಅರಸನೂ ಬೆನ್ನ ಹಿಂದೆಯೇ ಕತ್ತಿಹಿರಿದು ಹೋಗುತ್ತಾನೆ. ಅಮೃತಮತಿ ತಡಮಾಡಿದ್ದಕ್ಕೆ ಅಷ್ಟವಂಕನು ಮುಳಿದು ಕಲಹಂಸಕ್ಕೆ ಗಿಡುಗ ಎರಗುವಂತೆ ಎರಗಿ ಬಡಿಯುತ್ತಾನೆ. ರಾಣಿ ಅವನ ಕಾಲ ಮೇಲೆ ಬಿದ್ದು ಹೊರಳಿ 'ಪಾತಕಿ ದೊರೆಯಿಂದ ತಡವಾಯಿತು; ನೀನುಳಿದರೆ ಸಾಯುವವಳು ನಾನು, ಮಿಕ್ಕ ಗಂಡಸರು ಸಮಸೋದರರು ನನಗೆ' ಎಂದು ತಿಳಿಸಿ ಸಮಾಧಾನ ಮಾಡುತ್ತಾಳೆ. ದೊರೆಯ ಮನ ಕನಲಿ ಒಡನೆಯೇ ಇಬ್ಬರನ್ನೂ ಸೀಳಿಬಿಡಬೇಕೆಂದು ಕೈಯ ಕತ್ತಿ ನಿಮಿರುತ್ತದೆ. ಆದರೆ ಮರುಗಳಿಗೆಯೇ ಧೃತಿಗೊಂಡು ಆ ಹುಳುಕರನ್ನು ಹೊಡೆಯಲು ಹೇಸಿ ಸುಮ್ಮನೆ ಹಿಂದಿರುಗಿ ಬಂದು ಮಲಗಿಕೊಳ್ಳುತ್ತಾನೆ. ರಾಣಿಯೂ ಬಂದು ಮುನ್ನಿನಂತೆ ಪಕ್ಕದಲ್ಲಿ ಮಲಗಿಕೊಳ್ಳುತ್ತಾಳೆ. ಬೆಳಗ್ಗೆ ಎದ್ದು ದೊರೆ ಸಂಸಾರಕ್ಕೆ ಬೇಸತ್ತು ತೊರೆದುಹೋಗಲು ತೀರ್ಮಾನಿಸುತ್ತಾನೆ.

ರಾಣಿ ಎದ್ದೊಡನೆ ದೊರೆ ನಗೆನುಡಿಯ ನೆವವನ್ನು ತೆಗೆದು ನೈದಿಲೆ ಹೂವಿಂದ ಅಮೃತಮತಿಯನ್ನು ಇಕ್ಕುತ್ತಾನೆ. ಅಷ್ಟವಂಕನ ಬಾರೇಟು ತಿಂದು ಉಳಿದ ಆ ಸುಕುಮಾರಿ ಇಂದು ಆ ಹೂವೇಟಿಂದ ಮೂರ್ಛೆಹೋಗುತ್ತಾಳೆ. ಅವಳ ಅಣಕಕ್ಕೆ ಅಸಹ್ಯಿಸಿ 'ಅಯ್ಯೋ! ಅಂದಿನ ಸಾವು ದೈವದಿಂದ ತಪ್ಪಿತು; ಇಂದು ನೈದಿಲೆ ಸಾವಿಗಾಯ್ತು' ಎಂದು ಅರಸು ಕೊಂಕಿ ನುಡಿಯುತ್ತಾನೆ. ತನ್ನ ಗುಟ್ಟು ಬಯಲಾದ್ದನ್ನು ತಿಳಿದು ರಾಣಿ ಮರುಮಾತಾಡದೆ ಬೇಸತ್ತಂತೆ ಇದ್ದುಬಿಡುತ್ತಾಳೆ''.

'ಜನ್ನ ಕವಿಯ ಯಶೋಧರ ಚರಿತೆಯ ಗದ್ಯಾನುವಾದ: ತೆಕ್ಕುಂಜ ಗೋಪಾಲಕೃಷ್ಣಭಟ್ಟ'- ಇದು ಕನ್ನಡ ಸಾಹಿತ್ಯಪರಿಷತ್ತು 1976ರಲ್ಲಿ ಪ್ರಕಟಿಸಿದ, ಕಥೆಯನ್ನು ತಿಳಿದುಕೊಳ್ಳಲಿಕ್ಕೆ ನಾನು ಪರಾಮರ್ಶಿಸಿದ ಇನ್ನೊಂದು ಗ್ರಂಥ. ಇದರಲ್ಲಿ ಜನ್ನನ ಕೃತಿಯ ಪ್ರತಿಯೊಂದು ಪದ್ಯದ ಸುಂದರವಾದ ಗದ್ಯಾನುವಾದ ಇದೆ. ಯಶೋಧರ-ಅಮೃತಮತಿಯರ ದಾಂಪತ್ಯ ಹಾಲುಜೇನಿನಂತಿದ್ದಾಗಿನ ವರ್ಣನೆಯಲ್ಲಂತೂ ಶೃಂಗಾರರಸ ಉಕ್ಕಿಹರಿಯುತ್ತದೆ. ಅಮೃತಮತಿಯ ಮತಿಯನ್ನು ಮಾವುತ ಮತ್ತವನ ಹಾಡು ಪೂರ್ಣವಾಗಿ ಆವರಿಸಿಕೊಂಡಮೇಲಿನ ಭಾಗಗಳೂ ಬಲುರೋಚಕವೇ. ಎರಡನೆಯ ಅವತಾರ(ಅಧ್ಯಾಯ)ದ 69ನೆಯ ಪದ್ಯದಲ್ಲಿ ''ಸಾವಲ್ಲಿಗೆ ಕಯ್ದುವಾಯ್ತು ನೆಯ್ದಿಲ ಕುಸುಮಂ'' ಎಂಬ ಸಾಲು ಬರುತ್ತದೆ. ಯಶೋಧರನು ನೈದಿಲೆಯಿಂದ ಹೊಡೆದಾಗ ಅಮೃತಮತಿ ಸಾಯಲಿಲ್ಲ, ಒಮ್ಮೆ ಮೂರ್ಛೆ ಹೋದಳು ಅಷ್ಟೇ. ಅಥವಾ, ಅದು ಅವಳಾಡಿದ ನಾಟಕವಿರಬಹುದು. ಆಮೇಲೆ ಯಶೋಧರ ತನ್ನ ತಾಯಿ ಚಂದ್ರಮತಿಯಲ್ಲಿಗೆ ಹೋಗುತ್ತಾನೆ; ಆಕೆ ಸಮಾಧಾನ ಮಾಡಿ ದುಃಸ್ವಪ್ನಪರಿಹಾರಕ್ಕೆ ದೇವಿಗೆ ಪ್ರಾಣಿಬಲಿ ಕೊಡುವಂತೆ ಸಲಹೆ ಕೊಡುತ್ತಾಳೆ; ಜೈನಧರ್ಮದವರು ಅಹಿಂಸಾವಾದಿಗಳಾದ್ದರಿಂದ ಹಿಟ್ಟಿನ ಕೋಳಿಯನ್ನು ಬಲಿ ಕೊಡಲಾಗುತ್ತದೆ; ಅಮೃತಮತಿಯು ಗಂಡನನ್ನೂ ಅತ್ತೆಯನ್ನೂ ಔತಣಕ್ಕೆ ಕರೆದು ಅಡುಗೆಯಲ್ಲಿ ವಿಷ ಬೆರೆಸಿ ಇಬ್ಬರನ್ನೂ ಕೊಂದುಬಿಡುತ್ತಾಳೆ; ಸತ್ತ ತಾಯಿ-ಮಗ ನಾನಾ ಪಶುಪಕ್ಷಿಗಳಾಗಿ ಏಳೇಳು ಜನ್ಮಗಳನ್ನು ತಳೆಯುತ್ತಾರೆ... ಅಂತೆಲ್ಲ ಕಥೆ ಮತ್ತಷ್ಟು ರೋಚಕವಾಗಿ ಮುಂದುವರಿಯುತ್ತದೆ.

ಪಾ.ವೆಂ ಆಚಾರ್ಯರು ಪ್ರಸ್ತಾವಿಸಿದ ಎರಡನೆಯ ಕಥೆ ಇಂದುಮತಿಯದು. ಕಾಳಿದಾಸನ ರಘುವಂಶಮ್ ಮಹಾಕಾವ್ಯದಲ್ಲಿ ಸವಿವರವಾಗಿ ಬರುತ್ತದೆ. ಇದು ಅಪ್ಸರೆ ಹರಿಣಿಯ ಕಥೆಯೂ ಹೌದು! ಸ್ವರ್ಗದಲ್ಲಿ ಇಂದ್ರನ ಆದೇಶಗಳನ್ನು ಪಾಲಿಸುತ್ತಿದ್ದ ಎಲ್ಲ ಅಪ್ಸರೆಯರಂತೆ ಅಪ್ಸರೆ ಹರಿಣಿಯೂ ಒಬ್ಬ ಮೋಹಕ ಸುಂದರಿ. ಆಕೆಯ ಒನಪು ವೈಯಾರಗಳನ್ನು ಕಂಡರೆ ಎಂಥವರಾದರೂ ವಿಚಲಿತರಾಗಬೇಕು. ಒಮ್ಮೆ ತೃಣಬಿಂದು ಎಂಬ ಋಷಿಯು ತಪಸ್ಸಿನಲ್ಲಿ ನಿರತರಾಗಿದ್ದಾಗ ಅದನ್ನು ಕಂಡ ಇಂದ್ರನಿಗೆ ಆತಂಕವುಂಟಾಗುತ್ತದೆ. ಋಷಿಯ ತಪಸ್ಸಿನ ಪ್ರಭಾವವು ತನಗೂ ಮತ್ತು ದೇವವೃಂದಕ್ಕೂ ಸಂಚಕಾರ ತರಬಹುದೆಂದು ಇಂದ್ರ ಹೆದರಿಕೊಳ್ಳುತ್ತಾನೆ. ತೃಣಬಿಂದು ಋಷಿಯ ತಪೋಭಂಗ ಮಾಡಲೆಂದು ಹರಿಣಿಗೆ ಆದೇಶವೀಯುತ್ತಾನೆ. ಪ್ರಭುವಿನ ಆದೇಶವನ್ನು ಪರಿಪಾಲಿಸುತ್ತ ಹರಿಣಿಯು ತೃಣಬಿಂದುವಿನ ತಪೋಭಂಗ ಮಾಡಿ ಅವರ ಪರಿಶ್ರಮವನ್ನೆಲ್ಲಾ ವ್ಯರ್ಥವಾಗಿಸುತ್ತಾಳೆ. ತನ್ನ ಚಿತ್ತಚಾಂಚಲ್ಯಕ್ಕೆ ಕಾರಣಳಾದ ಹರಿಣಿಯನ್ನು ಕಂಡ ಋಷಿ ತೃಣಬಿಂದುವು ಅವಳಿಗೆ ಮನುಷ್ಯಳಾಗಿ ಭೂಲೋಕದಲ್ಲಿ ಹುಟ್ಟುವಂತೆ ಶಾಪವೆಸಗುತ್ತಾರೆ. ಹರಿಣಿ ಆ ಮಹರ್ಷಿಯಲ್ಲಿ ಕ್ಷಮೆ ಯಾಚಿಸುತ್ತಾಳೆ. ತಾನು ತಪೋಭಂಗ ಮಾಡಿದ್ದರಲ್ಲಿ ಯಾವುದೇ ರೀತಿಯ ಸ್ವಾರ್ಥವಾಗಲೀ ಆಸಕ್ತಿಯಾಗಲೀ ಇರಲಿಲ್ಲ, ಇಂದ್ರನ ಆಜ್ಞಾಪಾಲನೆಗಾಗಿಯಷ್ಟೇ ಆ ಕೃತ್ಯವನ್ನೆಸಗಿದೆ ಎಂದು ಸ್ಪಷ್ಟವಾಗಿ ತಿಳಿಸುತ್ತಾಳೆ. ಶಾಪ ವಿಮೋಚನೆಯ ದಾರಿ ಸೂಚಿಸಬೇಕಾಗಿ ಋಷಿಯಲ್ಲಿ ವಿನಯದಿಂದ ಬೇಡಿಕೊಳ್ಳುತ್ತಾಳೆ. ಇದನ್ನು ಕೇಳಿದ ತೃಣಬಿಂದುವಿನ ಮನಸು ಶಾಂತವಾಗಿ, ''ಆಕಾಶದಿಂದ ಬಿದ್ದ ಹೂವೊಂದು ನಿನ್ನ ಶಾಪವಿಮೋಚನೆಗೆ ಕಾರಣವಾಗಲಿದೆ. ಆಮೇಲೆ ನೀನು ಅಪ್ಸರೆಯಾಗಿ ಸ್ವರ್ಗಕ್ಕೆ ಮರಳಬಹುದು'' ಎನ್ನುತ್ತಾರೆ. ತನ್ಮೂಲಕ ಹರಿಣಿಗಿತ್ತ ಶಾಪದ ಕಾಠಿನ್ಯವನ್ನೂ ಅವಧಿಯನ್ನೂ ಸೀಮಿತಗೊಳಿಸುತ್ತಾರೆ. ಆದರೂ ಶಾಪ ಅಂದಮೇಲೆ ಶಾಪವೇ. ಹಿಂಪಡೆಯುವಂತಿಲ್ಲ.

ಶಾಪದ ಫಲವಾಗಿ ಅಪ್ಸರೆ ಹರಿಣಿಯು ವಿದರ್ಭದ ಅರಸನಾಗಿದ್ದ ಭೋಜನ ಸುಪುತ್ರಿಯಾಗಿ ಜನಿಸುತ್ತಾಳೆ. ಇಂದುಮತಿ ಎಂದು ಅವಳಿಗೆ ನಾಮಕರಣವಾಗುತ್ತದೆ. ಏಷ್ಟೆಂದರೂ ಆಕೆ ಅಪ್ಸರೆ ಹರಿಣಿಯ ಪುನರ್ಜನ್ಮ, ಆದ್ದರಿಂದಲೇ ನೋಡುಗರ ಕಣ್ಮನಗಳನ್ನು ಸೆಳೆಯುವ ಅಪೂರ್ವವಾದ ಸೌಂದರ್ಯ ಮತ್ತು ಲಾವಣ್ಯ ಅವಳಲ್ಲಿ ತುಂಬಿತುಳುಕುತ್ತಿರುತ್ತದೆ. ಸುಕೋಮಲೆ, ಸುಗುಣೆ ಮತ್ತು ಅತೀವ ಸುಂದರಿಯಾದ ಮಗಳ ವಿವಾಹವನ್ನು ನೆರವೇರಿಸಲು ರಾಜ ಭೋಜನು ಸ್ವಯಂವರವನ್ನು ಏರ್ಪಡಿಸುತ್ತಾನೆ. ಹತ್ತುಹಲವು ರಾಜ್ಯಗಳ ರಾಜಕುಮಾರರು ಸ್ವಯಂವರದಲ್ಲಿ ಪಾಲ್ಗೊಳ್ಳುತ್ತಾರೆ. ಕಾಳಿದಾಸನು ಇಂದುಮತಿಯನ್ನು 'ದೀಪಶಿಖಾ (ಬೆಳಕಿನ ಪಂಜು) ಎಂದು ಉಪಮಿಸಿದ್ದು ಈ ಸಂದರ್ಭದಲ್ಲೇ. ಸ್ವಯಂವರಕ್ಕೆಂದು ಕುಳಿತಿದ್ದ ರಾಜಕುಮಾರರ ಸಾಲಿನಲ್ಲಿ ಒಬ್ಬೊಬ್ಬರ ಮುಂದೆಯೂ ಇಂದುಮತಿ ನಿಂತಾಗ ಅವರ ಮುಖ ಬೆಳಗುತ್ತಿತ್ತು, ಆಕೆ ಮಾಲೆಹಾಕದೆ ಮುಂದೆ ಸರಿದಾಗ ಅವರ ಮುಖ ಕಪ್ಪಿಡುತ್ತಿತ್ತು- ರಾತ್ರಿಯಲ್ಲಿ ಪಂಜು ಹಿಡಿದು ಸಾಗುವಾಗ ಒಂದೊಂದೇ ಕಟ್ಟಡವು ತಾತ್ಕಾಲಿಕವಾಗಿ ಬೆಳಗುವಂತೆ. ಇಕ್ಷ್ವಾಕು ವಂಶದ ಅಜನೆಂಬ ರಾಜಕುಮಾರನು ಇಂದುಮತಿಯ ಮನಗೆಲ್ಲುತ್ತಾನೆ. ಅವರೀರ್ವರ ವಿವಾಹ ಸಂಪನ್ನವಾಗುತ್ತದೆ. ಆಮೇಲೆ ಅಜನ ತಂದೆ ರಘುಮಹಾರಾಜನು ಅಜನಿಗೆ ಪಟ್ಟಾಭಿಷೇಕ ಮಾಡಿ ವಾನಪ್ರಸ್ಥಕ್ಕೆ ಹೊರಡುತ್ತಾನೆ. ಇಂದುಮತಿಗೆ ಗಂಡುಮಗು ಹುಟ್ಟುತ್ತದೆ. ದಶರಥನೆಂದು ನಾಮಕರಣ ಮಾಡುತ್ತಾರೆ. ದಶರಥನ ಜನನಾನಂತರ ಅಜ ಮಹಾರಾಜ ಮತ್ತು ಇಂದುಮತಿ ದಾಂಪತ್ಯಸುಖವನ್ನು ಸವಿಯುತ್ತ ಸಾಕಷ್ಟು ಸಮಯ ಕಳೆಯುತ್ತಾರೆ. ಹಾಗೆ ಒಮ್ಮೆ, ರಾಜಧಾನಿಗೆ ಸನಿಹದಲ್ಲೇ ಇದ್ದ ಉದ್ಯಾನಕ್ಕೆ ರಾಣಿ ಇಂದುಮತಿ ಮತ್ತು ಅಜ ಮಹಾರಾಜನು ವಿಹಾರಕ್ಕೆಂದು ಹೋಗುತ್ತಾರೆ. ಅಲ್ಲಿ ಅವರು ಪರಸ್ಪರ ಸಾಂಗತ್ಯವನ್ನು ಆಸ್ವಾದಿಸುತ್ತ ವಿರಮಿಸುತ್ತ ಪ್ರಪಂಚವನ್ನೇ ಮರೆತಿರುತ್ತಾರೆ. ಆ ಸಮಯಕ್ಕೆ ದಕ್ಷಿಣ ಸಮುದ್ರತೀರದ ಗೋಕರ್ಣದಲ್ಲಿ ನೆಲೆಸಿದ್ದಂಥ ಶಂಕರನನ್ನು ಕಾಣಲು ನಾರದ ಮಹಾಮುನಿಗಳು ಆಕಾಶಮಾರ್ಗವಾಗಿ ಧಾವಿಸುತ್ತಿರುವಾಗ ಅವರು ಧರಿಸಿದ್ದ ಹೂವಿನಮಾಲೆ ಕೆಳಗೆ ಬೀಳುತ್ತದೆ. ಅದು ಬಿದ್ದದ್ದೆಲ್ಲಿ? ಉದ್ಯಾನದಲ್ಲಿ ವಿಹರಿಸುತ್ತಿದ್ದ ಇಂದುಮತಿಯ ಮೇಲೆ! ಅತಿಯಾದ ಮಕರಂದ ಮತ್ತು ಸುಗಂಧದಿಂದ ಕೂಡಿದ ದೇವಲೋಕದ ಆ ಹೂಮಾಲೆಯು ಐಹಿಕ ಬಳ್ಳಿಗಳ ಋತುಮಾನದ ಸೊಗಸನ್ನು ಮೀರಿಸಿದ್ದು ಗಾಳಿಯಲ್ಲಿ ತೇಲಿ ಬಂದು ರಾಜನಿಗೆ ಅತ್ಯಂತ ಪ್ರಿಯಕರಳಾದ ಇಂದುಮತಿಯ ಎದೆಯನ್ನು ಆಶ್ರಯಿಸಿತು... ಎಂದು ಕಾಳಿದಾಸನ ವರ್ಣನೆ.

ಹೂಮಾಲೆಯ ಸ್ಪರ್ಶವಾದದ್ದೇ ತಡ, ಇಂದುಮತಿಯ ಉಸಿರು ನಿಂತುಹೋಗುತ್ತದೆ. ಋಷಿ ತೃಣಬಿಂದುವಿನ ಮಾತುಗಳಂತೆಯೇ ಇಂದುಮತಿಯಾಗಿ ಜನ್ಮ ತಾಳಿದ್ದ ಅಪ್ಸರೆ ಹರಿಣಿಯ ಶಾಪ ವಿಮೋಚನೆಯಾಗುತ್ತದೆ. ಅಪ್ಸರೆ ಹರಿಣಿ ಇಹಲೋಕದ ನರಶರೀರವನ್ನು ತ್ಯಜಿಸಿ ಪುನಃ ಸ್ವರ್ಗಕ್ಕೆ ತೆರಳುತ್ತಾಳೆ. ಇಂದುಮತಿಯನ್ನು ಕಳೆದುಕೊಂಡ ಅಜ ದುಃಖತಪ್ತನಾಗುತ್ತಾನೆ. ತನ್ನ ಅರಸಿಯಿಲ್ಲದೆ ತಾನೂ ಉಳಿಯೆನು ಎಂಬ ವಿರಕ್ತಿಯಿಂದಲೇ ಜೀವನ ಸಾಗಿಸುತ್ತಾನೆ. ಪತ್ನಿಯನ್ನು ಕಳೆದುಕೊಂಡ ಶೋಕದಿಂದ ಹೊರಬರಲು ಅವನಿಗೆ ಸಾಧ್ಯವಾಗುವುದೇ ಇಲ್ಲ. ಕೊನೆಗೂ ಗಂಗಾ-ಸರಯೂ ನದಿಗಳ ಸಂಗಮದಲ್ಲಿ ದೇಹತ್ಯಾಗ ಮಾಡುತ್ತಾನೆ. ಸ್ವರ್ಗದಲ್ಲಿ ಇಂದುಮತಿ ಅರ್ಥಾತ್ ಅಪ್ಸರೆ ಹರಿಣಿಯನ್ನು ಸೇರಿಕೊಳ್ಳುತ್ತಾನೆ. ಆದರೆ ಭೂಮಿಯ ಮೇಲೆ ಅವರ ಮಗ ದಶರಥನು ಅನಾಥನಾಗುತ್ತಾನೆ. ಆಮೇಲಿನ 'ರಾಮಾಯಣ' ನಮಗೆ ಬಹುತೇಕ ಗೊತ್ತಿರುವಂಥದ್ದೇ.

ಅಂದಹಾಗೆ ಪಾ.ವೆಂ ಆಚಾರ್ಯರು ಆ ಹರಟೆಸಂಕಲನಕ್ಕೆ 'ಪ್ರಹಾರ' ಎಂಬ ಹೆಸರನ್ನೇಕೆ ಇಟ್ಟಿರಬಹುದೆಂಬುದರ ವಿವರಣೆಗಳಿಲ್ಲ. ಆ ಶೀರ್ಷಿಕೆಯದೊಂದು ಹರಟೆ ಅದರಲ್ಲಿದೆಯಾ ನೋಡಿದರೆ ಇಲ್ಲ. ಬಹುಶಃ ಪುಷ್ಪಪ್ರಹಾರದ ಈ ಎರಡು ಕಥಾನಕಗಳ ಇಂಗಿತವನ್ನೇ ಸೂಚ್ಯವಾಗಿ ಆಯ್ದುಕೊಂಡಿದ್ದಿರಬಹುದು ಎಂದು ಈಗ ನನಗನಿಸುತ್ತದೆ!

ವಾಹ್ ವಾಹ್ ಜೀ ರಾಮ್ ಜೀ... ಸಬ್‌ಕೋ ಸನ್ಮತಿ ದೇದೋಜಿ

‘ರಘುಪತಿ ರಾಘವ ರಾಜಾರಾಂ’ ಹಾಡಿನ ಮೂಲವನ್ನು ನೋಡಿದಾಗ, ಎಲ್ಲ ಹಾಡಿನಂತೆ ಇದಕ್ಕೂ ಪಲ್ಲವಿ ಸಲ್ಲುಗಳಿವೆಯೆನ್ನುವುದು ತಿಳಿದುಬರುತ್ತದೆ. ಈ ಹಾಡಿನ ಮೂಲಪಾಠ ಹೀಗಿದೆ. ‘ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಮ, ಸುಂದರ ವಿಗ್ರಹ ಮೇಘಶಾಮ ಗಂಗಾ ತುಳಸೀ ಸಾಲಿಗ್ರಾಮ. ಭದ್ರಗಿರೀಶ್ವರ ಸೀತಾರಾಮ, ಭಕುತಜನ ಪ್ರಿಯ ಸೀತಾರಾಮ, ಜಾನಕಿರಮಣ ಸೀತಾರಾಮ ಜಯಜಯ ರಾಘವ ಸೀತಾರಾಮ’.

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಕಳೆದ ವಾರ, ರಾಷ್ಟ್ರಭಕ್ತ ಬಂಕಿಮಚಂದ್ರರ ಆನಂದಮಠದ ಶಿಶು, ‘ವಂದೇಮಾತರಂ’ ಹಾಡಿಗೆ ಒಂದು ಸಮುದಾಯದವರಿಗೆ ಬೇಸರವಾಗಬಹುದು ಎನ್ನುವ ಕಾರಣಕ್ಕೆ ಕತ್ತರಿ ಹಾಕಿದ ಬಗ್ಗೆ ವಿವರಿಸಿದ್ದೆ. ಈ ವಾರ, ಭಾರತದ ಮರ್ಯಾದೆಯಾದ ಶ್ರೀರಾಮನ ಜನಪ್ರಿಯ ಹಾಡೊಂದನ್ನು ಅದೇ ಮುಸ್ಲಿಂ ತುಷ್ಟೀಕರಣಕ್ಕಾಗಿ ತಿರುಚಿದ ಪ್ರಸಂಗವನ್ನು ತಿಳಿಸುತ್ತೇನೆ.

ಉತ್ತರ-ದಕ್ಷಿಣ ಎನ್ನದೇ ನಮ್ಮ ದೇಶದ ಎಲ್ಲ ಹಿಂದೂಗಳ ಮನೆಗಳಲ್ಲಿ ಸದಾ ಗುನುಗುತ್ತಿದ್ದ ಹಾಡು ‘ರಘುಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ’. ಹುಟ್ಟಿದ ಹಸುಳೆಗಳಿಂದ ಹಿಡಿದು ಇಂದೋ ನಾಳೆಯೋ ಎನ್ನುವ ಮುದುಕರವರೆಗೆ ಎಲ್ಲರಿಗೂ ಪ್ರಿಯವಾಗುವ ಹಾಡಾಗಿತ್ತು ಅದು. ಮನೆಯಲ್ಲಿ ಅಜ್ಜನೋ ಅಜ್ಜಿಯೋ ತಮ್ಮ ತೊಡೆಯಲ್ಲಿ ಮೊಮ್ಮಕ್ಕಳನ್ನು ಕುಳ್ಳಿರಿಸಿಕೊಂಡು, ಅವರ ಕೈಜಗ್ಗಿ ಚಪ್ಪಾಳೆ ಹೊಡೆಸುತ್ತಾ ಕಲಿಸುತ್ತಿದ್ದ ಮೊದಲ ಹಾಡಿದು. ಮುಂದೆ, ‘ರಘುಪತಿ ರಾಘವ ಮಾಡು ಪುಟ್ಟಾ’ ಅಂದ್ರೆ ಆ ಹಸುಳೆಗಳು ಚಪ್ಪಾಳೆಯನ್ನೇ ತಟ್ಟುವಷ್ಟು ರೂಢಿಯಾಗಿಬಿಡುತ್ತಿತ್ತು. ಮನೆಗೆ ಬಂದ ನೆಂಟರಿಷ್ಟರಿಗೆಲ್ಲಾ ಹೇಳುವುದು ‘‘ನೋಡಿ ನನ್ನ ಮೊಮ್ಮಗ ಸೀತಾರಾಂ ಜಯ ಜಯರಾಂ ಮಾಡೋದ್ ಕಲ್ತುಬಿಟ್ಟಿದ್ದಾನೆ’’... ‘‘ಹೌದಾ? ಇಷ್ಟು ಬೇಗನೇ?’’ ಎಂದು ನೆಂಟರಿಷ್ಟರೂ ಅಚ್ಚರಿ ತೋರುವುದು. ಇನ್ನು, ಬಹಳ ಹೊತ್ತು ದೇವರ ಮುಂದೆ ಕುಳಿತು ಭಜನೆ ಮಾಡಲಾಗದ ಮುದುಕರಿಗೂ, ಕುಳಿತಲ್ಲೇ ಒಂದುಬಾರಿ ರಘುಪತಿ ರಾಘವ ರಾಜಾರಾಂ ಅಷ್ಟನ್ನಾದ್ರೂ ಹೇಳಿಬಿಡೋಣ ಎನ್ನುವುದಿತ್ತು.

ಭಜನೆ ಬಹಳ ಜನರಿಗೆ ಆಗಿಬರುವುದಿಲ್ಲ, ಬೇರೆ ಬೇರೆ ಭಜನೆಗಳು ಕಂಠಸ್ಥವಿರಬೇಕು, ಹೇಳಲು ಸೂಕ್ತ ಶಾರೀರ ಬೇಕು, ತಾಳಗಳ ಕನಿಷ್ಠ ಜ್ಞಾನ ಬೇಕು, ತಾಳ ಹಿಡಿದು ಬಡಿಯಲು ಬರಬೇಕು ಹೀಗೆಲ್ಲ ಇದೆ. ಆದರೆ ರಘುಪತಿ ರಾಘವ ರಾಜಾರಾಂ ಹೇಳಲು ಇವ್ಯಾವವೂ ಬೇಕಾಗಿರಲಿಲ್ಲ, ಅಥವಾ ಮೇಲೆ ಹೇಳಿದ ಎಲ್ಲವನ್ನೂ ಈ ರಘುಪತಿ ರಾಘವ ರಾಜಾರಾಂ ಹೇಳುವುದರಿಂದ ಕಲಿಯಬಹುದಾಗಿತ್ತು. ಅಂತೂ, ಈ ‘ರಘುಪತಿ ರಾಘವ ರಾಜಾರಾಂ ಪತಿತಪಾವನ ಸೀತಾರಾಂ’ ದೇಶದ ಭಜನಾ ಸಂಸ್ಕೃತಿಯ ಆಧಾರ ಶಿಲೆಯಾಗಿತ್ತು ಎನ್ನಬಹುದು. ಹೇಳಲು ಬಹಳಷ್ಟು ಭಜನೆಗಳಿವೆ, ಶ್ರೀರಾಮನ ಭಜನೆಗಳೂ ನೂರಾರಿವೆ. ಆದರೆ ಯಾವುದೂ ಈ ಭಜನೆಗೆ ಹತ್ತಿರದ ಸ್ಪರ್ಧೆಯನ್ನೂ ನೀಡಲಿಲ್ಲ, ಭಜನೆಯೆಂದರೆ ‘ರಘುಪತಿ ರಾಘವ ರಾಜಾರಾಂ ಪತಿತಪಾವನ ಸೀತಾರಾಂ’. ನೂರಾರು ಭಜನೆಗಳನ್ನು ಹೇಳಿದ ಮೇಲೆಯೂ ಕೊನೆಯಲ್ಲಿ ಈ ಭಜನೆ ಹೇಳಲೇಬೇಕು.

ಈ ಭಜನೆಗೊಂದು ಸರಳ ಧಾಟಿಯೂ ಇತ್ತು, ದೇಶಾದ್ಯಂತ ಈ ಒಂದೇ ಧಾಟಿಯನ್ನು ಎಲ್ಲರೂ ಬಳಸುತ್ತಿದ್ದರು ಎನ್ನುವುದು ಇನ್ನೂ ವಿಶೇಷ. ಒಂಥರಾ ‘ಯೂನಿವರ್ಸಲ್’ ಧಾಟಿಯಾಗಿತ್ತು ಅದು. ಆ ಹಾಡಿಗೆ ಒಂದು ಲಯವೂ ಇತ್ತು. ಅದನ್ನೇ ‘ರಾಮ ಧುನ್’ ಎಂತಲೂ ಕರೆಯುತ್ತಾರೆ (ಈ ಹಾಡಿಗೆ ಖ್ಯಾತ ಹಿಂದುಸ್ತಾನಿ ಸಂಗೀತಜ್ಞ ವಿಷ್ಣು ದಿಗಂಬರ ಪಲುಸ್ಕರ್ ಅವರು ಸಂಗೀತ ಸಂಯೋಜಿಸಿದ್ದರಂತೆ). ನೋಡಲು ಒಂದು ಸಾಲಿನ ಹಾಡಾಗಿ ಕಂಡರೂ, ‘ರಘುಪತಿ ರಾಘವ ರಾಜಾರಾಂ’ ಎನ್ನುವುದು, ಭಾಷೆ, ಭೌಗೋಳಿಕ ಪ್ರದೇಶ, ಜಾತಿ ಹಾಗೂ ಜನಾಂಗಗಳನ್ನು ಮೀರಿ ದೇಶವನ್ನು ಒಗ್ಗೂಡಿಸಿದ್ದ ಮಂತ್ರವಾಗಿತ್ತು. ಭಾರತೀಯನಿಗೆ ಆಜನ್ಮಪರ್ಯಂತ ಜತೆಗಿರುತ್ತಿದ್ದ ಮಂತ್ರವದು.

ನಮಗೆ ಗೊತ್ತಿರುವುದು ಕೇವಲ ‘ರಘುಪತಿ ರಾಘವ ರಾಜಾರಾಂ’ ಅಷ್ಟೇ, ಅದನ್ನೆ ಪುನರಾವರ್ತಿಸುವುದು ನಮಗೆ ರೂಢಿ. ಆದರೆ ಆ ಹಾಡಿನ ಮೂಲವನ್ನು ನೋಡುವಾಗ, ಎಲ್ಲ ಹಾಡಿನಂತೆ ಈ ಹಾಡಿಗೂ ಪಲ್ಲವಿ ಸಲ್ಲುಗಳಿವೆಯೆನ್ನುವುದು ತಿಳಿದು ಬರುತ್ತದೆ. ಈ ಹಾಡಿನ ಮೂಲಪಾಠ ಹೀಗಿದೆ. ‘ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಮ, ಸುಂದರ ವಿಗ್ರಹ ಮೇಘಶಾಮ ಗಂಗಾ ತುಳಸೀ ಸಾಲಿಗ್ರಾಮ. ಭದ್ರಗಿರೀಶ್ವರ ಸೀತಾರಾಮ, ಭಕುತಜನ ಪ್ರಿಯ ಸೀತಾರಾಮ, ಜಾನಕಿರಮಣ ಸೀತಾರಾಮ ಜಯಜಯ ರಾಘವ ಸೀತಾರಾಮ’.

ಈ ಹಾಡಿನ ನಿಖರವಾದ ಮೂಲವು ಸಂಪೂರ್ಣವಾಗಿ ಸ್ಪಷ್ಟವಾಗಿಲ್ಲ. ತುಳಸೀದಾಸರು ಬರೆದಿದ್ದಾರೆ ಅಥವಾ 17ನೇ ಶತಮಾನದ ಮರಾಠಿ ಸಂತ ಸಮರ್ಥ ರಾಮದಾಸ್ ಅವರ ಪ್ರಾರ್ಥನೆಯನ್ನು ಆಧರಿಸಿದೆ ಎನ್ನುವವರೂ ಇದ್ದಾರೆ. ಇದನ್ನು ಲಕ್ಷ್ಮಣಾಚಾರ್ಯರು ಎಂದು ಹೇಳಲಾದ ಸಂತರ ನಾಮ ರಾಮಾಯಣದಿಂದ (ಶ್ರೀ ನಾಮರಾಮಾಯಣಂ) ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗುತ್ತದೆ.ನಾಮ ರಾಮಾಯಣವು ಸಂಸ್ಕೃತದ ಭಕ್ತಿ ಶ್ಲೋಕಗಳ ಒಂದು ಸಂಪುಟವಾಗಿದ್ದು, ರಾಮನ ಅನೇಕ ಹೆಸರುಗಳನ್ನು ಪಠಿಸುವ ಮೂಲಕ ಸಂಪೂರ್ಣ ರಾಮಾಯಣವನ್ನು ಈ ಸ್ತುತಿ ನಿರೂಪಿಸುತ್ತದೆ. 108 ಶ್ಲೋಕಗಳನ್ನು ಹೊಂದಿದ ಈ ಸ್ತುತಿಮಾಲಿಕೆ ‘ಶುದ್ಧ ಬ್ರಹ್ಮ ಪರಾತ್ಪರ ರಾಮ’ದಿಂದ ಪ್ರಾರಂಭವಾಗುತ್ತದೆ ಮತ್ತು ಅದರ ಪ್ರತಿಯೊಂದು ಸಾಲುಗಳು ‘ರಾಮ’ ಶಬ್ದದಿಂದ ಕೊನೆಗೊಳ್ಳುತ್ತವೆ. ಈ ಸ್ತುತಿಯ ಕೆಲವು ಆವೃತ್ತಿಗಳಲ್ಲಿ ರಘುಪತಿ ರಾಘವ ರಾಜಾರಾಮ್ ಎಂಬ ಶ್ಲೋಕವನ್ನು ನಾವು ನೋಡಬಹುದಾಗಿದೆ.

ಮಹಾತ್ಮ ಗಾಂಧಿಯವರಿಗೆ ಯಾವ ದೇವರ ಪ್ರೇರಣೆಯಾಯಿತೋ ಏನೋ, ಹಾಡನ್ನು ತಿರುಚಿಯೇಬಿಟ್ಟರು! ಅವರು ತಿರುಚಿದ ಹಾಡು ಹೀಗಿದೆ. ‘ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಮ, ಸೀತಾರಾಮ ಸೀತಾರಾಮ ಭಜ ಪ್ಯಾರೇ ತೂ ಸೀತಾರಾಮ. ಈಶ್ವರ ಅಲ್ಲಾಃ ತೇರೋ ನಾಮ್ ಸಬಕೋ ಸನ್ಮತಿ ದೇ ಭಗವಾನ್’. ಮೂಲತಃ ಶ್ರೀರಾಮ ಭಕ್ತರೇ ಆಗಿದ್ದರು ಎಂದು ಹೇಳಲಾಗುವ ಮಹಾತ್ಮ ಗಾಂಧಿಯವರಿಗೆ, ಈ ಸುಂದರ ರಾಮ ಭಜನೆಯನ್ನು ವಿಕೃತಗೊಳಿಸುವ ಹಕ್ಕನ್ನು ಯಾರು ಕೊಟ್ಟಿದ್ದರೋ ತಿಳಿಯದು. ಅವರು ಕೊನೆಯುಸಿರೆಳೆಯುವಾಗ ‘ಹೇ ರಾಮ್’ ಎಂದಿದ್ದರಂತೆ; ಅದಕ್ಕಾಗಿಯೇ ಅವರ ಸಮಾಧಿಯ ಮೇಲೆ ‘ಹೇ ರಾಮ್’ ಅಂತಲೇ ಬರೆಯಲಾಗಿದೆ. ಹಾಗಾಗಿ ಅವರನ್ನು ಶ್ರೇಷ್ಠ ರಾಮಭಕ್ತರು ಎನ್ನಲಡ್ಡಿಯಿಲ್ಲವಲ್ಲ.

ಮಹಾತ್ಮ ಗಾಂಧಿಯವರು ಏನು ಹೇಳಿದರೂ ಅದನ್ನು ಕೇಳುವ ಅಥವಾ ಅದನ್ನು ಅನುಸರಿಸುವ ಕಾಲವಾಗಿತ್ತು ಅದು. ಹಾಗಾಗಿ ಎಲ್ಲರ ಬಾಯಲ್ಲೂ ಈ ತಿರುಚಿದ ಹಾಡು ನಲಿಯಲಾರಂಭವಾಯಿತು. ಮೂಲಸಾಹಿತ್ಯ ಮರೆತು, ಗಾಂಧಿಯವರಿಂದ ತಿರುಚಲ್ಪಟ್ಟ ಹೊಸ ಹಾಡು ದೇಶಾದ್ಯಂತ ಜನಪ್ರಿಯವಾಯಿತು. ನಮಗೆಲ್ಲ ಸಣ್ಣವರಿದ್ದಾಗ ಶಾಲೆಯಲ್ಲಿ ಕಲಿಸಿದ್ದು ಮೋಹನದಾಸ ಕರಮಚಂದ ಗಾಂಧಿ ವಿರಚಿತ ಇದೇ ‘ಅಲ್ಲಾಹು ಮಿಶ್ರಿತ’ ಹಾಡೇ ಆಗಿದೆ. ಬಾರಿ ಬಾರಿ ಅದನ್ನೇ ಹೇಳಿ ಹೇಳಿ ಕಡೆಗೆ ಇದೇ ನಿಜವಾದ ಹಾಡು ಎನ್ನುವಂತಾಗಿಹೋಯ್ತು. ಭಾರತೀಯ ಜನಮಾನಸದಿಂದ ಮೂಲಹಾಡು ಕಳೆದುಹೋಯಿತು. ಹಾಡಿನ ಮೂಲ ರಚಯಿತರಿಗೂ, ಹಾಡಿಗೂ ಹಾಗೂ ರಾಮಭಕ್ತರಿಗೂ ಮಹದನ್ಯಾಯವಾಯ್ತು. ಆದರೆ ಇವೆಲ್ಲಾ ನಮಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗಿಂತ ಹೆಚ್ಚೇನಲ್ಲವಲ್ಲ. ನಮ್ಮನ್ನು ‘ಕಾಫಿರರು’ ಎಂದು ಗುರುತಿಸುವ ಮುಸಲ್ಮಾನರ ಮೇಲೆ ಗಾಂಧಿಯವರಿಗೆ ಅದ್ಯಾಕೆ ಅಷ್ಟು ಪ್ರೀತಿಯಿತ್ತೋ ತಿಳಿಯದು. ಏಕೆಂದರೆ ಅವರು ತಿರುಚಿದ ಹಾಡಿನಲ್ಲಿ ಏಸು ಕ್ರಿಸ್ತನಿಗೆ, ಜೈನ ಧರ್ಮ ಸ್ಥಾಪಕ ಮಹಾವೀರನಿಗೆ, ಬುದ್ಧನಿಗೆ ಯಾರಿಗೂ ಜಾಗ ಸಿಗಲಿಲ್ಲ; ಆದರೆ ಅಲ್ಲಾಹುವಿಗೆ ಮಾತ್ರ ದಕ್ಕಿತು. ಇದನ್ನು ಅತಿಯಾದ ಪ್ರೀತಿಯೆನ್ನದೇ ಮತ್ತೇನೆನ್ನಲು ಸಾಧ್ಯ ಹೇಳಿ? ಹಾಗಾದರೆ, ಗಾಂಧಿಯವರ ಈ ಎಲ್ಲ ಮುಸ್ಲಿಂ ತುಷ್ಟೀಕರಣದ ಕಾರ್ಯಕ್ರಮಗಳಿಂದ ಸಾಧಿಸಿದ್ದಾದರೂ ಏನು? ಎಂದು ಕೇಳಿದರೆ, ‘ಶೂನ್ಯ’ ಎನ್ನುವುದೇ ಉತ್ತರವಾಗುತ್ತದೆ. ಭಾರತ ಭಾಗವಾಗುವುದನ್ನು ತಪ್ಪಿಸಲಾಯಿತಾ? ಇಲ್ಲ. ಭಾರತದಲ್ಲೇ ಉಳಿದ ಮುಸ್ಲಿಮರು ದೇಶದ ಮೂಲ ಸಂಸ್ಕೃತಿಯನ್ನು ಗೌರವಿಸುತ್ತ, ಶಾಂತಿಯಿಂದ ಬಹುಸಂಖ್ಯಾತರ ಜತೆ ಬದುಕುತ್ತಿದ್ದಾರಾ? ಅದೂ ಇಲ್ಲ. ಈ ಎಲ್ಲ ಅತಿ ತುಷ್ಟೀಕರಣದ ಕಾರ್ಯಗಳಿಂದ ಭಾರತ ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು ಎಂದರೆ ಅತಿಶಯೋಕ್ತಿಯಾಗಲಾರದು.

ಗಾಂಧಿಯವರ ಈ ಹೊಸ ಹಾಡನ್ನು ಹಿಂದುಗಳೇನೋ ಬಾಯಿಪಾಠ ಮಾಡಿ ಹಾಡಲು ಶುರುಮಾಡಿದರು; ಆದರೆ ಮುಸ್ಲಿಮರಿಗೆ ಇದು ಅಪಥ್ಯವಾಯಿತು. ಈ ಹಾಡಿನಲ್ಲಿ ತಮ್ಮ ಅಲ್ಲಾಹುವನ್ನು ಹಿಂದೂ ದೇವತೆ ಈಶ್ವರನ ಸಮಾನವಾಗಿ ಕರೆದಿರುವುದು ಅವರಿಗೆ ಹಿಡಿಸಲೇ ಇಲ್ಲ. ಹಾಗಾಗಿ ಅವರು ಈ ಹಾಡನ್ನು ಸಾರಾಸಗಟಾಗಿ ತಿರಸ್ಕಾರ ಮಾಡಿದರು. ಪಾಪದ ಹಿಂದೂಗಳು ಮಾತ್ರ, ಇದು ಗಾಂಧೀಜಿ ನಮಗೆ ದಯಪಾಲಿಸಿದ ಹೊಸ ಮಂತ್ರವೆನ್ನುವಂತೆ ಶಾಲಾ-ಕಾಲೇಜುಗಳಲ್ಲಿ, ಸಭೆ-ಸಮಾರಂಭಗಳಲ್ಲಿ ಹಾಗೂ ಚಳವಳಿಗಳ ಸಮಯದಲ್ಲಿ ಹಾಡುತ್ತಾ ತಮ್ಮ ಜಾತ್ಯತೀತತೆಯನ್ನು ಮೆರೆದರು. ಸಂಪ್ರದಾಯಸ್ಥ ಹಿಂದೂ ಮನೆತನದ ಹಿರಿಯರು, ಹಾಡಿದರೆ ಗಾಂಧಿಯವರ ಹಾಡನ್ನೇ ಹಾಡಬೇಕಾಗುತ್ತದೆ ಎನ್ನುವ ಕಾರಣದಿಂದಲೋ ಏನೊ, ತಮ್ಮ ಭಜನೆಯ ಪಟ್ಟಿಯಿಂದಲೇ ಈ ‘ರಘುಪತಿ ರಾಘವ ರಾಜಾರಾಂ’ ಹಾಡನ್ನು ಕೈಬಿಡುವಂತಾಯ್ತು.



ದೊಡ್ಡವರೆನಿಸಿಕೊಳ್ಳುವವರಿಂದ ಕಲಿಯಬೇಕಾದ್ದು ಎಷ್ಟಿರುತ್ತದೆಯೋ, ಕಲಿಯಬಾರದ್ದೂ ಇರುತ್ತದೆ ಎನ್ನುವುನ್ನು ನಾವು ತಿಳಿಯಬೇಕು. ಸತ್ಯ, ಅಹಿಂಸೆ, ದೇಹದಂಡನೆ, ಸತ್ಯಾಗ್ರಹ ಮುಂತಾದವುಗಳನ್ನು ನಾವು ಗಾಂಧಿಯವರಿಂದ ಕಲಿಯಬಹುದಾದರೆ, ಇಂಥ ಉಪದ್ವ್ಯಾಪಿತನವನ್ನು ಕಲಿಯಬಾರದು ಎನ್ನುವುದನ್ನೂ ತಿಳಿದುಕೊಳ್ಳಬೇಕು.

ಆಂಥೋನಿ ಪರೇಲ್ ಅವರು ತಮ್ಮ 'Gandhi’s Philosophy and the Quest for Harmony' ಕೃತಿಯಲ್ಲಿ ಹೀಗೆ ಬರೆಯುತ್ತಾರೆ: ರಾಮಧುನ್ ಅನ್ನು ಮಹಾನ್ ಹಿಂದೂ ಸಂತ, ಶ್ರೇಷ್ಠ ರಾಮಭಕ್ತ, ಗೋಸ್ವಾಮಿ ತುಳಸೀದಾಸ್ ಅವರು ರಚಿಸಿದ್ದರು. ಹಾಡನ್ನು ಹೆಚ್ಚು ಜಾತ್ಯತೀತವಾಗಿ ಕಾಣುವಂತೆ ಮಾಡಲು, ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಾಮರಸ್ಯದ ಸಂದೇಶವನ್ನು ಹರಡಲು ಗಾಂಧಿಯವರು ಮೂಲ ಭಜನೆಯನ್ನು ಮಾರ್ಪಡಿಸಿದರು. ಹಿಂದೂಗಳ ಈಶ್ವರ ಮತ್ತು ಮುಸ್ಲಿಮರ ಅಲ್ಲಾಹ್ ಒಂದೇ ಎಂದು ಸೇರಿಸಿದರು. ಭಾರತೀಯ ಸಮಾಜದ ಜಾತ್ಯತೀತ ಮತ್ತು ಸಂಯೋಜಿತ ದೃಷ್ಟಿಕೋನವನ್ನು ಬಿಂಬಿಸಲು ಈ ಹಾಡನ್ನು ವ್ಯಾಪಕವಾಗಿ ಬಳಸಲಾಯಿತು. ಇದನ್ನು 1930ರ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಹಾಡಲಾಯಿತು. ಗಾಂಧಿಯವರ ಆಶ್ರಮದಲ್ಲೂ ಹಾಡಲಾಗುತ್ತಿತ್ತು. ಹಿಂದೂ-ಮುಸ್ಲಿಂ ಏಕತೆಯನ್ನು ಉತ್ತಮವಾಗಿ ಪ್ರತಿಬಿಂಬಿಸಲು ‘ಸೀತಾರಾಮ ಸೀತಾರಾಮ ಭಜ ಪ್ಯಾರೇ ತೂ ಸೀತಾರಾಮ’ ಎನ್ನುವ ಪಲ್ಲವಿಯ ಬದಲಿಗೆ ‘ಭಜ್ ಮನ್ ಪ್ಯಾರೆ ರಾಮ ರಹೀಮ್, ಭಜ್ ಮನ್ ಪ್ಯಾರೆ ಕೃಷ್ಣ ಕರೀಮ್’ ಎಂದು ಬದಲಾಯಿಸಿದ್ದರು.

ಗಾಂಧಿಯವರಿಗೆ, ರಘುಪತಿ ರಾಘವ ರಾಜಾರಾಂ ಹಾಡಷ್ಟೇ ಅಲ್ಲದೆ, ಗುಜರಾತಿ ಕವಿ ಮತ್ತು ಸಂತ ನರಸಿಂಹ ಮೆಹತಾ ರಚಿಸಿದ ಪ್ರಸಿದ್ಧ ‘ವೈಷ್ಣವ ಜನತೋ ತೇನೇ ಕಹಿಯೆರೆ, ಜೋ ಪೀಡ ಪರಾಯೀ ಜಾಣೇರೆ’ ಹಾಗೂ ವಂಶೀಧರ ಶುಕ್ಲ ವಿರಚಿತ ‘ಉಠ ಜಾಗಾ ಮುಸಾಫಿರ್ ಅಬ್ ರೈನ್ ಕಹಾ ಜೋ ಸೋವತ ಹೆ, ಜೋ ಸೋವತ ಹೇ ವೋ ಖೋವತ ಹೇ, ಜೋ ಜಾಗತ ಹೇ ಸೋಹಿ ಪಾವತ ಹೇ’ ಮುಂತಾದವು ಬಹಳ ಇಷ್ಟದ ಹಾಡುಗಳಾಗಿದ್ದವು. ಅವುಗಳನ್ನು ತಿರುಚುವ ಗೋಜಿಗೆ ಹೋಗದೆ ಹಾಗೇ ಬಿಟ್ಟಿರುವುದಕ್ಕೆ ನಾವು ಸಂತೋಷಪಡಬೇಕಷ್ಟೇ.

ಶ್ರೀಲ ಪ್ರಭುಪಾದರನ್ನು ಸೇರಿ ಆ ಕಾಲದ ಅನೇಕ ಹಿಂದೂ ಸಂತರುಗಳು ಮತ್ತು ಮುಸ್ಲಿಮರು ಸಹ, ಗಾಂಧೀಜಿ ಮಾಡಿದ ಈ ಬದಲಾವಣೆಗಳನ್ನು ಒಪ್ಪದೇ ಟೀಕಿಸಿದ್ದಾರೆ. ಏಕೆಂದರೆ ಅವರು ಅಲ್ಲಾಹುವನ್ನು ರಾಮನಿಗೆ ಸರಿಸಮನಾಗಿ ಇರಿಸಿದರು ಎನ್ನುವುದು ಮುಸ್ಲಿಮರ ವಾದವಾದರೆ, ಹಿಂದೂ ಭಜನೆಯಲ್ಲಿ ಇಸ್ಲಾಮಿಕ್ ಅಂಶಗಳ ಸೇರ್ಪಡೆಯಿಂದಾಗಿ ಮೂಲ ಸಾಹಿತ್ಯದ ವಿರೂಪಗೊಳಿಸುವಿಕೆಯಾಗಿದೆ ಎನ್ನುವುದು ಹಿಂದೂಗಳ ಆಕ್ಷೇಪವಾಗಿತ್ತು. ರಘುಪತಿ ರಾಘವ್ ರಾಜಾರಾಮ್ ಹಾಡುವ ಸಮಯದಲ್ಲಿ ‘ಈಶ್ವರ್ ಅಲ್ಲಾಹ್ ತೇರೋ ನಾಮ್’ ಎಂಬ ಸಾಲನ್ನು ಸಾರ್ವಜನಿಕ ಸಭೆಗಳಲ್ಲಿ ಹಾಡಿದಾಗ, ಪ್ರೇಕ್ಷಕರ ವರ್ಗದಲ್ಲಿ ಅಸಮಾಧಾನ ಭುಗಿಲೆದ್ದಿರುವ ಉದಾಹರಣೆಗಳೂ ಇವೆ. ಆಗೆಲ್ಲ, ಇದು ಹಿಂದೂಗಳ 'ಅಸಹಿಷ್ಣುತೆಯ ಉತ್ತುಂಗ' ಎಂದು ಕರೆದವರೂ ಇದ್ದಾರೆ. ‘ಮನ್ರೇಗಾ’ ಯೋಜನೆಯ ಬದಲಿಗೆ ‘ಜೀ ರಾಮ್ ಜೀ’ ಎನ್ನುವ ಹೆಸರಿನಿಂದ ಹೊಸ ಯೋಜನೆಯನ್ನು ಮೊನ್ನೆ ಲೋಕಸಭೆಯಲ್ಲಿ ಮಂಡಿಸಿದಾಗಲೂ, ವಿರೋಧ ಪಕ್ಷದವರು ಆಕಾಶ ಭೂಮಿ ಒಂದುಮಾಡುವಂತೆ ಅರಚಾಟ ಮಾಡಿದರು. ವಿರೋಧ ಪಕ್ಷದವರಿಗೆ ಗಾಂಧಿ ಬೇಕು; ಆದರೆ ಅವರು ಬಹಳ ಪ್ರೀತಿಸುತ್ತಿದ್ದ ‘ರಾಮ’ ಮಾತ್ರ ಬೇಡ. ಎಂಥಾ ವೈರುಧ್ಯ ನೋಡಿ!

‘ಬಿಜೆಪಿಯವರು, ಅದರಲ್ಲೂ ಉತ್ತರ ಪ್ರದೇಶದ ಜನಪ್ರಿಯ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು, ಕಂಡ ಕಂಡ ಊರುಗಳ ಹೆಸರನ್ನು ಬದಲಾಯಿಸುತ್ತಾರೆ, ಮಾಡಲು ಅವರಿಗೆ ಕೆಲಸವಿಲ್ಲ’ ಎಂದು ಆಡಿಕೊಳ್ಳುವವರಿದ್ದಾರೆ. ಪ್ರಯಾಗರಾಜ್ ‘ಅಲ್ಲಾಹ್ ಬಾದ್’ ಆಗಿತ್ತು, ಅಯೋಧ್ಯಾ ‘ಫೈಜಾಬಾದ್’ ಆಗಿತ್ತು, ನರ್ಮದಾಪುರಂ ‘ಹೌಷಂಗಾಬಾದ್’ ಆಗಿತ್ತು, ಶ್ರೀಭೂಮಿ ಎನ್ನುವ ಪ್ರದೇಶ ‘ಕರೀಮ್ ಗಂಜ್’ ಆಗಿತ್ತು. ಹಾಗೆ ನಮ್ಮ ಊರುಗಳ ಹೆಸರನ್ನು ದಾಳಿಕೋರರು ಬದಲಿಸಿದಾಗ ನಮ್ಮ ತಕರಾರಿರಲಿಲ್ಲ. ಮೂಲ ಹೆಸರುಗಳನ್ನು ಮತ್ತೆ ಬಳಕೆಗೆ ತಂದರೆ ಅದು ಅಸಹಿಷ್ಣುತೆಯಾಗಿಬಿಡುತ್ತದೆ. ವಂದೇ ಮಾತರಂ ಹಾಡಿಗೆ ಕತ್ತರಿ ಹಾಕಿದವರ ಬಗ್ಗೆ, ರಘುಪತಿ ರಾಘವ ರಾಜಾರಾಮ್ ಹಾಡನ್ನೇ ತಿರುಚಿದವರ ಬಗ್ಗೆ ಇವರು ಚಕಾರವೆತ್ತುವುದಿಲ್ಲ. ಮೊಘಲ್ ಗಾರ್ಡನ್ ಹೆಸರನ್ನು ‘ಅಮೃತ ಉದ್ಯಾನ’ ಎಂದು ಹೆಸರಿಸಿದರೆ, ಔರಂಗಜೇಬ್ ಮಾರ್ಗವನ್ನು ‘ಅಬ್ದುಲ್ ಕಲಾಂ ಮಾರ್ಗ’ ಎಂದು ಬದಲಿಸಿದರೆ ತಕರಾರಿರುತ್ತದೆ. ಇಂಥವರಿಗೆ ಈಗಲಾದರೂ ‘ಸನ್ಮತಿ ದೇ ಭಗವಾನ್’ ಎಂದು ಪ್ರಾರ್ಥಿಸುವುದೊಂದೇ ನಮಗಿರುವ ಮಾರ್ಗೋಪಾಯವಾಗಿದೆ.

ಸಾವಿನ ನಂತರದ ಪಯಣದ ಸುತ್ತಮುತ್ತ ಒಂದು ಕಿರುನೋಟ

ಅನುಭೂತಿ
ಪ್ರೊ. ಆರ್.ಜಿ. ಹೆಗಡೆ
vveditoped@gmail.com

ಎಮಿಲಿ ಡಿಕಿನ್ಸನ್ ಎಂಬ ಅಮೆರಿಕನ್ ಕವಯಿತ್ರಿ 'Because I could not stop for death' ಎಂಬ ಪ್ರಸಿದ್ಧ ಕವಿತೆಯಲ್ಲಿ, ಸಾವಿನ ನಂತರದ ತನ್ನ ಆತ್ಮದ ಪಯಣದ ಕುರಿತು ಮಾತನಾಡುತ್ತಾಳೆ...

ಒಂದೆಡೆ ಸ್ಥಿರವಾಗಿ ನಿಂತುಬಿಡಲು ಆತ್ಮಕ್ಕೆ ಮನಸ್ಸಿಲ್ಲ. ಅದು ಆತನಿಗೂ (ಸಾವಿಗೂ) ಗೊತ್ತು. ಹಾಗಾಗಿ ಅವಳ ಆತ್ಮದ ಜತೆ ಪಲ್ಲಕ್ಕಿಯಲ್ಲಿ ಪಯಣಿಸುತ್ತಾನೆ. ಆ ಪಲ್ಲಕ್ಕಿಯಲ್ಲಿ ಇರುವವರು ಅವಳು, ಆತ (ಸಾವು) ಮತ್ತು ಅಮರತ್ವ. ಅವರು ಸಾವಕಾಶವಾಗಿ ಪ್ರಯಾಣ ಬೆಳೆಸುತ್ತಾರೆ. ನಿಧಾನ ಪ್ರವೃತ್ತಿಯ, ಅಪಾರ ಸಹನೆಯ ಅವನಿಗೆ ವೇಗವೆಂದರೇನು ಎನ್ನುವುದು ತಿಳಿದೇ ಇಲ್ಲ. ಆಕೆಯ ಆತ್ಮವು ಸಂತೋಷ ಮತ್ತು ದುಃಖಗಳೆರಡನ್ನೂ ಅಂತಿಮವಾಗಿ ಆತನಿಗಾಗಿ (ಸಾವಿಗಾಗಿ) ತ್ಯಜಿಸಿಬಿಟ್ಟಿದೆ.

ಪಯಣ ಆರಂಭವಾಗುತ್ತದೆ. ನಿಧಾನವಾಗಿ ಸಾಗುತ್ತ ಅವರು, ಚಿಕ್ಕ ಮಕ್ಕಳ ಕಲರವದಿಂದ ತುಂಬಿದ ಶಾಲೆಯನ್ನು ದಾಟುತ್ತಾರೆ. ದನಕರುಗಳು ಮೇಯುತ್ತಿರುವ ವಿಶಾಲ ಹಸಿರು ಬಯಲುಗಳನ್ನು ದಾಟುತ್ತಾರೆ. ಚಳಿಗಾಲದ ಮಂಜಿನ ಹನಿಗಳಿಂದ ತುಂಬಿಕೊಂಡ ಜೇಡರ ಬಲೆಗಳನ್ನು ನೋಡುತ್ತ ಮುನ್ನಡೆಯುತ್ತಾರೆ. ಹಾರಿಕೊಳ್ಳುತ್ತ, ಹಾರಿಕೊಳ್ಳುತ್ತ ಅವರು ಒಂದು ಮನೆಯ ಮುಂದೆ ಕ್ಷಣಕಾಲ ನಿಲ್ಲುತ್ತಾರೆ. ನಂತರ ಸೂರ್ಯ ಇಳಿಯುವಲ್ಲಿಗೆ ನಿಧಾನವಾಗಿ ಬಂದು ತಲುಪುತ್ತಾರೆ. ಆಮೇಲೆ ಯುಗಗಳೇ ಕಳೆದು ಹೋಗಿವೆ. ಆದರೆ ಆ ಯುಗಗಳೆಲ್ಲವೂ ಕೇವಲ ಒಂದು ದಿನದ ಹಾಗೆ. ಹೀಗೆ ಸಾವಿನ ನಂತರದ ಆತ್ಮದ ಪಯಣವನ್ನು ಆಕೆ ತನ್ನ ಕವಿತೆಯಲ್ಲಿ ಬಣ್ಣಿಸುತ್ತಾಳೆ.

ನಾನು ಇಲ್ಲಿ ಹೇಳುತ್ತಿರುವುದು ಈ ರೀತಿಯ ಆತ್ಮದ ಪಯಣದ ಹಿಂದಿನ, ಸಾವಿನ ನಂತರದ ಶರೀರದ ಪಯಣದ ಕುರಿತು. 97 ವರ್ಷ ಬದುಕಿದ್ದ ಆತ ಅಕಸ್ಮಾತ್ ನಿದ್ದೆ ಬಂದ ಹಾಗೆ ಮಲಗಿದ್ದ. ‘ಸತ್ತು ಹೋಗಿ’ಬಿಟ್ಟಿದ್ದ. ಹೋಗಿದ್ದು ಏನು ಎನ್ನುವುದರ ಅಂತುಪಾರು ಕೂಡ ತಿಳಿಯದಂತೆ ಹೋಗಿಬಿಟ್ಟಿದ್ದ. ಏಕೆಂದರೆ ಆತ ಉಳಿದಂತೆ ಎಲ್ಲವೂ ಹಾಗೆಯೇ ಇದ್ದ. ಕಣ್ಣುಗಳು ಬದುಕಿದ್ದಾಗ ಇದ್ದ ರೀತಿಯಲ್ಲಿಯೇ ಶಾಂತವಾಗಿದ್ದವು. ವಿಷಾದ, ದುಃಖ, ಸಿಟ್ಟು, ಸೆಡವು, ಸಂತೋಷ ಯಾವುದೂ ಕಣ್ಣುಗಳಲ್ಲಿ, ಮುಖಚರ್ಯೆಯಲ್ಲಿ ಇರಲಿಲ್ಲ. ಹೋಗಿ ಬರುತ್ತೇನೆ ಎಂಬ ಸನ್ನೆಯೂ ಇರಲಿಲ್ಲ.

ಬೆಳಗ್ಗೆ ಎಂದಿನಂತೆ ಎದ್ದು, ದಾಡಿ ಮಾಡಿಕೊಂಡು ಸ್ನಾನ ಮುಗಿಸಿ ಬಂದು ಕುಳಿತಿದ್ದ. ಚಹಾ ಕುಡಿದ. ಬಾಯಿಗೆ ಗುಳಿಗೆ ಹಾಕಿಕೊಂಡ. ನುಂಗಲಾಗಲಿಲ್ಲ. ನೀರು ಕುಡಿದ. ಹಾಗೆಯೇ ಅರೆಕ್ಷಣ ಬಾಯಿ ತೆರೆದವನು ಹೋಗಿಬಿಟ್ಟಿದ್ದ. ಇಷ್ಟು ದೀರ್ಘಕಾಲ ಬದುಕಿದ ಸುಸ್ತು ಮುಖದ ಮೇಲೆ ಇರಲಿಲ್ಲ. ಇನ್ನೂ ನೂರಾರು ವರ್ಷ ತಣ್ಣಗೆ ಬದುಕಬಹುದಿತ್ತು ಎನ್ನುವಂತಿದ್ದ. ದಿನಾಲು ಊಟ ಮಾಡಿ ಮತ್ತೆ ಕೆಲಸಕ್ಕೆ ಹೋಗುವ ಮೊದಲು 15 ನಿಮಿಷ ಆತ ಮಲಗುತ್ತಿದ್ದ. ಹಾಗೆಯೇ ಈಗ ಕೂಡ ಮಲಗಿದ್ದ. ಬಹುಶಃ ಇನ್ನು ಕೆಲವೇ ಕ್ಷಣದಲ್ಲಿ ಎದ್ದು ಎಂದಿನಂತೆ ಸಪ್ಪೆ ಚಹಾ ಕುಡಿದು ತೋಟಕ್ಕೆ ನೀರು ಬಿಡಲು ಅಥವಾ ಹುಲ್ಲು, ಕರಡ ಕೊಯ್ಯಲು ಹೋಗುವವನಂತೆ ಇದ್ದ. ಆದರೆ ಆತ ನಿಜಕ್ಕೂ ಸತ್ತುಹೋಗಿದ್ದ. ‘ಸತ್ತುಹೋದ’ ಎಂದು ಡಾಕ್ಟರ್ ಹೇಳಿದ್ದು ನಿಜವೇ ಇತ್ತು. ಕಣ್ಣಿಗೆ ಬೀಳದ ಜೀವ ಇಷ್ಟು ವರ್ಷ ತಾನು ಉಳಿದುಕೊಂಡಿದ್ದ ಶರೀರವನ್ನು ನಿರ್ದಾಕ್ಷಿಣ್ಯವಾಗಿ ಹಿಂದೆ ಬಿಟ್ಟು ಹಾರಿಹೋಗಿತ್ತು.

ಬದುಕು ಮತ್ತು ಸಾವಿನ ನಡುವಿನ ಗೆರೆ ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುತ್ತದೆ ಎಂದು ತಿಳಿದಿದ್ದು ಈಗಲೇ. ಸಾವನ್ನು ನಾನು ಇಷ್ಟು ಹತ್ತಿರದಿಂದ ನೋಡಿಯೇ ಇರಲಿಲ್ಲ (ತಂದೆ-ತಾಯಿ ಇದ್ದವರು ಬೇರೆಯವರ ಸಾವಿನ ಸಂದರ್ಭದಲ್ಲಿ ಹೋಗಬಾರದು ಎಂಬ ಶಾಸ್ತ್ರವಿದೆ. ಹಾಗಾಗಿ ಹೋಗಿರಲಿಲ್ಲ). ಒಂದು ಕ್ಷಣ ಅನಿಸಿದ್ದೆಂದರೆ ಸಾವು ಇಷ್ಟೊಂದು ಸುಲಭವಾಗಿದ್ದರೆ ನಾವೂ ಹೀಗೆಯೇ ಹೋಗಿಬಿಡಬಹುದು. ಹೀಗೆಯೇ, ಕಣ್ಣ ರೆಪ್ಪೆ ಮುಚ್ಚಿ ತೆರೆಯುವುದರ ಒಳಗೆ. ಈಗ ಸುರಿಯುತ್ತಿರುವ ಕಣ್ಣಂಚಿನ ನೀರು ಉಪ್ಪಿನಂತಾಗಿ ಒಣಗುವ ಮೊದಲೇ- ಹೋಗಿಬಿಡಬಹುದು. ಅಥವಾ ಬಹುಶಃ ಆತನನ್ನು ಪೂರ್ತಿಯಾಗಿ ನೋಡಿ ಮುಗಿಸುವ ಮೊದಲು. ಡಾಕ್ಟರ್ ಡೆತ್ ನೋಟ್ ಕೊಡುವ ಮೊದಲು.

ನಾವು ಮನುಷ್ಯರು ನಿಜಕ್ಕೂ ಎಂಥ ಸುಳ್ಳುಗಳನ್ನು ನಂಬಿ ಬದುಕಿದ್ದೇವೆ. ಶರೀರದ ಅಂತಿಮ ಕ್ರಿಯೆಯ ಪಯಣ ನೋವಿನದು. ಆತನ ದೇಹವನ್ನು ಈಗ ಇಲ್ಲವಾಗಿಸಬೇಕು. ಹಾಗೆ ಮಾಡದಿದ್ದರೆ ಅದು ಕೊಳೆತುಹೋಗುತ್ತದೆ, ನಾರುತ್ತದೆ. ಅದಕ್ಕೆ ಮೊದಲು ಬಂಧು-ಬಳಗ ಎಲ್ಲರಿಗೂ ಸುದ್ದಿ ತಿಳಿಸಬೇಕು. ತುಂಬ ಖಾಸಗಿಯಾದ ಆತನ ಸಾವು ಈಗ ಸಾರ್ವಜನಿಕ ವಸ್ತು. ಜನ ಸೇರುತ್ತಾರೆ. ಅವರೆಲ್ಲ ಬರುವುದಕ್ಕೆ ಕಾಯಬೇಕು. ಜನ ಅಳುವುದನ್ನು ನೋಡಬೇಕು. ಕೆಲವರು ತುಸುವೇ ಅತ್ತು ಕಣ್ಣೊರೆಸಿಕೊಳ್ಳುತ್ತಾರೆ. ಕೆಲವರು ಆಷಾಢ ಮಾಸದಲ್ಲಿ ಮಳೆ ಬಂದಂತೆ ಭೋರೆಂದು ಅಳುತ್ತಾರೆ. ಕೆಲವರು ಅಳುವುದು ಕೃತಕವೆನಿಸುತ್ತದೆ. ತೀವ್ರ ಹಿಂಸೆಯ ಕ್ಷಣಗಳು ಅವು. ಸುತ್ತಮುತ್ತ ಯಾರೂ ಬೇಡವಾಗಿತ್ತು, ಒಬ್ಬನೇ ಇರಬೇಕಿತ್ತು ಅನಿಸುವ ಆ ಕ್ಷಣದಲ್ಲಿ ನೂರಾರು ಜನ ಫೋನಿನಲ್ಲಿ ಮಾತನಾಡುತ್ತಾರೆ. ಕೇಳಿದ ಅವವೇ ಮಾತುಗಳು: ಧೈರ್ಯ ತಂದುಕೊಳ್ಳಿ, ಇತ್ಯಾದಿ. ಮೆಸೇಜುಗಳು ನಿರಂತರ ಕಿಣಿಕಿಣಿಗುಡುತ್ತವೆ. ಬದುಕಿನ ನಶ್ವರತೆಯನ್ನು, ಸಾವಿನ ದಿವ್ಯತೆಯನ್ನು ಅನುಭವಿಸಲು ಜನ ಬಿಡುವುದೇ ಇಲ್ಲ.

ಯಾವುದೂ ನಮ್ಮ ಕೈಯಲ್ಲಿ ಇಲ್ಲ, ಎಲ್ಲವೂ ಒಂದು ಮುಷ್ಟಿ ಬೂದಿಯಲ್ಲಿ ಅಂತ್ಯವಾಗುತ್ತದೆ. ಅದು ಮಾತ್ರ ಅಂತಿಮ ಸತ್ಯ ಎಂದು ಹೊಳೆಯುವ ಈ ಕ್ಷಣದಲ್ಲಿ ಕೂಡ ಜೀವನವು ರೈಲಿನ ಹಾಗೆ ಧಡಧಡಿಸುತ್ತ, ವೇಗವಾಗಿ ಮುಂದೆ ಧಾವಿಸುತ್ತದೆ. ನೂರೆಂಟು ಕೆಲಸಗಳು ಒಮ್ಮೆಲೇ ಮುಂದೆ ಬಂದು ನಿಲ್ಲುತ್ತವೆ- ಪುರೋಹಿತರು ಯಾರು? ಅಂತಿಮ ವಿಧಿ ಎಲ್ಲಿ? ಎನ್ನುವುದನ್ನು ತೀರ್ಮಾನಿಸಬೇಕು. ತುಳಸಿಮಾಲೆ, ಗಂಧ, ಚಂದನದ ಚಕ್ಕೆ ತರಬೇಕು. ಮಾರುಕಟ್ಟೆಗೆ ಹೋಗಿ ಉಳಿದ ಸಾಮಾನುಗಳನ್ನು, ಧೋತಿಯನ್ನು ತರಬೇಕು. ಅದರ ಗಂಟು ಸರಿಯಾಗಿ ಹಾಕಿಕೊಳ್ಳಬೇಕು. ಇಲ್ಲವಾದರೆ ಅದು ಬಿಚ್ಚಿ ಬಿದ್ದುಬಿಡುತ್ತದೆ. ಸಾಂತ್ವನ ಹೇಳಲು ಬಂದವರನ್ನು ಮಾತನಾಡಿಸಬೇಕು. ಕೆಲವರು ‘ಅವನ ಮುಖವನ್ನು ನಾನು ಕೊನೆಯ ಬಾರಿ ನೋಡಲೇಬೇಕು. ಹಾಗಾಗಿ ಮಾರ್ಚರಿಯಲ್ಲಿ ಇಡಿ’ ಎಂದು ವಿನಂತಿಸುತ್ತಾರೆ. ಮಾರ್ಚರಿ ಹುಡುಕಬೇಕು, ಅಲೆಯಬೇಕು. ನೂರಾರು ಫೋನ್‌ಕಾಲ್ ಮಾಡಬೇಕು. ಆತ ಸತ್ತಿದ್ದು ಹೌದು ಎಂದು ಧೃಡಪಡಿಸುವ ಕಾಗದಪತ್ರವನ್ನು ಮಾರ್ಚರಿಯವರಿಗೆ ಕೊಡಬೇಕು.



ಆತನಿಗೆ ಚಳಿ ತಡೆಯಲಾಗುತ್ತಿರಲಿಲ್ಲ, ಕಂಬಳಿ ಹೊದ್ದೇ ಮಲಗುತ್ತಿದ್ದುದು- ಬೇಸಗೆಯಲ್ಲಿ ಕೂಡ. ಆದರೆ ಈ ಮಾರ್ಚರಿಯಲ್ಲಿ ಅವನಿಗೆ ಕಂಬಳಿಯೇ ಇಲ್ಲ. ಆತ ಈಗ ಇಲ್ಲ ಎನ್ನುವುದು ಮನಸ್ಸಿನೊಳಗೆ ಇನ್ನೂ ನಿಂತೇ ಇಲ್ಲ. ಹಾಗಾಗಿ ಮಾರ್ಚರಿಯೊಳಗಿನ ಚಳಿಗೆ ಆತನಿಗೆ ನಿದ್ದೆಯೇ ಬರದಿದ್ದರೆ ... ಎನ್ನುವ ವಿಚಾರ ಅರೆಕ್ಷಣ ಮನಸ್ಸನ್ನು ತಟ್ಟಿ ಹೋಗುತ್ತದೆ. ಮಾರ್ಚರಿಯ ಸ್ಟೀಲ್ ಕಪಾಟಿನೊಳಗೆ ಆತನಿಗೆ ಉಸಿರಾಡಿಸಲು ಸಾಧ್ಯವಾಗದೆ ಆತ ತೀರಿಕೊಂಡರೆ ಏನು ಮಾಡುವುದು ಎನ್ನುವ ವಿಚಾರವೂ ಮನಸ್ಸನ್ನು ತಟ್ಟಿಹೋಗುತ್ತದೆ. ಮಾರನೆಯ ದಿನ ಬೆಳಗ್ಗೆ ಜನವೋ ಜನ. ಇವತ್ತು ಆತನ ಶರೀರವನ್ನು ಬೆಂಕಿಗೆ ನೀಡಬೇಕು. ಮಾರ್ಚರಿಯಿಂದ ‘ಶವ’ವನ್ನು ಬಿಡಿಸಿಕೊಂಡು ಬರುವುದೂ ದೊಡ್ಡ ಕೆಲಸ. ಎಲ್ಲಾ ದಾಖಲೆಗಳನ್ನು ಮತ್ತೆ ಕೊಡಬೇಕು. ನಾವು ಯಾರು ಎನ್ನುವುದನ್ನು ಸಾಬೀತುಪಡಿಸಬೇಕು.

ಆತ ಮಾರ್ಚರಿಯಲ್ಲಿ ಸುಖವಾಗಿ ಮಲಗಿದಂತಿದ್ದ. ಕಣ್ಣುಗಳು, ಮುಖ ಫ್ರಿಜ್‌ನಲ್ಲಿ ಇಟ್ಟ ತರಕಾರಿಯ ಹಾಗೆ ಹೊಳೆಯುತ್ತಿದ್ದವು. ದೇವರೇ! ಆದರೂ ಆತ ಸತ್ತಿರುವುದು ನಿಜ. ಆತನ ಶರೀರವನ್ನು ಸುಡಲೇಬೇಕು...

ಈಗ ಗದ್ದಲವೋ ಗದ್ದಲ. ಜೀನ್ಸ್‌ಧಾರಿಗಳಾಗಿ ಬಂದವರೂ ‘ಗೋವಿಂದಾ, ಗೋವಿಂದಾ’ ಎಂದು ಕೂಗುವುದು ವಿಚಿತ್ರವೆನಿಸುತ್ತದೆ. ‘ನಾಟಕ’ ಅನಿಸಿಹೋಗುತ್ತದೆ. ಶವದ ಸ್ನಾನ ಮಾಡಿಸಬೇಕು. ನಿಜವಾಗಿಯೂ ಆತನನ್ನು ಪೂರ್ತಿಯಾಗಿ ಲಕ್ಷ್ಯ ಕೊಟ್ಟು ನೋಡಿದ್ದು ಈಗಲೇ! ಪ್ರಾಯದಲ್ಲಿ ಗಟ್ಟಿ ಮುಟ್ಟಾಗಿದ್ದವ ಅವ. ಕಾಯಿಮರ ಹತ್ತುತ್ತಿದ್ದ. ದಿನಕ್ಕೆ 20 ಕಿ.ಮೀ. ಸೈಕಲ್ ಹೊಡೆಯುತ್ತಿದ್ದ. ಆದರೆ ಈಗ ಈತನ ಶರೀರ ಬಡವಾಗಿ ಹೋಗಿತ್ತು. ಅಷ್ಟು ವಯಸ್ಸಾದವರ ಶರೀರ ಹೀಗೆ ಆಗಿಹೋಗುತ್ತದೆ ಎಂದು ತಿಳಿದಿದ್ದು ಈಗಲೇ. ಹಾಗೆ ಇದ್ದ ಶರೀರ ಈಗ ಹೀಗೆ ಆಗಿಹೋಗಿದೆ. ಅಂದರೆ ಬಹುಶಃ ಒಂದು ಹಂತಕ್ಕೆ ಬೆಳೆದ ನಂತರ ಸಾವು ಆರಂಭವಾಗಿಯೇಬಿಡುತ್ತದೆ. ಸಾವು ಒಂದು ದಿನದ ಘಟನೆಯಲ್ಲ. ಒಂದು ಹಂತದ ನಂತರ ನಾವು ಸಾಯುತ್ತಲೇ ಹೋಗುತ್ತೇವೆ.

ಈಗ ಎಲ್ಲರೂ ‘ಶವ’ದ ಮೇಲೆ ತಣ್ಣೀರು ಸುರಿಯುವುದು. ನೂರಾರು ಬಕೆಟ್‌ಗಳಷ್ಟು ನೀರು ಕೋಡಿಯಾಗಿ ಹರಿಯುತ್ತದೆ. ಆತ ಬದುಕಿದ್ದರೆ ಬೈಯುತ್ತಿದ್ದ. ಇಷ್ಟೊಂದು ನೀರು ಹಾಳುಮಾಡಲು ಬಿಡುತ್ತಿರಲಿಲ್ಲ. ‘ನೀರನ್ನು ವ್ಯರ್ಥ ಮಾಡಬೇಡಿ, ತೆಂಗಿನ ಮರದ ಬುಡಕ್ಕಾದರೂ ಹಾಕಿ’ ಎನ್ನುತ್ತಿದ್ದ. ಮತ್ತೆ, ‘ಇಷ್ಟೊಂದು ಜನ ನಿಮ್ಮ ಕೆಲಸ ಬಿಟ್ಟು ಇಲ್ಲಿ ಯಾಕೆ ಬಂದಿದ್ದು? ನಿಮಗೆಲ್ಲ ಕೆಲಸ ಇಲ್ಲ’ ಎಂದು ಬೈಯುತ್ತಿದ್ದ. ‘ನಿಮಗೆ ದುಡ್ಡು ಹೆಚ್ಚಾದರೆ ನನಗೆ ಕೊಡಿ, ತೋಟಕ್ಕೆ ಗೊಬ್ಬರ ಹಾಕಿಸುತ್ತೇನೆ’ ಎಂದು ಹೇಳುತ್ತಿದ್ದ.

ಶವ ಸುಡುವ ಕೆಲಸದವರಿಗೆ ಪುರುಸೊತ್ತು ಇರುವುದಿಲ್ಲ. ನೂರಾರು ಹೆಣಗಳು ಕ್ಯೂನಲ್ಲಿ ಕಾದು ನಿಂತಿರುತ್ತವೆ. ಅದಕ್ಕೆಂದೇ, ‘ನಿಮ್ಮ ಕೆಲಸ ಬೇಗ ಬೇಗ ಮುಗಿಸಿ’ ಎಂದು ಗಡಿಬಿಡಿ ಮಾಡುತ್ತಾರೆ. ಈಗ ತರಾತುರಿಯಲ್ಲಿ ಆತನಿಗೆ ತುಳಸಿಮಾಲೆ ಹಾಕುವುದು. ಬಾಯಿ ಒಳಗೆ ಮಣ್ಣಿನ ಕಣದಂತ ಬಂಗಾರ ಇಡುವುದು. ಆತನ ಎದೆಯ ಮೇಲೆ ಊದಿನ ಕಡ್ಡಿ ಹಚ್ಚಿ ಗಂಧದ ಚಕ್ಕೆ ಚೂರು ಬಿಟ್ಟು ಕರ್ಪೂರ ಇಟ್ಟು ಬೆಂಕಿ ಹೊತ್ತಿಸಬೇಕು. ಸುಡುವ ಯಂತ್ರಕ್ಕೆ ಕಾಯುವ ಪ್ರಜ್ಞೆ ಇರುವುದೇ ಇಲ್ಲ. ಶರೀರವನ್ನು ಇಟ್ಟ ಕೂಡಲೇ ‘ಸರ್ರ್’ ಎಂದು ಒಳಗೆಳೆದುಕೊಳ್ಳುತ್ತದೆ. ಇಲೆಕ್ಟ್ರಿಕ್ ಕ್ರಿಮೆಟೋರಿಯಮ್ ಅದು. ಒಂದು ಕ್ಷಣ, ಕೇವಲ ಒಂದೇ ಕ್ಷಣದಲ್ಲಿ ಶರೀರವನ್ನೆಲ್ಲ ಬೆಂಕಿ ಆವರಿಸಿಬಿಡುತ್ತದೆ....

ಎಮಿಲಿ ಡಿಕಿನ್ಸನ್ ಹೇಳುವ ರೀತಿಯ ಸಾವಿನ ನಂತರದ ಪಯಣ ಈಗ ಆರಂಭವಾಗುತ್ತದೆ....

(ಲೇಖಕರು ಸಂವಹನಾ ಸಮಾಲೋಚಕರು)

ಸ್ವಲ್ಪ ದಿನ ಹೊಗೆ ಬಿಟ್ಟ, ಆಮೇಲೆ ಹೋಗೇ ಬಿಟ್ಟ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಇತ್ತೀಚೆಗೆ ಕೆಲವರು ಸಿನಿಮಾ ಆಡಿಷನ್‌ಗೆ ಅಂತ ಕರೆದು ಅಲ್ಲಿಗೆ ಅವಕಾಶಕ್ಕಾಗಿ ಬರುವವರನ್ನು ಬಕ್ರಾ ಮಾಡುತ್ತಿರುವ ಘಟನೆಗಳು ವರದಿಯಾಗಿವೆ. ಹಾಗೆ ಸಿನಿಮಾದಲ್ಲಿ ನಟಿಸುವ ಅವಕಾಶಕ್ಕೆ ಅಂತ ಬಂದವರ ಬಳಿ, ‘ನೀವು ಕಲಾವಿದರ ಸಂಘದ ಕಾರ್ಡ್ ಮಾಡಿಸಿಕೊಳ್ಳಬೇಕು. ಅದಕ್ಕೆ ಇಷ್ಟು ಖರ್ಚಾಗುತ್ತೆ, ಅದೆಲ್ಲಾ ನಾವೇ ಮಾಡಿಸಿಕೊಡ್ತೀವಿ’ ಅಂತ ದುಡ್ಡು ಪೀಕುತ್ತಿರೋ ಇವರನ್ನು ನೋಡಿದ ಮೇಲೆ ಯಂಡಮೂರಿ ವೀರೇಂದ್ರನಾಥ್ ಅವರು ‘ದುಡ್ಡು ಮಾಡುವುದು ಹೇಗೆ?’ ಎಂಬ ತಮ್ಮ ಪುಸ್ತಕದಲ್ಲಿ ಬರೆದ ಒಂದು ವಿಷಯ ನೆನಪಾಯಿತು. ಯಂಡಮೂರಿ ಇದನ್ನ ಎಷ್ಟು ಜಾಣ್ಮೆಯಿಂದ ಬರೆದಿದ್ದಾರೆ ಅಂದ್ರೆ ಯಾರೂ ಈ ರೀತಿ ಮೋಸ ಮಾಡುವವರ ಮೇಲೆ ಕೇಸು ಹಾಕುವಂತಿಲ್ಲ. ಆ ಪ್ಲ್ಯಾನ್ ಏನಪ್ಪಾ ಅಂದ್ರೆ, ‘ನಾವು ಸಿನಿಮಾ ಮಾಡ್ತಾ ಇದ್ದೀವಿ, ಕಲಾವಿದರು ಬೇಕಾಗಿದ್ದಾರೆ’ ಅಂತ ಕಾಲ್ ಮಾಡೋದು. ಅಲ್ಲಿಗೆ ಬರುವವರಿಗೆಲ್ಲ, ‘ನಿಮಗೆ ನಮ್ಮ ಸಿನಿಮಾದಲ್ಲಿ ಅಭಿನಯಿಸೋಕೆ ತರಬೇತಿ ಕೊಡ್ತೀವಿ, ತರಬೇತಿ ಮುಗಿದ ಮೇಲೆ ನಾವು ಸಿನಿಮಾ ಮಾಡುವಾಗ ನಿಮ್ಮನ್ನ ಕರೆದು 100 ಪರ್ಸೆಂಟ್ ಅವಕಾಶ ಕೊಡುತ್ತೇವೆ ಅಂತ ಅಗ್ರಿಮೆಂಟ್ ಮಾಡಿಕೊಡ್ತೀವಿ. ಆದ್ರೆ ತರಬೇತಿಗೆ ಅಂತ ನೀವು 25 ಸಾವಿರ ರುಪಾಯಿ ಕೊಡಬೇಕು’ ಅಂತ ಎಲ್ಲರಿಂದ 25 ಸಾವಿರ ರುಪಾಯಿ ತಗೊಂಡು, ಅದರಲ್ಲಿ ಒಂದೆರಡು ಸಾವಿರ ಖರ್ಚು ಮಾಡಿ, ಯಾವುದೋ ಕೆಲಸಕ್ಕೆ ಬಾರದ ಕೆಲವು ತರಬೇತಿ ಕೊಟ್ಟಂತೆ ಮಾಡಿ ಕಳಿಸೋದು. ಇವರ ಪ್ಲ್ಯಾನ್ ಏನಪ್ಪಾ ಅಂದ್ರೆ, ಕಥೆ ಅಲ್ಲಿಗೇ ಮುಗೀತು. ಅವರು ಯಾವತ್ತೂ ಸಿನಿಮಾ ಮಾಡೋದೇ ಇಲ್ಲ. ಅವರು ಅಗ್ರಿಮೆಂಟ್‌ನಲ್ಲಿ ಹೇಳಿರೋದು ‘ನಾವು ಸಿನಿಮಾ ಮಾಡುವಾಗ 100 ಪರ್ಸೆಂಟ್ ನಿಮ್ಮನ್ನು ಕರೆದು ಅವಕಾಶ ಕೊಡ್ತೀವಿ’ ಅಂತ. ಸಿನಿಮಾ ಮಾಡೇ ಮಾಡ್ತೀವಿ ಅಂತೇನೂ ಹೇಳಿಲ್ಲ. ಅಲ್ಲಿಗೆ ಅವರು ಸಿನಿಮಾ ಮಾಡಲ್ಲ, ಇವರಿಗೆ ಅವಕಾಶ ಸಿಗಲ್ಲ. ಆದರೆ, ಅವರಿಗೆ ಮಾತ್ರ ಪ್ರತಿಯೊಬ್ಬರಿಂದ ಕಮ್ಮಿ ಅಂದ್ರೂ 20 ಸಾವಿರ ರುಪಾಯಿ ಉಳಿಯುತ್ತೆ. ಪುಣ್ಯಕ್ಕೆ ಸ್ಯಾಂಡಲ್‌ವುಡ್‌ನಲ್ಲಿ ಇಂಥ ಕೆಲಸ ಇನ್ನೂ ಯಾರೂ ಮಾಡಿಲ್ಲ.

ಲೂಸ್ ಟಾಕ್ ▸▸ ಸಿ.ಡಿ. ರಾಜಕಾರಣಿ

- **ಸರ್, ನಿಮ್ದೊಂದ್ ಸಿಡಿ ಬರುತ್ತೆ ಅಂತ ಸುದ್ದಿ ಇತ್ತಲ್ಲ, ಏನಾಯ್ತು ಸರ್, ರಿಲೀಸ್ ಆಗ್ಲೇ ಇಲ್ಲ?**

– ಡಿಸೆಂಬರ್ ತಿಂಗಳಲ್ಲಿ ದೊಡ್ ದೊಡ್ ಸಿನಿಮಾ ಇದ್ವಲ್ಲ, ಅದಕ್ಕೆ ರಾಂಗ್ ರಿಲೀಸ್ ಆಗುತ್ತೆ ಅಂತ ಸುಮ್ನೆ ಆದ್ರು ಅನ್ಸುತ್ತೆ. ಹೋಗ್ರಿ, ಹೋಗ್ರಿ.

- **ಬೇಜಾರ್ ಮಾಡ್ಕೊಬೇಡಿ ಸರ್, ಆದ್ರೂ ಬಹಳ ಜನ ಕಾಯ್ತಾ ಇದ್ರು ಆ ಸಿ.ಡಿ.ಗೋಸ್ಕರ..**

– ಯಾರ್ ಕಾಯ್ತಾ ಇದ್ರೋ ಇಲ್ವೋ, ನೀವ್ ಮೀಡಿಯಾದೋರ್ ಮಾತ್ರ ಬರ‘ಸಿಡಿ’ಲಿನಂಥ ಸುದ್ದಿ ಅಂತ ಹಾಕೋಕೆ ಬರಗೆಟ್ಟುಕೊಂಡು ಕಾಯ್ತಾ ಇದ್ರಿ ಅನ್ನೋದ್ ಮಾತ್ರ ನಿಜ.

- **ಹಂಗೆಲ್ಲ ಏನಿಲ್ಲ ಬಿಡಿ. ಸರಿ, ಆದ್ರೂ ನೀವು ರಾಜಕಾರಣಿಗಳಿಗೆ ಈ ಸಿ.ಡಿ. ಅನ್ನೋದು ಬಹಳ ಹೆದರಿಸುತ್ತೆ ಅಲ್ವಾ ಸರ್?**

– ಯಾವ್ ಹೆದ್ರಿಕೆನೂ ಇಲ್ಲ, ನಾವು ಈ ಸಿ.ಡಿ.ಗಳಿಗೆ ಉತ್ರ ಕೊಡೋಕೆ ಅಂತನೇ, ಉಪೇಂದ್ರಂದು ‘ಬುದ್ಧಿವಂತ’ ಸಿನಿಮಾ ಸಿ.ಡಿ. ಕೈಯಲ್ ಇಟ್ಕೊಂಡೇ ಅಡ್ಡಾಡ್ತೀವಿ. ಸಿ.ಡಿ. ಬಂದ ತಕ್ಷಣ ‘ನಾನವನಲ್ಲ’ ಅಂತ ಹೇಳೋಕೆ.

- **ಅದ್ ನಿಜ ಬಿಡಿ, ಆದ್ರೆ ನಿಮ್ಗೆ ಭಯ ಆಗಿತ್ತಾ ಸರ್, ನಿಜ ಹೇಳಿ?**

– ಅಯ್ಯೋ, ನಂಗ್ಯಾಕ್ರೀ ಭಯ?, ಇಂಥವೆಲ್ಲ ‘ಹೊರಗೆ ಬರ್ತಾವೆ’ ಅಂತಾನೇ ನಾನು ಮೊದ್ಲೇ ಕೋರ್ಟಿಂದ ‘ಸ್ಟೇ ಆನ್’ ತಂದಿದ್ದೆ.

- **ಸರ್, ಅದು ‘ಸ್ಟೇ ಆನ್’ ಅಲ್ಲ, ‘ಸ್ಟೇ ಆರ್ಡರ್’. ಅರ್ಥ ಬೇರೆ ಆಗುತ್ತೆ. ಹೋಗ್ಲಿಬಿಡಿ, ಅಂದ್ರೆ ನೀವು ಈಗ ಅದರ ಬಗ್ಗೆ ಚಿಂತೆ ಮಾಡ್ತಿಲ್ಲ ಅಂತಾಯ್ತು.**

– ಚಿಂತೆ ಮಾಡ್ತಿಲ್ಲ ಅಂತ ಹೇಳೋಕಾಗಲ್ಲ, ಯಾಕಂದ್ರೆ, ಭೂಮಿ ಗುಂಡಗಿದೆ, ಸಿ.ಡಿ.ನೂ ಗುಂಡಗಿದೆ. ಮತ್ತೆ ತಿರುಗಿಕೊಂಡು ಅಲ್ಲಿಗೇ ಬಂದ್ರೂ ಬರಬಹುದು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಚರ್ಚ್ ಒಂದರಲ್ಲಿ ಕೆಲಸ ಮಾಡುತ್ತಿದ್ದ 20 ವರ್ಷದ ಡ್ರೋನ್ ಪ್ರದೀಪ ತಾನು ಮಾಡಿದ ತಪ್ಪನ್ನು ಕನ್‌ಫೆಸ್ ಮಾಡಿಕೊಳ್ಳಲು ಚರ್ಚಿಗೆ ಹೋದ. ಅಲ್ಲಿ ಫಾದರ್ ಅವರನ್ನು ಕಂಡು ‘‘ಫಾದರ್ ನಾನು ಒಂದು ಹುಡುಗಿಯ ಜತೆ ದೈಹಿಕ ಸಂಬಂಧ ಬೆಳೆಸಿದ್ದೇನೆ. ನನಗೆ ನನ್ನ ತಪ್ಪಿನ ಅರಿವಾಗಿದೆ. ಈಗ ನಾನು ಅದನ್ನು ಕನ್‌ಫೆಸ್ ಮಾಡಿಕೊಳ್ಳುತ್ತಿದ್ದೇನೆ’’ ಅಂದ. ಕನ್‌ಫೆಷನ್ ಫಾರ್ಮಾಲಿಟಿಗಳನ್ನೆಲ್ಲಾ ಮುಗಿಸುವ ಮುಂಚೆ ಫಾದರ್ ‘‘ಸರಿ ಪ್ರದೀಪ್, ನಿನ್ನ ಕನ್‌ಫೆಷನ್‌ಗೆ ವ್ಯವಸ್ಥೆ ಮಾಡುತ್ತೇನೆ. ಆದರೆ ನೀನು ಸಂಬಂಧ ಬೆಳೆಸಿದ ಆ ಹುಡುಗಿಯ ಹೆಸರೇನು?’’ ಅಂತ ಕೇಳಿದರು. ಅದಕ್ಕೆ ಡ್ರೋನ್ ಪ್ರದೀಪ ಉತ್ತರಿಸಿದ ‘‘ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ’’. ಫಾದರ್ ಕೇಳುತ್ತಲೇ ಹೋದರು, ಪ್ರದೀಪ ಉತ್ತರಿಸುತ್ತಲೇ ಹೋದ.

‘‘ಅದ್ಸರಿ, ನಮ್ಮ ಏರಿಯಾದಲ್ಲಿ ಅಂಥ ಹುಡುಗಿಯರು ಯಾರಿದ್ದಾರೆ?’’
‘‘ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ’’
‘‘ಚರ್ಚ್ ಹಿಂದಿನ ರೋಡಿನ ತೆರೆಸಾನಾ?’’
‘‘ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ’’
‘‘ಲೈಬ್ರೆರಿಯನ್ ಕ್ಯಾಥಿನಾ?’’
‘‘ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ’’
‘‘ಫ್ಲವರ್ ಶಾಪ್‌ನಲ್ಲಿ ಕೆಲಸ ಮಾಡೋ ರೋಸಿ?’’
‘‘ಸಾರಿ ಫಾದರ್, ನಾನು ಅದನ್ನು ಡಿಸ್‌ಕ್ಲೋಸ್ ಮಾಡೋಕಾಗಲ್ಲ’’

ಸರಿ, ಫಾದರ್‌ಗೆ ಇವನು ಬಾಯಿಬಿಡಲ್ಲ ಅಂತ ಗೊತ್ತಾಯ್ತು. ಕನ್‌ಫೆಷನ್ ಮುಗಿಸಿ, ‘‘ನೀನು ಯಾರ ಹೆಸರನ್ನೂ ಹೇಳಲಿಲ್ಲ. ಅದನ್ನು ನಾನು ಮೆಚ್ಚಿದ್ದೇನೆ. ಆದರೆ ತಪ್ಪಿಗೆ ಶಿಕ್ಷೆ ಆಗಲೇಬೇಕು. ಹಾಗಾಗಿ ನೀನು 4 ವಾರಗಳ ಕಾಲ ಚರ್ಚಿಗೆ ಬರುವಂತಿಲ್ಲ’’ ಅಂತ ಹೇಳಿ ಕಳುಹಿಸಿದರು. ಹೊರಗೆ ಬಂದ ಪ್ರದೀಪನನ್ನು ಅವನ ಸ್ನೇಹಿತ ಕೇಳಿದ, ‘‘ನೋಡಿದ್ಯಾ, ಸತ್ಯ ಹೇಳಿದ್ದಕ್ಕೆ ನಿಂಗೆ ಏನು ಸಿಕ್ತು?’’. ಅದಕ್ಕೆ ಪ್ರದೀಪ ತುಂಟತನದಿಂದ ಹೇಳಿದ- ‘‘ನಾಲ್ಕು ವಾರಗಳ ರಜೆ ಮತ್ತು ನನ್ನಂಥ ಹುಡುಗರ ಬಲೆಗೆ ಬೀಳುವಂಥ 3 ಹುಡುಗಿಯರ ಡೀಟೇಲ್ಸ್’’.

ಲೈನ್‌ಮ್ಯಾನ್

- **ಧೂಮಪಾನ ವಿರೋಧಿ ಸ್ಲೋಗನ್**

– ಮಾಸ್: ಸ್ವಲ್ಪ ದಿನ ಹೊಗೆ ಬಿಟ್ಟ, ಆಮೇಲೆ ಹೋಗೇ ಬಿಟ್ಟ
– ಕ್ಲಾಸ್: ಸಿಗರೇಟನ್ನು ‘ಆರಿಸಿ’, ಆರೋಗ್ಯವನ್ನು ‘ಆರಿಸಿ’.

- **ಹಾಡಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆದರೆ ಏನಂತ ಹೇಳ್ತಾರೆ?**

– ‘ಸಾಂಗೋ’ಪಾಂಗವಾಗಿ ನೆರವೇರಿತು.

- **ರೋಡ್ ಮೂವೀಸ್‌ನ ಕನ್ನಡದಲ್ಲಿ ಏನಂತಾರೆ?**

– ‘ರೋಡಿಸಂ’ ಮೂವೀಸ್

- **ಎಟಿಎಂ ಕಾರ್ಡ್ ಎಟಿಎಂ ಮಷಿನ್‌ನಲ್ಲೇ ಸಿಕ್ಕಿ ಹಾಕಿಕೊಂಡ್ರೆ ಅದು**

– ಕಾರ್ಡಿಯಾಕ್ ಅರೆಸ್ಟ್

- **ಸದಾ ಧೋತಿ ಉಡೋನಿಗೆ ಪ್ಯಾಂಟ್ ಹಾಕೋ ಆಸೆ ಬಂದರೆ ಅದು**

– ‘ಪ್ಯಾಂಟ’ಸಿ

- **ಔಷಧೀಯ ಸಸ್ಯಗಳನ್ನು ಬೆಳೆಯುವ ರೈತನ ಕೆಲಸ**

– ‘ಫಾರ್ಮ’ಸಿ

- **ಟೊಬ್ಯಾಕೋ ಫಿಲಾಸಫಿ**

– ಬೀಡಿ ಸೇದೋರಿಗೆಲ್ಲ ‘ಫಿಲ್ಟರ್’ ಇಲ್ದೆ ಮಾತಾಡೋ ‘ದಮ್’ ಬರಲ್ಲ

- **ಡ್ರಗ್ಸ್ ತಗೋತಾನೆ ಅಂತ ಸುಮ್ ಸುಮ್ನೆ ಆರೋಪ ಬಂದಾಗ ಸೆಲೆಬ್ರಿಟಿಗಳು ಏನು ಹೇಳ್ತಾರೆ?**

– ನಾನ್ ಇದಕ್ಕೆಲ್ಲ ‘ಸೊಪ್ಪು’ ಹಾಕಲ್ಲ

- **ಆಗ ತಾನೇ ಹುಟ್ಟಿದ ಹಸುವಿನ ಕರು**

– ‘ಹಸು’ ಗೂಸು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 229

ಸಮಾಚಾರ ಸಣ್ಣದಲ್ಲ

ಇಮ್ರಾನ್, ಬುಷ್ರಾಗೆ ಮತ್ತೆ 17ವರ್ಷ ಜೈಲು

ಇಸ್ಲಾಮಾಬಾದ್: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹಾಗೂ ಪತ್ನಿ ಬುಷ್ರಾ ಬೀಬಿ ಮತ್ತೆರಡು ದಶಕಗಳ ಕಾಲ ಜೈಲಿನಲ್ಲೇ ಉಳಿದು ಶಿಕ್ಷೆ ಅನುಭವಿಸಬೇಕಾಗಿ ಬಂದಿದೆ. ಇಮ್ರಾನ್ ಖಾನ್ ಪ್ರಧಾನಿಯಾಗಿದ್ದಾಗ ಸ್ವೀಕರಿಸಿದ್ದ ಪ್ರಶಸ್ತಿಗಳು, ಸನ್ಮಾನ ಫಲಕಗಳು, ಉಡುಗೊರೆಗಳನ್ನು ಹರಾಜು ಮಾಡಿ ಬಂದ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಲಾದ 'ತೋಷಖಾನ' ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕ್‌ನ ವಿಶೇಷ ನ್ಯಾಯಾಲಯ ಪತಿ-ಪತ್ನಿಗೆ ತಲಾ 17 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ. ಅಲ್ಲದೇ, ತಲಾ 52 ಲಕ್ಷ ರು.ಗಳ ದಂಡ ಪಾವತಿಗೂ ಆದೇಶಿಸಿದೆ. ಇಮ್ರಾನ್ ಸದ್ಯ ಶಿಕ್ಷೆ ಅನುಭವಿಸುತ್ತಿರುವ ಅಡಿಯಾಲಾ ಜೈಲಿನೊಳಗೆ ಇರುವ ವಿಶೇಷ ಕೋರ್ಟ್ ನ ನ್ಯಾಯಾಧೀಶ ಸೆಂಟ್ರಲ್ ಶಾರುಖ್ ಅರ್ಜುಮಂಡ್ ಶನಿವಾರ ತೀರ್ಪು ಪ್ರಕಟಿಸಿದರು.

ಖ್ಯಾತ ಯುಟ್ಯೂಬರ್ ಮೇಲೆ ಇ.ಡಿ ದಾಳಿ-ಸೆರೆ

ದೆಹಲಿ: ಒಂದೊಮ್ಮೆ ಕಡು ಬಡತನದಲ್ಲಿದ್ದ ಅನುರಾಗ್ ದ್ವಿವೇದಿ, ಬಳಿಕ ಯು ಟ್ಯೂಬ್ ಮೂಲಕ ಜನಪ್ರಿಯನಾದ. ಆದರೆ, ಕೆಲವೇ ವರ್ಷಗಳಲ್ಲಿ ಕೋಟ್ಯಂತರ ಆಸ್ತಿ ಸಂಪಾದಿಸಿ ಐಷಾರಾಮಿ ಜೀವನ ನಡೆಸುತ್ತಿದ್ದ. ಇತ್ತೀಚಿಗೆ ದುಬೈನಲ್ಲಿ ಅದ್ದೂರಿಯಾಗಿ ಮದುವೆಯಾಗುವ ಮೂಲಕ ಜಾರಿ ನಿರ್ದೇಶನಾಲಯದ(ಇ.ಡಿ) ಕಣ್ಣಿಗೆ ಬಿದ್ದ. ಉತ್ತರ ಪ್ರದೇಶ ರಾಜ್ಯದ ಉನ್ನಾವೊ ಪ್ರದೇಶದ 'ಯುಟ್ಯೂಬರ್' ದ್ವಿವೇದಿ ಮನೆ ಮೇಲೆ ಇತ್ತೀಚೆಗೆ ದಾಳಿ ನಡೆಸಿದ ಇ.ಡಿ ಅಧಿಕಾರಿಗಳೇ ಬೆಚ್ಚಿಬಿದ್ದಿದ್ದಾರೆ. ಅನುರಾಗ್ ಮನೆಯಲ್ಲಿದ್ದ ಐಷಾರಾಮಿ ಲ್ಯಾಂಬೋರ್ಘಿನಿ ಯುಆರ್‌ಎಸ್, ಬಿಎಂಡಬ್ಲ್ಯು, ಮರ್ಸಿಡಿಸ್, ಫಾರ್ಚೂನರ್, ಥಾರ್ ಕಾರುಗಳನ್ನು ಕಂಡು ಅಧಿಕಾರಿಗಳಿಗೇ ಆಘಾತವಾಗಿದೆ. ಯು ಟ್ಯೂಬ್ ಚಾನೆಲ್ ನಡೆಸಿ ಕೋಟಿಗಟ್ಟಲೆ ಸಂಪಾದನೆ ಸಾಧ್ಯವೇ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಮುಂದಾದಾಗ ಅನುರಾಗ್ ಆನ್‌ಲೈನ್ ಬೆಟ್ಟಿಂಗ್ ಮತ್ತು ಜೂಜಾಟದ ಅಪ್ಲಿಕೇಶನ್‌ಗಳಿಂದಲೇ ಕೋಟಿಗಟ್ಟಲೆ ಹಣ ಗಳಿಸಿ ಐಷಾರಾಮಿ ಜೀವನ ನಡೆಸುತ್ತಿದ್ದ ಎಂಬುದು ಗೊತ್ತಾಗಿದೆ. ಯುಟ್ಯೂಬರ್ ಬಂಧಿಸಿದ ಇ.ಡಿ ಕೋಟ್ಯಂತರ ಮೌಲ್ಯದ ಆಸ್ತಿಗಳು ಮತ್ತು ಹಣವನ್ನು ವಶಪಡಿಸಿಕೊಂಡಿದೆ. 20 ಲಕ್ಷ ರು. ನಗದು, ಡಿಜಿಟಲ್ ವಹಿವಾಟು ದಾಖಲೆಗಳು ವಶವಾಗಿವೆ.

ತೆಲುಗು ಚಿತ್ರನಟಿ ಆಮನಿ ಬಿಜೆಪಿಗೆ

ಹೈದರಾಬಾದ್: ತೆಲುಗು ಚಿತ್ರರಂಗದಲ್ಲಿ 1990ರ ದಶಕದಲ್ಲಿ ಜನಪ್ರಿಯ ನಟಿಯಾಗಿದ್ದ ಆಮನಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಮತ್ತು ತೆಲಂಗಾಣ ಬಿಜೆಪಿ ಅಧ್ಯಕ್ಷ ಎನ್.ರಾಮಚಂದ್ರರಾವ್ ಸಮ್ಮುಖ ಹೈದರಾಬಾದ್‌ನಲ್ಲಿ ಶನಿವಾರ ಕಮಲ ಪಕ್ಷದ ಧ್ವಜ ಸ್ವೀಕರಿಸಿದರು. ಆಮನಿ ಅವರು, ಕಮಲಹಾಸನ್, ನಾಗಾರ್ಜುನ ಅಕ್ಕಿನೇನಿ, ಬಾಲಕೃಷ್ಣ, ಮತ್ತು ಜಗಪತಿ ಬಾಬು ಸೇರಿದಂತೆ ಪ್ರಮುಖ ನಟರಿಗೆ ನಾಯಕಿಯಾಗಿ ಅಭಿನಯಿಸಿದ್ದರು. ಶುಭ ಸಂಕಲ್ಪಂ, ಶುಭ ಲಗ್ನಂ, ಮಿಸ್ಟರ್ ಪೆಲ್ಲಂ, ಘರಾನಾ ಬುಲ್ಲೋಡು ಮತ್ತು ಹಲೋ ಬ್ರದರ್ ಸಿನಿಮಾಗಳಲ್ಲಿ ನಡೆಸಿದ್ದರು. ಈಗ ಟಿವಿ ಧಾರಾವಾಹಿಗಳಲ್ಲಿ ಸಕ್ರಿಯರಾಗಿದ್ದಾರೆ. ಇದೇ ಸಂದರ್ಭ ಖ್ಯಾತ ಮೇಕಪ್ ಕಲಾವಿದೆ ಶೋಭಾ ಲತಾ ಕೂಡ ಕೇಸರಿ ಪಕ್ಷಕ್ಕೆ ಸೇರಿದರು.

ವಿರಾಮ
ಪ್ರತಿ ಭಾನುವಾರ

{ **ಗೌರವ್ ಭಾಟಿಯಾ** } ಬಿಜೆಪಿ ಮುಖಂಡ

ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ವಿದೇಶ ಪ್ರವಾಸದಲ್ಲಿ ಭಾರತ ವಿರೋಧಿ ಮಾತುಗಳನ್ನಾಡುತ್ತಾ ದೇಶಕ್ಕೆ ಅಪಮಾನ ಮಾಡುತ್ತಾರೆ. ವಿದೇಶದಲ್ಲಿರುವ ಭಾರತ ವಿರೋಧಿ ವ್ಯಕ್ತಿ-ಸಂಘಟನೆಗಳ ಭೇಟಿ ಮಾಡಿ ದೇಶಹಿತದ ವಿರುದ್ಧವೇ ನಡೆಯುತ್ತಾರೆ. ಭಾರತ ವಿರೋಧಿ ಜಾರ್ಜ್ ಸೋರಸ್-ರಾಹುಲ್ ಗಾಂಧಿ 2 ದೇಹ, ಒಂದೇ ಜೀವದಂತೆ.

ಸಿರಿಯದ ವಿವಿಧೆಡೆ ಇರುವ 70 ಐಎಸ್‌ಐಎಸ್ ಉಗ್ರ ನೆಲೆಗಳಿಗೆ ಪೆಟ್ಟು। ಡಿ.13ರಂದು ಅಮೆರಿಕ ಸೈನಿಕರ ಹತ್ಯೆ ಮಾಡಿದ್ದಕ್ಕೆ ಪ್ರತಿಕಾರದ ದಾಳಿ। ಎಫ್-15, ಎಫ್ 16 ಜೆಟ್, ಎ-10 ವಿಮಾನ ಬಳಕೆ

ಐಸಿಸ್ ಸರ್ವನಾಶಕ್ಕೆ ಅಮೆರಿಕ ಪಣ

ವಾಷಿಂಗ್ಟನ್: ಸಿರಿಯಾ ದೇಶದಲ್ಲಿನ ಐಎಸ್‌ಐಎಸ್ ಉಗ್ರ ಸಂಘಟನೆಯ ನೆಲೆಗಳ ಮೇಲೆ ಅಮೆರಿಕದ ವಾಯುಪಡೆ ತೀವ್ರ ಸ್ವರೂಪದಲ್ಲಿ ಗುರಿ ಇಟ್ಟು ದಾಳಿ ನಡೆಸಲಾರಂಭಿಸಿದೆ.

ಸಿರಿಯಾದಲ್ಲಿನ ಇಸ್ಲಾಮಿಕ್ ಸ್ಟೇಟ್ ಆಫ್ ಇರಾನ್ ಅಂಡ್ ಸಿರಿಯಾ(ಐಎಸ್‌ಐಎಸ್) ಉಗ್ರ ಸಂಘಟನೆಗಳ ಶಿಬಿರಗಳಿರುವ 70 ಸ್ಥಳಗಳನ್ನು ಗುರಿಯಾಗಿಸಿಕೊಂಡು ಅಮೆರಿಕದ ವಾಯುಪಡೆ ಶುಕ್ರವಾರ ರಾತ್ರಿ(ಭಾರತದ ಕಾಲಮಾನ ಶನಿವಾರ ಬೆಳಗ್ಗೆ) ಕ್ಷಿಪಣಿ ದಾಳಿ ನಡೆಸಲಾರಂಭಿಸಿದ್ದು, ಸಿರಿಯಾದಲ್ಲಿ ಸದ್ಯ ಯುದ್ಧದ ಸನ್ನಿವೇಶವೇ ಸೃಷ್ಟಿಯಾಗಿದೆ. ತನ್ನ ಸೈನಿಕರಿಬ್ಬರ ಹತ್ಯೆಗೆ ಪ್ರತಿಕಾರ ಕ್ರಮವಾಗಿ ಅಮೆರಿಕ ಆರಂಭಿಸಿರುವ ಈ ಸೇನಾ ಕಾರ್ಯಾಚರಣೆಗೆ ಸಿರಿಯಾ ಮತ್ತು ಜೋರ್ಡಾನ್ ದೇಶಗಳ ಸೇನೆ ಮತ್ತು ವಾಯುಪಡೆಗೂ ಕೈಜೋಡಿಸಿರುವುದು ಆಪರೇಷನ್ ಹಾಕ್ ಐ ದಾಳಿಯನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ದಿದೆ.

- 'ಆಪರೇಷನ್ ಹಾಕ್ ಐ' ದಾಳಿಗೆ ಕೈಜೋಡಿಸಿದ ಸಿರಿಯಾ, ಜೋರ್ಡಾನ್

ಸಿರಿಯಾದ ಪಲ್‌ಮೈರಾ ನಗರದ ಬಳಿ ಶಾಂತಿ ಸ್ಥಾಪನೆಗಾಗಿ ನೆಲೆಸಿದ್ದ ಅಮೆರಿಕದ ಸೇನಾಪಡೆ ಮೇಲೆ 'ಐಎಸ್‌ಐಎಸ್' ಉಗ್ರರ ಗುಂಪು ಡಿ.13ರಂದು ದಾಳಿ ನಡೆಸಿದ್ದರಿಂದ ಅಮೆರಿಕದ ಇಬ್ಬರು ಯೋಧರು ಮತ್ತು ಒಬ್ಬ ಭಾಷಾಂತರಕಾರ ಹತ್ಯೆಯಾಗಿತ್ತು. 25 ವರ್ಷದ ಸಾರ್ಜೆಂಟ್ ಎಡ್ಗರ್ ಬ್ರೈನ್ ಟೋರಸ್ ಟೋವರ್ ಮತ್ತು 29 ವರ್ಷದ ಸಾರ್ಜೆಂಟ್ ವಿಲಿಯಮ್ ನಾಥನಿಲ್ ಹೋವಾರ್ಡ್ ಹಾಗೂ 54 ವರ್ಷದ ಇರಾಕ್ ಸಂಜಾತ, ಅಮೆರಿಕದ ಮಿಷಿಗನ್ ನಿವಾಸಿ ಭಾಷಾಂತರಕಾರ ಅಯ್ಯದ್ ಮನ್ಸೂರ್ ಸಕತ್ ಐಎಸ್‌ಐಎಸ್ ದಾಳಿಗೆ ಬಲಿಯಾದರು. ಅದಕ್ಕೆ ಪ್ರತಿಕಾರ ತೆಗೆದುಕೊಳ್ಳುವ ಕ್ರಮವಾಗಿ ಅಮೆರಿಕದ ಸೇನೆ ಮತ್ತು ವಾಯುಪಡೆಗಳು 'ಆಪರೇಷನ್ ಹಾಕ್ ಐ ಸ್ಟ್ರೈಕ್' ಹೆಸರಿನಲ್ಲಿ ಐಎಸ್‌ಐಎಸ್‌ನ ಅಡಗುತಾಣಗಳ ಮೇಲೆ ಗುರಿಯಿಟ್ಟು ದಾಳಿ ನಡೆಸಲಾರಂಭಿಸಿವೆ.

ಅಮೆರಿಕದ ಈ ಕಾರ್ಯಾಚರಣೆಗೆ ಸಿರಿಯಾ ಅಧ್ಯಕ್ಷ ಬೆಂಬಲ ಘೋಷಿಸಿದ್ದಾರೆ. ಜತೆಗೆ ಸಿರಿಯಾದ ಸೇನೆಯನ್ನೂ ಜಂಟಿ ಕಾರ್ಯಾಚರಣೆಗೆ ಕಳುಹಿಸಿಕೊಟ್ಟಿದ್ದಾರೆ. ಜಂಟಿಯಾಗಿ ನಡೆಯುತ್ತಿರುವ ಕಾರ್ಯಾಚರಣೆ ನಿಜಕ್ಕೂ ತೀವ್ರ ಸ್ವರೂಪದ ತಿರುಗೇಟು ಕೊಡುವ ಕ್ರಮವಾಗಿರಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಾರ್ಥ್ ಕೆರೊಲಿನಾದಲ್ಲಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅಮೆರಿಕ ಸೇನಾಪಡೆಗಳ ಕಾರ್ಯಾಚರಣೆಗೆ ಪ್ರತಿಯಾಗಿ 'ಐಎಸ್‌ಐಎಸ್' ಕೂಡಾ ತೀವ್ರ ಸ್ವರೂಪದಲ್ಲಿ ಪ್ರತಿದಾಳಿ ನಡೆಸುತ್ತಿದ್ದು, ಅಮೆರಿಕದ ಸೇನಾಪಡೆಗಳ ಶಿಬಿರಗಳ ಮೇಲೆ ಕ್ಷಿಪಣಿ, ಷೆಲ್‌ಗಳಿಂದ ದಾಳಿ ನಡೆಸುತ್ತಿದೆ ಎಂದು ವರದಿಯಾಗಿದೆ.

'ಆಪರೇಷನ್ ಹಾಕ್ ಐ ಸ್ಟ್ರೈಕ್'

ಐಎಸ್‌ಐಎಸ್'ನ ಮೂಲ ಸೌಕರ್ಯ ನೆಲೆಗಳು, ಶಸ್ತ್ರಾಸ್ತ್ರ ಸಂಗ್ರಹಾಗಾರಗಳು, ಉಗ್ರರು ನೆಲೆಸಿರುವ ಸ್ಥಳಗಳನ್ನು ಮಾತ್ರವೇ ಗುರಿಯಾಗಿಸಿಕೊಂಡು ಅಮೆರಿಕದ ಸೇನೆಯು 'ಆಪರೇಷನ್ ಹಾಕ್ ಐ ಸ್ಟ್ರೈಕ್' ಹೆಸರಲ್ಲಿ ಶುಕ್ರವಾರ ರಾತ್ರಿಯಿಂದ ಕಾರ್ಯಾಚರಣೆ ಆರಂಭಿಸಿದೆ ಎಂದು ಅಮೆರಿಕದ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಹೇಳಿದ್ದಾರೆ. ಸುದ್ದಿಸಂಸ್ಥೆ ಜತೆ ಮಾತನಾಡಿ, 'ಇದೇನೂ ಯುದ್ಧದ ಆರಂಭವಲ್ಲ. ನಮ್ಮ ಇಬ್ಬರು ಸೈನಿಕರು ಮತ್ತು ಒಬ್ಬ ಭಾಷಾಂತರಕಾರರನ್ನು ಹತ್ಯೆ ಮಾಡಿದ್ದಕ್ಕೆ ಪ್ರತಿಕಾರವಾಗಿ ಕೈಗೊಂಡಿರುವ ಕಾರ್ಯಾಚರಣೆಯಾಗಿದೆ ಅಷ್ಟೇ. ಈ ದಿನ(ಶುಕ್ರವಾರ) ಐಎಸ್‌ಐಎಸ್‌ನ ಉಗ್ರರಲ್ಲಿ ಹಲವರನ್ನು ಹೊಡೆದುರುಳಿಸಿದ್ದೇವೆ. ಈ ದಾಳಿ ಇನ್ನಷ್ಟು ಕಾಲ ಮುಂದುವರಿಯಲಿದೆ ಎಂದು ವಿವರಿಸಿದ್ದಾರೆ. ಸದ್ಯ ಸಿರಿಯಾದಲ್ಲಿ ಅಮೆರಿಕದ 1000 ತುಕಡಿಗಳನ್ನು ಕೆಲ ಕಾಲದಿಂದ ನೆಲೆಗೊಳಿಸಲಾಗಿದೆ.

ದಾಳಿಗೆ ಸಿರಿಯಾ, ಜೋರ್ಡಾನ್ ಜತೆ

ಅಮೆರಿಕದ ವಾಯುಪಡೆ 'ಯುಎಸ್ ಎಫ್-15 ಮತ್ತು ಎಫ್ 16' ಯುದ್ಧ ವಿಮಾನಗಳು ಹಾಗೂ ಎ-10 ದಾಳಿಕೋರ ವಿಮಾನಗಳನ್ನು ಸದ್ಯ ನಡೆದಿರುವ 'ಆಪರೇಷನ್ ಹಾಕ್ ಐ ಸ್ಟ್ರೈಕ್' ಕಾರ್ಯಾಚರಣೆಯಲ್ಲಿ ಬಳಸಲಾಗುತ್ತಿದೆ. ಜತೆಗೆ ಬಲಿಷ್ಠ ಅಪಾಚೆ ಹೆಲಿಕಾಪ್ಟರ್‌ಗಳನ್ನೂ ಮತ್ತು 'ಎಚ್‌ಐಎಂಎಆರ್‌ಎಸ್' ರಾಕೆಟ್‌ಗಳನ್ನೂ ಬಳಸಿ ಐಎಸ್ ಐಎಸ್‌ನ 70 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಗಡಿ ಭಾಗದಲ್ಲಿನ ದಾಳಿಗೆ ಅಮೆರಿಕ- ಸಿರಿಯಾ ವಾಯುಪಡೆಗೆ ನೆರೆಯ ಜೋರ್ಡಾನ್ ದೇಶದ ವಾಯುಪಡೆಯ ವಿಮಾನಗಳೂ ಕೈಜೋಡಿಸಿವೆ ಎಂದು ಅಮೆರಿಕದ ಕೇಂದ್ರ ಕಾರ್ಯಾಚರಣೆ ಪಡೆ ಅಧಿಕಾರಿಗಳು ವಿವರಿಸಿದ್ದಾರೆ.

ನಮ್ಮ ಸೈನಿಕರು ಐಎಸ್ ಐಎಸ್‌ನ ಪ್ರಮುಖ ತಾಣಗಳನ್ನು ಗುರಿಯಾಗಿಸಿ ಪ್ರಬಲ ದಾಳಿ ನಡೆಸುತ್ತಿದ್ದಾರೆ. ಐಎಸ್‌ಐಎಸ್‌ನ ದುರುಳರನ್ನು ಸರ್ವನಾಶ ಮಾಡಲಿದ್ದಾರೆ. ಪ್ರತಿಕಾರ ಕ್ರಮದ ನಮ್ಮ ದಾಳಿ ಯಶಸ್ವಿಯಾಗಲಿದೆ.
-ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ಬಾಂಗ್ಲಾದೇಶ ನುಸುಳುಕೋರರ ರಕ್ಷಣೆಗೆ ಎಸ್ಐಆರ್‌ಗೆ ವಿರೋಧ

- ಮಮತಾ ಸರಕಾರ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ
- ನಾದಿಯಾದಲ್ಲಿ 3200 ಕೋಟಿ ರು. ಯೋಜನೆ ಚಾಲನೆ

ಕೊಲ್ಕತ್ತ: ಬಾಂಗ್ಲಾದೇಶದ ಅಕ್ರಮ ನುಸುಳುಕೋರರನ್ನು ರಕ್ಷಿಸುವ ಸಲುವಾಗಿಯೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸರಕಾರ ಚುನಾವಣಾ ಆಯೋಗ ಕೈಗೊಂಡ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್)ಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದ್ದಾರೆ.

ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಶನಿವಾರ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಅಕ್ರಮವಾಗಿ ದೇಶದೊಳಕ್ಕೆ ನುಸುಳಿರುವ ಅಕ್ರಮ ವಲಸಿಗರಿಗೆ ತೃಣಮೂಲ ಕಾಂಗ್ರೆಸ್‌ನಿಂದ ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ಬೆಂಬಲ ಪಡೆದಿದ್ದಾರೆ ಎಂದು ಹೇಳಿದ್ದಾರೆ.

ಬಿಹಾರದಲ್ಲಿ ಎನ್‌ಡಿಎ ಸಿಕ್ಕ ಗೆಲುವು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಬಾಗಿಲನ್ನು ದೊಡ್ಡದಾಗಿ ತೆರೆದಿದೆ ಎಂದು ಹೇಳಿದ ಮೋದಿ, 'ಪಶ್ಚಿಮ ಬಂಗಾಳದಲ್ಲಿನ ಟಿಎಂಸಿಯ ಮಹಾ ಜಂಗಲ್ ರಾಜ್ ಅನ್ನು ಬಿಜೆಪಿ ಕೊನೆಗೊಳಿಸಲಿದೆ' ಎಂದು ಭರವಸೆ ನೀಡಿದರು. 2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೂ ಒಮ್ಮೆ ಅವಕಾಶ ನೀಡಿ ಎಂದು ಬಂಗಾಳದ ಜನರಿಗೆ ಮನವಿ ಮಾಡಿದರು. ಪಶ್ಚಿಮ ಬಂಗಾಳದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಒಲೈಕೆ ರಾಜಕೀಯ ಆಳ್ವಿಕೆ ನಡೆಸುತ್ತಿದೆ ಎಂದು ಟೀಕಿಸಿದ ಪ್ರಧಾನಿ ಮೋದಿ, ಬಿಜೆಪಿ ಯಾವ ಬೆಲೆ ತೆತ್ತಾದರೂ ಪಶ್ಚಿಮ ಬಂಗಾಳವನ್ನು ಅಭಿವೃದ್ಧಿ ಪಡಿಸಲಿದೆ ಎಂದು ಭರವಸೆ ನೀಡಿದರು.

ಕಾಮಗಾರಿಗೆ ಚಾಲನೆ: ನಾದಿಯಾ ಜಿಲ್ಲೆಯ ರಣಘಾಟ್‌ನಲ್ಲಿ ಪ್ರಧಾನಿ ಮೋದಿ 3,200 ಕೋಟಿ ರು.ಗಳ 2 ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಚಾಲನೆ ನೀಡಿದರು. ಎನ್‌ಎಚ್-34ರ 66.7 ಕಿಮೀ ಉದ್ದದ ಬಾರಾಜಗುಲಿ-ಕೃಷ್ಣನಗರ ವಿಭಾಗದ 4 ಪಥ ನಿರ್ಮಾಣ ಮತ್ತು ಎನ್‌ಎಚ್-34ರ 17.6 ಕಿಮೀ ಉದ್ದದ ಬಾರಾಜಸತ್-ಬಾರಾಜಗುಲಿ ವಿಭಾಗದ 4 ಪಥಗಳ ರಸ್ತೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ದಟ್ಟ ಮಂಜು: ಹೆಲಿಕಾಪ್ಟರ್ ವಾಪಸ್

ಶನಿವಾರ ಮಧ್ಯಾಹ್ನ ಮೋದಿ ತಾಹೆರ್‌ಪುರದಲ್ಲಿನ ರ‍್ಯಾಲಿ ಸ್ಥಳಕ್ಕೆ ತಲುಪಬೇಕಿತ್ತು. ಆದರೆ ಕೆಟ್ಟ ಹವಾಮಾನ, ದಟ್ಟ ಮಂಜು ಮುಸುಕಿದ್ದರಿಂದಾಗಿ ಗೋಚರತೆ ಪ್ರಮಾಣ ಬಹಳ ಕಡಿಮೆ ಇದ್ದುದರಿಂದ ಮೋದಿ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರನ್ನು ತಾಹೆರ್‌ಪುರ ಹೆಲಿ ಪ್ಯಾಡ್‌ನಲ್ಲಿ ಇಳಿಸಲು ಆಗಲಿಲ್ಲ. ಕೊಲ್ಕತ್ತಾ ವಿಮಾನ ನಿಲ್ದಾಣಕ್ಕೆ ವಾಪಸ್ ಆಗಬೇಕಾಯಿತು. ಬಳಿಕ ರಸ್ತೆ ಮಾರ್ಗವಾಗಿ ಮೋದಿ ನಾದಿಯಾ ಭಾಗಕ್ಕೆ ತೆರಳಿದರು.

ಅಧಿವೇಶನ ಸಮಾಪ್ತಿ: ಶೇ.121 ಉತ್ಪಾದಕತೆ

ದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನ ಮುಕ್ತಾಯಗೊಂಡಿದೆ. 'ಮತ ಚೋರಿ' ಘೋಷಣೆಯೊಂದಿಗೆ ಮತ್ತು ಚುನಾವಣೆ ಆಯೋಗದ 'ಎಸ್‌ಐಆರ್' ಪ್ರತಿಪಕ್ಷಗಳ ತೀವ್ರ ವಿರೋಧ ವ್ಯಕ್ತವಾಗುವುದರೊಂದಿಗೆ ಸಂಸತ್ತು ಭಾರೀ ಗದ್ದಲ ಹಾಗೂ ವಾಕ್ಸಮರಕ್ಕೆ ಕಾರಣವಾಗಿತ್ತು. ದಶಕಗಳ ಹಿಂದಿನ 'ಎಂನರೇಗಾ' ಯೋಜನೆ ರದ್ದುಗೊಳಿಸಿ, ಅದಕ್ಕೆ ಬದಲಾಗಿ 'ವಿಬಿಜಿ ರಾಮ್ ಜಿ' ವಿಧೇಯಕ ಅಂಗೀಕಾರ, ಖಾಸಗಿಗೆ ಪರಮಾಣು ವಲಯ ಮುಕ್ತಗೊಳಿಸುವ ವಿಧೇಯಕ ಅಂಗೀಕಾರಕ್ಕೆ ಈ ಬಾರಿಯ ಅಧಿವೇಶನ ಕಾರಣವಾಗಿದೆ. ಚಳಿಗಾಲದ ಅಧಿವೇಶನದಲ್ಲಿ ಲೋಕಸಭೆ ಕಲಾಪ 92 ಗಂಟೆ 25 ನಿಮಿಷ ನಡೆದು ಶೇ.111ರಷ್ಟು ಉತ್ಪಾದಕತೆ ದಾಖಲಿಸಿದೆ. ರಾಜ್ಯಸಭೆ ಕಲಾಪವೂ 92 ಗಂಟೆಗಳ ಕಾಲ ನಡೆದು, ಶೇ.121ರಷ್ಟು ಉತ್ಪಾದಕತೆ ದಾಖಲಿಸಿದೆ.

ಚಿತ್ರನಟ-ಚಿತ್ರಕತೆಗಾರ ಶ್ರೀನಿವಾಸನ್ ನಿರ್ಗಮನ

ತಿರುವನಂತಪುರ: ಮಲಯಾಳ ಚಿತ್ರರಂಗದ ಹಿರಿಯ ನಟ, ಚಿತ್ರಕಥೆಗಾರ, ನಿರ್ಮಾಪಕ ಶ್ರೀನಿವಾಸನ್(69) ಶನಿವಾರ ಎರ್ನಾಕುಲಂ ತಾಲೂಕು ಆಸ್ಪತ್ರೆಯಲ್ಲಿ ನಿಧನರಾದರು.

ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಡಯಾಲಿಸಿಸ್‌ಗಾಗಿ ಅವರನ್ನು ಅಮೃತ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗಲೇ ದೇಹಸ್ಥಿತಿ ತೀರಾ ಹದಗೆಟ್ಟಿತು. ಹಾಗಾಗಿ ಅವರನ್ನು ತ್ರಿಪುನಿತುರ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಶನಿವಾರ ಬೆಳಗ್ಗೆ ಕೊನೆಯುಸಿರೆಳೆದರು.

1956ರ ಏ.6ರಂದು ಕಣ್ಣೂರು ಜಿಲ್ಲೆಯ ತಲಶ್ಶೇರಿ ಬಳಿಯ ಪಟ್ಯಂನ ಸಾಧಾರಣ ಕುಟುಂಬದಲ್ಲಿ ಜನಿಸಿದ ಶ್ರೀನಿವಾಸನ್, ಅರ್ಥಶಾಸ್ತ್ರದಲ್ಲಿ ಪದವಿ, ಬಳಿಕ ತಮಿಳುನಾಡಿನ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯಲ್ಲಿ ತರಬೇತಿ ಪಡೆದರು. 1977ರಲ್ಲಿ ಪಿ.ಎ.ಬ್ಯಾಕರ್ ನಿರ್ದೇಶನದ 'ಮಣಿಮುಳಕ್ಕಂ' ಸಿನಿಮಾ ಮೂಲಕ ಮಳಯಾಳ ಸಿನಿರಂಗ ಪ್ರವೇಶಿಸಿದ ಶ್ರೀನಿವಾಸನ್, 1984ರಲ್ಲಿ 'ಒಡರುತ್ತು ಅಮ್ಮಾವ ಆಲಾರಿಯಂ' ಚಿತ್ರದ ಮೂಲಕ ಚಿತ್ರಕತೆಗಾರನಾಗಿ ಗುರುತಿಸಿಕೊಂಡರು. ತೀಕ್ಷ್ಣ ಸಾಮಾಜಿಕ ಸಮಸ್ಯೆಗಳನ್ನೂ ಹಾಸ್ಯಮಯವಾದ ಕಥೆಗಳನ್ನಾಗಿಸಿ ಚಿತ್ರಕತೆ ರಚಿಸಿ ಗಮನ ಸೆಳೆದಿದ್ದರು. 48 ವರ್ಷಗಳ ವೃತ್ತಿಜೀವನದಲ್ಲಿ ವಿಡಂಬನೆ ಮತ್ತು ದೈನಂದಿನ ವಾಸ್ತವಗಳ ತೀವ್ರ ಅರಿವಿನ ಚಿತ್ರಕಥೆಗಳ ಮೂಲಕ ಛಾಪು ಮೂಡಿಸಿದ್ದಾರೆ. ಸೃಜನಶೀಲ ನಟರಾಗಿಯೂ ಖ್ಯಾತಿ ಪಡೆದಿದ್ದರು.

ವಿಡಿಯೊ ಭಾಷಣದಲ್ಲಿ ಸೋನಿಯಾ ಕಿಡಿನುಡಿ

ನರೇಗಾ ನಾಶ ಬಡವರಿಗೆ ಮೋಸ

ದೆಹಲಿ: ಕಾಂಗ್ರೆಸ್ ನೇತೃತ್ವದ 'ಯುಪಿಎ' ಸರಕಾರ ದಶಕಗಳ ಹಿಂದೆ 'ಎಂ-ನರೇಗಾ' ಯೋಜನೆಯನ್ನು ನಾಶಪಡಿಸಿರುವ ಬಿಜೆಪಿ

ನೇತೃತ್ವದ ಎನ್‌ಡಿಎ ಸರಕಾರ, ಗ್ರಾಮೀಣ ಭಾಗದ ಬಡವರಿಗೆ ದೊಡ್ಡ ಮೋಸ ಮಾಡಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ, ರಾಜ್ಯಸಭಾ ಸದಸ್ಯೆ ಸೋನಿಯಾ ಗಾಂಧಿ ಶನಿವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಗ್ರಾಮೀಣ ಭಾಗದ ಬಡವರ ಹಿತವನ್ನೇ ಮುಖ್ಯ ಉದ್ದೇಶವಾಗಿಸಿಕೊಂಡಿದ್ದ ಎಂ-ನರೇಗಾ (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ) ಯೋಜನೆಯನ್ನು ನಾಶಪಡಿಸಿ, ವಿಬಿ-ಜಿ ರಾಮ್ ಜಿ ಹೆಸರಲ್ಲಿ ಹೊಸ ವಿಧೇಯಕ ಅಂಗೀಕರಿಸಲಾಗಿದೆ ಎಂದು ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ಅಧಿಕೃತ 'ಎಕ್ಸ್' ಖಾತೆಯಲ್ಲಿ ಕಿಡಿಕಾರಿದ್ದಾರೆ

ಕಾಂಗ್ರೆಸ್ ನೇತೃತ್ವದಲ್ಲಿ ಎಲ್ಲಾ ಪ್ರತಿಪಕ್ಷಗಳು ಸಂಸತ್ತಿನ ಒಳಹೊರಗೆ ತೀವ್ರ ವಿರೋಧ ವ್ಯಕ್ತಪಡಿಸಿದರೂ, ಸಂಸತ್ತಿನ ಆವರಣದಲ್ಲೇ ಪ್ರತಿಭಟನೆ ನಡೆಸಿದರೂ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮಹಾತ್ಮ ಗಾಂಧಿ ಹೆಸರು ಕಿತ್ತುಹಾಕಿ, ಹಲವು ಬದಲಾವಣೆ ಮಾಡಿ ಎಂ ನರೇಗಾ ಯೋಜನೆಯನ್ನೇ ನಾಶ ಮಾಡಿದೆ ಎಂದು ಕಿಡಿ ಕಾರಿದ್ದಾರೆ.

ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ವಿಧೇಯಕ ಅಂಗೀಕರಿಸಲಾಗಿದೆ. ಅಷ್ಟೇ ಅಲ್ಲದೇ, ಯೋಜನೆ ಜಾರಿಯಲ್ಲಿ ರಾಜ್ಯ ಸರಕಾರಗಳ ಮೇಲಿನ ಹಣ ಹೊರೆಯನ್ನು ಶೇ.40ಕ್ಕೆ ಹೆಚ್ಚಿಸಿದೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

20 ವರ್ಷಗಳ ಹಿಂದೆ ಡಾ. ಮನಮೋಹನ್ ಸಿಂಗ್ ಆಡಳಿತದಲ್ಲಿ ಎಂಜಿಎನ್‌ಆರ್‌ಇಜಿಎ ಜಾರಿಗೆ ತಂದಿದ್ದನ್ನು ನೆನಪಿಸಿಕೊಂಡಿರುವ ಸೋನಿಯಾ, ಕಾರ್ಮಿಕರ ವಲಸೆ ತಡೆಗೆ ಮತ್ತು ಕೋಟ್ಯಂತರ ಬಡ ಕುಟುಂಬಗಳಿಗೆ ಸಹಾಯದ ಕ್ರಾಂತಿಕಾರಿ ಹೆಜ್ಜೆಯಾಗಿತ್ತು. ಗ್ರಾಮ ಪಂಚಾಯತ್‌ಗಳ ಸಬಲೀಕರಣಕ್ಕಾಗಿ ಯೋಜನೆ ರೂಪಿಸಲಾಗಿತ್ತು ಎಂದು ಹೇಳಿದ್ದಾರೆ.

ತನಿಖೆಗೆ ಆದೇಶ, ಸಿಐಎಸ್‌ಎಫ್ ವರದಿಗೆ ಸೂಚನೆ

ಮಗಳೆದುರೇ ಪ್ರಯಾಣಿಕನ ಮೇಲೆ ಎಐ ಪೈಲಟ್ ಹಲ್ಲೆ

ದೆಹಲಿ: ದೆಹಲಿಯಲ್ಲಿನ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1ರಲ್ಲಿ ಏರ್ ಇಂಡಿಯ ಎಕ್ಸ್‌ಪ್ರೆಸ್ ವಿಮಾನದ ಪೈಲಟ್ ಕ್ಯಾಪ್ಟನ್ ವೀರೇಂದ್ರ, ಹಿರಿಯ ಪ್ರಯಾಣಿಕರೊಬ್ಬರ ಮುಖಕ್ಕೇ ರಕ್ತಬರುವಂತೆ ಗುದ್ದಿ ಹಲ್ಲೆ ನಡೆಸಿದ್ದಾರೆ. ಏರ್ ಇಂಡಿಯ ಎಕ್ಸ್‌ಪ್ರೆಸ್ ಪೈಲಟ್ ವಿರೇಂದ್ರರನ್ನು ಅಮಾನತುಗೊಳಿಸಿದೆ.

ಪ್ರಯಾಣಿಕ ಅಂಕಿತ್ ದಿವಾನ್ ಮೇಲೆ ಅವರ 7 ವರ್ಷದ ಮಗಳೆದುರೇ ಪೈಲಟ್ ಮುಷ್ಟಿ ಕಟ್ಟಿ ಹೊಡೆದಿದ್ದಾರೆ. ಹೊಡೆತದ ತೀವ್ರತೆಗೆ ಪ್ರಯಾಣಿಕ ಅಂಕಿತ್ ಮೂಗು ಬಾಯಿಯಿಂದ ರಕ್ತಸ್ರಾವವಾಗಿದೆ.

ಪೈಲಟ್‌ಗಳು ಮತ್ತು ವಿಮಾನದ ಗಗನ ಸಖಿಯರು ತೆರಳಲು ಮೀಸಲಿದ್ದ ಭಾಗದಲ್ಲಿ ಪ್ರಯಾಣಿಕ ಅಂಕಿತ್ ಮಗಳೊಟ್ಟಿಗೆ ನಡೆದು ಬಂದರು ಎಂಬ ಕಾರಣಕ್ಕೇ ಜಗಳ ತೆಗೆದ ಪೈಲಟ್ ವಿರೇಂದ್ರ, 'ನೀವು ಅನಕ್ಷರಸ್ಥರೇ ಈ ಮಾರ್ಗ ಸಿಬ್ಬಂದಿಗೆ ಮಾತ್ರ ಎಂದು ಹೇಳುವ ಫಲಕವನ್ನು ನೀವು ಓದಿಲ್ಲವೇ' ಎಂದು ಕೇಳಿದ್ದಾರೆ. ಆಗ ಮಾತಿಗೆ ಮಾತು ಬೆಳೆದಿದೆ. ನಂತರ ಸಿಟ್ಟಿಗೆದ್ದ ಪೈಲಟ್, ಅಂಕಿತ್ ಮುಖಕ್ಕೆ ಬಲವಾಗಿ ಹೊಡೆದಿದ್ದಾರೆ.

ಪ್ರಯಾಣಿಕ ಅಂಕಿತ್, ಪೈಲಟ್ ವೀರೇಂಧ್ರ

ಪೈಲಟ್ ವೀರೇಂದ್ರ ಕೆಟ್ಟದಾಗಿ ವರ್ತಿಸಿದರು. ಸಿಟ್ಟಿಗೆದ್ದು ಮುಖಕ್ಕೆ ಗುದ್ದಿ ರಕ್ತಬರುವಂತೆ ಮಾಡಿದರು ಎಂದು ಅಂಕಿತ್ ದಿವಾನ್ ದೂರಿದ್ದಾರೆ. 7 ವರ್ಷದ ಮಗಳು ಸೇರಿದಂತೆ ಇಡೀ ಕುಟುಂಬ ಆಘಾತಕ್ಕೊಳಗಾಗಿದೆ ಎಂದು ಅಂಕಿತ್ ಹೇಳಿದ್ದಾರೆ.

ಘಟನೆ ನಂತರ, ಏರ್ ಇಂಡಿಯ ಎಕ್ಸ್‌ಪ್ರೆಸ್ ವಿಷಾದ ವ್ಯಕ್ತಪಡಿಸಿದೆ. ಆರೋಪಿ ಪೈಲಟ್‌ನನ್ನು ತಕ್ಷಣವೇ ಕರ್ತವ್ಯದಿಂದ ತೆಗೆದುಹಾಕಿರುವುದಾಗಿ ಪ್ರಕಟಿಸಿದೆ. ಹಲ್ಲೆ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದ್ದು, ನೆಟ್ಟಿಗರ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಇಂದು ವಿಶ್ವಾದ್ಯಂತ 2ನೇ ವಿಶ್ವ ಧ್ಯಾನ ದಿನ ಆಚರಣೆ

ವಿಶ್ವಸಂಸ್ಥೆಯನ್ನೇ 20 ನಿಮಿಷ ಮೌನವಾಗಿಸಿದ ಶ್ರೀಶ್ರೀ ಧ್ಯಾನ

ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆ ಪ್ರಧಾನ ಕಚೇರಿಯಲ್ಲಿ ಶ್ರೀ ಶ್ರೀ ರವಿಶಂಕರ್ ಗುರೂಜಿ ಭಾಷಣ.

ನ್ಯೂಯಾರ್ಕ್: ಇದೇ ಡಿ.21ರ ಭಾನುವಾರ 2ನೇ 'ವಿಶ್ವ ಧ್ಯಾನ ದಿನ ಆಚರಣೆ' ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರು ಮೂಲದ 'ಆರ್ಟ್ ಆಫ್ ಲಿವಿಂಗ್' ಸಂಸ್ಥೆಯ ಸಂಸ್ಥಾಪಕ ಶ್ರೀಶ್ರೀ ರವಿಶಂಕರ್ ಗುರೂಜಿ ವಿಶ್ವಸಂಸ್ಥೆಯಲ್ಲಿ ಶುಕ್ರವಾರ ಸಂಜೆ(ಭಾರತದಲ್ಲಿ ಶನಿವಾರ ಬೆಳಗ್ಗೆ) ಪ್ರಾಸ್ತಾವಿಕ ಭಾಷಣ ಮಾಡಿದರು.

ಭಾರತ, ಶ್ರೀಲಂಕಾ, ಅಂಡೋರಾ, ಮೆಕ್ಸಿಕೊ, ನೇಪಾಳ ಮತ್ತಿತರ ಸದಸ್ಯ ರಾಷ್ಟ್ರಗಳು ಮತ್ತು ವಿಶ್ವಸಂಸ್ಥೆಯ ಖಾಯಂ ಪ್ರತಿನಿಧಿಗಳು ಸೇರಿದಂತೆ ವಿಶ್ವಸಂಸ್ಥೆಯ ಹಲವು ಸದಸ್ಯ ರಾಷ್ಟ್ರಗಳು 2ನೇ 'ವಿಶ್ವ ಧ್ಯಾನ ದಿನ' ಆಚರಿಸಲು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಒಟ್ಟುಗೂಡಿವೆ. ಪ್ರಾಚೀನ ಪದ್ಧತಿಯಾದ ಧ್ಯಾನದ ಆಚರಣೆಯಿಂದ ಜಾಗತಿಕವಾಗಿ ಸಾಮಾಜಿಕ, ರಾಜಕೀಯ ಮತ್ತು ಮಾನಸಿಕ ಆರೋಗ್ಯದಲ್ಲಿ ಸುಧಾರಣೆ ಆಗುತ್ತದೆ ಎಂದು ಗುರೂಜಿ ವಿಶ್ವದ ಗಮನ ಸೆಳೆದಿದ್ದಾರೆ.

ಭಾರತದ ಪರಂಪರೆಯಲ್ಲಿರುವ ಧ್ಯಾನ ಪದ್ಧತಿಯನ್ನು ಮಹತ್ವದ ರಾಜತಾಂತ್ರಿಕ ವೇದಿಕೆ ಮೂಲಕ ವಿಶ್ವದೆಲ್ಲೆಡೆಗೆ ಪರಿಚಯಿಸುವ ಪ್ರಯತ್ನ ಇದಾಗಿದೆ. ಧ್ಯಾನದ ಕುರಿತು ಜಗತ್ತಿಗೆ ಮಾರ್ಗದರ್ಶನ ನೀಡುವ ಮೂಲಕ ಭಾರತ ವಿಶ್ವಗುರು ಹಾದಿಯಲ್ಲೇ ಸಾಗಿದೆ.

ಕಾರ್ಯಕ್ರಮದ ಅಂತ್ಯದಲ್ಲಿ ವಿವಿಧ ದೇಶಗಳ ರಾಯಭಾರಿಗಳು ಮತ್ತು ಪ್ರತಿನಿಧಿಗಳಿಗೆ 20 ನಿಮಿಷ ಧ್ಯಾನ ಮಾಡುವುದನ್ನು ಗುರೂಜಿ ಅಭ್ಯಾಸ ಮಾಡಿಸಿದರು. ಇದರಿಂದ ವಿಶ್ವಸಂಸ್ಥೆ ಕೇಂದ್ರ ಕಚೇರಿ 20 ನಿಮಿಷ ನಿಶ್ಶಬ್ದವಾಗಿತ್ತು.

ಉಕ್ರೇನ್ ಸೈನಿಕರಿಗೆ ಪಾಠ

ಉಕ್ರೇನ್‌ನಲ್ಲಿ 8,000 ಸೈನಿಕರು ತೀವ್ರತಮ ಆಘಾತ ಮತ್ತು ಒತ್ತಡದ ಪರಿಸ್ಥಿತಿಯಿಂದ ಹೊರ ಬರಲು ಧ್ಯಾನ ಕಲಿತುಕೊಂಡಿದ್ದಾರೆ. ಅದು ಅವರ ಮನೋಬಲ ಹೆಚ್ಚಿಸಲು ನೆರವಾಗಿದೆ. ಧ್ಯಾನ ಕೇವಲ ಶಾಲಾ ತರಗತಿಯಲ್ಲಿ, ಚಿಕಿತ್ಸೆಗಳಲ್ಲಿ ಮಾತ್ರವಲ್ಲದೇ, ಯುದ್ಧಭೂಮಿಯಲ್ಲೂ ಮಹತ್ವದ ಪಾತ್ರ ವಹಿಸುತ್ತದೆ ಎಂಬುದಕ್ಕೆ ಇದೇ ಉತ್ತಮ ಉದಾಹರಣೆಯಾಗಿದೆ ಎಂದು ಗುರೂಜಿ ಹೇಳಿದ್ದಾರೆ.

ಪ್ರಕೃತಿ ಪರಿಕಲ್ಪನೆಯ ಅಸ್ಸಾಂನ ವಿ.ನಿಲ್ದಾಣ

ಗುವಾಹಟಿ: ಅಸ್ಸಾಂ ರಾಜ್ಯದ ಗುವಾಹಟಿಯಲ್ಲಿ 'ಲೋಕಪ್ರಿಯ ಗೋಪಿನಾಥ್ ಬಾರ್ಡೋಲೋಯ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ'ದ ಹೊಸ ಟರ್ಮಿನಲ್ ಕಟ್ಟಡವನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಉದ್ಘಾಟಿಸಿದರು. ನಂತರ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಇದು ಅಭಿವೃದ್ಧಿ ಆಚರಣೆಯ ದಿನ. ಅಸ್ಸಾಂ ಮಾತ್ರವಲ್ಲದೇ ಇಡೀ ಈಶಾನ್ಯದ ಅಭಿವೃದ್ಧಿಯ ಆಚರಣೆ. ಅಸ್ಸಾಂ ಯಾವ ರೀತಿ ಅಭಿವೃದ್ಧಿಯ ಹಬ್ಬವನ್ನು ಆಚರಿಸುತ್ತಿದೆ ಎಂದು ಇಡೀ ದೇಶ ನೋಡುತ್ತಿದೆ ಎಂದರು. ಪ್ರಕೃತಿ ಪರಿಕಲ್ಪನೆಯ ವಿಮಾನ ನಿಲ್ದಾಣದ ಟರ್ಮಿನಲ್ ಭಾರತದಲ್ಲೇ ಮೊದಲನೆಯದಾಗಿದೆ. 4,000 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಅಸ್ಸಾಂನ ಪರಿಸರವನ್ನು ಪ್ರತಿಬಿಂಬಿಸುವ ವಿನ್ಯಾಸದ ಟರ್ಮಿನಲ್ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿದೆ. ವಿಮಾನಗಳ ಸಂಪರ್ಕ ಸಾಮರ್ಥ್ಯವನ್ನು ಸುಧಾರಿಸುತ್ತದೆ. ಅಸ್ಸಾಂ ಮತ್ತು ನೆರೆಯ ರಾಜ್ಯಗಳಲ್ಲಿ ಪ್ರವಾಸೋದ್ಯಮ, ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆ ಹೆಚ್ಚಿಸುತ್ತದೆ ಎಂದು ಪ್ರಧಾನಿ ಗಮನ ಸೆಳೆದರು.

ಎಕೆ-47 ಸೇರಿ 24 ಬಂದೂಕು ಪೊಲೀಸ್ ವಶಕ್ಕೆ

ತೆಲಂಗಾಣ 41 ನಕ್ಸಲ್ ಶರಣು

ಹೈದರಾಬಾದ್‌ನಲ್ಲಿ 41 ನಕ್ಸಲರಿಂದ ವಶವಾದ ಶಸ್ತ್ರಾಸ್ತ್ರಗಳನ್ನು ಪರಿಶೀಲಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು.

ಹೈದರಾಬಾದ್: ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ 'ಕಂಪನಿ ಪ್ಲಟೂನ್ ಸಮಿತಿ' ಮತ್ತು 'ವಿಭಾಗ ಮಟ್ಟದ ಸಮಿತಿ'ಯ 6 ಹಿರಿಯ ನಕ್ಸಲ್ ನಾಯಕರು ಸೇರಿದಂತೆ ಒಟ್ಟು 41 ಮಾವೋವಾದಿ ಹೋರಾಟಗಾರರು ಶಸ್ತ್ರಾಸ್ತ್ರ ತ್ಯಜಿಸಿ ತೆಲಂಗಾಣ ಪೊಲೀಸರಿಗೆ ಶರಣಾಗಿದ್ದಾರೆ.

41 ನಕ್ಸಲರೂ ಹಿಂಸೆಯ ಹಾದಿ ಕೈಬಿಟ್ಟು ಸಮಾಜದ ಮುಖ್ಯವಾಹಿನಿಗೆ ಸೇರಲು ಬಯಸಿ ಶರಣುಬಂದರು ಎಂದು ತೆಲಂಗಾಣ ಪೊಲೀಸ್ ಮಹಾನಿರ್ದೇಶಕ ಬಿ.ಶಿವಧರ್ ರೆಡ್ಡಿ ತಿಳಿಸಿದ್ದಾರೆ.

ಶರಣಾದ ನಕ್ಸಲರ ಕಡೆಯಿಂದ 1 ಐಎನ್‌ಎಸ್‌ಎಎಸ್ ಎಲ್‌ಎಂಜಿ ಬಂದೂಕು, 3 ಎಕೆ-47 ರೈಫಲ್‌ಗಳು ಮತ್ತು ಐದು ಎಸ್‌ಎಲ್‌ಆರ್ ಬಂದೂಕು ಸೇರಿದಂತೆ 24 ವಿವಿಧ ಬಗೆಯ ಶಸ್ತ್ರಾಸ್ತ್ರಗಳು ಪೊಲೀಸರ ವಶಕ್ಕೆ ಬಂದಿವೆ. ಅಲ್ಲದೇ ವಿವಿಧ ಕ್ಯಾಲಿಬರ್‌ಗಳ 733 ಗುಂಡುಗಳನ್ನೂ ನಕ್ಸಲರು ಪೊಲೀಸರಿಗೆ ಹಸ್ತಾಂತರಿಸಿದರು.

ನಕ್ಸಲ್ ಹೋರಾಟಗಾರರನ್ನು ಅವರಿಗೆ ಪರಿಚಯವೇ ಇಲ್ಲದ ದೂರದ ಪ್ರದೇಶಗಳಿಗೆ ಅವರ ಮನಸ್ಸಿಗೆ ವಿರುದ್ಧವಾಗಿ ಸಿಪಿಐ (ಮಾವೋವಾದಿ) ನಾಯಕರು ನಿಯೋಜಿಸುತ್ತಿರುವುದರಿಂದ ಹತಾಶರಾದ 41 ನಕ್ಸಲರು ಶರಣು ಬಂದರು ಎಂದು ಪೊಲೀಸರು ತಿಳಿಸಿದ್ದಾರೆ.

ದಾಖಲೆಗಳ ಪರಿಶೀಲನೆ ನಂತರ ಪ್ರತಿ ಶರಣಾಗತರ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆದು ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಬರುವ ಪುನರ್ವಸತಿ ನೀತಿಯ 1.46 ಕೋಟಿ ರು.ಗಳನ್ನು ಖಾತೆಗೆ ಜಮಾ ಮಾಡಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೇವಿನ ಬಣವಿಗೆ ಬೆಂಕಿ

ಮುದಗಲ್: ಆಕಸ್ಮಿಕ ಬೆಂಕಿಗೆ ಮೇವಿನ ಬಣವಿ ಆಹುತಿಯಾದ ಘಟನೆ ಪಟ್ಟಣ ಸಮೀಪದ ಖೈರವಾಡಗಿ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ. ದನ ಕರುಗಳಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ಮೇವುನ್ನು ಸಂಗ್ರಹ ಮಾಡುಟ್ಟಿರುವ ಬಣವಿಗೆ ಆಕಸ್ಮಿಕ ಬೆಂಕಿ ತೊಗಲಿ ಲಕ್ಷಾಂತರ ರುಪಾಯಿ ಬೆಲೆಬಾಳುವ ಮೇವು ಸುಟ್ಟಿದೆ ಮುದಿಯಪ್ಪ ಚಿನ್ನಾಪುರ, ಮಲ್ಲಪ್ಪ ರಾಟಿ, ಅಮರೇಶ ಬೈಲಗುಡ್ಡ ಎಂಬುವರ ಐದು- ಆರು ಮೇವಿನ ಬಣವೆಗಳು ಸುಟ್ಟಿವೆ ಎಂದು ಸ್ಥಳೀಯರು ಮಾಹಿತಿ ನೀಡಿದರು. ಘಟನಾ ಸ್ಥಳಕ್ಕೆ ಲಿಂಗಸುಗೂರ ಅಗ್ನಿಶಾಮಕ ದಳದವರು ಬರುವಷ್ಟರಲ್ಲಿ ಮೇವಿನ ಬಣಗಳು ಸುಟ್ಟು ಹೋಗಿದ್ದವು ಈ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಖೈರವಾಡಗಿ ಗ್ರಾಮಸ್ಥರು ಒತ್ತಾಯ ಮಾಡಿದ್ದಾರೆ.

ಸದಸ್ಯರ ಚುನಾವಣಾ ವೇಳಾಪಟ್ಟಿ ಪ್ರಕಟ

ಬಳ್ಳಾರಿ: ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಕ್ಷೇತ್ರದಿಂದ ಚುನಾಯಿತ ಸದಸ್ಯರನ್ನು ಆಯ್ಕೆ ಮಾಡುವ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದೆ ಎಂದು ಚುನಾವಣಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ತಿಳಿಸಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 310ರ ಪ್ರಕಾರ ಜಿಲ್ಲಾ ಯೋಜನಾ ಸಮಿತಿ ರಚಿಸಬೇಕಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿ ಸದಸ್ಯರುಗಳ ಚುನಾವಣೆ) ನಿಯಮಗಳು 1996ರ 8ರ ನಿಯಮದ ಪ್ರಕಾರ ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಮತಕ್ಷೇತ್ರಗಳಿಂದ ಪ್ರತ್ಯೇಕವಾಗಿ ಸದಸ್ಯರ ಆಯ್ಕೆ ಕುರಿತು ಚುನಾವಣೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಚುನಾವಣಾ ವೇಳಾಪಟ್ಟಿ: ಪುರಸಭಾ ಕ್ಷೇತ್ರದಿಂದ ಚುನಾಯಿಸಬೇಕಾದ ಸದಸ್ಯರುಗಳ ಸಂಖ್ಯೆ: ಪುರಸಭಾ ಕ್ಷೇತ್ರದಿಂದ - 23 ಸದಸ್ಯರು. ನಾಮಪತ್ರ ಸ್ವೀಕರಿಸುವ ದಿನಾಂಕ, ಸಮಯ ಮತ್ತು ಸ್ಥಳ: ಡಿ.22 ರಿಂದ 31 ರ ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ. 2026 ರ ಜನವರಿ 13 ಸಂಜೆ 5 ಗಂಟೆಗೆ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ತಿಳಿಸಿದ್ದಾರೆ.

ಹೊಂಬಳಗಟ್ಟಿಯಲ್ಲಿ ಎನ್‌ಎಸ್‌ಎಸ್ ಶಿಬಿರ

ಹರಪನಹಳ್ಳಿ: ಯುವಕರಲ್ಲಿ ಸೇವಾ ಮನೋಭಾವ, ದೇಶಾಭಿಮಾನ ಮೂಡಿಸುವಲ್ಲಿ ಎನ್‌ಎಸ್‌ಎಸ್ ಪ್ರಮುಖ ಪಾತ್ರ ವಹಿಸಿದೆ ಎಂದು ರಾಜ್ಯ ಬಸವ ಚೇತನ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕ ಎಚ್.ಶಿವಾನಂದ ಹೇಳಿದರು. ತಾಲೂಕಿನ ಹೊಂಬಳಗಟ್ಟಿ ಗ್ರಾಮದ ಬಯಲು ರಂಗ ಮಂದಿರ ಆವರಣದಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಎಚ್ಪಿಎಸ್ ಪದವಿ ಮಹಾವಿದ್ಯಾಲಯದದಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು. ಯುವಕರು ಕೇವಲ ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಸುವವರಾಗಬೇಕು, ಸ್ವ-ಉದ್ಯಮ, ಹೊಸ ಆಲೋಚನೆಗಳು ಮತ್ತು ಆತ್ಮವಿಶ್ವಾಸದ ಮೂಲಕ ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಸಹಕಾರ ನೀಡಬೇಕು, ಜ್ಞಾನದ ಜತೆಗೆ ಮೌಲ್ಯಗಳನ್ನೂ ಹೊಂದಬೇಕೆಂದು ಯುವಕರಿಗೆ ಸಲಹೆ ನೀಡಿದರು. ಹೂವಿನಹಡಗಲಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಭೀಮಪ್ಪ ಮಾತನಾಡಿ ವಿದ್ಯಾರ್ಥಿ ಜೀವನದಲ್ಲೇ ಉಳಿತಾಯದ ಮಹತ್ವವನ್ನು ಕಲಿಯಬೇಕು, ಚಿಕ್ಕ ಮೊತ್ತವಾದರೂ ನಿಯಮಿತವಾಗಿ ಉಳಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸವೇಶ್ವರ ಯುವಕ ಸಂಘದ ಅಧ್ಯಕ್ಷ ಎಚ್.ಎಂ.ಬಸವರಾಜಯ್ಯ ವಹಿಸಿಕೊಂಡಿದ್ದರು. ಪ್ರಾಚಾರ್ಯ ಡಾ.ಮುತ್ತೇಶ. ಎನ್‌ಎಸ್ ಎಸ್ ಅಧಿಕಾರಿ ಮಂಜುನಾಥ ಮಾಳ್ಗಿ, ಉಪನ್ಯಾಸಕ ಕೊಟ್ರಗೌಡ ಕೆ, ಸಹಾಯಕ ಪ್ರಾಧ್ಯಾಪಕ ಡಾ.ಹರಾಳು ಬುಳ್ಳಪ್ಪ, ಎಚ್.ಗುರುಬಸವರಾಜ, ಎ.ಗೀತಾ, ಭವಾನಿ, ನವೀನ್ ಕುಮಾರ್ ಮುಖಂಡರಾದ ನವೀನ, ವಾಸಿಮ, ವೀರಣ್ಣ ಉಪಸ್ಥಿತರಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಪ್ರಲ್ಹಾದ್ ಜೋಷಿ} ಕೇಂದ್ರ ಸಚಿವರು

ನನ್ನ ಕಚೇರಿಗೆ ಬಂದವರಿಗೆ ಕೂರ್ಗ್ ಕಾಫಿಯನ್ನು ನೀಡುತ್ತೇನೆ. ಎಲ್ಲರೂ ಈ ಕಾಫಿ ಸ್ವಾದವನ್ನು ಮೆಚ್ಚುತ್ತಾರೆ. ವಿದೇಶಿ ಗಣ್ಯರು ಬಂದಾಗಲೂ ಕೂರ್ಗ್ ಕಾಫಿಯನ್ನೇ ವಿತರಿಸಿದ್ದೇನೆ. ಗಣ್ಯರಿಗೆ ಕಾಫಿ ಪೌಡರ್ ಕೊಡುಗೆಯಾಗಿ ನೀಡುವ ಮೂಲಕ ಕಾಫಿ ಪ್ರಮೋಷನ್ ಮಾಡುವವರಲ್ಲಿ ನಾನೂ ಒಬ್ಬ. ನೀವೂ ಕಾಫಿಯನ್ನೇ ಅತಿಥಿಗಳಿಗೆ ಕೊಡುಗೆಯಾಗಿ ನೀಡಿದರೆ ಕಾಫಿಯ ಪ್ರಚಾರ ಸುಲಭ ಸಾಧ್ಯ.

ರಾಯಚೂರಿನಲ್ಲಿ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ | ಪ್ರೊ.ಬರಗೂರು ರಾಮಚಂದ್ರಪ್ಪ ಚಾಲನೆ

ಜಾತಿ, ಧರ್ಮದ ದ್ವೇಷವನ್ನ ವಿರೋಧಿಸಬೇಕಿದೆ

ರಾಯಚೂರು: ಸಂವಿಧಾನದ ಮೇಲೆ ಗೌರವವಿದ್ದರೆ ಈ ದೇಶದ ಜಾತಿವಾದವನ್ನು ಧಾರ್ಮಿಕ ಮೂಲಭೂತವಾದವನ್ನು ಜಾತಿ, ಧರ್ಮದ ದ್ವೇಷವನ್ನು ವಿರೋಧಿಸಬೇಕೆಂದು ಹಿರಿಯ ಸಾಹಿತಿ ಪ್ರೊ.ಬರಗೂರ ರಾಮಚಂದ್ರಪ್ಪ ಹೇಳಿದರು.

ನಗರದ ಪಂ.ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ದಲಿತ ಸಾಹಿತ್ಯ ಪರಿಷತ್ತಿನಿಂದ ಆಯೋಜಿಸಲಾಗಿದ್ದ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದರು.

ಇಡೀ ಬದುಕನ್ನು, ಸಂಕಟಗಳ ಬದುಕು, ವ್ಯಸನಗಳ ಬದುಕನ್ನು, ವೇದನೆಯ ಬದುಕನ್ನೂ ಬರೆದಿರುವುದು

ಪ್ರಕಟಿಸಿರುವುದು ಕರ್ನಾಟಕ ಮಾತ್ರವಲ್ಲದೇ ದೇಶದಲ್ಲಿ ಹೊಸ ಪಲ್ಲಟಗಳಿಗೆ ಕಾರಣವಾಗಿದೆ. ಈ ಎರಡೂ ಸಂವೇಧನೆಗಳು ಮುಖ್ಯವಾದ ಧಾರೆಗಳಾಗಿವೆ. ಬಂಡಾಯ ಎಂದರೆ ಹೊಡಿ, ಬಡಿ ಕಡಿ ಎನ್ನುವುದು ಬಂಡಾಯವಲ್ಲ. ಅಂಬೇಡ್ಕರ್ ಹಿಂಸೆಯನ್ನು ಪ್ರಚೋಧಿಸಿದವರಲ್ಲ. ಅವರು ಮಹಾನ್ ಅಂಹಿಸಾವಾದಿಯಾಗಿದ್ದರು ಎಂದರು.

ದೇಶದಲ್ಲಿ ಪ್ರತಿ 18 ನಿಮಿಷಕ್ಕೆ ಒಬ್ಬ ದಲಿತನ ಮೇಲೆ ದೌರ್ಜನ್ಯಗಳಾಗುತ್ತಿವೆ. ವಾರಕ್ಕೆ 13 ದಲಿತರ ಸಾವಾಗುತ್ತಿವೆ. 1 ದಿನಕ್ಕೆ 8 ಜನ ದಲಿತರ ಮೇಲೆ ಅತ್ಯಾಚಾರಗಳಾಗುತ್ತಿವೆ. ಇವು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ ಇದರ ಕುರಿತು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ನೋವು ತೋಡಿಕೊಂಡರು.

ದಲಿತ ಸಾಹಿತ್ಯ ಪರಿಷತ್ತಿನಿಂದ ಆಯೋಜಿಸಲಾಗಿದ್ದ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನವನ್ನು ಹಿರಿಯ ಸಾಹಿತಿ ಪ್ರೊ.ಬರಗೂರ ರಾಮಚಂದ್ರಪ್ಪ ಉದ್ಘಾಟಿಸಿದರು.

ಸಂಸದ ಜಿ.ಕುಮಾರ ನಾಯಕ ಮಾತನಾಡಿ, ಸಮ್ಮೇಳನದಲ್ಲಿ ಕೇಳಿದ ಭಾಷಣಗಳು, ಬೇರೆ ರೀತಿಯ

ಅನುಭವ ತಂದುಕೊಟ್ಟಿವೆ. ಸಶಕ್ತನನ್ನಾಗಿ ಮಾಡಿದೆ. ಇಂದಿನ ಪರಿಸ್ಥಿತಿ, ದುರ್ವಿಕರಣ, ಆರ್ಥಿಕ ಪರಿಸ್ಥಿತಿಯಲ್ಲಿ ಏಕ ಸ್ವಾಮಿತ್ವವನ್ನು ನೋಡುತ್ತಿದ್ದು, ಸಂವಿಧಾನದ ಆಶಯಗಳಿಗೆ ತದ್ವಿರುದ್ಧವಾಗಿರುವುದನ್ನ ನೋಡುತ್ತಿದ್ದೇವೆ. ಸಮೂಹ ಸಂವೇದನೆಯಿಂದ ರಚಿತವಾಗಿರುವ ಬುದ್ಧಿ ಜೀವಿಗಳು, ವಾಗ್ಮಿಗಳು, ಚಿಂತಕರು ಮತ್ತು ಬರಹಗಾರರು ಸಹಕರಿಸಿದಾಗ ಇವುಗಳನ್ನು ತೊಲಗಿಸಬಹುದಾಗಿದೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಜಯದೇವಿ ಗಾಯಕವಾಡ ಮಾತನಾಡಿ, ಪ್ರಸ್ತುತ ದೇಶದಲ್ಲಿ ಸಾವಿನಲ್ಲಿ ಸಂಭ್ರಮ ಪಡುವ ವಿಕೃತ ಮನಸ್ಸುಗಳ ಅಟ್ಟಹಾಸ ಹೆಚ್ಚಾಗಿದೆ. ಜಾತಿ ವ್ಯವಸ್ಥೆ ಧರ್ಮಾಂದತೆ ಮಿತಿ ಮೀರಿ ಬೆಳೆದು ಸಮಾಜದಲ್ಲಿ ಅಸಹಿಷ್ಣತೆ ಹೆಚ್ಚಾಗಿದೆ. ಆಹಾರ ಸಂಸ್ಕೃತಿಯನ್ನು ಅವಮಾನಿಸಲಾಗುತ್ತದೆ. ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು, ಆದಿವಾಸಿ, ಅಲೆಮಾರಿ, ಬುಡಕಟ್ಟು ಹಾಗೂ ಮಹಿಳೆಯರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಮೌಢ್ಯತೆ ಹೆಚ್ಚಾಗುತ್ತಿದೆ.

> **ದಲಿತ ಸಾಹಿತ್ಯದಲ್ಲಿ ಎರಡು ರೀತಿಯಾದ ದಲಿತ ಪರ ಕಾಳಜಿಯಿದೆ. ಸಹಾನುಭೂತಿಯ ಸಂವೇದನೆ, ಸ್ವಾನುಭವದ ಸಂವೇಧನೆ ಇವೆ. ಸಹಾನುಭೂತಿಯ ಸಂವೇಧನೆಯಲ್ಲಿ ನವೋದಯ, ಪ್ರಗತಿ ಶೀಲ ಹಾಗೂ ಬಂಡಾಯ ಸಾಹಿತ್ಯದಲ್ಲಿದೆ. ಇವೆಲ್ಲ ದಲಿತರ, ಅಸ್ಪೃಶ್ಯರ ಸಂಕಟಗಳ ಪರವಾಗಿರುವ ವಿಮೋಚನೆ ಬಯಸುವ ಸಂವೇದನೆಯಾಗಿದೆ. ಸ್ವಾನುಭವದ ಸಂವೇದನೆ ದಲಿತರೇ ತಮ್ಮ ಬದುಕನ್ನು ಕುರಿತು ಬರೆದಿದ್ದಾರೆ. ಇವೆರಡು ಪ್ರಮಾಣಿಕವಾದದ್ದು.**
>
> -ಪ್ರೊ.ಬರಗೂರು ರಾಮಚಂದ್ರಪ್ಪ, ಹಿರಿಯ ಬಂಡಾಯ ಸಾಹಿತಿ

ವೈಚಾರಿಕತೆ ಕಗ್ಗೊಲೆಯಾಗುತ್ತಿದೆ. ಬೆಲೆ ಏರಿಕೆ ಮಿತಿ ಮೀರುತ್ತದೆ ಎಂದರು.

ನಾವು ಬಂದಿರುವುದೇ ಸಂವಿಧಾನವನ್ನು ಬದಲಾಯಿಸುವುದಕ್ಕಾಗಿ, ಅಂಬೇಡ್ಕರ್ ಸಂವಿಧಾನ ಬರೆದಿಲ್ಲ ಎಂಬ ಮಾತುಗಳು ಇಂದು ಕೇಳಿ ಬರುತ್ತಿವೆ. ಆದರೆ ಭಾರತದ ಸಂವಿಧಾನ ಜಾರಿಗೆ ಬಂದಿದೆ ಅನ್ನುವ ಕಾರಣಕ್ಕಾಗಿ ಶಿಕ್ಷಣ, ಉದ್ಯೋಗ, ರಾಜಕೀಯ ಅಧಿಕಾರ, ಸ್ವಾತಂತ್ರ್ಯ, ಸಮಾನತೆ, ಬದುಕುವ ಹಕ್ಕು ಪಡೆದುಕೊಳ್ಳಲು ಸಾಧ್ಯವಾಗಿದೆ. ಯಾವ ದೇವರು ಧರ್ಮಗಳಿಂದ ಅಲ್ಲ ಎನ್ನುವ ಸತ್ಯ ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಹಾಗಾಗಿ

ಸಂವಿಧಾನವೇ ನಮ್ಮ ಬದುಕಾಗಬೇಕು ನಮ್ಮೆಲ್ಲ ಭಾರತೀಯರ ಉಸಿರಾಗಬೇಕು. ಎದೆಯ ಹಾಡಾಗಬೇಕು. ನಮ್ಮ ದೇಶದ ಧರ್ಮಗ್ರಂಥ ಸಂವಿಧಾನವೇ ಆಗಬೇಕು ಎಂದು ತಿಳಿಸಿದರು.

ಸಮ್ಮೇಳನ ವೇದಿಕೆಯಲ್ಲಿ ಸಾಹಿತಿ ಡಾ.ಎಲ್. ಹನುಮಂತಯ್ಯ, ಶಾಸಕ ಡಾ.ಶಿವರಾಜ ಪಾಟೀಲ್, ದಲಿತ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಅರ್ಜುನ ಗೋಳಸಂಗಿ, ಮಹಾನಗರ ಪಾಲಿಕೆ ಮಾಜಿ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ, ಮಾಜಿ ಸದಸ್ಯ ಜಯಣ್ಣ, ಆರ್ಡಿಎ ಸದಸ್ಯ ನರಸಿಂಹಲು ಮಾಡಗಿರಿ, ಕೆ.ಶಾಂತಪ್ಪ, ಕೃಷ್ಣ ಶಾವಂತಗೇರಾ, ದಲಿತ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ತಾಯರಾಜ್ ಮರ್ಚಟ್ಹಾಳ ಉಪಸ್ಥಿತರಿದ್ದರು.

ಸರಕಾರಿ ಆಸ್ಪತ್ರೆ ಡಯಾಲಿಸಿಸ್ ಸೇವೆ ಬಳಸಿಕೊಳ್ಳಿ

ಬಳ್ಳಾರಿ: ಜಿಲ್ಲೆಯ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಪ್ರಧಾನಮಂತ್ರಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಡಯಾಲಿಸಿಸ್ ಸೇವೆ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಮೇಶ್ ಬಾಬು ಹೇಳಿದರು.

ಶುಕ್ರವಾರ ಜಿಲ್ಲಾ ಆಸ್ಪತ್ರೆಯಲ್ಲಿ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಾ ಡಯಾಲಿಸಿಸ್ ಸೇವೆಗಳನ್ನು ಅರ್ಹ ರೋಗಿಗಳಿಗೆ ಸೂಕ್ತ ಸಮಯದಲ್ಲಿ ಒದಗಿಸುವುದು ಮುಖ್ಯವಾಗಿದೆ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಮಾತನಾಡಿ, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ (ಬಿ.ಎಮ್.ಸಿ.ಆರ್.ಸಿ)ಯಲ್ಲಿ 100, ಜಿಲ್ಲಾ ಆಸ್ಪತ್ರೆ-50, ಸಿರುಗುಪ್ಪ ಸಾರ್ವಜನಿಕ ಆಸ್ಪತ್ರೆ-7, ಸಂಡೂರು ಸಾರ್ವಜನಿಕ ಆಸ್ಪತ್ರೆ-6 ಸೇರಿದಂತೆ ಒಟ್ಟು 163 ರೋಗಿಗಳು ಉಚಿತ ಡಯಾಲಿಸಿಸ್ ಸೇವೆ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಡಯಾಲಿಸಿಸ್ ಸೇವೆಗಳಿಗೆ ಅವಶ್ಯವಿರುವ ಸಾಮಾಗ್ರಿ, ಏಕಬಳಕೆ ಡಯಾಲೈಜರನ್ನು ಉಪಯೋಗಿಸಲಾಗುತ್ತಿದೆ. ತಾಲೂಕು ಆಸ್ಪತ್ರೆಗಳಲ್ಲಿನ (ತಾಲೂಕುಗಳಲ್ಲಿರುವ ಸಾರ್ವಜನಿಕ ಆಸ್ಪತ್ರೆ) ಡಯಾಲಿಸಿಸ್ ಕೇಂದ್ರಗಳಲ್ಲಿ ಡಯಾಲಿಸಿಸ್ ಪ್ರಕ್ರಿಯೆ/ಕಾರ್ಯವಿಧಾನ ಮುಗಿದ ನಂತರ ರೋಗಿಗಳನ್ನು ಸಂಬಂಧಪಟ್ಟ ಆಸ್ಪತ್ರೆಯ ವ್ಯಾಪ್ತಿಯ ನಗುಮಗು ವಾಹನದ ಮೂಲಕ ಮನೆಗೆ ತೆರಳಲು ವ್ಯವಸ್ಥೆ ಕಲ್ಪಿಸಲು ಸೂಚಿಸಲಾಗಿದೆ ಎಂದರು.

ಬಳ್ಳಾರಿ ಜಿಲ್ಲೆಯಲ್ಲಿ ಸರಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಗಳನ್ನು ಸೂಕ್ತ ಸಮಯದಲ್ಲಿ ಒದಗಿಸಲಾಗುತ್ತಿದೆ ಹಾಗೂ ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಪಡೆಯುತ್ತಿರುವ ರೋಗಿಗಳಿಗೆ

ಜಿಲ್ಲಾ ಆಸ್ಪತ್ರೆಯಲ್ಲಿ ವಿವಿಧ ವಾರ್ಡ ್ಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಮೇಶ್ ಬಾಬು ಭೇಟಿ ನೀಡಿದರು.

> **ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾ ಆಸ್ಪತ್ರೆ, ಸಿರುಗುಪ್ಪ ಸಾರ್ವಜನಿಕ ಆಸ್ಪತ್ರೆ, ಹಾಗೂ ಸಂಡೂರು ತಾಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳು ಉಚಿತವಾಗಿ ಡಯಾಲಿಸಿಸ್ ಸೇವೆ ಒದಗಿಸುತ್ತಿವೆ. ಹೊಸದಾಗಿ ಕುರುಗೋಡು ಹಾಗೂ ಕಂಪ್ಲಿ ತಾಲೂಕುಗಳ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 2 ಡಯಾಲಿಸಿಸ್ ಕೇಂದ್ರಗಳು ಹೊಸದಾಗಿ ಅನುಮೋದನೆಯಾಗಿದ್ದು, ಡಯಾಲಿಸಿಸ್ ಸೇವೆಗಳು ಪ್ರಾರಂಭಿಸುವ ಹಂತದಲ್ಲಿದೆ.**
>
> -ಡಾ.ರಮೇಶ್ ಬಾಬು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಸರಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಪಡೆಯಲು ಮನ ಒಲಿಸಲು ಆಪ್ತ ಸಮಾಲೋಚನ ನಡೆಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ವೈದ್ಯರು, ಸಾರ್ವಜನಿಕರು ಇದ್ದರು.

ಪಲ್ಸ್ ಪೋಲಿಯೋ ಪೋಸ್ಟರ್ ಬಿಡುಗಡೆ

ಹೊಸಪೇಟೆ: ಜಿಲ್ಲಾದ್ಯಾಂತ ಡಿ.21 ರಿಂದ 25 ರವರೆಗೆ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಸಲಿಕೆ ಕಾರ್ಯಕ್ರಮದ ಪೋಸ್ಟರ್ಗಳನ್ನು ಜಿಲ್ಲಾಧಿಕಾರಿ ಕವಿತಾ.ಎಸ್. ಮನ್ನಿಕೇರಿ ಬಿಡುಗಡೆಗೊಳಿಸಿದರು.

ಬಳಿಕ ಅವರು ಮಾತನಾಡಿ, ಐದು ವರ್ಷದೊಳಗಿನ ಯಾವುದೇ ಮಕ್ಕಳ ಪಲ್ ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ನಿಗಾ ವಹಿಸಿ.

ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವು ಜಿಲ್ಲೆಯ 100 ರಷ್ಟು ಪ್ರತಿಶತ ಸಾಧನೆ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ಎಲ್ಲ ಇಲಾಖೆಗಳು ಸದರಿ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಹಿಂದೆ ಎಷ್ಟೇ ಬಾರಿ ಪೋಲಿಯೋ ಹಾಕಿಸಿದ್ದರೂ ಈ ಸುತ್ತಿನಲ್ಲಿ ಮತ್ತೆ ಪೋಲಿಯೋ ಹನಿ ಹಾಕಿಸಿಕೊಳ್ಳುವುದರ ಮೂಲಕ ಪೋಲಿಯೋ ನಿರ್ಮೂಲನೆಗೆ ಸಾರ್ವಜನಿಕರು ಸಹಕರಿಸುಂತೆ ಮನವಿ ಮಾಡಿದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ ಸಲಿಕೆ ಕಾರ್ಯಕ್ರಮದ ಪೋಸ್ಟರ್ಗಳನ್ನು ಜಿಲ್ಲಾಧಿಕಾರಿ ಕವಿತಾ.ಎಸ್.ಮನ್ನಿಕೇರಿ ಬಿಡುಗಡೆಗೊಳಿಸಲಾಯಿತು.

> **ಒಟ್ಟಾರೆಯಾಗಿ ಜಿಲ್ಲೆಯ 1,39,55,179 ಜನಸಂಖ್ಯೆಯಿದ್ದು ಇದರಲ್ಲಿ 1,31,363 ಐದು ವರ್ಷದೊಳಗಿನ ಮಕ್ಕಳು ಇದ್ದರೆ. ಈ ಎಲ್ಲ ಮಕ್ಕಳಿಗೆ ಲಸಿಕೆ ಹಾಕಲು 1047 ಬೂತ್ ಗಳು ಮತ್ತು 912 ಮನೆಗಳಿಗೆ ತೆರಳಿ ಪೋಲಿಯೋ ಹನಿ ಹಾಕಲು ತಂಡಗಳನ್ನು ರಚಿಸಲಾಗಿದೆ. ಕಾರ್ಯಕ್ರಮದಲ್ಲಿ 2172 ಲಸಿಕಾದಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.**
>
> - ಕವಿತಾ.ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಆರ್ಸಿಎಚ್ ಅಧಿಕಾರಿ ಡಾ.ಜಂಬಯ್ಯ, ಜಿಪಂ ಸಂಯೋಜಕ ಜೆ.ಎಂ.ಅನ್ನದಾನ ಸ್ವಾಮಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಿ.ಟಿ.ಮಂಜುನಾಥ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕಿ ಶ್ವೇತಾ, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಮನೋಹರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ, ಅಹಾರ ಇಲಾಖೆ ಉಪನಿರ್ದೇಶಕ ರಿಯಾಜ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಮರಂ ಅಗೆತಕ್ಕೆ ವಿರೋಧ

ಮುದಗಲ್: ಪಟ್ಟಣ ಹೊರವಲಯದ ಕನ್ನಾಪುರಹಟ್ಟಿ ಕೆರೆಯ ಮರಂ ಖಾಸಗಿ ಸಾರ್ವಜನಿಕರು ಕಂಪನಿಯವರು ರಾಜ್ಯ ಹೆದ್ದಾರಿಗೆ ಸರಬರಾಜು ಮಾಡುವ ನೆಪದಲ್ಲಿ ಕೆರೆ ಹಾಳು ಮಾಡುತ್ತಿದ್ದಾರೆ. ಕೂಡಲೇ ಕೆರೆ ಅಗೆಯುವುದನ್ನು ನಿಲ್ಲಿಸಬೇಕು ಎಂದು ಲಿಂಗಸುಗೂರು ತಹಸೀಲ್ದಾರ್ ಸತ್ಯಮ್ಮ ಅವರಿಗೆ ಒತ್ತಾಯಿಸಿದರು. ಐದಾರು ತಿಂಗಳ ಹಿಂದೆ ಖಾಸಗಿ ಕಂಪನಿಯವರು ಅಮೃತ ಸರೋವರ ಕೆರೆ ನಿರ್ಮಾಣ ನೆಪದಲ್ಲಿ ಜಿಲ್ಲಾಧಿಕಾರಿಗಳಿಂದ ಪರವಾನಗಿ ಪಡೆದಿದ್ದು, ಈ ಕುರಿತು ಗ್ರಾಮಸ್ಥರು ತಹಸೀಲಾರಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಪರಿಶೀಲಿಸಿದ ಲಿಂಗಸುಗೂರು ತಹಸೀಲ್ದಾರ್ ಸತ್ಯಮ್ಮ ಸ್ಥಳಕ್ಕೆ ಭೇಟಿ ನೀಡಿದಾಗ ಗ್ರಾಮಸ್ಥರಾದ ವಿನೋದ, ದೇವಪ್ಪ, ಶಿವಶಂಕರಯ್ಯ ಅವರು ಕೆರೆಯ ಮರಂ ಅಗೆಯುವುದರಿಂದ ಜನ, ಜಾನುವಾರು ಕೆಳಗಿರುವ ನೀರಿನಿಂದ ಬಿದ್ದು ಸಾವನ್ನಪ್ಪುತ್ತಿವೆ ಕೂಡಲೇ ಕೆರೆಯ ಮರಂ ಸರಬರಾಜು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಜೀವನ ಮೌಲ್ಯ ಅರಿತರೆ ವ್ಯಕ್ತಿತ್ವ ವಿಕಸನ ಸಾಧ್ಯ

ಹೊಸಪೇಟೆ: ವಚನ ಸಾಹಿತ್ಯದಲ್ಲಿ ಅಡಗಿರುವ ಒಳ್ಳೆಯ ಜೀವನ ಮೌಲ್ಯಗಳು ಮತ್ತು ಸಂದೇಶಗಳನ್ನು ಅರಿತರೆ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಮಾರ್ಗವಾಗಲಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ.ಪರಮಶಿವಮೂರ್ತಿ ಹೇಳಿದರು.

ನಗರದ ಶ್ರೀಶಂಕರ್‌ಆನಂದ್ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಚಕೋರ ಸಾಹಿತ್ಯ ವಿಚಾರ ವೇದಿಕೆ ಹಾಗೂ ಶ್ರೀಶಂಕರ್‌ಆನಂದ್ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಚನಗಳ ತಾತ್ಪರ್ಯವನ್ನು ಸರಿಯಾಗಿ ಅರ್ಥೈಸಿಕೊಂಡರೆ ಸ್ವಯಂ ಪ್ರೇರಿತ ಬದಲಾವಣೆ ಸಾಧ್ಯವಾಗಲಿದೆ. ಕನ್ನಡ ವಚನಕಾರರು ಅದ್ಭುತ ಸಾಹಿತ್ಯವನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿರುವುದು ನಿಜಕ್ಕೂ ಶ್ಲಾಘನೀಯ.

ಅಣ್ಣ ಬಸವಣ್ಣನವರ ಪ್ರಸಿದ್ಧ ವಚನವಾದ ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡೆಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯ ಬೇಡ, ಇದೇ ಅಂತರಂಗ ಶುದ್ದಿ, ಇದೇ ಬಹಿರಂಗ ಶುದ್ದಿಯ ವಚನದ ಈ ಸಾಲುಗಳ ಸಂಕ್ಷಿಪ್ತ ಅರ್ಥವನ್ನು ವಿದ್ಯಾರ್ಥಿಗಳಿಗೆ ತಿಳಿಪಡಿಸಿದರು.

ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯ ಸಂಚಾಲಕ ಡಾ.ಮಲ್ಲಕಾರ್ಜುನ ಬಿ.ಮಾನ್ಪಡೆ ಮಾತನಾಡಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಾಹಿತ್ಯದ ಬಗ್ಗೆ ಹೆಚ್ಚಿನ ಅಸಕ್ತಿ ಮತ್ತು ಅರಿವು ಮೂಡಿಸುವುದಕ್ಕೆ ಚಕೋರ ವಚನ ಸಾಹಿತ್ಯ ವೇದಿಕೆ ಎಂಬ ಕಾರ್ಯಕ್ರಮವನ್ನು ಪಿಯು, ಪದವಿ ಕಾಲೇಜಿನಲ್ಲಿ. ಏರ್ಪಡಿಸಲಾಗಿರುತ್ತದೆ. ಪಠ್ಯಕ್ರಮದ ಜತೆಗೆ ವಚನ ಸಾಹಿತ್ಯ, ಕಾದಂಬರಿ, ಕಥೆಗಳು ಮತ್ತು ಕಾವ್ಯಗಳನ್ನು ಓದಿಕೊಳ್ಳಬೇಕು. ಕರ್ನಾಟಕ ಸಾಹಿತ್ಯ ಅಕಾಡಮಿಯು 100 ಸಾಹಿತ್ಯ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಲಾಗುತ್ತಿದೆ. ಇಂದಿನ ಯುವಜನತೆ ಮೋಬೈಲುಗೀಳು ಬಿಟ್ಟುಹಾಕಿ ವಚನ ಸಾಹಿತ್ಯವನ್ನು ಓದಿಕೊಳ್ಳಬೇಕು. ವಚನ ಸಾಹಿತ್ಯ ಬಗ್ಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸುವ ಕಾರ್ಯ ಶಿಕ್ಷಣ ಸಂಸ್ಥೆಗಳು ಮಾಡಬೇಕಿದೆ ಎಂದರು.

ಶ್ರೀಶಂಕರ್‌ಆನಂದ್ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಜಿ.ನಾರಾಯಣ ಹೆಬಸೂರ ಮಾತನಾಡಿ, ಬಸವಣ್ಣ, ಅಲ್ಲಮಪ್ರಭು, ಸರ್ವಜ್ಞ, ಅಕ್ಕಮಹಾದೇವಿ ಸೇರಿದಂತೆ ಅನೇಕ ವಚನಕಾರರು ಬರೆದಿರುವ ಪ್ರತಿಯೊಂದು ವಚನವು ಸಹ ತನ್ನದೇ ಆದ ಮಹತ್ವ ಹೊಂದಿದೆ ಎಂದರು.

ಚಿಂತಕರು, ವಿಶ್ರಾಂತ ಪ್ರಾಧ್ಯಾಪಕ ಡಾ.ಮೃತ್ಯುಂಜಯ ರುಮಾಲೆ ಉತ್ತಮ ವ್ಯಕ್ತಿತ್ವ ರೂಪಿಸಲು ವಚನ ಸಾಹಿತ್ಯದ ಬಗ್ಗ ಉಪನ್ಯಾಸ ನೀಡಿದರು.

ಈ ವೇಳೆ ಶ್ರೀಶಂಕರ್‌ಆನಂದ್ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಸಿ.ದೇವಣ್ಣ, ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ನಾಗಣ್ಣ ಕಿಲಾರಿ, ಚಕೋರ ಸಾಹಿತ್ಯ ವಿಚಾರ ವೇದಿಕೆ ಸಂಚಾಲಕ ವೆಂಕಟೇಶ ಬಡಿಗೇರ, ಮುದೇನೂರು ಉಮಾಮಹೇಶ್ವರ ಭಾಗವಹಿಸಿದ್ದರು.

ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ.ಪರಮಶಿವಮೂರ್ತಿ ಉದ್ಘಾಟಿಸಿದರು.

> **ಸಾಹಿತ್ಯದ ಪ್ರಕಾರಗಳಲ್ಲಿ ವಚನ ಸಾಹಿತ್ಯ ತುಂಬಾ ಗಮನ ಸೆಳೆಯುವ ಪ್ರಾಮುಖ್ಯತೆಯನ್ನು ಹೊಂದಿದೆ. ತಂತ್ರಜ್ಞಾನ ಮತ್ತು ಕೃತಕಮತ್ತೆ ಯುಗದಲ್ಲಿ ವಚನಗಳ ಓದುಗರ ಸಂಖ್ಯೆ ಕ್ಷೀಣವಾಗಿದೆ. ವಚನಗಳನ್ನು ಓದುವ ಮೂಲಕ ಪ್ರತಿಯೊಬ್ಬರು ಅವುಗಳ ಮಹತ್ವವನ್ನು ತಿಳಿದುಕೊಳ್ಳಬೇಕಿದೆ. ಕಾಲಹರಣ ಮತ್ತು ಕಾಟಾಚಾರಕ್ಕೆ ವಚನಗಳನ್ನು ಓದುವ ಬದಲಾಗಿದೆ.**
>
> -ಡಿ.ವಿ.ಪರಮಶಿವಮೂರ್ತಿ, ಹಂಪಿ ಕನ್ನಡ ವಿವಿ ಕುಲಪತಿ

ರಥ ಎಳೆದು ಹರಕೆ ತೀರಿಸಿದ ಭಕ್ತೆಯರು

ಮಸ್ಕಿ: ಎಳ್ಳಮಾವಾಸ್ಯೆ ನಿಮಿತ್ತ ಪಟ್ಟಣದ ಕಟ್ಟೆ ದುರ್ಗಾ ದೇವಿಯ ಜಾತ್ರ ಮಹೋತ್ಸವ ವಿಜೃಂಭಣೆ ಯಿಂದ ಶುಕ್ರವಾರ ಸಂಜೆ ಜರುಗಿತು. ಅಲಂಕೃತ ರಥಕ್ಕೆ ಪೂಜೆ ಸಲ್ಲಿಸಿದ ನಂತರ ನೂರಾರು ಮಹಿಳೆಯರು ಭಕ್ತಿ ಯಿಂದ ರಥ ಎಳೆದು ಹರಕೆ ತೀರಿಸಿಕೊಂಡರು . ಎಳ್ಳ ಅಮಾವಾಸ್ಯೆ ನಿಮಿತ್ತ ದೇವಸ್ಥಾನದಲ್ಲಿ ಬೆಳಗ್ಗೆ ಪೂಜಾ ವಿಧಿ ವಿಧಾನಗಳು ನಡೆದವು. ನೂರಾರು ಭಕ್ತರು ದೇವಿಗೆ ಹೂ, ಕಾಯಿ, ನೈವೇದ್ಯ ಸಲ್ಲಿಸಿ ಭಕ್ತಿ ಸರ್ಮಪಿಸಿದರು ಅಲಂಕೃತ ರಥಕ್ಕೆ ನೆರೆದ ಗಣ್ಯರು ಪುಷ್ಪ ವೃಷ್ಟಿ ಮಾಡಿ ನಮಿಸಿದರು.

ರಥೋತ್ಸವದಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಮುಖಂಡರಾದ ರಾಜಾ ನಾಯ್ಕ, ಡಾ.ಬಿಎಚ್. ದಿವಟರ್, ಅಪ್ಪಾಜಿಗೌಡ, ಅಭಿಜಿತ್ ಸಿಂಗ್, ಪ್ರಸನ್ನ ಪಾಟೀಲ್, ಸುಖ ಮುನೆಪ್ಪ ನಾಯಕ, ರಾಜಪ್ಪ ಭೋವಿ, ಡಾ. ಪಂಚಾಕ್ಷರಯ್ಯ ಕಂಬಾಳಿ ಮಠ, ಹಳ್ಳಿ ಶಂಕ್ರಪ್ಪ, ಬಿಜಿ. ನಾಯಕ, ಮೌನೇಶ, ಬಾಲಾಜಿ ನಾಯಕ, ಕೃಷ್ಣಪ್ಪ ಪೂಜಾರಿ ಪಾಲ್ಗೊಂಡಿದ್ದರು.

ಮಸ್ಕಿಯಲ್ಲಿ ದುರ್ಗಾ ದೇವಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಭೂ ಕಬಳಿಕೆ ನಿಷೇಧ ಕಾಯಿದೆ ಕುರಿತ ಕಾರ್ಯಾಗಾರ | ವಿಶೇಷ ನ್ಯಾಯಾಲಯದ ಅಧ್ಯಕ್ಷ ಎನ್. ಎಸ್.ಪಾಟೀಲ್ ಸಲಹೆ

ಸರಕಾರಿ ಭೂಮಿ ಕಬಳಿಕೆ ತಡೆಗೆ ಕಾಯಿದೆ ಅಸ್ತ್ರ ಬಳಸಿ

ಕೊಪ್ಪಳ: ಸರಕಾರಿ ಭೂಮಿ ಉಳಿಸಲು ಭೂ ಕಬಳಿಕೆ ತಪ್ಪಿಸುವುದು ಅತ್ಯಗತ್ಯ. ಅಧಿಕಾರಿಗಳು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯಿದೆ ಬಗ್ಗೆ ತಿಳಿದುಕೊಳ್ಳಬೇಕು ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಪ್ರಭಾರಿ ಅಧ್ಯಕ್ಷ ಎನ್.ಎಸ್.ಪಾಟೀಲ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ನಲ್ಲಿ ಆಯೋಜಿಸಿದ್ದ ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಶನಿವಾರ ಮಾತನಾಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಿ. ಚಂದ್ರಶೇಖರ ಮಾತನಾಡಿ, ಭೂ ಕಬಳಿಕೆ ಮತ್ತು ಅದರ ವ್ಯಾಖ್ಯಾನ ಎಲ್ಲರಿಗೂ ತಿಳಿಯಬೇಕಿದೆ. ಕೆರೆ, ಅರಣ್ಯ, ನದಿ ಒತ್ತುವರಿಯು ಭೂ ಕಬಳಿಕೆ ಆಗಿದೆ. ಭೂ ಕಬಳಿಕೆಯಾದ ನಂತರ ಯಾವ ಕ್ರಮ ತೆಗೆದುಕೊಳ್ಳುಬೇಕು. ಭೂ ಕಬಳಿಕೆಯಾದರೆ ಶಿಕ್ಷೆ ವಿಧಿಸುವ ಮತ್ತು ಅದನ್ನು ವಾಪಸ್ ಪಡೆಯಲು ಕಾನೂನಿನಲ್ಲಿ ಅವಕಾಶ ಇದೆ ಎಂದರು. ಜಿಲ್ಲಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ ಮಾತನಾಡಿ, ನ್ಯಾಯಾಧೀಶರ ಒತ್ತಾಸೆಯಂತೆ ಕಾರ್ಯಾಗಾರ ಆಯೋಜಿಸಲಾಗಿದೆ. ಭೂ ಕಬಳಿಕೆ ಸರಕಾರಿ ಜಮೀನು ಮಾತ್ರವಲ್ಲದೆ, ಮುಜರಾಯಿ, ವಕ್ಫ್ ಎಲ್ಲದಕ್ಕೂ ಅನ್ವಯ ಆಗುತ್ತದೆ. ಅಧಿಕಾರಿಗಳು ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳಬೇಕು. ಭೂಮಿ ತಂತ್ರಾಂಶದಲ್ಲಿ ದಾಖಲೆ ಅಪ್ ಲೋಡ್ ಮಾಡುವಾಗ ಬಹಳಷ್ಟು ಲೋಪ ಕಂಡು ಬರುತ್ತಿದ್ದು ಅವುಗಳನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಕಂದಾಯ ಸದಸ್ಯ ಕೆ.ಎಚ್.ಅಶ್ವತ್ಥ ನಾರಾಯಣಗೌಡ ‍ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ'ಕುರಿತು ವಿಶೇಷ ಉಪನ್ಯಾಸ ನೀಡಿದರು. ಮತ್ತೊಬ್ಬ ಸದಸ್ಯರಾದ ಎಸ್.ಪಾಲಯ್ಯ, ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 192(ಎ) ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ತಿದ್ದುಪಡಿ ಕಾಯ್ದೆ 2025ರ'''' ಕುರಿತು ವಿಶೇಷ ಉಪನ್ಯಾಸ ನೀಡಿದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಹಾಂತೇಶ್ ಎಸ್. ದರಗದ್ ಅವರು ‍ಕೆರೆ ಒತ್ತುವರಿ ಮತ್ತು ತೆರವುಗೊಳಿಸಲು ಇರುವ ಕಾನೂನು ಪ್ರಕ್ರಿಯೆಗಳ ಕುರಿತು ಉಪನ್ಯಾಸ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ವಿಲೇಖನಾಧಿಕಾರಿ ಎಚ್.ಕೆ.ನವೀನ್ ಈ ಕುರಿತು ವಿಶೇಷ ಉಪನ್ಯಾಸ ನೀಡಿದರು. ಎಸ್ಪಿ ಡಾ. ರಾಮ್ ಎಲ್ ಅರಸಿದ್ದಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ, ನ್ಯಾಯಾಧೀಶರಾದ ಡಿ.ಕೆ. ಕುಮಾರ, ಸರಸ್ವತಿದೇವಿ, ನ್ಯಾ. ಮಲಕರಿ ರಾಮಪ್ಪ ಒಡಿಯರ್, ಭಾಗಲಕ್ಷ್ಮೀ ಮತ್ತು ತ್ರಿವೇಣಿ ಈಳಿಗೇರ, ಕೊಪ್ಪಳ ಉಪ ವಿಭಾಗಾಧಿಕಾರಿ ಕ್ಯಾ. ಮಹೇಶ ಮಾಲಗಿತ್ತಿ, ಜಿಪಂ ಉಪಕಾರ್ಯದರ್ಶಿ ಟಿ. ಕೃಷ್ಣ ಮೂರ್ತಿ ಇದ್ದರು.

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ವಿಶೇಷ ನ್ಯಾಯಾಲಯದ ಪ್ರಭಾರಿ ಅಧ್ಯಕ್ಷ ಎನ್.ಎಸ್.ಪಾಟೀಲ್ ಉದ್ಘಾಟಿಸಿದರು.

> **ಕಳೆದ 2016 ರಿಂದ ಈವರೆಗೆ 23,849 ಪ್ರಕರಣ ತಿದ್ದುಪಡಿ ಆಧಾರದ ಮೇಲೆ ಇತ್ಯರ್ಥಪಡಿಸಲಾಗಿದೆ. ಸದ್ಯ 4786 ಪ್ರಕರಣ ಬಾಕಿ ಇವೆ. ಈವರೆಗೆ ರಾಜ್ಯಾದ್ಯಂತ 4585 ಎಕರೆ ಸರಕಾರಿ ಜಮೀನು ಒತ್ತುವರಿ ತೆರವುಗೊಳಿಸಲಾಗಿದೆ. ಒಟ್ಟು 133 ಒತ್ತುವರಿದಾರರಿಗೆ ಶಿಕ್ಷೆಯಾಗಿ ಜೈಲು ಮತ್ತು ದಂಡ ವಿಧಿಸಲಾಗಿದೆ.**
>
> - ಎನ್.ಎಸ್. ಪಾಟೀಲ್, ಅಧ್ಯಕ್ಷರು, ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ

> **ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಕಿನ್ನಾಳ ಗ್ರಾಮ ದತ್ತು ಸ್ವೀಕರಿಸಿ, ಸರಕಾರದಿಂದ ಅನುದಾನ ಪಡೆದು ಕೆಲಸ ಮಾಡುತ್ತಿದ್ದೇವೆ. ಅಲ್ಲಿಯೂ ಕೆಲ ಕಡೆ ಭೂ ಕಬಳಿಕೆ ಆಗಿದೆ. ಕೆಲವು ಪ್ರಕರಣ ಸೊಮೊಟೊ ತೆಗೆದುಕೊಳ್ಳುತ್ತಿದ್ದೇವೆ. ಈ ಭಾಗದ ಅಧಿಕಾರಿಗಳು ಮತ್ತು ಜನರು ಭೂ ಕಬಳಿಕೆ ನಿಷೇಧ ಕಾಯಿದೆ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕಿದೆ.**
>
> - ಸಿ. ಚಂದ್ರಶೇಖರ, ಪಿಡಿಜೆ, ಕೊಪ್ಪಳ

ಸಮಾಚಾರ ಸಣ್ಣದಲ್ಲ

ರೋಹಿತ್ ದಾಖಲೆ ಮುರಿದ ತಿಲಕ್

ಅಹಮದಾಬಾದ್: ದಕ್ಷಿಣ ಆಫ್ರಿಕಾ ವಿರುದ್ಧದ ಕೊನೆಯ ಟಿ.20ಪಂದ್ಯದಲ್ಲಿ ಸ್ಫೋಟಕ ಅರ್ಧಶತಕ ಬಾರಿಸಿದ ಭಾರತ ತಂಡದ ಯುವ ಬ್ಯಾಟ್ಸ್‌ಮನ್ ತಿಲಕ್ ವರ್ಮಾ ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರ ದೊಡ್ಡ ದಾಖಲೆಯೊಂದನ್ನು ತಿಲಕ್ ವರ್ಮಾ ಮುರಿದಿದ್ದಾರೆ. 43 ಎಸೆತಗಳಲ್ಲಿ 73 ರನ್‌ಗಳನ್ನು ಬಾರಿಸಿದ ತಿಲಕ್ ವರ್ಮಾ, ದಕ್ಷಿಣ ಆಫ್ರಿಕಾ ವಿರುದ್ಧ ಟಿ20ಐ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ (496) ಗಳಿಸಿದ ಭಾರತೀಯ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಆ ಮೂಲಕ ಹಿಟ್‌ಮ್ಯಾನ್ ರೋಹಿತ್ ಶರ್ಮಾ ದಾಖಲೆಯನ್ನು ಮುರಿದಿದ್ದಾರೆ. ರೋಹಿತ್ ಶರ್ಮಾ ಹರಿಣ ಪಡೆಯ ಎದುರು ತಮ್ಮ ಟಿ20ಐ ವೃತ್ತಿ ಜೀವನದಲ್ಲಿ 429 ರನ್‌ಗಳನ್ನು ಸಿಡಿಸಿದ್ದಾರೆ. ದಕ್ಷಿಣ ಆಫ್ರಿಕಾ ಎದುರು ರೋಹಿತ್ ಶರ್ಮಾ ಒಟ್ಟು 18 ಪಂದ್ಯಗಳಿಂದ 429 ರನ್‌ಗಳನ್ನು ಗಳಿಸಿದ್ದಾರೆ. ಇದೀಗ ತಿಲಕ್ ವರ್ಮಾ 10 ಟಿ20ಐ ಪಂದ್ಯಗಳಿಂದ 496 ರನ್‌ಗಳನ್ನು ಸಿಡಿಸಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಟಿ20ಐ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಒಟ್ಟಾರೆ ದಾಖಲೆ ಇಂಗ್ಲೆಂಡ್‌ನ ಸ್ಟಾರ್ ವಿಕೆಟ್ ಕೀಪರ್ ಜೋಸ್ ಬಟ್ಲರ್ ಹೆಸರಿನಲ್ಲಿದೆ. ಬಟ್ಲರ್ ದಕ್ಷಿಣ ಆಫ್ರಿಕಾ ವಿರುದ್ಧ 23 ಟಿ20ಐಗಳಲ್ಲಿ 606 ರನ್ ಗಳಿಸಿದ್ದಾರೆ.

ವಿಜಯ ಹಜಾರೆಯಲ್ಲಿ ರೋಕೊ ಆಟ ಖಚಿತ

ಮುಂಬೈ: ವಿಜಯ್ ಹಜಾರೆ ಟ್ರೋಫಿಗೆ ಮುಂಬೈ ತಂಡವನ್ನು ಪ್ರಕಟಿಸಲಾಗಿದ್ದು, ಭಾರತದ ಮಾಜಿ ನಾಯಕ ರೋಹಿತ್ ಶರ್ಮಾ ಅವರನ್ನು ಆಯ್ಕೆ ಮಾಡಲಾಗಿದೆ. ಮತ್ತೊಂದೆಡೆ ದೆಹಲಿ ತಂಡದ ಆರಂಭಿಕ ಎರಡು ಪಂದ್ಯಗಳಿಗೂ ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ ಆಯ್ಕೆಯಾಗಿದ್ದಾರೆ. ಡಿಸೆಂಬರ್ 24 ರಂದು ಸಿಕ್ಕಿಂ ವಿರುದ್ಧ ಮತ್ತು ಡಿಸೆಂಬರ್ 26 ರಂದು ಉತ್ತರಾಖಂಡ್ ವಿರುದ್ಧ ನಡೆಯಲಿರುವ ಮೊದಲ ಎರಡು ಪಂದ್ಯಗಳಲ್ಲಿ ರೋಹಿತ್ ಶರ್ಮಾ ಆಡಲಿದ್ದಾರೆ. ಬಿಸಿಸಿಐನ ಹೊಸ ನಿಯಮದ ಪ್ರಕಾರ, ಎಲ್ಲಾ ರಾಷ್ಟ್ರೀಯ ತಂಡದ ಆಟಗಾರರು ಗಾಯಗೊಂಡರೆ ಕನಿಷ್ಠ ಎರಡು ದೇಶಿ ಏಕದಿನ ಪಂದ್ಯಗಳಲ್ಲಿ ಆಡಬೇಕು ಎಂಬ ನಿಯಮವಿದೆ. ತಂಡದಲ್ಲಿ ರೋಹಿತ್ ಅವರ ಸೇರ್ಪಡೆ ಮುಂಬೈಗೆ ಪ್ರಮುಖ ಉತ್ತೇಜನ ನೀಡುವುದಲ್ಲದೆ, ದೇಶಿ ಕ್ರಿಕೆಟ್‌ನ ಮಟ್ಟವನ್ನು ಹೆಚ್ಚಿಸುತ್ತದೆ. ಅನುಭವಿ ಆಲ್ ರೌಂಡರ್ ಶಾರ್ದುಲ್ ಠಾಕೂರ್ ಅವರನ್ನು ಮುಬೈಗೆ ನಾಯಕನನ್ನಾಗಿ ನೇಮಿಸಲಾಗಿದೆ. ತಂಡದ ಪ್ರಮುಖ ತಾರೆಗಳಾದ ಸೂರ್ಯಕುಮಾರ್ ಯಾದವ್, ಯಶಸ್ವಿ ಜೈಸ್ವಾಲ್ ಮತ್ತು ಶಿವಂ ದುಬೆ ಈ ಬಾರಿ ಆರಂಭಿಕ ಪಂದ್ಯಗಳಲ್ಲಿಆಡುವುದಿಲ್ಲ. ಅನುಭವಿ ಬ್ಯಾಟ್ಸ್‌ಮನ್ ಅಜಿಂಕ್ಯ ರಹಾನೆ ಸ್ನಾಯು ಸೆಳೆತದ ಗಾಯದಿಂದಾಗಿ ಆರಂಭಿಕ ಪಂದ್ಯಗಳಿಂದ ವಿಶ್ರಾಂತಿ ಕೋರಿದ್ದಾರೆ.

ಭಾರತ ತಂಡ ಪ್ರಕಟ, ಅಕ್ಷರ್ ಪಟೇಲ್ ಉಪನಾಯಕ | ರಿಂಕು ವಾಪಸ್

ಟಿ20 ವಿಶ್ವಕಪ್: ಗಿಲ್ ಔಟ್, ಇಶಾನ್‌ಗೆ ಸ್ಥಾನ



ಮುಂಬೈ: ಫೆಬ್ರವರಿ 7 ರಿಂದ ಮಾರ್ಚ್ 8 ರವರೆಗೆ ನಡೆಯಲಿರುವ 2026 ರ ಟಿ20 ವಿಶ್ವಕಪ್‌ಗಾಗಿ 15 ಸದಸ್ಯರ ಭಾರತ ತಂಡವನ್ನು ಬಿಸಿಸಿಐ ಶನಿವಾರ ಪ್ರಕಟಿಸಿದೆ. ಫಾರ್ಮ್‌ನಲ್ಲಿ ಇಲ್ಲದ ಶುಭಮನ್ ಗಿಲ್ ಅವರನ್ನು ತಂಡದಿಂದ ಕೈಬಿಡಲಾಗಿದೆ. ಈ ಟೂರ್ನಿಗೆ ಅಕ್ಷರ್ ಪಟೇಲ್ ಅವರನ್ನು ಉಪ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಜಾರ್ಖಂಡ್ ಪರ ಅತ್ಯುತ್ತಮ ಪ್ರದರ್ಶನವಿತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಗೆಲ್ಲಲು ಕಾರಣರಾದ ಇಶಾನ್ ಕಿಶಾನ್ ಟಿ 20 ತಂಡಕ್ಕೆ ಮರಳಿದ್ದಾರೆ. ಇದೇ ತಂಡ ಜನವರಿ 21 ರಿಂದ 31 ರವರೆಗೆ ನಡೆಯಲಿರುವ ನ್ಯೂಜಿ ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ 20 ಐ ಸರಣಿಯಲ್ಲಿ ಆಡಲಿದೆ ಎಂದು ಬಿಸಿಸಿಐ ತಿಳಿಸಿದೆ. ಇಲ್ಲಿನ ಪ್ರಧಾನ ಕಚೇರಿಯಲ್ಲಿ ಬಿಸಿಸಿಐ ಹಿರಿಯ ಆಯ್ಕೆದಾರರ ಸಮಿತಿ ಸಭೆ ನಂತರ ತಂಡ ವನ್ನು ಅಂತಿಮಗೊಳಿಸಲಾಯಿತು. ಬಿಸಿಸಿಐ ಕಾರ್ಯದರ್ಶಿ ದೇವ ಜಿತ್ ಸೈಕಿಯಾ ಸುದ್ದಿಗೋಷ್ಠಿಯಲ್ಲಿ ತಂಡವನ್ನು ಪ್ರಕಟಿಸಿ ದರು. ನಂತರ ನಾಯಕ ಸೂರ್ಯ ಕುಮಾರ್ ಯಾದವ್ ಮತ್ತು ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಮಾಧ್ಯಮ ಗಳನ್ನು ಉದ್ದೇಶಿಸಿ ಮಾತನಾಡಿ ದರು. ಇವರಿಬ್ಬರು ಮುಂಬರುವ ವಿಶ್ವಕಪ್ ಮತ್ತು ನ್ಯೂಜಿ ಲೆಂಡ್ ವಿರುದ್ಧದ ಟಿ20ಐ ಸರಣಿಗಾಗಿ ಭಾರತದ ಉದ್ದೇಶಗಳನ್ನು ವಿವರಿಸಿದರು. ಟಿ-20 ಮಾದರಿಯಲ್ಲಿ ಕಳಪೆ ಪ್ರದರ್ಶನಕ್ಕೆ ಗಿಲ್ ಬೆಲೆ ತೆತ್ತಿದ್ದಾರೆ. ಹಿಂದೊಮ್ಮೆ ಟಿ20ಐ ಗಳಲ್ಲಿ ಭಾರತದ ಉಪ ನಾಯಕರಾಗಿದ್ದ ಅವರು ಕ್ರಮೇಣ ತಂಡದ ಆಯ್ಕೆದಾರರ ವಿಶ್ವಾಸವನ್ನು ಕಳೆದುಕೊಂಡರು. ಈ ವರ್ಷ ಕಳಪೆ ಪ್ರದರ್ಶನ ಕ್ಕಾಗಿ ತೀವ್ರ ಟೀಕೆಗಳಿಗೆ ಗುರಿಯಾಗಿದ್ದರು. ಗಿಲ್ 15 ಪಂದ್ಯ ಗಳಿಂದ 24.25 ಸರಾಸರಿಯಲ್ಲಿ 137.26 ಸ್ಟ್ರೈಕ್ ರೇಟ್‌ನಲ್ಲಿ ಕೇವಲ 291 ರನ್‌ಗಳನ್ನು ಗಳಿಸಿದ್ದಾರೆ. ಇದರಲ್ಲಿ ಒಂದು ಅರ್ಧಶತಕವನ್ನು ದಾಖಲಿಸಿಲ್ಲ. ಗಾಯದ ಸಮಸ್ಯೆ ಗಳಿಂದಾಗಿ ದಕ್ಷಿಣ ಆಫ್ರಿಕಾ ವಿರುದ್ಧದ ಅಂತಿಮ ಎರಡು ಟಿ20 ಅಂತಾ ರಾಷ್ಟ್ರೀಯ ಪಂದ್ಯಗಳನ್ನು ತಪ್ಪಿಸಿಕೊಂಡಿದ್ದರು. ಗಿಲ್ ಹೊರತು ಪಡಿಸಿ, ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಕೂಡ ತಂಡದಲ್ಲಿ ಸ್ಥಾನ ಪಡೆದಿಲ್ಲ, ಜಿತೇಶ್ ಸ್ಥಾನಕ್ಕೆ ಇಶಾನ್ ಕಿಶನ್ ಸೇರ್ಪಡೆಯಾಗಿದೆ. ದಕ್ಷಿಣ ಆಫ್ರಿಕಾದ ವಿರುದ್ಧ 3-1 ಸರಣಿ ಗೆಲುವು ಸಾಧಿಸಲು ಕಾರಣರಾದ ರಿಂಕು ಸಿಂಗ್ ಕೂಡ ಟಿ20ಐ ತಂಡಕ್ಕೆ ಮರಳಿದ್ದಾರೆ.

ಭಾರತ ತಂಡ

ಟಿ20 ವಿಶ್ವಕಪ್ ಮತ್ತು ನ್ಯೂಜಿಲೆಂಡ್ ವಿರುದ್ಧದ ಸರಣಿಗಾಗಿ ಭಾರತ ತಂಡ ಇಂತಿದೆ: ಸೂರ್ಯ ಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ (ಉಪನಾಯಕ), ರಿಂಕು ಸಿಂಗ್, ಜಸ್ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ವಾಷಿಂಗ್ಟನ್ ಸುಂದರ್, ಇಶಾನ್ ಕಿಶನ್.

ಐಪಿಎಲ್‌ಗೆ ಮುನ್ನ ಟಿ20 ಹಬ್ಬ

ಫೆಬ್ರವರಿ 7ರಿಂದ ಮಾರ್ಚ್ 8 ರವರೆಗೆ ನಡೆಯಲಿರುವ 2026ರ ಪುರುಷರ ಟಿ20 ವಿಶ್ವಕಪ್ ಫೆಬ್ರವರಿ 20 ರವರೆಗೆ 40 ಗುಂಪು ಪಂದ್ಯಗಳನ್ನು ಆಡಲಿದೆ. ನಾಲ್ಕು ಗುಂಪುಗಳಲ್ಲಿ ತಲಾ 2 ಅಗ್ರ ತಂಡಗಳು ಫೆಬ್ರವರಿ 21ರಿಂದ ಪ್ರಾರಂಭವಾಗುವ ಸೂಪರ್ 8ಗೆ ಮುನ್ನಡೆಯುತ್ತವೆ. ಭಾರತ ಮತ್ತು ಲಂಕಾ ಎರಡನೇ ಬಾರಿಗೆ ಪುರುಷರ ಟಿ20 ವಿಶ್ವಕಪ್ ಅನ್ನು ಆಯೋಜಿಸುತ್ತಿವೆ. 2012ರ ಆವೃತ್ತಿಯ ಆತಿಥೇಯ ಲಂಕಾ ತಂಡದ್ದಾಗಿದ್ದರೆ, ಕೊನೆಯ ಬಾರಿಗೆ 2016 ರಲ್ಲಿ ಭಾರತ ತಂಡವು ಈ ಟೂರ್ನಿಯನ್ನು ಆಯೋ ಜಿಸಿತ್ತು. ಮೂರು ಪಂದ್ಯಗಳ ಏಕದಿನ ಸರಣಿ ಮುಗಿದ ನಂತರ, ಭಾರತ ತಂಡವು ಜನವರಿ 21ರಂದು ನಾಗ್ಪುರದಲ್ಲಿ ಆರಂಭವಾಗಿ ನ್ಯೂಜಿ ಲೆಂಡ್ ವಿರುದ್ಧ ಐದು ಟಿ20 ಪಂದ್ಯಗಳನ್ನು ಆಡಲಿದೆ, ನಂತರ ರಾಯ್ಪುರ, ಗುವಾಹಟಿ, ವಿಶಾಖಪಟ್ಟಣ ಮತ್ತು ತಿರುವನಂತಪುರದಲ್ಲಿ ಪಂದ್ಯಗಳನ್ನು ಆಡಲಿದೆ.

ಪುರುಷರ ಟಿ20 ವಿಶ್ವಕಪ್‌ನಲ್ಲಿ, ಹಾಲಿ ಚಾಂಪಿಯನ್ ಭಾರತ ತಂಡವು ಪಾಕಿಸ್ತಾನ, ಅಮೆರಿಕ, ನೆದರ್ಲೆಂಡ್ ಮತ್ತು ನಮೀಬಿಯಾ ಜೊತೆಗೆ ಗ್ರೂಪ್ ಎ ನಲ್ಲಿ ಸ್ಥಾನ ಪಡೆದಿದೆ. ಪುರುಷರ ಟಿ20 ವಿಶ್ವಕಪ್ ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡ ಮೊದಲ ತಂಡ, ತವರು ನೆಲದಲ್ಲಿ ಟಿ20 ವಿಶ್ವಕಪ್ ಗೆದ್ದ ಮೊದಲ ತಂಡ ಮತ್ತು ಮೂರನೇ ಬಾರಿಗೆ ಟಿ20 ವಿಶ್ವ ಪ್ರಶಸ್ತಿಯನ್ನು ಗೆದ್ದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗುವ ಗುರಿಯನ್ನು ಮೆನ್ ಇನ್ ಬ್ಲೂ ತಂಡ ಹೊಂದಿದೆ. ಭಾರತ ತಂಡ ಫೆಬ್ರವರಿ 7ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣ ದಲ್ಲಿ ಯುಎಸ್‌ಎ ವಿರುದ್ಧ ತನ್ನ ಕಪ್ ಅಭಿಯಾನವನ್ನು ಆರಂಭಿಸ ಲಿದ್ದು, ಫೆಬ್ರವರಿ 12ರಂದು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ ದಲ್ಲಿ ನಮೀಬಿಯಾ ವಿರುದ್ಧ ಸೆಣಸಲಿದೆ. ಭಾರತ ತಂಡ ಫೆಬ್ರವರಿ 15ರಂದು ಕೊಲಂಬೋದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಪಾಕಿಸ್ತಾನ ವಿರುದ್ಧದ ಪಂದ್ಯವನ್ನು ಆಡಲಿದ್ದು, ಫೆಬ್ರವರಿ 18ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನೆದರ್ಲೆಂಡ್ ವಿರುದ್ಧದ ಕೊನೆಯ ಲೀಗ್ ಹಂತದ ಪಂದ್ಯವನ್ನು ಆಡಲಿದೆ.

ನಾಯಕನೆಂಬ ಕಾರಣಕ್ಕೆ ಸ್ಥಾನ ಉಳಿಸಿಕೊಂಡ ಸೂರ್ಯ

ಮುಂಬೈ: ವಿಶ್ವಕಪ್ ಟಿ20 ಪಂದ್ಯಕ್ಕಾಗಿ ಭಾರತ ತಂಡ ಪ್ರಕಟವಾಗಿದ್ದು, ಕಳಪೆ ಪ್ರದರ್ಶನದ ಕಾರಣಕ್ಕಾಗಿ ಉಪನಾಯಕ ಶುಭಮನ್ ಗಿಲ್ ಅವರ ತಲೆದಂಡವಾಗಿದೆ. ಆದರೆ ಇಡೀ ವರ್ಷದ ಪ್ರದರ್ಶನ ಗಮನಿಸಿದರೆ ನಾಯಕ ಸೂರ್ಯಕುಮಾರ್ ಅವರ ಪ್ರದರ್ಶನ ಇದಕ್ಕಿಂತಲೂ ಕಳಪೆಯಾಗಿದೆ. 2025ರ ಋತುವಿನಲ್ಲಿ ಯಾದವ್ ಒಂದೇ ಒಂದು ಅರ್ಧ ಶತಕ ದಾಖಲಿಸಿಲ್ಲ. ಆದರೆ ನಾಯಕನೆಂಬ ಕಾರಣಕ್ಕೆ ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ ಎಂಬ ಟೀಕೆಗಳು ಕೇಳಿ ಬಂದಿವೆ.

ಭಾರತ-ದಕ್ಷಿಣ ಆಫ್ರಿಕಾ ಸರಣಿಯಲ್ಲಿ ಸೂರ್ಯಕುಮಾರ್ ಯಾದವ್ ನಾಯಕನಾಗಿ ತಂಡವನ್ನು ಗೆಲುವಿನತ್ತ ಒಯ್ದರೂ ಆಟಗಾರನಾಗಿ ಅವರ ಕಳಪೆ ಬ್ಯಾಟಿಂಗ್ ಪ್ರದರ್ಶನವು ತಂಡಕ್ಕೆ ಆತಂಕ ಮೂಡಿಸಿದೆ. ಅವರ ಕಡಿಮೆ ಸರಾಸರಿ ಮತ್ತು ಸ್ಟ್ರೈಕ್ ರೇಟ್ ಟಿ20 ವಿಶ್ವಕಪ್‌ಗೆ ಮುನ್ನ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಮುಂಬರುವ ನ್ಯೂಜಿಲೆಂಡ್ ಸರಣಿಯಲ್ಲಿ ಸೂರ್ಯಕುಮಾರ್ ಫಾರ್ಮ್‌ಗೆ ಮರಳುವ ಅನಿವಾರ್ಯತೆ ಇದೆ.

ಸೂರ್ಯಕುಮಾರ್ ಕಳೆದ 14 ತಿಂಗಳುಗಳಿಂದ ಭಾರತ ಟಿ20 ತಂಡದ ನಾಯಕರಾಗಿದ್ದು, 24 ಪಂದ್ಯಗಳಲ್ಲಿ ಭಾರತವನ್ನು ಮುನ್ನಡೆಸಿದ್ದಾರೆ. ಈ 24 ಪಂದ್ಯಗಳಲ್ಲೂ ಸೂರ್ಯಕುಮಾರ್ ಪ್ರದರ್ಶನ ಹೇಳಿಕೊಳ್ಳುವಂತಿಲ್ಲ. ಈ ವರ್ಷ 21 ಟಿ20 ಪಂದ್ಯಗಳನ್ನಾಡಿರುವ ಸೂರ್ಯಕುಮಾರ್ ಕೇವಲ 218 ರನ್ ಮಾತ್ರ ಕಲೆಹಾಕಿದ್ದಾರೆ. ಇದರಲ್ಲಿ ಇನ್ನೊಂದು ಕಳವಳಕಾರಿಯಾದ ಸಂಗತಿಯೆಂದರೆ, ಈ 22 ಇನ್ನಿಂಗ್ಸ್‌ಗಳಲ್ಲಿ ಅವರ ಸರಾಸರಿ ಕೇವಲ 13.62. ಸ್ಟ್ರೈಕ್ ರೇಟ್ ಕೂಡ ಕೇವಲ 120 ರ ಆಸುಪಾಸಿನಲ್ಲಿದೆ. ಈ ವರ್ಷ ಅವರ ಅತ್ಯಧಿಕ ಸ್ಕೋರ್ 47. 2024 ರ ಅಕ್ಟೋಬರ್ 12ರಂದು ಬಾಂಗ್ಲಾದೇಶ ವಿರುದ್ಧ ತಮ್ಮ ಕೊನೆಯ ಅರ್ಧಶತಕ ಬಾರಿಸಿದ್ದ ಸೂರ್ಯಕುಮಾರ್ ಬಳಿಕ ಈ ತನಕ ಒಂದೊಳ್ಳೆ ಇನ್ನಿಂಗ್ಸ್ ಆಡಲು ಸಾಧ್ಯವಾಗಿಲ್ಲ. 2025ರಲ್ಲಿ ಒಂದೇ ಒಂದು ಅರ್ಧಶತಕವಿಲ್ಲದೆ ಈ ವರ್ಷವನ್ನು ಕೊನೆಗೊಳಿಸಿದ್ದಾರೆ.

ಬ್ಯಾಟ್ಸ್‌ಮನ್ ಕಾಣೆ: ಸೂರ್ಯ ತಪ್ಪೊಪ್ಪಿಗೆ : ಅಹಮದಾಬಾದ್ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಶುಕ್ರವಾರ ದಕ್ಷಿಣ ಆಫ್ರಿಕಾ ವಿರುದ್ಧ ಟಿ 20 ಪಂದ್ಯ ಗೆದ್ದ ಬಳಿಕ ಮಾತನಾಡಿದ ತಮ್ಮ ಕಳಪೆ ಫಾರ್ಮ್ ಒಪ್ಪಿಕೊಂಡರು. ''ಬಹುಶಃ ನಮಗೆ ಸೂರ್ಯ ದಿ ಬ್ಯಾಟರ್ ಕಾಣಿಸದಿರುವುದು ಒಂದೇ ಕೊರತೆ. ಅವನು ಎಲ್ಲೋ ಕಾಣೆಯಾಗಿದ್ದಾನೆ ಅಂತ ನನಗೆ ಅನಿಸುತ್ತದೆ!. ಆದರೆ ಖಂಡಿತವಾಗಿಯೂ ಅವನು ಇನ್ನೂ ಬಲಿಷ್ಠನಾಗಿ ಕಂಬ್ಯಾಕ್ ಮಾಡಲಿದ್ದಾನೆ' ಎಂದು ಸೂರ್ಯಕುಮಾರ್ ಯಾದವ್ ವಿಶ್ವಾಸ ವ್ಯಕ್ತಪಡಿಸಿದರು.

'ಒಂದು ತಂಡವಾಗಿ, ನಾನು ನಿಜವಾಗಿಯೂ ಸಂತೋಷವಾಗಿದ್ದೇನೆ. ಏಕೆಂದರೆ ತಂಡವು ಸಂಕಷ್ಟದಲ್ಲಿದ್ದಾಗಲೆಲ್ಲಾ, ಯಾರಾದರೂ ಯಾವಾಗಲೂ ಕೊಡುಗೆ ನೀಡುತ್ತಾರೆ. ತಂಡದ ಇಂತಹ ಪ್ರದರ್ಶನದಿಂದ ನಾಯಕನಾಗಿ, ನನಗೆ ತೃಪ್ತಿ ಇದೆ' ಎಂದು ಸೂರ್ಯಕುಮಾರ್ ಹೇಳಿದರು.

ಭಾರತ-ಪಾಕ್ ಪಂದ್ಯ: ಅಭಿಮಾನಿಗಳ ಕಾತರ

ಇಂದು ಕಿರಿಯರ ಏಷ್ಯಾಕಪ್ ಫೈನಲ್

ದುಬೈ: ದುಬೈನಲ್ಲಿ ನಡೆದ ಅಂಡರ್-19 ಏಷ್ಯಾ ಕಪ್‌ನ ಸೆಮಿಫೈನಲ್‌ನಲ್ಲಿ ಲಂಕಾ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿ ಭರ್ಜರಿ ಗೆಲುವು ಸಾಧಿಸಿರುವ ಭಾರತ ಕಿರಿಯರ ತಂಡ ಭಾನುವಾರ ಪಾಕಿಸ್ತಾನ ತಂಡವನ್ನು ಎದುರಿಸಲು ಸಜ್ಜಾಗಿದೆ. ಭಾರತವು ಪಂದ್ಯಾವಳಿಯ ಉದ್ದಕ್ಕೂ ಅಜೇಯವಾಗಿ ಮುಂದುವರಿದಿದೆ. ಪಾಕಿಸ್ತಾನ ತಂಡವು ಗುಂಪು ಹಂತದಲ್ಲಿ ಭಾರತದ ವಿರುದ್ಧ ಮಾತ್ರ ಸೋಲು ಕಂಡಿದೆ. ಭಾರತ ತಂಡದ ಪರ ನಾಯಕ ಆಯುಷ್ ಮ್ಹಾತ್ರೆ, ಉಪನಾಯಕರ್ಕ ವಿಹಾನ್ ಮಲ್ಹೋತ್ರಾ ಮತ್ತು 14 ವರ್ಷದ ವೈಭವ್ ಸೂರ್ಯವಂಶಿ ಅದ್ಭುತ ಫಾರ್ಮ್‌ನಲ್ಲಿದ್ದು ಇದೀಗ ನಿರ್ಣಾಯಕ ಪಂದ್ಯದಲ್ಲೂ ಉತ್ತಮ ಪ್ರದರ್ಶನ ತೋರಬೇಕಿದೆ.

11 ವರ್ಷಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಟಿ-19 ಏಷ್ಯಾ ಕಪ್ ಫೈನಲ್‌ನಲ್ಲಿ ಮುಖಾಮುಖಿಯಾಗುತ್ತಿರುವುದು ಇದೇ ಮೊದಲು. 2014ರಲ್ಲಿ ಕೊನೆಯ ಬಾರಿಗೆ ಈ ಮುಖಾಮುಖಿ ನಡೆದಿತ್ತು. ಇದೀಗ ಅಂತರರಾಷ್ಟ್ರೀಯ ಆಟಗಾರರ ಸ್ಥಾನದಲ್ಲಿರುವ ಶ್ರೇಯಸ್ ಅಯ್ಯರ್, ಸರ್ಫರಾಜ್ ಖಾನ್, ಸಂಜು ಸ್ಯಾಮ್ಸನ್ ಮತ್ತು ಕುಲದೀಪ್ ಯಾದವ್ ಮುಂತಾದ ಆಟಗಾರರ ತಂಡ ಆಗ ಟ್ರೋಫಿಯನ್ನು ಎತ್ತಿಹಿಡಿದಿತ್ತು.

ಪಂದ್ಯ	: ಅಂಡರ್ 19 ಏಷ್ಯಾ ಕಪ್
ದಿನಾಂಕ	: ಡಿಸೆಂಬರ್ 21
ಸ್ಥಳ	: ದುಬೈನ ಐಸಿಸಿ ಅಕಾಡೆಮಿ
ನೇರ ಪ್ರಸಾರ	: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಸೋನಿ ಲಿವ್

ಬ್ರಾಡ್ಮನ್ ದಾಖಲೆ ಸರಿಗಟ್ಟಿದ ಹೆಡ್



ಅಡಿಲೇಡ್: ಮೂರನೇ ಆ್ಯಶಸ್ ಟೆಸ್ಟ್‌ನಲ್ಲಿ 142 ರನ್‌ಗಳ ಅಜೇಯ ಇನ್ನಿಂಗ್ಸ್ ಆಡುವ ಮೂಲಕ ಆಸ್ಟ್ರೇಲಿಯಾದ ಎಡಗೈ ಬ್ಯಾಟ್ಸ್‌ಮನ್ ಟ್ರಾವಿಸ್ ಹೆಡ್ ಅವರು ಡಾನ್ ಬ್ರಾಡ್ಮನ್, ಮೈಕೆಲ್ ಕ್ಲಾರ್ಕ್ ಮತ್ತು ಸ್ಟೀವ್ ಸ್ಮಿತ್ ಅವರಂತಹ ದಿಗ್ಗಜ ಆಟಗಾರರ ಸಾಲಿಗೆ ಸೇರಿದ್ದಾರೆ. ಹೆಡ್ ಆಸ್ಟ್ರೇಲಿಯಾ ನೆಲದಲ್ಲಿ ಸತತ ನಾಲ್ಕು ಟೆಸ್ಟ್ ಶತಕಗಳನ್ನು ಗಳಿಸಿದ ಐದನೇ ಬ್ಯಾಟ್ಸ್‌ಮನ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಹಿಂದೆ ಡಾನ್ ಬ್ರಾಡ್ಮನ್,ಕ್ಲಾರ್ಕ್ ಮತ್ತು ಸ್ಟೀವ್ ಸ್ಮಿತ್ ಸತತ ನಾಲ್ಕು ಟೆಸ್ಟ್‌ಗಳಲ್ಲಿ ನಾಲ್ಕು ಶತಕಗಳನ್ನು ಗಳಿಸಿದ್ದರು. ಅತ್ಯುತ್ತಮ ಫಾರ್ಮ್‌ನಲ್ಲಿರುವ ಟ್ರಾವಿಸ್ ಹೆಡ್ ಈ ಸರಣಿಯಲ್ಲಿ ಇದುವರೆಗೆ 350 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಇನ್ನು ಎರಡು ಟೆಸ್ಟ್‌ಗಳು ಮತ್ತು ಐದು ಇನ್ನಿಂಗ್ಸ್‌ಗಳು ಉಳಿದಿದ್ದು ಅವರ ದಾಖಲೆ ಮುಂದುವರಿಸಲು ಅವಕಾಶ ಇದೆ.

ವಿಟಾಕೀಸ್

ಕುತೂಹಲ ಹೆಚ್ಚಿಸಿದ ಕೊರಗಜ್ಜನ ಗಾನ

ಸುಧೀರ್ ಅತ್ತಾವರ್ ನಿರ್ದೇಶನ ಮಾಡಿರುವ ಕೊರಗಜ್ಜ ಚಿತ್ರ ಚಂದನವನದ ನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದೆ. ಕನ್ನಡ ಮಾತ್ರವಲ್ಲ ಭಾರತೀಯ ಚಿತ್ರರಂಗದಲ್ಲಿಯೇ ಕುತೂಹಲ ಮೂಡಿಸಿದೆ. ಕರಾವಳಿ ಭಾಗದ ಕಥೆಯನ್ನು ಹೊತ್ತು ಬಂದ ಕಾಂತಾರ ಚಿತ್ರದ ಭರ್ಜರಿ ಯಶಸ್ಸು ಪಡೆಯಿತು. ಅಂತೆಯೇ ಈಗ ಕೊರಗಜ್ಜ ಚಿತ್ರ ಕೂಡ ಕರಾವಳಿ ತೀರದ ಕಥೆಯನ್ನು ಒಳಗೊಂಡಿದೆ. ಈ ಹಿಂದೆ ಕೊರಗಜ್ಜ ಚಿತ್ರತಂಡ ಮೊದಲ ಹಾಡನ್ನು ಬಿಡುಗಡೆ ಮಾಡಿತ್ತು. ಕೊರಗಜ್ಜನ ದೈವೀ ರೂಪಗಳನ್ನು ಸ್ತುತಿಸುವ ಈ ಹಾಡು ಸಿನಿಪ್ರಿಯರನ್ನು ಸೆಳೆದಿತ್ತು. ಈಗ ಚಿತ್ರತಂಡ ಎರಡನೇ ಹಾಡು ಬಿಡುಗಡೆ ಮಾಡಲು ಸಿದ್ಧತೆ ನಡೆಸಿದೆ. ಈ ಗೀತೆ ಕೂಡ ಭಕ್ತಿ ಪ್ರಧಾನವಾಗಿರಲಿದೆ ಎನ್ನಲಾಗಿತ್ತು, ಆದರೆ ಆ ನಡುವೆಯೇ ಚಿತ್ರತಂಡ ಮತ್ತೊಂದು ಸರ್‌ಪ್ರೈಸ್ ನೀಡಿದೆ. ಇತ್ತೀಚೆಗೆ ಹಾಡಿನ ಸಾಹಿತ್ಯವನ್ನು ರಿಲೀಸ್ ಮಾಡಿದ್ದ ಚಿತ್ರತಂಡ ಈಗ ಈ ಹಾಡಿನಲ್ಲಿ ಬರುವ ಮುಗ್ಧ ಪ್ರೇಮಿಗಳ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿದೆ. ಆ ಮೂಲಕ ಚಿತ್ರದಲ್ಲಿ ಹೊಸತನದ ಕಥೆಯೂ ಇರುವುದಾಗಿ ಚಿತ್ರತಂಡ ಹೇಳಿದೆ.



ಚಿತ್ರದ ಎರಡನೇ ಹಾಡನ್ನು ಖ್ಯಾತ ಗಾಯಕಿ ಶ್ರೇಯಾ ಘೋಷಾಲ್ ಹಾಗೂ ಅರ್ಮಾನ್ ಮಲಿಕ್ ಹಾಡಿದ್ದಾರೆ. ಕೊರಗಜ್ಜ ಭಕ್ತಿ ಪ್ರಧಾನ ಸಿನಿಮಾ ಎಂಬುದು ಅದಾಗಲೇ ತಿಳಿದಿದೆ. ಈಗ ಬಿಡುಗಡೆಯಾಗಿರುವ ಹಾಡಿನ ಪೋಸ್ಟರ್‌ನಲ್ಲಿ ಪ್ರಣಯದ ಸನ್ನಿವೇಶವನ್ನು ಕಂಡು ಅಚ್ಚರಿಯಾಗಿದೆ. ಈ ಸಿನಿಮಾ ಬಿಡುಗಡೆಗೊಂಡ ನಂತರ ಎಲ್ಲದಕ್ಕೂ ಉತ್ತರ ಸಿಗಲಿದೆ ಎನ್ನುತ್ತಾರೆ ನಿರ್ದೇಶಕ ಸುದೀರ್ ಅತ್ತಾವರ. ಒಟ್ಟಾರೆ ಕೊರಗಜ್ಜ ಭಾರತೀಯ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆಯುವುದು ಖಚಿತವಾಗಿದೆ. ಹಿರಿಯ ನಟಿ ಶ್ರುತಿ, ಭವ್ಯಾ ಮುಂತಾದವರು ಚಿತ್ರದ ತಾರಾ ಬಳಗದಲ್ಲಿದ್ದಾರೆ. ತ್ರಿವಿಕ್ರಮ ಸಿನಿಮಾಸ್ ಮತ್ತು ಸಕಸ್ ಫಿಲಂಸ್ ಬ್ಯಾನರ್‌ನಲ್ಲಿ ಕೊರಗಜ್ಜ ಸಿನಿಮಾ ಅದ್ದೂರಿಯಾಗಿ ನಿರ್ಮಾಣವಾಗಿದೆ.

45ಗೆ ವಿದೇಶದಲ್ಲೂ ಡಿಮ್ಯಾಂಡ್

ಅರ್ಜುನ್ ಜನ್ಯ ನಿರ್ದೇಶನದ 45 ಆರಂಭದಿಂದಲೂ ಕುತೂಹಲ ಹೆಚ್ಚಿಸಿದೆ. ಚಿತ್ರದ ಟ್ರೇಲರ್ ಬಿಡುಗಡೆಯಾದ ಮೇಲಂತೂ ಸಿನಿಮಾದ ಬಗ್ಗೆ ನಿರೀಕ್ಷೆ ದುಪ್ಪಟ್ಟಾಗಿದೆ. ಶಿವರಾಜ ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ ಶೆಟ್ಟಿ ಹೀಗೆ ಮಲ್ಟಿ ಸ್ಟಾರ್ ಅಭಿನಯದ ಸಿನಿಮಾ ಇದಾಗಿದೆ. ಅದರಲ್ಲಿಯೂ ಶಿವಣ್ಣನ ಹೊಸ ಅವತಾರ ನೋಡಿ ಅಭಿಮಾನಿಗಳು ಅಚ್ಚರಿಗೊಂಡಿದ್ದಾರೆ. ಸಿನಿಮಾ ನೋಡಲು ಕಾತರರಾಗಿದ್ದಾರೆ. 45 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕ್ರಿಸ್ ಮಸ್ ಹಬ್ಬದಂದೂ ಭಾರತದಾದ್ಯಂತ ತೆರೆಗೆ ಬರಲಿದೆ. ಮಾತ್ರವಲ್ಲ 45 ಸಿನಿಮಾಗೆ ವಿದೇಶದಲ್ಲಿಯೂ ಬೇಡಿಕೆ ಇದೆ. ಇಂದಿನಿಂದ ಮುಂಗಡ ಬುಕ್ಕಿಂಗ್ ಆರಂಭವಾಗಿದ್ದು ಸಾವಿರಾರು ಟಿಕೆಟ್ ಗಳು ಬುಕ್ ಆಗುತ್ತಿವೆ. ವಿದೇಶದಲ್ಲಿ ಸಿನಿಮಾ ಬಿಡುಗಡೆಗೆ ವಿತರಕರು ಪೈಪೋಟಿ ನಡೆಸಿದ್ದಾರೆ. ಅಷ್ಟರ ಮಟ್ಟಿಗೆ 45 ಹವಾ ಸೃಷ್ಟಿಸಿದೆ.

ನಿರ್ದೇಶಕ ಅರ್ಜುನ್ ಜನ್ಯ ಈ ಚಿತ್ರದ ಮೂಲಕ ಹೊಸ ಪ್ರಪಂಚವನ್ನೇ ಸೃಷ್ಟಿಸಿದ್ದಾರೆ. ಅದು ಈಗಾಗಲೇ ಬಿಡುಗಡೆಯಾಗಿರುವ ಟ್ರೇಲರ್‌ನಲ್ಲಿ ಸ್ಪಷ್ಟವಾಗಿದೆ. ಉಪ್ಪಿ ಹಾಗೂ ಶಿವಣ್ಣ ವಿಭಿನ್ನ ಪಾತ್ರದಲ್ಲಿ ಮಿಂಚಿದ್ದು ಹಲವು ಶೇಡ್ ನಲ್ಲಿ ತೆರೆಯಲ್ಲಿ ಕಂಗೊಳಿಸಲಿದ್ದಾರೆ. ರಾಜ್ ಶೆಟ್ಟಿ ಮಹಾನಗರದಲ್ಲಿ ವಾಸಿಸುವ ಸಾಮಾನ್ಯ ವ್ಯಕ್ತಿಯ ಪಾತ್ರದಲ್ಲಿ ಕಾಣಿಸಿ ಕೊಂಡಿದ್ದಾರೆ. ಅವರ ಪಾತ್ರ ಎಲ್ಲರಿಗೂ ಕನೆಕ್ಟ್ ಆಗಲಿದೆಯಂತೆ. ಸಿನಿಮಾದ ಹಿನ್ನೆಲೆ ಸಂಗೀತವೂ ಸಿನಿಪ್ರಿಯರನ್ನು ಹಿಡಿದು ಕೂರಿಸಲಿದೆ. ಅಂತು ಈ ಬಾರಿಯ ಕ್ರಿಸ್ ಮಸ್ ಹಬ್ಬಕ್ಕೆ 45 ಮೂಲಕ ಭರ್ಜರಿ ಉಡುಗೊರೆ ಸಿಗಲಿದೆ.

ಕಿರಣ್ ಜತೆ ಕೈಜೋಡಿಸಿದ ವಿಜಯ್

ರವಿ ಕಿರಣ್ ಕೋಲಾ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಸಿನಿಮಾದಲ್ಲಿ ವಿಜಯ್ ದೇವರಕೊಂಡ ನಟಿಸುತ್ತಿದ್ದಾರೆ. ಎಸ್ ವಿಸಿ 59 ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು ದಿಲ್ ರಾಜು ಮತ್ತು ಶಿರೀಶ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಮಾಸ್, ಆ್ಯಕ್ಷನ್ ಜತೆಗೆ ಡ್ರಾಮಾ ಶೈಲಿಯಲ್ಲಿ ಈ ಸಿನಿಮಾ ಸಿದ್ಧಗೊಳಲಿದ್ದು, ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗಲಿದೆ. ವಿಜಯ್ ದೇವರಕೊಂಡ ಜತೆಗೆ ಕೀರ್ತಿ ಸುರೇಶ್ ಬಣ್ಣ ಹಚ್ಚಲಿದ್ದಾರೆ. ಈ ಚಿತ್ರದ ಕಿರು ಪ್ರೋಮೊ ಝಲಕ್ ರಿಲೀಸ್ ಆಗಿದ್ದು, ರಕ್ತ ಮೆತ್ತಿದ ಅವತಾರದಲ್ಲಿ ನಾಯಕನ ಅವತಾರ ಕುತೂಹಲ ಮೂಡಿಸಿದೆ. ಈ ಸಿನಿಮಾದ ಗ್ಲಿಂಪ್ಸ್ ಸೋಮವಾರ ರಿಲೀಸ್ ಆಗಲಿದೆ.

21.12.2025
ಭಾನುವಾರ
ವಿಶ್ವವಾಣಿ

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ

ಬಹೂಪಯೋಗಿ ಬೃಹದಾಕಾರದ ಮರಗಳು!



ಇವೆಲ್ಲಾ ಬೇಕಿಲ್ಲವೇ ನಮ್ಮ ಮುಂದಿನ ತಲೆಮಾರಿಗೆ?

» ಶಶಿಧರ ಹಾಲಾಡಿ

ಕೆಲವು ದಶಕಗಳ ಹಿಂದಿನ ಮಾತು: ನಮ್ಮ ಹಳ್ಳಿಮನೆಗೆ ತಾಗಿಕೊಂಡಂತೆ, ಬೃಹದಾಕಾರದ, ನಾನಾ ಪ್ರಭೇದದ ಹಲವು ಮರಗಳಿದ್ದವು. ಮನೆಯಿಂದ ಹತ್ತು ಹೆಜ್ಜೆ ನಡೆದರೆ, ಇನ್ನಷ್ಟು ಮರಗಳು! ನಮ್ಮ ಮನೆಯ ಸುತ್ತ ಮಾತ್ರವಲ್ಲ, ನಮ್ಮ ಹಳ್ಳಿ ಮತ್ತು ಸುತ್ತಮುತ್ತಲಿನ ನಮ್ಮ ಬಂಧುಗಳ ಹೆಚ್ಚಿನವರ ಮನೆಯ ಸುತ್ತಲೂ ದೊಡ್ಡ ದೊಡ್ಡ ಮರಗಳೇ! ಕೆಲವು ಕಡೆ, ಮನೆಯನ್ನೇ ಪೂರ್ತಿ ಮರೆಯಾಗಿಸುವಂತೆ ಬೆಳದ ಮರಗಳೂ ಇದ್ದವು. ನಮ್ಮ ಮನೆಯ ಮೇಲ್ಭಾಗದಲ್ಲಿ ಹಲಸಿನ ಮರವೊಂದಿತ್ತು; ಅದರ ನೆರಳಿನಿಂದಾಗಿ, ಬೇಸಗೆಯಲ್ಲಿ ಸೆಕೆ ಕಡಿಮೆಯಾಗುತ್ತಿತ್ತು. ನಮ್ಮ ಹಳ್ಳಿಯಿಂದ ಕೆಲವು ಕಿ.ಮೀ. ಪೂರ್ವ ದಿಕ್ಕಿಗೆ ಸಾಗಿದರೆ, ಪಶ್ಚಿಮ ಘಟ್ಟ ಸಾಲಿನ ಗರ್ಭದಲ್ಲೇ ಎಂಬಂತೆ ಇರುವ ಕೆಲವು ಹಳ್ಳಿಗಳಲ್ಲಂತೂ, ಮನೆಗಳನ್ನೇ ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಂತೆ ಮರ, ಗಿಡ, ಬಳ್ಳಿಗಳು ಬೆಳೆದಿರುತ್ತಿದ್ದವು. ಆ ರೀತಿ, ದಟ್ಟ ಮರಗಿಡಗಳ ನಡುವೆ ಮನೆ ಕಟ್ಟಿಕೊಂಡು, ಸಸ್ಯಗಳೊಂದಿಗೆ ಸಮನ್ವಯ ಸಾಧಿಸಿಕೊಂಡು, ನೂರಾರು ವರ್ಷಗಳಿಂದ ಬದುಕನ್ನು ಕಟ್ಟಿಕೊಂಡವರನ್ನು ಇನ್ನಷ್ಟು ಸಂಖ್ಯೆಯಲ್ಲಿ ನೋಡಬೇಕಾದರೆ, ಹೆಬ್ರಿ ಸನಿಹದ ಕಬ್ಬಿನಾಲೆ ಎಂಬ ಗ್ರಾಮಕ್ಕೆ ಹೋಗಬೇಕು. ಪರಿಸರದೊಂದಿಗೆ ಮಿಳಿತವಾದ ಬದುಕು ಅಲ್ಲಿ ನೆಲೆಗಟ್ಟಿದೆ.

ಇರಲಿ, ನಮ್ಮ ಹಳ್ಳಿಯಲ್ಲಿದ್ದ ನಮ್ಮ ಮನೆಯ ವಿಚಾರಕ್ಕೆ ಬರೋಣ. ಬೃಹದಾಕಾರವಾಗಿ ಬೆಳೆದಿದ್ದು, ನಮ್ಮ ಊಟ, ತಿಂಡಿ, ತಿನಿಸುಗಳಿಗೆ ರುಚಿಕೊಡುತ್ತಿದ್ದ ಮರವೊಂದು ನಮ್ಮ ಮನೆಯ ಮಗ್ಗುಲಲ್ಲೇ ಇತ್ತು. ಅಂಗಳ ದಾಟಿ, ಹತ್ತಾರು ಹೆಜ್ಜೆ ನಡೆದರೆ ಆ ಮರದ ನೆರಳಿನಲ್ಲಿ ನಿಲ್ಲಬಹುದಿತ್ತು; ವಿಶಾಲವಾದ ರೆಂಬೆಕೊಂಬೆಗಳಿದ್ದ ಆ ಮರದಲ್ಲಿ ದಟ್ಟವಾಗಿ ಬೆಳೆದಿದ್ದ ದೊಡ್ಡ ದೊಡ್ಡ ಎಲೆಗಳಿಂದಾಗಿ, ಮರದ ಅಡಿ ಬಿಸಿಲು ಬೀಳಲು ಸಾಧ್ಯವೇ ಇರಲಿಲ್ಲ. ಆ ಮರವು ನಮ್ಮ ಅಡುಗೆಗೆ, ಊಟ ತಿಂಡಿಗೆ ರುಚಿ ತರುತ್ತಿದ್ದ ರೀತಿ ಮಾತ್ರ ಬಹಳ ಕುತೂಹಲಕಾರಿ. ಆ ಮರವು ಪ್ರತಿವರ್ಷ ಬಿಡುತ್ತಿದ್ದ ಸಾವಿರಾರು ಕಾಯಿಗಳಿಗೆ ವಾಣಿಜ್ಯಕ ಮೌಲ್ಯವೂ ಇದೆ. ಅದು ಪ್ರತಿ ಮಳೆಗಾಲದಲ್ಲಿ ಬೀಳಿಸುವ ಅಡಿಕೆ ಗಾತ್ರದ ಕಾಯಿಗಳ ತಿರುಳನ್ನು ಜಜ್ಜಿ, ಪುಡಿ ಮಾಡಿ, ನೀರುಹಾಕಿ ತಿರುವಿ, ದೊಡ್ಡ ಪಾತ್ರೆಗೆ ಹಾಕಿ ಚೆನ್ನಾಗಿ ಬೇಯಿಸಿದರೆ, ಪಾತ್ರೆಯ ಮೇಲ್ಭಾಗದಲ್ಲಿ ಎಣ್ಣೆ ತೇಲುತ್ತಾ ಶೇಖರವಾಗುತ್ತಿತ್ತು. ಬಿಸಿಯಾದ ಆ ಎಣ್ಣೆಯು ತಣೆಯುತ್ತಿದ್ದಂತೆ, ಉಂಡೆ ಗಾತ್ರಕ್ಕೆ ಮಾಡಿಬಿಟ್ಟರೆ, ಪೂರ್ತಿ ತಣಿದ ನಂತರ ಬಿಳಿಯ ಕ್ರಿಕೆಟ್ ಬಾಲ್‌ನ ಸ್ವರೂಪ! ಬಣ್ಣ ಮಾತ್ರ ನಸು ಬಿಳಿ. ಆ ಬಿಳಿ ಉಂಡೆಯನ್ನು ಬಾಣಲೆಗೆ ಹಾಕಿ, ಬಿಸಿ ಮಾಡಿದರೆ, ಸುಮಾರು ಕಾಲು ಲೀಟರ್ ಖಾದ್ಯ ತೈಲ ಸಿದ್ಧ! ಆ ಖಾದ್ಯತೈಲದ ಗುಣಮಟ್ಟವು, ಇಂದು ಅಂಗಡಿಗಳಲ್ಲಿ ದೊರಕುವ ರಿಫೈನ್ಡ್ ಆಯಿಲ್‌ನಷ್ಟೇ ಉತ್ತಮ. ಅದರಲ್ಲಿ ಹಪ್ಪಳ ಕರಿಯಬಹುದು, ಬನ್ಸ್, ಮುಳಕ, ಅತ್ರಾಸ, ಮಂಗಳೂರು ಬಜ್ಜಿ ಕಾಯಿಸಬಹುದು! ಆ ಎಣ್ಣೆಯನ್ನು ಒಗ್ಗರಣೆಗೂ ಬಳಸಬಹುದು, ವಾತದಿಂದ ಬರುವ ಕಾಲುನೋವು, ಸೊಂಟ ನೋವಿನ ಶಮನಕ್ಕೂ ಬಳಸಬಹುದು. ಇನ್ನೂ ವಿಶೇಷವೆಂದರೆ, ಆ ಬಿಳಿ ಉಂಡೆಗಳನ್ನು ಆರು ತಿಂಗಳುಗಳ ತನಕ ಕಾಪಿಡಬಹುದು. 20–30 ಎಣ್ಣೆ ಉಂಡೆಗಳಿದ್ದರೆ, ಗ್ರಾಮೀಣ ಕುಟುಂಬದ ಆರು ತಿಂಗಳುಗಳ ಅಡುಗೆಗೆ ಸಾಕು!

ಮರವನ್ನೂ ಪಾಲು ಮಾಡಿಕೊಂಡರು

ವಾತಾವರಣದ ಉಷ್ಣತೆಗೆ ಗಟ್ಟಿಯಾಗಿ, ಉಂಡೆಯ ರೂಪ ತಾಳುವ ಈ ಖಾದ್ಯತೈಲವೇ ದೂಪದ ಎಣ್ಣೆ; ಆ ಎಣ್ಣೆ ಇರುವ ಕಾಯಿಗಳನ್ನು ಕೊಡುವ ಮರವೇ ದೂಪದ ಮರ (ವಟೇರಿಯಾ ಇಂಡಿಕಾ). ನಮ್ಮ ಮನೆ ಬಳಿ ಇದ್ದ ಆ ಬೃಹದಾಕಾರದ ಮರವು ಪ್ರತಿವರ್ಷ ನೀಡುವ ಸಾವಿರಾರು ಕಾಯಿಗಳನ್ನು ಸಂಗ್ರಹಿಸಿ, ತಿರುಳು ಬೇರ್ಪಡಿಸಿ ಬೇಯಿಸಿ ಎಣ್ಣೆ ಮಾಡುವುದು ನಮ್ಮ ಮನೆಯವರ ಹವ್ಯಾಸ. ಆ ದೂಪದ ಮರಕ್ಕೆ ಅದೆಷ್ಟು ಪ್ರಾಮುಖ್ಯತೆ ಇತ್ತು ಎಂದರೆ, ಕೆಲವು ದಶಕಗಳ ಹಿಂದೆ ನಮ್ಮ ಮನೆ ಹಿಸ್ಸೆಯಾದಾಗ, ಆ ದೂಪದ ಮರದ ಕಾಯಿಗಳನ್ನು ಎರಡೂ ಕುಟುಂಬಗಳು ಹಂಚಿಕೊಳ್ಳಬೇಕು ಎಂಬ ಒಪ್ಪಂದವೂ ಆಗಿತ್ತು!

ಈಗ ದೂಪದ ಎಣ್ಣೆಯನ್ನು ಖಾದ್ಯತೈಲವಾಗಿ ಉಪಯೋಗಿಸುವ ಪದ್ಧತಿ ನಮ್ಮ ಹಳ್ಳಿಯಲ್ಲಿ ಪೂರ್ತಿಯಾಗಿ ನಿಂತುಹೋಗಿದೆ. ಅಲ್ಲಲ್ಲಿ ಹಾಡಿ ಹಕ್ಕಲುಗಳಲ್ಲಿ ದೂಪದ ಮರಗಳು ಇದ್ದರೂ, ನಿಧಾನವಾಗಿ ಬೆಳೆಯುವ ಆ ಮರವನ್ನು ರಕ್ಷಿಸುವ ಕುರಿತು ಕೃಷಿಕರಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಈಗೇನಿದ್ದರೂ, ಬೇಗನೆ ಬೆಳೆದು, ಬೇಗನೆ 'ಕಟಾವಿಗೆ' ಬರುವ ಅಕೇಶಿಯಾ ಮರಗಳೇ ಜನಪ್ರಿಯ.

ಮನೆಯ ತುಂಬಾ ಸುಗಂಧ

ನಮ್ಮ ಹಳ್ಳಿ ಕಾಡುಗಳಲ್ಲಿ 'ದುಗಳು ದೂಪ' ಎಂದು ಕರೆಯಿಸಿಕೊಳ್ಳುವ ಇನ್ನೊಂದು ಮರವೂ ಇದೆ. ಎತ್ತರವಾಗಿ ಬೆಳೆಯುವ ಈ ಮರದ ಕಾಂಡಕ್ಕೆ ಚಿಕ್ಕ ಗಾಯ ಮಾಡಿದರೆ, ಅಂಟು ಅಂಟಾದ 'ರಾಳ' ಅಥವಾ ದೂಪ ಒಸರುತ್ತದೆ; ಅದನ್ನು ಆರಲು ಬಿಟ್ಟರೆ, ಅರೆಪಾರದರ್ಶಕ ಅಂಟು ಅಥವಾ ರಾಳ ಸಿಗುತ್ತದೆ. ಆ ರಾಳವನ್ನು ಪುಡಿ ಮಾಡಿ, ಒಂದು ಸೌಟಿನಲ್ಲಿಟ್ಟು ಬೆಂಕಿ ಹಚ್ಚಿದರೆ, ಒಳ್ಳೆಯ ಸುಗಂಧ ಭರಿತ ಹೊಗೆ ಮನೆಯ ತುಂಬಾ ತುಂಬಿಕೊಳ್ಳುತ್ತದೆ. ಬಾಣಂತಿಯರಿರುವ ಮನೆಯಲ್ಲಿ ಈ ದೂಪವನ್ನು ಸುಡುವ ಪದ್ಧತಿ ಇತ್ತು. ಆದರೆ, ದುಗಳು ದೂಪದ ಮರದ ಅಂಟು ಅಥವಾ ರಾಳವನ್ನು, ವಾಣಿಜ್ಯಕ ಉದ್ದೇಶಗಳಿಗಾಗಿ ಸಂಗ್ರಹಿಸುವ ಕೆಲಸವು ನಾಲ್ಕಾರು ದಶಕಗಳ ಹಿಂದೆ ಆರಂಭವಾಯಿತು. ಹಾಡಿ ಗುಡ್ಡಗಳಲ್ಲಿ ಏಕಾಂಗಿಯಾಗಿ ಎತ್ತರವಾಗಿ ಬೆಳೆಯುವ ದುಗಳು ದೂಪದ ಮರಗಳನ್ನು ಹುಡುಕಿ, ಅದರ ಕಾಂಡಕ್ಕೆ ಗಾಯ ಮಾಡಿ, ಅಂಟು ಸಂಗ್ರಹಿಸಲೆಂದೇ ಕೆಲವರು ಗುಡ್ಡಗಳಲ್ಲಿ ಓಡಾಡುತ್ತಿದ್ದರು. ಅಧಿಕೃತವೋ, ಅನಧಿಕೃತವೋ, ಒಟ್ಟಾರೆ, ನಮ್ಮ ಸುತ್ತಮುತ್ತಲಿನ ಎಲ್ಲಾ ದುಗಳು ದೂಪದ ಮರಗಳ ತೊಗಟೆಗಳನ್ನು ಒಂದೆರಡು ಅಡಿಗಳಷ್ಟು ಕೆತ್ತಿ, ರಾಳ ಸಂಗ್ರಹಿಸತೊಡಗಿದರು. ಆ ರೀತಿ ಅಂಟು ತೆಗೆದ ನಂತರ, ಕೆಲವೇ ವರ್ಷಗಳಲ್ಲಿ ಮರವೇ ಸತ್ತು, ಉರುಳಿ ಬೀಳುತ್ತದೆ. ಸುಗಂಧದ ಹೊಗೆ ನೀಡುವ ಅಂಟು ನೀಡುವ, ಬಲಿತ ದೂಪದ ಮರಗಳು ಈಗ ನಮ್ಮ ಹಳ್ಳಿಯಲ್ಲಿ ಬಲು ಅಪರೂಪವಾಗಿವೆ.

ನಮ್ಮ ಹಳ್ಳಿಯಲ್ಲಿ ಹಿಂದೆ ಹೇರಳವಾಗಿದ್ದು, ಇಂದು ಕಡಿಮೆ ಸಂಖ್ಯೆಯಲ್ಲಿರುವ ಇನ್ನೊಂದು ಮರವೆಂದರೆ ಹೊನ್ನೆ ಮರ (ಕ್ಯಾಲೋಫಿಲ್ಲಂ ಇನೋಫಿಲ್ಲಂ). ಕಳೆದ ಶತಮಾನದ ಮೊದಲರ್ಧದಲ್ಲಿ, ಇವು ಪ್ರತಿ ಹಳ್ಳಿಯಲ್ಲಿ ಅಗತ್ಯವಾಗಿ ಸಾಕಷ್ಟು ಸಂಖ್ಯೆಯಲ್ಲಿರಬೇಕಾಗಿದ್ದ ವೃಕ್ಷಗಳು. ದಟ್ಟ ಹಸಿರಿನ, ದೊಡ್ಡ ಗಾತ್ರದ ಎಲೆ; ಆದರೆ, ಜನರಿಗೆ ಬೇಕಾಗಿದ್ದುದು, ಆ ಮರವು ಜೊಂಪೆಜೊಂಪೆಯಾಗಿ ಬಿಡುತ್ತಿದ್ದ, ದುಂಡನೆಯ ಕಾಯಿಗಳು. ಆಗಿನ್ನೂ ದೀಪದ ಉದ್ದೇಶಕ್ಕೆ ನಮ್ಮ ಹಳ್ಳಿಗಳಲ್ಲಿ ಚಿಮಿಣಿ ಎಣ್ಣೆಯ ಬಳಕೆ ಆರಂಭವಾಗಿರಲಿಲ್ಲ. ಮನೆಯಲ್ಲಿ ದೀಪ ಹಚ್ಚಲು, ಹೊನ್ನೆ ಎಣ್ಣೆಯೇ ಪ್ರಶಸ್ತ. ಅಡಕೆ ಗಾತ್ರದ, ಪೂರ್ತಿ ದುಂಡಗಿದ್ದ ಹಸಿರು ಬಣ್ಣದ ಹೊನ್ನೆ ಕಾಯಿಗಳನ್ನು ಬುಟ್ಟಿಗಟ್ಟಲೆ ಸಂಗ್ರಹಿಸಿ, ಒಣಗಿಸಿ ಎಣ್ಣೆ ತಯಾರಿಸುವ ಪರಿಪಾಠ. ಆ ಎಣ್ಣೆಯನ್ನು ಬಳಸಿ, ದೀಪ, ಸೊಡರು, ಹಣತೆಗಳನ್ನು ಬೆಳಗುತ್ತಿದ್ದರು. ಕ್ರಮೇಣ ಸೀಮೆ ಎಣ್ಣೆಯು ಹಳ್ಳಿಗಳಿಗೆ ಸರಬರಾಜು ಆಗತೊಡಗಿದ ನಂತರ, ಚಿಮಿಣೀ ಬುಡ್ಡಿ, ಲಾಟೀನು, ಗ್ಯಾಸ್ ಲೈಟುಗಳ ಬಳಕೆ ಜನಪ್ರಿಯವಾಯಿತು, ಹೊನ್ನೆ ಎಣ್ಣೆ ತಯಾರಿಸುವ ಪದ್ಧತಿ ಪೂರ್ತಿ ನಿಂತು ಹೋಯಿತು. ನಮ್ಮ ಹಳ್ಳಿಯ ಜನರು, ಹೊನ್ನೆಣ್ಣೆ ಮತ್ತು ಹೊನ್ನೆ ಮರಗಳನ್ನು ಅದಾವ ಪರಿಯಲ್ಲಿ ಮರೆತುಬಿಟ್ಟಿದ್ದಾರೆಂದರೆ, ಮನೆ ಬೆಳಗಲು ಅದರ ಎಣ್ಣೆಯನ್ನು ಬಳಸುವ ದೀಪಗಳಿದ್ದವು ಎಂಬುದೇ ಈಗಿನ ತಲೆಮಾರಿನ ಅರಿವಿನಲ್ಲಿಲ್ಲ. ನಮ್ಮ ಹಳ್ಳಿಯಲ್ಲಿ ಇತ್ತೀಚೆಗೆ ಗಮನಿಸಿದಾಗ, ಮೊದಲಿನಂತೆ ತೋಡುಗಳ ಬದಿಯಲ್ಲೋ, ಕಾಲ್ದಾರಿಯ ಬದಿಯಲ್ಲೋ ಕಂಡುಬರುತ್ತಿದ್ದ ಮಧ್ಯಮ ಗಾತ್ರದ ಹೊನ್ನೆ ಮರಗಳು ಮಾಯವಾಗಿಬಿಟ್ಟಿವೆ!

ಮುಳ್ಳುಗಿಡದ ಎಲೆಯಿಂದ ಚಾಪೆ

ಗದ್ದೆಯಂಚಿನ ತೋಡಿನ ಪಕ್ಕದಲ್ಲಿ ಬೆಳೆಯುತ್ತಿದ್ದ ಮುಂಡುಕನ ಗಿಡಗಳು ಮತ್ತು ಅದರ ಎಲೆಯಿಂದ ತಯಾರಿಸುವ ಚಾಪೆಯ ಕಥೆ ಇನ್ನೂ ಮಜವಾಗಿದೆ. ಅದನ್ನು 'ಮುಂಡುಕನ ಓಲಿ ಚಾಪೆ' ಎಂದೇ ಕರೆಯುವ ರೂಢಿ. ವರ್ಷದ ಒಂಬತ್ತು ತಿಂಗಳು ನೀರು ಹರಿಯುತ್ತಿದ್ದ ತೋಡಿನ ಅಂಚೇ, ಮುಂಡುಕನ ಗಿಡಗಳು ಬೆಳೆಯಲು ಸೂಕ್ತ ತಾಣ. ಆರರಿಂದ ಹತ್ತು ಅಡಿ ಎತ್ತರ ಬೆಳೆಯುವ ಪೊದೆ; ಒತ್ತೊತ್ತಾಗಿ ಹೊರಬರುವ ನಾಲ್ಕು ಅಡಿ ಉದ್ದದ ಎಲೆಗಳು; ಆ ಎಲೆಗಳ ಎರಡೂ ಬದಿಯಲ್ಲಿ ಪುಟಾಣಿ ಮುಳ್ಳುಗಳ ಸಾಲು. ಬಲಿತ ಮುಂಡುಕನ ಎಲೆಗಳು ಮೈಕೈಗೆ ತಗುಲಿದರೆ, ಗಾಯ ಖಚಿತ! ಅಂತಹ ಎಲೆಗಳನ್ನ ಕತ್ತರಿಸಿ, ಎರಡೂ ಪಕ್ಕದ ಮುಳ್ಳುಗಳನ್ನು ನಾಜೂಕಾಗಿ ಸವರಿ ತೆಗೆದುಹಾಕಲು ಒಂದು ಮಟ್ಟದ ಕೌಶಲ್ಯ ಅಗತ್ಯ. ಆ ರೀತಿ ಮುಳ್ಳು ತೆಗೆದು, ಮುಂಡುಕನ ಉದ್ದನೆಯ ಎಲೆಗಳನ್ನು ಒಣಗಿಸಿ, ಕಲಾತ್ಮಕವಾಗಿ ಹೆಣೆದು ಚಾಪೆ ಮಾಡುವ ಕೆಲವು ಮಹಿಳೆಯರು ನಮ್ಮೂರಿನಲ್ಲಿದ್ದರು. ಆ ಚಾಪೆಯ ಮೇಲೆ ಮಲಗಿದರೆ ಸುಖನಿದ್ದೆ! ಎಲೆಗಳ ಮೇಲೆ ಮಲಗಿದಂತೆ. ಇಂತಹ ಮೆದು ಚಾಪೆಗೆ ಪ್ರತಿಸ್ಪರ್ಧಿಯೋ ಎಂಬಂತೆ, 'ಈಚಲು ಓಲಿ ಚಾಪೆ'ಗಳೂ ನಮ್ಮೂರಲ್ಲಿದ್ದವು. ನಮ್ಮ ಹಳ್ಳಿಯಿಂದ ಸುಮಾರು ಹತ್ತು ಕಿ.ಮೀ. ದೂರದ ಅಂಪಾರು ಎಂಬ ಹಳ್ಳಿಯ ಸನಿಹದ ಗುಡ್ಡಗಳಲ್ಲಿ ಈಚಲು ಗಿಡಗಳು ಹೇರಳವಾಗಿ ಬೆಳೆಯುತ್ತವೆ. ಅವು ಪೊದೆ ಗಾತ್ರದ ಪ್ರಭೇದದವು. ಆ ಎಲೆಗಳನ್ನು ಕತ್ತರಿಸಿ ಹೊತ್ತು ತಂದು, ಒಣಗಿಸಿ, ಹೆಣೆದು ತಯಾರಿಸುವ ಚಾಪೆಗಳು ತುಸು ಬಿರುಸು; ಮೆದುವಾದ ಮುಂಡುಕನ ಓಲಿ ಚಾಪೆಗೆ ಹೋಲಿಸಿದರೆ, ಬಿರುಸಾದ ಈಚಲು ಓಲಿ ಚಾಪೆಗಳ ಬಾಳಿಕೆ ಜಾಸ್ತಿ. ಪ್ಲಾಸ್ಟಿಕ್ ಚಾಪೆಗಳು ನಮ್ಮ ಹಳ್ಳಿ ಸಂತೆಯಲ್ಲಿ ದೊರಕಲು ಆರಂಭಗೊಂಡ ನಂತರ, ಸ್ಥಳೀಯವಾಗಿ ದೊರಕುವ ಎಲೆಗಳಿಂದ ತಯಾರಿಸುವ ಚಾಪೆಗಳು ನಮ್ಮ ಹಳ್ಳಿಯಿಂದ ಪೂರ್ತಿಯಾಗಿ ಮರೆಯಾಗಿಬಿಟ್ಟಿವೆ!

ಬಕ್ಕೆ ಮತ್ತು ಇಂಬ

ಆಹಾರ ರೂಪದ ಕಾಯಿಗಳನ್ನು ನೀಡುವ, ಮನೆ ಕಟ್ಟಲು ಅಗತ್ಯವಾಗಿರು ಮೋಪು ನೀಡುವ, ಔಷಧೀಯ ಗುಣಗಳನ್ನು ಹೊಂದಿರುವ ಹಲವು ಮರಗಿಡ ಬಳ್ಳಿಗಳು ನಮ್ಮ ಹಳ್ಳಿಯಲ್ಲಿದ್ದು, ಅವೆಲ್ಲವುಗಳ ಪೂರ್ತಿ ವಿವರ ಬರೆಯುತ್ತಾ ಹೋದರೆ ಪುಟ್ಟ ಪುಸ್ತಕವೇ ಆದೀತು! ಆಹಾರವಾಗಿ ಮತ್ತು ಉತ್ತಮ ಮೋಪು ನೀಡುವ ಮರಗಳನ್ನ ಗಮನಿಸಿದರೆ, ಮೊದಲ ಸ್ಥಾನವು ಹಲಸಿನ ಮರಕ್ಕೆ ನೀಡಬೇಕೋ, ಮಾವಿನ ಮರಕ್ಕೆ ನೀಡಬೇಕೋ ಗೊತ್ತಾಗುತ್ತಿಲ್ಲ. ರುಚಿಯೇ ಮಾನದಂಡವಾದರೆ ಮಾವು, ಆದರೆ ಹೊಟ್ಟೆ ತುಂಬಿಸಿ, ಕೆಲವರ ಹಸಿವನ್ನು ನೀಗಿಸುವ ವಿಚಾರ ಗಮನಿಸಿದರೆ ಹಲಸು! ನಮ್ಮ ಹಳ್ಳಿಮನೆಯ ಸುತ್ತಲೂ ಕೆಲವು ಹಲಸಿನ ಮರಗಳಿವೆ; ಅದಕ್ಕಿಂತ ಹೆಚ್ಚು ವೈವಿಧ್ಯದ ಹಲಸಿನ ಮರಗಳು ನಮ್ಮ ಆಚೀಚಿನ ಮನೆಗಳಲ್ಲಿ, ಅಬ್ಲಿಕಟ್ಟೆಯಲ್ಲಿನ ನಮ್ಮ ಬಂಧುಗಳ ಮನೆಯಲ್ಲಿದ್ದವು. ಒಂದೊಂದು ಮರದ್ದೂ ಒಂದೊಂದು ರುಚಿ; ಜತೆಗೆ ಬಕ್ಕೆ ಮತ್ತು ಇಂಬ (ಮೆದು ತೊಳೆ) ಎಂಬ ಎರಡು ವಿಧ. ಹಲಸಿನ ಹೀಚು ತುಸು ದೊಡ್ಡದಾದ ಕ್ಷಣದಿಂದ, ಅದು ನಮ್ಮ ಆಹಾರವಾಗಲು ಆರಂಭ. ಮೊದಲಿಗೆ ಎಳೆಯ ಕಡಿಗೆಯಿಂದ ಪಲ್ಯ, ತಾಳ್ಳು ತಯಾರಿ; ಹದವಾಗಿ ಬಲಿತಾಗ ಹುಳಿ, ಪಲ್ಯ; ಜತೆಗೆ ರುಚಿ ರುಚಿಯಾದ ಉಪ್ಪಿನಕಾಯಿಗೂ ಆಗುತ್ತದೆ. ಈಗ ಬಹುಮಟ್ಟಿಗೆ ಬಳಕೆಯಿಂದ ದೂರವಾಗಿರುವ ಎಳೆ ಹಲಸಿನ ಕಾಯಿಯ ಉಪ್ಪಿನಕಾಯಿಯ ರುಚಿ ನಿಜಕ್ಕೂ ಅದ್ಭುತ! ಒಂದೇ ಕೊರತೆ ಎಂದರೆ, ಫ್ರಿಜ್ ಇಲ್ಲದಿದ್ದರೆ ಈ ಉಪ್ಪಿನಕಾಯಿಯ ಬಾಳಿಕೆ ಒಂದೆರಡು ತಿಂಗಳು ಮಾತ್ರ; ನಂತರ ರುಚಿ ಕೆಡುತ್ತದೆ.

4ನೇ ಪುಟಕ್ಕೆ →

ಪ್ರತಿ ವರ್ಷ ಚಳಿಗಾಲ ಬಂದ ಕೂಡಲೆ, ನಮ್ಮ ದೇಶದ ರಾಜಧಾನಿಯ ಗಾಳಿ ಹದಗೆಡುತ್ತದೆ; ಏರ್ ಕ್ವಾಲಿಟಿ ಇಂಡೆಕ್ಸ್ 300 ರಿಂದ 400 ತಲುಪುತ್ತದೆ! ಈ ವರ್ಷ ಅಲ್ಲಿನ ಸ್ಥಿತಿ ತೀರಾ ಕೆಟ್ಟಿದ್ದು, ಈ ಸಮಸ್ಯೆಗೆ ದೀರ್ಘಕಾಲೀನ ಪರಿಹಾರ ಬೇಕೆಂದು ಜನ ಬಯಸುತ್ತಿದ್ದಾರೆ. ಚೀನಾ ದೇಶವು ತಾನು ಹೇಗೆ ತನ್ನ ದೇಶದ ಗಾಳಿಯನ್ನು ಶುದ್ಧವಾಗಿಟ್ಟದ್ದೇನೆ ಎಂದು ಪ್ರಚಾರಮಾಡಿಕೊಳ್ಳುತ್ತಿದೆ. ಅಲ್ಲಿನ ಬಿಗಿ ಆಡಳಿತದಿಂದಾಗಿ, ದೂಳು ಮತ್ತು ಮಾಲಿನ್ಯ ತಡೆಯಬೇಕೆಂದು ನಿರ್ಧರಿಸಿದ ತಕ್ಷಣ, ಅಗತ್ಯವೆನಿಸಿದರೆ ದೊಡ್ಡ ದೊಡ್ಡ ಕಾರ್ಖಾನೆಗಳನ್ನೇ ರಾತ್ರಿ ಬೆಳಗಾಗುವುದರೊಳಗೆ ದೂರಕ್ಕೆ ಸ್ಥಳಾಂತರಿಸುವಂತಹ ಕೆಲಸಗಳನ್ನು ಮಾಡಬಹುದು; ಆದರೆ ಅಂತಹ ಬಿಗಿ ಕ್ರಮ ನಮ್ಮ ದೇಶದಲ್ಲಿ ಅಸಾಧ್ಯ. ಈಗ ದೆಹಲಿಯ ಕೆಲವು ಪ್ರಾಜ್ಞರು, ಪರಿಸರಪ್ರೇಮಿಗಳು ಒಂದು ಆಂದೋಲನ ಆರಂಭಿಸಿದ್ದಾರೆ : ಅದೇನೆಂದರೆ, 'ದೆಹಲಿಯ ಸುತ್ತಲೂ ಹರಡಿರುವ ಅರಾವಳಿ ಬೆಟ್ಟ ಮತ್ತು ಕಾಡನ್ನು ಉಳಿಸಿ ಮತ್ತು ಇದರಿಂದಾಗಿ ದೆಹಲಿಯ ಗಾಳಿಯನ್ನು ಶುದ್ಧೀಕರಿಸಬಹುದು!' ನಿಮ್ಮ ಸುತ್ತಲಿನ ಮರ, ಗಿಡ, ಕುರುಚಲು ಕಾಡು, ಬಳ್ಳಿಯ ಮಹತ್ವವನ್ನು ನೀವೂ ಗಮನಿಸಿರಬಹುದು. ಅದರ ಕುರಿತು ನೀವೂ ಬರೆಯಿರಿ! ನಿಮ್ಮ ಪ್ರತಿಕ್ರಿಯೆಗೆ ಸ್ವಾಗತ.

ಆಳವಾದ ಸಂಶೋಧನೆಯೇ ಇವರ ಶಕ್ತಿ

» ಡಾ. ಸುಧಾಕರ ಹೊಸಳ್ಳಿ

ಲೇಖಕ, ಚಿಂತಕ ಜಿ.ಬಿ.ಹರೀಶ ಅವರಿಗೆ ಈಗ 50 ವರ್ಷವಾಗಿದೆ. ಸಂಶೋಧನೆ ಮತ್ತು ಪ್ರಖರ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದು ಅವರ ವೈಶಿಷ್ಟ್ಯ. ಹಲವು ಪುಸ್ತಕಗಳನ್ನು ರಚಿಸಿರುವುದರ ಜತೆಯಲ್ಲೇ, ನಮ್ಮ ದೇಶದ ಐಕ್ಯತೆಗೆ ವಿರೋಧ ಎನಿಸುವ ವಿಚಾರಗಳನ್ನು ಬಹಿರಂಗವಾಗಿ ಖಂಡಿಸುವ ಛಾತಿ ಉಳ್ಳ ಅಪರೂಪದ ಲೇಖಕ ಜಿ.ಬಿ.ಹರೀಶ.

ನಮ್ಮ ನಡುವಿನ ಅಪರೂಪದ ಸಂಶೋಧಕ, ಸಾಹಿತಿ, ಚಿಂತಕ ಡಾ. ಜಿ.ಬಿ. ಹರೀಶ ಅವರನ್ನು ಅಭಿನಂದಿಸುವುದು ಎಂದರೆ ಹೊಸ ತಲೆಮಾರಿನ ಬರಹಗಾರರಿಗೆ, ಅದೊಂದು ಪ್ರೇರಣೆಯ ಕಾರ್ಯಾಗಾರವಿದ್ದಂತೆ. ಸಂಶೋಧಕರಿಗಂತೂ, ತಮ್ಮ ಚೌಕಟ್ಟು ಪರಾಮರ್ಶೆಗೆ, ಹಳಿ ತಪ್ಪಿದ ಆಯಾಮಗಳ ಹೊಂದಾಣಿಕೆಗೆ ಅದೊಂದು ಮಾರ್ಗಸೂಚಿ ಎಕ್ಸಿಬಿಷನ್. ನಮ್ಮದೊಂದು ಬರೆವಣಿಗೆ, ನಮ್ಮದೊಂದು ಸಂಶೋಧನೆಯ ಮಾರ್ಗ ಕಟ್ಟಿಕೊಳ್ಳಲು, ಹರೀಶರ ಸಾಹಿತ್ಯ ಸಂಶೋಧನಾ ದರ್ಶನ ಮೌಲ್ಯದ ಪಾಠ. ಹರೀಶರ ಅಭಿನಂದನಾ ಕಾರ್ಯಕ್ರಮದ ಸಭಾಂಗಣದಲ್ಲಿ ಧ್ಯಾನಸ್ಥವಾಗಿ ಕಿವಿ ಆದರೆ ಸಾಕು– ಹೊರ ಬರುವಾಗ ಕವಿಯೇ ಆಗಿಬಿಡಬಹುದು.

ಇತ್ತೀಚಿಗೆ ಅವರು ಪಟ್ಟಿ ಮಾಡಿದ ತಮ್ಮ ಕೃತಿಗಳ ಅಪೂರ್ಣ ಪಟ್ಟಿಯನ್ನು ನನಗೆ ಕಳಿಸಿಕೊಟ್ಟಿದ್ದರು. 'ಕನ್ನಡ ಸಾಹಿತ್ಯದ ಮೊದಲ ಹೆಜ್ಜೆಗಳು' ಹಾಸನದ ಕೇಶವ ಅವರು ಪ್ರಕಟಿಸಿದ್ದು 1998 ಎಂದು ಅದರಲ್ಲಿ ದಾಖಲಾಗಿದೆ. ಇತ್ತೀಚಿಗನ ಅವರ ಕೃತಿ, ಸುಭಾಶ್ ಚಂದ್ರ ಬೋಸ್ ಅವರ ಅಸೀಮ ಸಾಹಸದ ಕುರಿತಾಗಿದೆ: 'ಮಹಾಕಾಲ'. ಅವರು ಬರೆದಿರುವ 'ಎಲ್ಲರಿಗೂ ಬೇಕಾದ ಅಂಬೇಡ್ಕರ್' ಕೃತಿಯ ಬಿಡುಗಡೆ ಮೈಸೂರಿನಲ್ಲಿದ್ದಾಗ, ಪುಸ್ತಕ ಕುರಿತು ಮಾತನಾಡುವ ಅವಕಾಶ ಒದಗಿ ಬಂದಿತ್ತು. ನಾನಾಗ 'ಸಂಶೋಧನಾ ರಕ್ಕಸ' ಎಂದು ಬಳಸಿದ ಪದ, ಸಭೆಯಲ್ಲಿ ನಗೆಗಡಲು ಉಂಟುಮಾಡಿದರೂ, ಅವರ ಸಂಶೋಧನೆಯ ಅಗಾಧತೆಯನ್ನು ತಿಳಿಯಪಡಿಸಲು ಅದು ಅನಿವಾರ್ಯವೂ ಆಗಿತ್ತು. ಹರೀಶರು ಅಪಾರ ಅಧ್ಯಯನ ಮಾಡಿದ್ದಾರೆ. ಅವರು ಅರ್ಥಶಾಸ್ತ್ರಜ್ಞರಾಗಿ, ಕಾನೂನು ತಜ್ಞರಾಗಿ, ಸಮಾಜ ವಿಜ್ಞಾನಿಯಾಗಿ, ತತ್ವಶಾಸ್ತ್ರದ ಪಾಂಡಿತ್ಯ, ಸಂಸ್ಕೃತದ ವಿಶೇಷ ಅಧ್ಯಯನ, ಮನಃಶಾಸ್ತ್ರಜ್ಞನಾಗಿಯೂ ಯೋಚಿಸಿದ ನಡವಳಿಕೆಗಳು ಹೇಗೆ? ಒಬ್ಬನೇ ವ್ಯಕ್ತಿ ಹಲವು ನಮೂನೆಗಳಲ್ಲಿ ಕಾರ್ಯ ಮಾಡುವುದಷ್ಟೇ ಅಲ್ಲ, ತಜ್ಞತೆಯನ್ನು ಪಡೆಯಬಹುದೆಂಬುದನ್ನು ಅಂಬೇಡ್ಕರರು ಸಾಬೀತು ಮಾಡಿದ್ದರೋ, ಹಾಗೆಯೇ ತಾವು ಓದಿದ ವಿಷಯವಲ್ಲದೆ ಸಮಾಜ ವಿಜ್ಞಾನ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಕನ್ನಡ, ಕಾನೂನು ಅಧ್ಯಯನ, ಪಾಶ್ಚಾತ್ಯ ಸಾಹಿತ್ಯ ಅಧ್ಯಯನ ಹೀಗೆ ವಿವಿಧ ಮಗ್ಗುಲುಗಳಲ್ಲಿ ಹರೀಶರು ಪರಿಣಿತಿ ಪಡೆದಿದ್ದಾರೆ. ಅವರ ಸಂಶೋಧನಾ ಮಾದರಿ ಬೆರಗು ಹುಟ್ಟಿಸುತ್ತದೆ. ಭಾಷಾ ಪ್ರೌಢಿಮೆ, ಬಹು ಭಾಷೆಗಳ ಪ್ರಾವೀಣ್ಯ ಅವರ ವಿಶೇಷ.

ಕಳೆದ 20 ವರ್ಷಗಳಿಂದ ಸಂವಿಧಾನ, ಕಾನೂನು, ರಾಜಕೀಯ ವಿಚಾರಗಳ ಕುರಿತು ಸಂಶೋಧನೆ ಮಾಡುತ್ತಿರುವ ನಾನು ಒಮ್ಮೆ ಮಾತಿಗೆ ಇಳಿದಾಗ, 'ನೀವು ಸಂವಿಧಾನ ರಚನೆಯ ಸಂದರ್ಭ ಡಿವಿಜಿಯವರ ಅಭಿಪ್ರಾಯವನ್ನು ಗಮನಿಸಿದ್ದೀರಾ?' ಎಂದು ನನ್ನನ್ನು ಗಮನ ಸೆಳೆದರು. 'ಇಲ್ಲ, ನಾನು ಈ ಕ್ಷೇತ್ರ ಹೊರತುಪಡಿಸಿ ಬೇರೆ ಕಡೆ ಡೈವರ್ಟ್ ಆಗಿಲ್ಲ' ಎಂದೆ. ಮರುಕ್ಷಣವೇ, 'ನೀವು ಡೈವರ್ಟ್ ಆಗಬೇಕೆಂದು ಹೇಳಲೇ ಇಲ್ಲ. ಅವರು ಸಂವಿಧಾನದ ಕುರಿತು ಬಹಳ ಆಳವಾದ ವಿಚಾರ ಮಂಥನ ಮಾಡಿದ್ದಾರೆ, ಅದನ್ನು ಪರಿಶೀಲಿಸುವುದು ನಿಮಗೆ ಸಹಕಾರಿಯಾಗಬಲ್ಲದು' ಎಂದು ಸಹಜವಾಗಿ ಹೇಳಿ ನಿಲ್ಲಿಸಿದರು. ಮೂಲವನ್ನು ಶೋಧಿಸುವ ಅವರ ಗುಣ, ಸಂಶೋಧನಾ ಲೋಕದ ಪ್ರೈಮರಿ ಎಲಿಜಿಬಿಲಿಟಿಗಳಲ್ಲಿ ಒಂದು. ಅವರ ಸಂಶೋಧನೆ ಸಾಮಯಿಕವಾಗಿ ವಿಷಯದ ಎಲ್ಲ ವಿಭಾಗಗಳನ್ನು ಪರಿಶೋಧಿಸುತ್ತದೆ. ಅದರ ಅಂತ್ಯಕ್ಕೆ ಪಡೆಯುವ ಫಲಿತಾಂಶವನ್ನೇ, ದಾಖಲಿಸುತ್ತಾ ಬಂದಿದ್ದಾರೆ.

ಓದಲು ಹಂಬಲಿಸುವವರನ್ನು, ಸಂಶೋಧನೆ ಮಾಡಲು ನಿಜ ದಾರಿ ಹುಡುಕುವವರನ್ನು ತನ್ನತ್ತ ಹತ್ತಿರಕ್ಕೆ ಎಳೆದುಕೊಳ್ಳುವ, ತಮ್ಮ ಎತ್ತರದ ರಹಸ್ಯವನ್ನು ಬಿಟ್ಟು ಕೊಡುವ ವ್ಯಕ್ತಿ. ಎರಡು ವರ್ಷಗಳಿಗೂ ಹೆಚ್ಚು ಕಾಲ ಹೆಚ್ಚು ಸಂಶೋಧನೆ ಮಾಡಿದ, ಹಿಂದೂ ಧರ್ಮಕ್ಕೆ, ಸಾತ್ವಿಕ ಸಮಾಜಕ್ಕೆ ಅತಿ ದೊಡ್ಡ ಅಪಾಯ ತಂದೊಡ್ಡಬಲ್ಲ, ಕಾಫಿರ ತತ್ವದ ಕುರಿತಾದ ನನ್ನ ಸಂಶೋಧನಾ ಕೃತಿಗೆ ಮುನ್ನುಡಿ ಕೇಳಿದಾಗ ಬೇಗ ಬರೆದು ಕೊಟ್ಟದಷ್ಟೇ ಅಲ್ಲ, ಅವರು ಬರೆದ ಮುನ್ನುಡಿಯು, ನನ್ನ ಸಂಶೋಧನೆಯನ್ನು ಆರು ತಿಂಗಳು ಮುಂದೂಡಿತು. ಇದು ಅವರ ಬರವಣಿಗೆಯ ಶಕ್ತಿ. ಅವರು ಬರೆದ 'ಎಲ್ಲರಿಗೂ ಬೇಕಾದ ಅಂಬೇಡ್ಕರ್' ಕೃತಿಯಲ್ಲಿ ಡಾ. ಅಂಬೇಡ್ಕರ್ ಸಾವಿನ ಹಕೀಕತ್ ಬರೆಯುವಾಗ ತೋರಿಸಿರುವ ಅಕ್ಷರ ನಿಷ್ಠೆ ಮತ್ತು ಎದೆಗಾರಿಕೆ ಅವರ ಸಂಶೋಧನೆಯನ್ನು ದೃಢೀಕರಿಸುವ ಒಂದು ಉದಾಹರಣೆ ಅಷ್ಟೇ.

ಜಿ ಬಿ ಹರೀಶ್ ಅವರಿಗೆ ಈಗ ವಯಸ್ಸು 50; ಎಂದ ಮಾತ್ರಕ್ಕೆ 50ರ ಬರಹಗಾರ ಎಂದು ಕರೆದುಬಿಡಲು ಸಾಧ್ಯವಿಲ್ಲ. ಸಮಾಜದ ಎಲ್ಲಾ ಮಾದರಿಯ, ಸಿದ್ಧಾಂತಗಳ, ವೈಚಾರಿಕ ಪ್ರಭೇದಗಳ ಜನಗಳ ಜೊತೆ, ವಿದ್ವಾಂಸರ ಸಂಗಡ ಸಂಬಂಧ ಇರಿಸಿಕೊಂಡಿದ್ದಾರೆ. ಸ್ನೇಹ ಬೆಳೆಸಿಕೊಂಡಿದ್ದಾರೆ. ಆದರೆ ಹೇಳಬೇಕಾದ್ದನ್ನು ಬಚ್ಚಿಟ್ಟುಕೊಳ್ಳುವ ಪ್ರವೃತ್ತಿಯಿಂದ ಹೊರತೆಯಾದವರು ಹರೀಶರು. ವಿವಾದ, ವಾದಗಳಿದ್ದಾಗ, ಅವರದ್ದು ವಿಷಯಾಧಾರಿತ ಕೋಪವೇ ಹೊರತು ವ್ಯಕ್ತಿಯ ಮೇಲಲ್ಲ. ಹರೀಶರ ಜೊತೆ ಬೆಸೆದುಕೊಂಡ ರಾಷ್ಟ್ರೀಯತೆ, ಐಕ್ಯತೆ, ಸ್ವಧರ್ಮದ ಚಿಂತನೆ, ನೆಲಧರ್ಮದ ಪರಂಪರೆಯ ದಾಖಲಾತಿಗಳು ಅವರ ಬಗೆಗೆ ಹೆಮ್ಮೆಯ ಭಾವ ಮೂಡಿಸಲು ಸಫಲವಾಗಿವೆ. ದೇಶವನ್ನು ವಿಘಟಿಸುವ, ಭಾಷೆ, ಪ್ರಾದೇಶಿಕತೆಯ ಹೆಸರಲ್ಲಿ ಐಕ್ಯತೆಯನ್ನು ಚೂರು ಮಾಡುವ ಚಿಂತನೆಗಳಿಗೆ ಹರೀಶರ ಹತ್ತಿರ ಜಾಗ ದೊರಕಿಲ್ಲ, ದೊರಕುವುದೂ ಇಲ್ಲ ಎಂಬುದು, ಅಕ್ಕರೆಯ ಪ್ರಜ್ಞೆ.

ಅಭಿನಂದನಾ ಸಮಾರಂಭ

ಡಾ.ಜಿ.ಬಿ. ಹರೀಶ ಅವರಿಗೆ ಡಿಸೆಂಬರ್ 20ರಂದು 50 ವರ್ಷ ತುಂಬಿದೆ. ಈ ಸಂದರ್ಭದಲ್ಲಿ ಬೆಂಗಳೂರಿನ ಬನಶಂಕರಿಯಲ್ಲಿರುವ ಸುಚಿತ್ರ ಸಿನಿಮ ಕಲ್ಚರಲ್ ಅಕಾಡೆಮಿಯಲ್ಲಿ ಡಿಸೆಂಬರ್ 25ರ ಗುರುವಾರ ಸಂಜೆ 4.00ಕ್ಕೆ ಸ್ವರ್ಣಪೂರ್ಣ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಭಾಷೆ, ಸಾಹಿತ್ಯ ವಿಭಾಗದ ಸಂಚಾಲಕ ಡಾ. ಬಸವರಾಜ ಕಲ್ಗುಡಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಹರೀಶ ಅವರ ಸಾಹಿತ್ಯದ ವಿವಿಧ ಮಜಲುಗಳ ಕುರಿತು ಪುರಾತತ್ವ ಸಂಶೋಧಕ ಎಸ್. ಕಾರ್ತಿಕ್, ದಾವಣಗೆರೆಯ ಇಂಗ್ಲಿಷ್ ಉಪನ್ಯಾಸಕ ಗಣೇಶ್ ಪ್ರಸಾದ್, ಲೇಖಕ ಹರ್ಷ ಸಮೃದ್ಧ ಮಾತನಾಡಲಿದ್ದಾರೆ.

ಪುಸ್ತಕ ವಿಮಾನ

ಕಾಯ್ಕಿಣಿ ಅನುವಾದದಲ್ಲಿ ನಾಟಕ

» ಶ.ಹಾ.

ಕವಿ, ಕಥೆಗಾರ, ಚಿತ್ರಗೀತೆ ರಚನೆಕಾರ ಜಯಂತ ಕಾಯ್ಕಿಣಿಯವರು, ರಂಗಭೂಮಿಗೂ ನೀಡಿರುವ ಕೊಡುಗೆಯ ರೂಪವಾಗಿ, 'ಅಂಕದ ಪರದೆ' ನಾಟಕವನ್ನು ನೋಡಬಹುದು. ಮರಾಠಿ ಮೂಲದ ಈ ನಾಟಕವನ್ನು ಕಾಯ್ಕಿಣಿಯವರು ಕನ್ನಡಕ್ಕೆ ತಂದಿರುವುದು ಒಂದು ಅರ್ಥಪೂರ್ಣ ಸಂದರ್ಭದಲ್ಲಿ: ಹಲವು ಪ್ರಮುಖ ನಾಟಕಗಳನ್ನು ಕನ್ನಡಕ್ಕೆ ನೀಡಿರುವ ನೀನಾಸಂ ಅವರ ವಾರ್ಷಿಕ ತಿರುಗಾಟಕ್ಕಾಗಿ, ಈ ನಾಟಕವನ್ನು ಅವರು ಅನುವಾದಿಸಿದರು. ಈ ನಾಟಕವು ಪುಸ್ತಕ ರೂಪದಲ್ಲಿ ಓದಿಗೂ ದಕ್ಕುವುದು ವಿಶೇಷ. ಈ ನಾಟಕದ ಕುರಿತು ನೀನಾಸಂ ನ ಕೆ.ವಿ.ಅಕ್ಷರ ಅವರು ಬರೆದಿರುವ ಮಾತುಗಳು ಗಮನ ಸೆಳೆಯುತ್ತವೆ :''ತಮ್ಮ ಜೀವನದ ಕಡೆಯ



ವರ್ಷಗಳನ್ನು ಕಳೆಯುತ್ತಿರುವ ಹಿರಿಯ ನಾಗರಿಕರ ಒಂದು ಆಶ್ರಯ ಧಾಮದೊಳಗೆ ಈ ನಾಟಕ ಸಂಭವಿಸುತ್ತದೆ. ಆದರೆ ಇಲ್ಲಿರುವ ವ್ಯಕ್ತಿಗಳು ಬರಿದೇ ಬದುಕಿನ ಸಂಧ್ಯಾಕಾಲವನ್ನು ನೋವಿನಿಂದ ನೂಕುತ್ತಿರುವ ಹತಾಶರಲ್ಲ; ಹಲವು ಬಗೆಯಲ್ಲಿ ಕ್ರಿಯಾಶೀಲರು. ಪತ್ನಿಯಿಂದಲೇ ಹೀಗಳೆಯಲ್ಪಟ್ಟು, ಮಕ್ಕಳಿಂದಲೂ ಬೇರ್ಪಟ್ಟರೂ ಅವರೆಲ್ಲರಿಗೂ ಹಣ ಕಳಿಸುತ್ತಿರುವ ದಿಬ್ಬುಷ್ ಮನುಷ್ಯ ದೇಸಾಯಿ ಇಲ್ಲಿದ್ದಾನೆ; ಹಾಗೇ, ಮಗನ ವಿದ್ಯಾಭ್ಯಾಸಕ್ಕಾಗಿ ಕಷ್ಟಪಟ್ಟು ಹಣ ಸಂಪಾದಿಸಿ ತಮ್ಮ ಆಸೆಗಳನ್ನು ಅದುಮಿಟ್ಟು ಬದುಕಿದ ನಾನಾ- ಮಾಯಿ ಎಂಬ ಗಂಡಹೆಂಡಿರು ಇಲ್ಲೀಗ ತಮ್ಮ ಹೊಸ ಬದುಕನ್ನು ಆವಿಷ್ಕರಿಸುತ್ತಿದ್ದಾರೆ; ಅಂತೆಯೇ, ಬದುಕಿನುದ್ದಕ್ಕೂ ಸಮಾಜಮುಖಿ ಚಳವಳಿಗಾರನಾಗಿ ದುಡಿದ ಭಾಯೀಜಿ, ಅವನಿಗಾಗಿಯೇ ತನ್ನ ಬದುಕನ್ನು ಮುಡುಪಿಟ್ಟ ಅವನ ಪತ್ನಿ ಸೇವಾತಾಯಿ ಇಲ್ಲೀಗ ಹಳೆಯ ನೆನಪುಗಳನ್ನು ಪರಿಷ್ಕರಿಸಿಕೊಳ್ಳುತ್ತಿದ್ದಾರೆ. ಹಳೆಯ ರಂಗಭೂಮಿ ಕಲಾವಿದ ಜನುಭಾಯಿ ಇಲ್ಲೀಗ ತನ್ನ ಬಣ್ಣದ ಬದುಕಿನ ರೋಮಾಂಚನಗಳನ್ನು ನೆನಪಿಸಿಕೊಳ್ಳುತ್ತಿದ್ದಾನೆ. ಇಂಥವರೆಲ್ಲರ ನಡುವೆ, ಹರ್ಷನೆಂಬ ಹೊಸಗಾಲದ ಯುವ ರಂಗಕರ್ಮಿಯೊಬ್ಬ ಈ ವಾರ್ಧಕ್ಯದ ತಥ್ಯ ತಿಳಿಯಲಿಕ್ಕೆಂದು, ತನ್ನ ತಂದೆಯ ವೇಷಾಂತರದಲ್ಲಿ ಈ ವೃದ್ಧಾಶ್ರಮಕ್ಕೆ ಸೇರಿಕೊಂಡು ಅವರೊಂದಿಗೆ ರಂಗಭೂಮಿಯ ಪಾಠಗಳನ್ನು ಕಲಿಯತೊಡಗುತ್ತಾನೆ. ಹೀಗೆ ವೃದ್ಧಾಪ್ಯವೆಂಬ ವಾಸ್ತವವು ರಂಗಭೂಮಿಯ ಭೂಮಿಕೆಗಳಾಗಿ ಪರಿವರ್ತನೆಯಾಗುವ ವಿಸ್ಮಯದ ದಿಕ್ಕಿಗೆ ನಾಟಕ ಮುನ್ನಡೆಯುತ್ತದೆ.''
(ಬೆನ್ನುಡಿಯಲ್ಲಿ ಕೆ.ವಿ.ಅಕ್ಷರ)

ಅಂಕದ ಪರದೆ
ಮೂಲ: ಅಭಿರಾಮ್ ಭಡ್ಕಂಕರ್
ಅನು: ಜಯಂತ ಕಾಯ್ಕಿಣಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
08026617100
ಬೆಲೆ ರು.130/-

ಮಹಾಕಾವ್ಯ ಪುರಾಣಗಳನ್ನು ಆಧರಿಸಿದ ಹೊಸ ಕತೆಗಳು

ಯಕ್ಷಗಾನ ಅರ್ಥಧಾರಿ ವಿದ್ವಾಂಸ ರಾಧಾಕೃಷ್ಣ ಕಲ್ಚಾರ್ ಅವರ 'ಪರಕಾಯ ಪ್ರವೇಶ' (ಭಾಗ : ಒಂದು ಮತ್ತು ಎರಡು) ಕನ್ನಡದಲ್ಲಿ ಹೊಸಬಗೆಯ ಸಾಹಿತ್ಯ ಕಥನ ಮಾದರಿಗಳನ್ನು ಪರಿಚಯಿಸಿರುವ ಕಥಾಸಂಕಲನಗಳು. ಪುರಾಣಗಳು ಮತ್ತು ರಾಮಾಯಣ ಮಹಾಭಾರತಗಳಲ್ಲಿರುವ ಉಪಕಥಾನಕಗಳನ್ನಾಯ್ದು ಆಧುನಿಕ ಸಣ್ಣಕತೆಗಳ ರೂಪದಲ್ಲಿ ಕಟ್ಟಿರುವ ಕತೆಗಳು ಇಲ್ಲಿವೆ.

» ಡಾ. ಬಿ. ಜನಾರ್ದನ ಭಟ್

ಇಲ್ಲಿರುವ ಕತೆಗಳ ಶೀರ್ಷಿಕೆಗಳತ್ತ ಕಣ್ಣುಹಾಯಿಸಿದಾಗಲೇ ಈ ಸಂಕಲನ ವಿಶಿಷ್ಟವಾದದ್ದು ಎನ್ನುವುದರ ಸೂಚನೆ ಸಿಗುತ್ತದೆ. ಯಾಕೆಂದರೆ ಈ ಕತೆಗಳ ನಾಯಕರೆಲ್ಲ ಮೈನರ್ ಎನ್ನಬಹುದಾದ ಪಾತ್ರಗಳು. ಈ ಪಾತ್ರಗಳ ಮೂಲಕ ಹೊಸಲೋಕಗಳು, ಹೊಸ ವಿಚಾರಗಳು, ಹೊಸ ಅನುಭವಗಳನ್ನು ಕಟ್ಟಿಕೊಟ್ಟಿರುವುದು ಈ ಸಂಕಲನಗಳ ಹೆಚ್ಚುಗಾರಿಕೆ. ಈ ಕತೆಗಳ ಪಟ್ಟಿ ಹೀಗಿದೆ:

ಭಾಗ ಒಂದರಲ್ಲಿ – ದಂಡಕ, ವಿಕರ್ಣ, ಸುದೇಷ್ಣಾ, ರಥಕಾರ, ಭದ್ರ, ಪ್ರಾತಿಕಾಮಿ, ಅಶ್ವಸೇನ, ಸಾರಥಿ, ರುಮಾ, ರುರು, ಸಾಲ್ವ, ಅಂತಿಮ, ಮೃತ್ಯುಮುಖ. ಭಾಗ ಎರಡರಲ್ಲಿ– ಶಪ್ತ, ಶೂಲ, ಕಟ್ಟು, ಸುರಾಸುರ, ಶಿಖಂಡಿ, ಜಟಾಯು, ತ್ರಿಕೂಟ, ಮೃಗಯಾ, ಅರಗಿನ ಮನೆ, ಉತ್ತರಾ, ಉತ್ತರಕುಮಾರ. ಓದುಗರಿಗೆ ಈ ಪಾತ್ರಗಳಲ್ಲಿ ಹೆಚ್ಚಿನವರ ಪರಿಚಯ ಇದ್ದಿರಲಾರದು. ಹೆಚ್ಚಿನ ಕತೆಗಳು ಕತೆಗಳನ್ನು ನಿರೂಪಿಸುವ ಪ್ರಧಾನ ಪಾತ್ರಗಳ ಹೆಸರಿನಲ್ಲಿವೆ. ಕೆಲವು ಕತೆಗಳ ಶೀರ್ಷಿಕೆಗಳು ಮಾತ್ರ ಬೇರೆ ಪದಗಳಾಗಿವೆ.

ಉದಾಹರಣೆಗೆ, 'ಅರಗಿನ ಮನೆ' ಎನ್ನುವುದು ಒಂದು ಆಧುನಿಕ ಥ್ರಿಲ್ಲರ್ ಪತ್ತೇದಾರಿ ಕತೆಯ ಹಾಗಿದೆ. ಮೂಲ ಕತೆಯು ಪಾಂಡವರನ್ನು ಕೊಲ್ಲಲು ದುರ್ಯೋಧನ ನಿರ್ಮಿಸಿದ ಅರಗಿನ ಮನೆಯೇ ಆದರೂ ಕತೆಯು ಆ ಘಟನೆಯ ಪೂರ್ವೋತ್ತರಗಳನ್ನು ಅನ್ವೇಷಿಸುವ ಮೂಲಕ ಆ ಕಾಲದ ರಾಜಕೀಯವನ್ನೆಲ್ಲ ತೆರೆದಿಡುತ್ತದೆ. ಕತೆಯನ್ನು ನಿರೂಪಿಸುವವನು ವಾರಣಾವತ ನಗರದ ರಕ್ಷಣಾಧಿಕಾರಿ ಮಿತ್ರ ಎನ್ನುವವನು. ಈ ಪಾತ್ರದ ಅರಿವಿನ ಕೇಂದ್ರದ ಮೂಲಕ ಅರಗಿನ ಮನೆ ಘಟನೆಯ ಅನ್ವೇಷಣೆ ನಡೆಯುವುದು ಇಲ್ಲಿನ ಕಥನತಂತ್ರ.

'ಕಟ್ಟು' ಎನ್ನುವುದು ಶ್ವೇತಕೇತುವು ಮನುಷ್ಯರಿಗೆ ವೈವಾಹಿಕ ದಾಂಪತ್ಯದ 'ಕಟ್ಟು'ಪಾಡನ್ನು ನಿಯಮಿಸಿದ ವಿಷಯವನ್ನು ಹೇಳುವುದರಿಂದ ಕತೆಯ ಶೀರ್ಷಿಕೆ 'ಶ್ವೇತಕೇತು' ಎಂದಾಗಿಲ್ಲ. ಇನ್ನೊಂದು ಅದ್ಭುತ ಕತೆಯಿದೆ – 'ಶೂಲ' ಎನ್ನುವುದು. ಅದು 'ಮಾಂಡವ್ಯ' ಎನ್ನುವ ಋಷಿ 'ಅಣಿಮಾಂಡವ್ಯ' ಎಂದು ಕರೆಯಿಸಿಕೊಂಡ ಕತೆ. ಒಮ್ಮೆ ಕಳ್ಳರು ಮಾಂಡವ್ಯ ಋಷಿಯ ಆಶ್ರಮದಲ್ಲಿ ಅಡಗಿದ್ದಾಗ ರಾಜಭಟರು ಅಲ್ಲಿಗೆ ಹುಡುಕಿಕೊಂಡು ಬರುತ್ತಾರೆ. ಮಾಂಡವ್ಯನು ಧ್ಯಾನಾಸಕ್ತನಾಗಿ ಏನೊಂದೂ ಉತ್ತರಿಸದಿದ್ದಾಗ ಅವನನ್ನೂ ಕಳ್ಳನೆಂದೇ ಪರಿಗಣಿಸಿ ಶೂಲಕ್ಕೆ ಏರಿಸುತ್ತಾರೆ. ಇತರ ಕಳ್ಳರೆಲ್ಲ ಸತ್ತುಹೋದರೂ ಮಾಂಡವ್ಯ ಋಷಿ ತಪಸ್ಸಿನ ಶಕ್ತಿಯಿಂದ ನೋವನ್ನನುಭವಿಸದೆ ತಾಳಿಕೊಂಡಿದ್ದ. ಅವನು ಬದುಕಿರುವುದನ್ನು ಕಂಡು ಆಶ್ಚರ್ಯಪಟ್ಟ ಭಟರು ಅವನನ್ನು ರಾಜನೆದುರಿಗೆ ತಂದು ನಿಲ್ಲಿಸುತ್ತಾರೆ. ಶೂಲವನ್ನು ಕೀಳಲಾಗದೆ ಅದರ ಸಮೇತ ಅವನನ್ನು ಕರೆತರಲಾಗುತ್ತದೆ. ರಾಜನು ಕ್ಷಮೆ ಕೋರಿ ಋಷಿಯ ದೇಹದ ಹೊರಗೆ ನೇತಾಡಿಕೊಂಡಿದ್ದ ಶೂಲದ ಭಾಗವನ್ನು ಕತ್ತರಿಸಿತೆಗೆಯಲು ಆಜ್ಞಾಪಿಸುತ್ತಾನೆ. ಋಷಿಯು ಅವನನ್ನು ಕ್ಷಮಿಸಿದ. ನಂತರ ಅವನಿಗೆ 'ಅಣಿಮಾಂಡವ್ಯ' ಎಂದು ಹೆಸರಾಗುತ್ತದೆ. ಅಣಿಮಾಂಡವ್ಯನು ಸತ್ತನಂತರ ಯಮಧರ್ಮನು ಅವನ ವಿಚಾರಣೆ ನಡೆಸಿ ಅವನು ಬಾಲ್ಯದಲ್ಲಿ ಚಿಟ್ಟೆಯನು ಹಿಂಸಿಸಿದ ಪಾಪಕ್ಕೆ ಶಿಕ್ಷೆಯನ್ನು ಅನುಭವಿಸಲು ನರಕಕ್ಕೆ ಹೋಗಬೇಕು ಎಂದು ತೀರ್ಪು ನೀಡುತ್ತಾನೆ. ಅಣಿಮಾಂಡವ್ಯ ಅದನ್ನು ಪ್ರಶ್ನಿಸಿ ಯಮನ ಜತೆಗೆ ಜಿಜ್ಞಾಸೆ ನಡೆಸುತ್ತಾನೆ. ಬಾಲ್ಯದಲ್ಲಿ ಸ್ವಂತ ಬುದ್ಧಿ ಬೆಳೆಯದ ಪ್ರಾಯದಲ್ಲಿ ಮಾಡಿದ ತಪ್ಪುಗಳಿಗೆ ಹಾಗೆ ಶಿಕ್ಷೆ ನೀಡುವುದು ಧರ್ಮವಾಗುವುದಿಲ್ಲವೆಂಬ ಅವನ ವಾದವನ್ನು ಯಮನು ಒಪ್ಪುವುದಿಲ್ಲ. ಕೊನೆಗೆ ಅಣಿಮಾಂಡವ್ಯ ಕ್ರುದ್ಧನಾಗಿ ಯಮನು ಭೂಲೋಕದಲ್ಲಿ ಜನಿಸುವಂತೆ ಶಾಪ ನೀಡುತ್ತಾನೆ. ಯಮನೂ ಅದನ್ನು ಗೌರವದಿಂದಲೇ ಸ್ವೀಕರಿಸುತ್ತಾನೆ. ಅಣಿಮಾಂಡವ್ಯನು ಯಮನ ಆದೇಶವನ್ನು ಒಪ್ಪಿ, ಯಮನಿಂದ ಕರ್ತವ್ಯಲೋಪ ಆಗಬಾರದೆಂದು ತಾನು ವಾದವನ್ನು ಮಂಡಿಸಿ ಅವನನ್ನು ಎಚ್ಚರಿಸಿದ ತೃಪ್ತಿಯಿಂದ ನರಕಕ್ಕೆ ನಡೆಯುತ್ತಾನೆ. ಇದು ಯಾವ ಭಾಷೆಗೆ ಅನುವಾದಿಸಿದರೂ ಶ್ರೇಷ್ಠ ಕತೆಗಳಲ್ಲಿ ಒಂದಾಗಿ ಬಾಳುವುದರಲ್ಲಿ ಅನುಮಾನವಿಲ್ಲ. ಯಾಕೆಂದರೆ ಆಧುನಿಕ ಕತೆಗಾರಿಕೆ ಫ್ಯಾಂಟಸಿ ಮತ್ತು ಮಿಥ್‌ಗಳ ಮೂಲಕ ಬದುಕಿನ ಅನುಭವಶೋಧನೆಗೆ ಹಿಂಜರಿಯುವುದಿಲ್ಲ.

ಇಲ್ಲಿನ ಕತೆಗಳು ಸ್ವಾರಸ್ಯಕರವಾಗಿವೆ; ಹೊಸ ಹೊಸ ವಿಚಾರಗಳನ್ನು ಅನಾವರಣಮಾಡುತ್ತವೆ. ಇವುಗಳ ಹಿಂದೆ ಲೇಖಕರ ಅಗಾಧ ಅಧ್ಯಯನ ಮತ್ತು ಅಲ್ಪಸ್ವಲ್ಪ ಕಲ್ಪನೆಗಳಿವೆ. ಕತೆಗಳೆಲ್ಲ ಯಕ್ಷಗಾನ ಪಾತ್ರಗಳ ಪೀಠಿಕೆಯ ಧಾಟಿಯಲ್ಲಿದ್ದರೂ ತಂತ್ರವು ಹಾಗಿಲ್ಲ. ಪ್ರತಿಯೊಂದು ಕತೆಗೂ ಅದರದೇ ಆದ ಹಿನ್ನೋಟ, ಸಸ್ಪೆನ್ಸ್, ತಿರುವುಗಳನ್ನು ಕೊಡುವ ತಾಂತ್ರಿಕ ವೈವಿಧ್ಯ ಗಮನಾರ್ಹವಾಗಿದೆ. ಕಥಾಕಮ್ಮಟಗಳಲ್ಲಿ ವಿದ್ಯಾರ್ಥಿಗಳಿಗೆ ಕಥನ ತಂತ್ರದ ಪರಿಚಯ ಮಾಡಿಕೊಡಲು ಈ ಕತೆಗಳನ್ನು ಬಳಸಬಹುದು.

ಈ ಕತೆಗಳ ಹೆಚ್ಚುಗಾರಿಕೆ ಮುಖ್ಯ ಕಥಾನಕಗಳ ಪಕ್ಕದಲ್ಲಿ ತೆರೆದುಕೊಳ್ಳುವ ಸಣ್ಣಪುಟ್ಟ ಪಾತ್ರಗಳ ಪ್ರತ್ಯೇಕ ಲೋಕವೊಂದನ್ನು ದರ್ಶನ ಮಾಡಿಸಿರುವುದು. ಆ ಮೂಲಕ ಮುಖ್ಯ ಕಥಾನಕವನ್ನೂ ಹೊಸ ದೃಷ್ಟಿಯಿಂದ ನೋಡಲು ಸಾಧ್ಯವಾಗುತ್ತದೆ. ಉದಾಹರಣೆಗೆ 'ವಿಕರ್ಣ' ಎಂಬ ಕತೆಯನ್ನು ನೋಡಬಹುದು. ದುರ್ಯೋಧನನ ತಮ್ಮಂದಿರಲ್ಲಿ ಒಬ್ಬನಾದ ವಿಕರ್ಣನ ಹೆಚ್ಚುಗಾರಿಕೆ ಏನೆಂದರೆ ದ್ರೌಪದಿ ವಸ್ತ್ರಾಪಹರಣದ ಸಂದರ್ಭದಲ್ಲಿ ಎಲ್ಲರೂ ಮೌನವಾಗಿದ್ದಾಗ ಎದ್ದುನಿಂತು ಅವಳ ಪರವಾಗಿ ಮಾತಾಡಿದ್ದು. ಆಗ ಕರ್ಣನು ಅವನಿಗೆ ಗದರಿಸಿರುತ್ತಾನೆ. ಇಲ್ಲಿ ಅದರ ಜತೆಗೆ ಅವನು ಭಾಗವಹಿಸಿದ ಇನ್ನೊಂದು ಪ್ರಸಂಗವನ್ನು ಲೇಖಕರು ಚಿತ್ರಿಸಿದ್ದಾರೆ. ಚಿತ್ರಸೇನ ಗಂಧರ್ವ ದುರ್ಯೋಧನನನ್ನು ಬಂಧಿಸಿದ ಸಂದರ್ಭದಲ್ಲಿ ಕರ್ಣನೂ ಅವನಿಂದ ಪೆಟ್ಟುತಿಂದಾಗ ವಿಕರ್ಣನು ಕರ್ಣನನ್ನು ರಕ್ಷಿಸಿಕೊಂಡು ಬಂದು ರಥವನ್ನು ಧರ್ಮರಾಯನ ಎದುರು ತಂದು ನಿಲ್ಲಿಸುತ್ತಾನೆ! ಕುರುಕ್ಷೇತ್ರದಲ್ಲಿ ವಿಕರ್ಣ ಭೀಮನ ಬಾಣಕ್ಕೆ ತುತ್ತಾಗಿ ಸಾಯುತ್ತಿರುವ ಸಂದರ್ಭದಲ್ಲಿ ಅವನ ನೆನಪುಗಳಂತೆ ಕತೆ ಬಿಚ್ಚಿಕೊಳ್ಳುತ್ತದೆ. ದುರ್ಯೋಧನ ಮತ್ತು ಕರ್ಣನ ವ್ಯಕ್ತಿತ್ವದ ದುರ್ಬಲ ಮುಖಗಳನ್ನು ವಿಕರ್ಣ ಅನಾವರಣಗೊಳಿಸುತ್ತಾನೆ.

ಈ ಕತೆಗಳ ಸರಣಿಯನ್ನು ಬರೆಯುವಲ್ಲಿ ರಾಧಾಕೃಷ್ಣ ಕಲ್ಚಾರ್ ಅವರ ಸೃಜನಶೀಲ ಸಾಹಿತ್ಯ ಪ್ರತಿಭೆ, ಯಕ್ಷಗಾನಕ್ಕೆ ವಿಶಿಷ್ಟವಾದ ವಿದ್ವತ್ತು ಮತ್ತು ಹಲವು ಪಠ್ಯಗಳಲ್ಲಿ ಹಂಚಿಹೋಗಿರುವ ಮಾಹಿತಿಗಳ ಸಂಚಯಪದ್ಧತಿಗಳು ಜತೆಗೂಡಿವೆ. ಈ ವಿಶಿಷ್ಟ ಕತೆಗಳು ಓದುಗರಿಗೆ ಆನಂದದ ಜತೆಗೆ ಅನುಭವವಿಸ್ತರಣೆಗೆ ನೆರವಾಗುತ್ತವೆ; ಸಂಗ್ರಹಯೋಗ್ಯವಾಗಿವೆ.

ಪರಕಾಯ ಪ್ರವೇಶ ಭಾಗ 1, ಮತ್ತು 2
ಲೇ: ರಾಧಾಕೃಷ್ಣ ಕಲ್ಚಾರ್
ಪ್ರ: ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು
ಬೆಲೆ: ರೂ. 140/- ಮತ್ತು ರು.150/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಅಲ್ಲಮ ಕಥನ
(ಅಲ್ಲಮ ಪ್ರಭುವಿನ ಆಧ್ಯಾತ್ಮಿಕ ಯಾನಕ್ಕೆ ಪುಸ್ತಕ ರೂಪ ಕೊಟ್ಟಿದ್ದಾರೆ ಮಲ್ಲೇಪುರಂ ಅವರು)
ಲೇ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರು. 595/-

2
ಬಹು ನೆಲೆಗಳ ಬೆರಗು
(ಭೈರಪ್ಪನವರ ಅವರ ಪರ್ವ ಮತ್ತು ಉತ್ತರ ಕಾಂಡಗಳನ್ನು ಕುರಿತ ಸಮಗ್ರ ವಿಶ್ಲೇಷಣೆ ಇಲ್ಲಿದೆ)
ಲೇ: ಡಾ. ಉಮಾ ರಾಮರಾವ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ: ರು. 540/-



3
ಹನ್ನೊಂದು ಮತ್ತೊಂದು ಕತೆಗಳು
(ನಾಗರಾಜ ವಸ್ತಾರೆ ಅವರ ಹೊಸ ಕಥಾಸಂಕಲನ ಪ್ರಕಟವಾಗಿದೆ)
ಲೇ: ನಾಗರಾಜ ವಸ್ತಾರೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ: ರು. 395/-



4
ಸಂತೆಯಲ್ಲಿ ನಿಂತ ಮುದುಕಿ
(ಬಹಳ ದಿನಗಳ ನಂತರ ಪ್ರಸಿದ್ಧ ಕಥೆಗಾರ್ತಿ ವೈದೇಹಿ ಅವರ ಪುಸ್ತಕವೊಂದು ಪ್ರಕಟವಾಗುತ್ತಿದೆ)
ಲೇ: ವೈದೇಹಿ
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಬೆಲೆ: ರು. 370/-

5
ಮಾವಿನಕುರ್ವೆ ಬೀಗ
(ದೀಕ್ಷಿತರ ಸೃಜನಶೀಲತೆಯ ಮಹತ್ವದ ಕ್ಷಣಗಳು ಇಲ್ಲಿ ಕಥೆಗಳಾಗಿವೆ.)
ಲೇ: ಬನವಾಸಿ ವೆಂಕಟೇಶ ದೀಕ್ಷಿತ್
ಪ್ರ: ಪಂಚಮಿ ಮೀಡಿಯಾ ಪಬ್ಲಿಕೇಷನ್, ಬೆಂಗಳೂರು
ಬೆಲೆ: ರು. 200/-



6
ಬದುಕುಳಿದವರು ಕಂಡಂತೆ
(2023ರ ಅಕ್ಟೋಬರ್ 7 ರಂದು ಭಯೋತ್ಪಾದಕರು ಇಸ್ರೇಲ್ ಮೇಲೆ ನಡೆಸಿದ ಹತ್ಯಾಕಾಂಡದಲ್ಲಿ ಬದುಕುಳಿದವರು ಹೇಳಿದ ಮನ ಮಿಡಿಯುವ ಕಥನ)
ಮೂಲ: ಯೇರ್ ಆಗಮೋನ್, ಒರಿಯಾ ಮೇವೊರೊಚ್
ಅನು: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರು. 500/-



7
ಸರಿಗನ್ನಡಂ ಗೆಲ್ಗೆ
(ಕನ್ನಡದ ಬೆರಗನ್ನು ಕುರಿತ 600 ಸ್ವಾರಸ್ಯಕರ ಕಿರು ಟಿಪ್ಪಣಿಗಳು)
ಲೇ: ಅಪಾರ
ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರು. 390/-



8
ಚಾರ್ವಾಕ
(ವೈಚಾರಿಕತೆಯನ್ನು ಪ್ರತಿಪಾದಿಸುವ ಚಾರ್ವಾಕ ಪಂಥದ ಪರಿಚಯ ಇಲ್ಲಿದೆ)
ಮೂಲ ಮರಾಠಿ: ಸುರೇಶ ದ್ವಾದಶೀವಾರ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರು. 190/-



9
ಹುಟ್ಟು ಮಚ್ಚೆ
(ಜರ್ಮನಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದವಾಗಿರುವ ಕಾದಂಬರಿ)
ಮೂಲ ಜರ್ಮನ್: ನೇಜಾತಿ ಒಝ್ಗೀರಿ
ಕನ್ನಡಾನುವಾದ: ಹರ್ಷ ರಘುರಾಮ್
ಪ್ರ: ಛಂದ ಪುಸ್ತಕ, ಬೆಂಗಳೂರು
ಬೆಲೆ: ರು. 250/-



10
ಕನಸಿನ ಹೂಗಳು
(ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಕೊಂಕಣಿ ಕಾದಂಬರಿಯ ಕನ್ನಡಾನುವಾದ)
ಮೂಲ ಕೊಂಕಣಿ: ಮೀನಾ ಕಾಕೊಡಕಾರ
ಅನುವಾದ: ಗೀತಾ ಶೆಣೈ
ಪ್ರ: ಸಾಹಿತ್ಯ ಅಕಾಡೆಮಿ, ನವದೆಹಲಿ
ಬೆಲೆ: ರು. 180/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಯುರೋಪಿಯನರು ನಡೆಸಿದ ಹತ್ಯಾಕಾಂಡ

ಹೊಸ ಭೂಖಂಡಗಳನ್ನು ಕಂಡುಹಿಡಿದ ಯುರೋಪಿಯನರು, ಅಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆದು ತಮ್ಮ ದೇಶಕ್ಕೆ ಸಾಗಿಸುವ ಪ್ರಕ್ರಿಯೆಯ ಭಾಗವಾಗಿ, ಅಲ್ಲಿನ ಲಕ್ಷಾಂತರ ಮೂಲನಿವಾಸಿಗಳ ಸಾವಿಗೆ ಕಾರಣವಾದ ವಿವರಗಳು ಈ ಪುಸ್ತಕದಲ್ಲಿವೆ.

» ಎಂ.ಎಸ್.ಹೆಬ್ಬಾರ್

ಇದೊಂದು ವಿಶಿಷ್ಟ ಪುಸ್ತಕ; ಈ ಪುಸ್ತಕವು ಹೊರಹಾಕಿದ ಅವೆಷ್ಟೋ ವಿವರಗಳು ಇದೇ ಮೊದಲ ಬಾರಿಗೆ ಕನ್ನಡದ ಓದುಗರಿಗೆ ಲಭ್ಯವಾಗಿವೆ. ಲಕ್ಷಾಂತರ ಮೂಲನಿವಾಸಿ ಜನರ ಸಾವಿಗೆ ಕಾರಣವಾದ ವಿದ್ಯಮಾನಗಳ ಕುರಿತು ಈ ಪುಸ್ತಕದಲ್ಲಿರುವ ಮಾಹಿತಿಗಳು, ವಿಶ್ಲೇಷಣೆಗಳು ಅಪರೂಪದ್ದು ಮತ್ತು ಇದೇ ಮೊದಲ ಬಾರಿಗೆ, ಕನ್ನಡದಲ್ಲಿ ಈ ವಿಷಯದ ಕುರಿತು ಪುಸ್ತಕವೊಂದು ಹೊರಬಂದಿದೆ.

ಇತಿಹಾಸದಲ್ಲಿ ಅಲ್ಲಲ್ಲಿ ವಿವರವಾಗಿ ದಾಖಲಾಗಿದ್ದರೂ, ನಿರಂತರವಾಗಿ ಮರೆಮಾಚುವ ಪ್ರಯತ್ನಕ್ಕೆ ಗುರಿಯಾದ ಇಂತಹ ಹತ್ಯಾಕಾಂಡದ ವಿವರಗಳು ಕೆಲವು ಬಾರಿ ನಿಗೂಢ, ಕೆಲವು ಬಾರಿ ಭೀಬತ್ಸ. ಅವೇ, ಅಮೆರಿಕಾ ಭೂಖಂಡಗಳಲ್ಲಿ ಯುರೋಪಿಯನರು ನಡೆಸಿದ ಹತ್ಯಾಕಾಂಡ. ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಈಸ್ಟ್ ಇಂಡೀಸ್ ಮೊದಲಾದ ಪ್ರದೇಶಗಳನ್ನು 'ಸಂಶೋಧನೆ' ಮಾಡಲು ಹೊರಟ ಕೊಲಂಬಸ್ ಮತ್ತು ಇತರ ಯುರೋಪಿಯನರು, ನಿಜಾರ್ಥದಲ್ಲಿ ಸಂಶೋಧಕರಲ್ಲ, ಬದಲಿಗೆ, 'ಇಂಡೀಸ್' ಅಥವಾ ಭಾರತ ಉಪಖಂಡದಲ್ಲಿದ್ದ ಅಪಾರ ಸಂಪತ್ತನ್ನು ತಮ್ಮ ದೇಶಕ್ಕೆ ಸಾಗಿಸಲೆಂದೇ ಹೊರಟವರು. ಅದಕ್ಕಾಗಿ ಅವರು ಲೂಟಿ, ಕೊಲೆ, ಯುದ್ಧ, ಬೆದರಿಕೆ, ಹಿಂಸೆ ಮತ್ತು ಕೊಳ್ಳೆ ಎಲ್ಲದಕ್ಕೂ ಸಿದ್ಧರಾಗಿ, ಸಿದ್ಧತೆಯನ್ನು ಮಾಡಿಕೊಂಡೇ, ಹಡಗುಗಳನ್ನೇರಿ ಹೊರಟವರು. ಅವರಿಗೆ ಇಂಡೀಸ್ ಸಿಗುವ ಮೊದಲು, ಈಸ್ಟ್ ಇಂಡೀಸ್ ಸಿಕ್ಕಿತು; ಜತೆಗೆ, ಅಮೆರಿಕದ ವಿಶಾಲ ಭೂಭಾಗಗಳು ದೊರಕಿದವು. ಯುರೋಪಿಯನರು ಮೊದಲ ಬಾರಿ ಅಮೆರಿಕದ ಮೇಲೆ ಕಾಲಿಟ್ಟು, ಆ ವಿಶಾಲ ಭೂಪ್ರದೇಶವನ್ನು 'ಸಂಶೋಧನೆ' ಮಾಡಿದ್ದು ತಾವೇ ಎಂದು ಸಾರಿ, ಇತಿಹಾಸ ಪುಸ್ತಕಗಳಲ್ಲಿ ಬರೆದಿಟ್ಟರು. ಅದನ್ನೇ ಜಗತ್ತಿನ ಎಲ್ಲಾ ಶಾಲೆಗಳಲ್ಲೂ ಬೋಧನೆ ಮಾಡಲಾಯಿತು; ನಮ್ಮ ದೇಶದ ಶಾಲೆಗಳಲ್ಲೂ!

ಯುರೋಪಿಯನರು ಅಮೆರಿಕದಲ್ಲಿ ನಡೆಸಿದ ಭೀಕರ ಹತ್ಯಾಕಾಂಡ ಮತ್ತು ಆ ಮೂಲಕ ಅಲ್ಲಿದ್ದ ಸಂಸ್ಕೃತಿಯನ್ನೇ ನಾಶಪಡಿಸಿದ ಪರಿಯನ್ನು ವಿವರವಾಗಿ ಬರೆದಿರುವ ಲೇಖಕ ಅಜ್ಜಂಪುರ ಮಂಜುನಾಥ್ ಅವರು, ಅದಕ್ಕಾಗಿ ಹಲವು ಅಪರೂಪದ ಗ್ರಂಥಗಳನ್ನು ಪರಾಮರ್ಶಿಸಿದ್ದು, ಅವುಗಳ ಪಟ್ಟಿಯನ್ನು ಪುಸ್ತಕದ ಕೊನೆಯಲ್ಲಿ ಕೊಡಲಾಗಿದೆ. ಇಲ್ಲಿ ಬಿಚ್ಚಿಟ್ಟಿರುವ ಮಾಹಿತಿ ಮತ್ತು ವಿದ್ಯಮಾನಗಳ ವಿಶ್ಲೇಷಣೆಗಳು, ಸಾಮಾನ್ಯ ಓದುಗನನ್ನು ಬೆಚ್ಚಿಬೀಳಿಸಿದರೂ ಅಚ್ಚರಿ ಇಲ್ಲ! ಪೋರ್ಚುಗಲ್, ಸ್ಪೈನ್, ಇಂಗ್ಲೆಂಡ್ ಮತ್ತು ಇತರ ಯುರೋಪಿಯನ್ ದೇಶದವರು ಹಡಗುಗಳಲ್ಲಿ ಅಮೆರಿಕದ ಮೇಲೆ ದಾಳಿ ಮಾಡಿ, ಚಿನ್ನ ಮತ್ತು ಇತರ ಸಂಪತ್ತನ್ನು ಲೂಟಿ ಮಾಡಿದ ವಿವರಗಳು, ಲೇಖಕರ ಅಜ್ಜಂಪುರ ಮಂಜುನಾಥ್ ಅವರನ್ನು ಎಷ್ಟರ ಮಟ್ಟಿಗೆ ಪ್ರಭಾವಿಸಿವೆ ಎಂದರೆ, ಹಲವು ಕಡೆ ಅವರು ಕೊಲಂಬಸ್ ಮೊದಲಾದ ಯುರೋಪಿಯನ್ ನಾವಿಕರನ್ನು, 'ಸಾಹಸಿಗರನ್ನು' (ಅಧಿಕೃತ ಇತಿಹಾಸ ಪುಸ್ತಕಗಳು ಬಳಸಿದ ಪದ) ಕಡಲುಗಳ್ಳರೆಂದೇ ಸಂಬೋಧಿಸುತ್ತಾರೆ. ಶಾಲಾ ಪಠ್ಯಪುಸ್ತಕಗಳು ಕೊಲಂಬಸ್, ವಾಸ್ಕೋ ಡ ಗಾಮ ಮೊದಲಾದವರನ್ನು ಕಡಲಿನ ವೀರರು ಮತ್ತು ಸಾಹಸಿಗರು ಎಂದೇ ಹಲವು ಕಡೆ ವರ್ಣಿಸಿವೆ; ಈ ಪುಸ್ತಕದ ಲೇಖಕರು, ಅವರೆಲ್ಲರೂ ಕಡಲುಗಳ್ಳರೇ ಹೊರತು ಬೇರಲ್ಲ ಎಂದು ಕರೆದು, ಅದನ್ನು ಋಜುವಾತುಗೊಳಿಸುತ್ತಾರೆ ಸಹ. ಇಲ್ಲಿ ಪ್ರಮುಖ ವಿಚಾರವೆಂದರೆ, ಈ ರೀತಿ 'ಇಂಡೀಸ್' ಮತ್ತು ಅಮೆರಿಕಕ್ಕೆ ಹೋಗಿ, ಸಂಪತ್ತನ್ನ ದೋಚಿ ತರಲೆಂದು ಹೊರಟವರಿಗೆ ಆಯಾ ಯುರೋಪಿಯನ್ ದೇಶಗಳ ಕಿಂಗ್, ಕ್ವೀನ್ ಮತ್ತು ಅಧಿಕಾರಶಾಹಿಯ ಬೆಂಬಲವಿತ್ತು! ಇಂಗ್ಲೆಂಡ್, ಸ್ಪೇನ್ ಮೊದಲಾದ ಯುರೋಪಿಯನ್ ದೇಶಗಳು ಹದಿನಾರನೆಯ ಶತಮಾನದ ನಂತರ ಮುಂದುವರಿಯಲು, ಅಪಾರ ಸಂಪತ್ತನ್ನು ಕೂಡಿಹಾಕಲು, ಈ ಕಡಲುಗಳ್ಳರು ನಡೆಸಿದ ಕೊಳ್ಳೆ, ಲೂಟಿ ಮತ್ತು ಹತ್ಯಾಕಾಂಡವು ಅದೆಂತಹ ಪ್ರಮುಖ ಕೊಡುಗೆಯನ್ನು ನೀಡಿತ್ತು ಎಂಬುದನ್ನು ಈ ಪುಸ್ತಕ ವಿವರಿಸುತ್ತದೆ.

ಕೊಲಂಬಸ್‌ನು ಅಮೆರಿಕವನ್ನು ಸಾ.ಯು. (ಕಾಮನ್ ಎರಾ) 1492ರಲ್ಲಿ 'ಸಂಶೋಧಿಸಿದನು'. ಅಲ್ಲಿಯ ತನಕ, ಅಲ್ಲೊಂದು ಸುಂದರವಾದ, ಸರಳವಾದ ಸಂಸ್ಕೃತಿ ನೆಲೆನಿಂತಿತ್ತು; ಅಜ್‌ಟೆಕ್, ಮಯ ಮೊದಲಾದ ಜನಾಂಗದವರು ತಮ್ಮದೇ ರೀತಿಯಲ್ಲಿ ಬದುಕು ಕಟ್ಟಿಕೊಂಡಿದ್ದರು; ಅವರು ಬರಹವನ್ನು ಸಹ ಕಂಡು ಹಿಡಿದಿದ್ದರು. ಆದರೆ ಅವರು ಮುಗ್ಧರಾಗಿದ್ದರು. ''ನಿಜ ಜಗತ್ತಿನ ಕಟು ವಾಸ್ತವ ಅವರಿಗೆ ಅಪರಿಚಿತವಾಗಿತ್ತು. ಅಂತಹ ಮುಗ್ಧತೆಗೆ ಅವರು ತುಂಬ ತುಂಬ ಬೆಲೆ ತೆರಬೇಕಾಯಿತು, ತೆತ್ತರು. . ಆರೋಗ್ಯವಂತರಾಗಿದ್ದ ಈ ಮೂಲ ನಿವಾಸಿಗಳಿಗೆ ಯುರೋಪ್ ಮೂಲದ ಭಯಾನಕ ಸಾಂಕ್ರಾಮಿಕ ರೋಗಗಳ ಪರಿಚಯವೇ ಇರಲಿಲ್ಲ.'' (ಪುಟ 28). ಸಾಂಕ್ರಾಮಿಕ ರೋಗದಿಂದ ಲಕ್ಷ ಲಕ್ಷ ಜನರು ಸತ್ತರೆ, ಉಳಿದವರನ್ನು ಯುರೋಪಿಯನರು ಹಿಂಸೆ ನೀಡಿ, ಸುಟ್ಟು, ಗುಂಡಿಟ್ಟು ಸಾಯಿಸಿದರು. ಉದಾಹರಣೆಗೆ ಇಂದಿನ ಉತ್ತರ ಅಮೆರಿಕದ ಫ್ಲಾರಿಡಾ ಮತ್ತು ದಕ್ಷಿಣ ಜಾರ್ಜಿಯಾ ಪ್ರದೇಶದಲ್ಲಿ ಸಾ.ಯು.1570ರ ಸಮಯದಲ್ಲಿ ಟಿಮಿಕ್ವಾನ್ ಮೂಲನಿವಾಸಿಗಳು (ರೆಡ್ ಇಂಡಿಯನ್ಸ್), ಏಳು ಲಕ್ಷ ಇಪ್ಪತ್ತು ಸಾವಿರ ಸಂಖ್ಯೆಯಲ್ಲಿದ್ದರು.ಯುರೋಪಿಯನ್‌ರು ಅಲ್ಲಿಗೆ ಬಂದ ಕೆಲವೇ ದಶಕಗಳಲ್ಲಿ 36,000 ಕ್ಕೆ ಇಳಿದಿದ್ದರು. ಮಧ್ಯಭಾಗದ ಮೆಕ್ಸಿಕೋದಲ್ಲಿ ಸಾ.ಯು.1519ರ ಹೊತ್ತಿಗೆ ಸುಮಾರು 2 ಕೋಟಿ 50 ಲಕ್ಷ ಮೂಲನಿವಾಸಿಗಳಿದ್ದರು; ಯುರೋಪಿಯನರು ಅಲ್ಲಿಗೆ ಕಾಲಿಟ್ಟ ನಂತರ, 1595ರ ಹೊತ್ತಿಗೆ ಕೇವಲ 13 ಲಕ್ಷ ಬದುಕಿ ಉಳಿದಿದ್ದರು. ಇದೇ ರೀತಿ ಇತರ ಹಲವು ಮೂಲನಿವಾಸಿಗಳೂ ನಿರ್ನಾಮವಾಗಿ ಹೋದರು. ಇದಕ್ಕೆ ಮುಖ್ಯ ಕಾರಣ ಯುರೋಪಿಯನರು ಹರಡಿದ ರೋಗಗಳು ಮತ್ತು ನಿರ್ದಯೆಯಿಂದ ಮಾಡಿದ ಹತ್ಯೆಗಳು.

'ಮತ್ತೆಂದೂ ಆಗದಿರಲಿ ಇಂತಹ ಹತ್ಯಾಕಾಂಡ' ಪುಸ್ತಕವು ಮತ್ತೊಂದು ಅಪರೂಪದ ಮಾಹಿತಿಯನ್ನು ದಾಖಲೆ ಸಹಿತ ನೀಡುತ್ತದೆ; ಅದೇನೆಂದರೆ, ಯುರೋಪಿಯನರು ಪ್ರಚಾರಪಡಿಸಿದಂತೆ, ಅಮೆರಿಕ ಮೊದಲಾದ ಪ್ರದೇಶದ ಕೆಲವು ಮೂಲ ನಿವಾಸಿಗಳು ನರಮಾಂಸ ಭಕ್ಷಕರು ಎಂಬುದು ವಾಸ್ತವವಲ್ಲ; ಅದು ತಮ್ಮ ಹಿಂಸೆಯನ್ನು ಸಮರ್ಥಿಸಲು ನಡೆಸಿದ ಕುಪ್ರಚಾರ; ಬದಲಿಗೆ, ಯುರೋಪಿನ ಐರ್ಲೆಂಡ್ ಪ್ರದೇಶದ ಜನರು ಮನುಷ್ಯರ ಮಾಂಸವನ್ನು ತಿನ್ನುತ್ತಿದ್ದರು!

ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ಪುರಾತನ ಸಂಸ್ಕೃತಿಗಳ ವಿವರಗಳನ್ನು ನೀಡುವಾಗ ಲೇಖಕರು, ಅಲ್ಲಿಗೆ ಸಾವಿರಾರು ವರ್ಷಗಳ ಹಿಂದೆ ಭಾರತ ಭೂಖಂಡದಿಂದ ಜನರು ವಲಸೆ ಹೋಗಿದ್ದರು ಎಂಬ ವಿವರಗಳನ್ನೂ ನೀಡುತ್ತಾರೆ. ಯುರೋಪಿಯನರು 16ರಿಂದ 19ನೆಯ ಶತಮಾನದ ಅವಧಿಯಲ್ಲಿ ಅಮೆರಿಕದಲ್ಲಿ ನಡೆಸಿದ ಹತ್ಯಾಕಾಂಡದ ಭೀಕರತೆಯನ್ನು ತೆರೆದಿಡುತ್ತಾ ಹೋಗುವ ಲೇಖಕರು, ಕೆಲವೆಡೆ ಭಾವಾವೇಶಕ್ಕೂ ಒಳಗಾಗುತ್ತಾರೆ, ಹತ್ಯಾಕಾಂಡ ನಡೆಸಿದವರನ್ನು 'ಕ್ರೂರಿಗಳು, ಕಟುಕರ' ಮೊದಲಾದ ವಿಶೇಷಣಗಳಿಂದ ಕರೆಯುತ್ತಾರೆ! ಹಲವು ಅಪರೂಪದ ಮಾಹಿತಿಗಳನ್ನು ಒಳಗೊಂಡ ಈ ಪುಸ್ತಕವು, ನಾಗರಿಕ ಮಾನವನು (ಯುರೋಪಿಯನರು) ತನ್ನ ನಾಗರಿಕ ಸಾಮ್ರಾಜ್ಯವನ್ನು ಹರಡುವ ಭರದಲ್ಲಿ, ಮೂಲನಿವಾಸಿಗಳ ಮೇಲೆ ನಡೆಸಿದ ನಿರಂತರ ಹಿಂಸೆ ಮತ್ತು ಕ್ರೌರ್ಯವನ್ನು ತೆರೆದಿಡುವ ಪರಿಯು, ಸಾಮಾನ್ಯ ಓದುಗನನ್ನು ಬೆಚ್ಚಿಬೀಳಿಸಬಲ್ಲದು.



ಮತ್ತೆಲ್ಲೂ ಆಗದಿರಲಿ ಇಂತಹ ಹತ್ಯಾಕಾಂಡ
ಲೇ: ಮಂಜುನಾಥ ಅಜ್ಜಂಪುರ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು, 8904421665
ಬೆಲೆ ರು. 160/-

ಹೊಸ ಕಥೆ

ಬದುಕಿನ ಚಕ್ರದ ಗಾಲಿಗಳು

ಬ್ಯಾಂಕಿನ ಸುತ್ತಲೂ ಜನರೆಲ್ಲಾ ಸೇರಿದ್ದಾರೆ. ಕಟ್ಟಡದ ಗೋಡೆಯಿಂದ ಕಿಟಕಿಯನ್ನು ತೆಗೆದು ಒಳಗಡೆ ಇರುವ ತಿಜೋರಿಯಿಂದ ಒಡವೆ, ಹಣ ಎಲ್ಲಾ ದೋಚಲಾಗಿತ್ತು. ಒಡವೆ ಅಡವಿಟ್ಟ ಜನ ತಮ್ಮ ಒಡವೆಯ ಕಥೆ ಏನು ಎಂದು ಪ್ರಶ್ನಿಸತೊಡಗಿದರು. ಸ್ಥಳೀಯ ಪುಢಾರಿಗಳೂ ಸೇರಿ, ಗಲಾಟೆ ನಡೆಯುವ ಸನ್ನಿವೇಶ ನಿರ್ಮಾಣವಾಯಿತು.

» ಅ.ಸು.ರವೀಂದ್ರ, ಶಿವಮೊಗ್ಗ

'ಏ ದೇವೂ ನೀನು ತುಂಬಾ ಲಕ್ಕಿ ಕಣೆ, ಹುಡುಗ ಬ್ಯಾಂಕಿನಲ್ಲಿದ್ದಾನಂತೆ. ಅವನಿಗೆ ವರ್ಗಾವಣೆ ಆದಾಗಲೆಲ್ಲಾ ಊರೂರು ತಿರುಗಬಹುದು, ಅಧಿಕಾರಿಯಾದರಂತೂ ಇಡೀ ದೇಶ ಸುತ್ತಬಹುದು. ಈ ಹೊಸಬಾಳೆ- ಸಾಗರ -ಜೋಗ ಬಿಟ್ಟರೆ ಬೇರೆ ಊರು ನೋಡಿಲ್ಲ ನಾವು ಅಲ್ವೇನೆ?' ಎಂದು ಸೊಂಟ ಜಿಗುಟಿದಾಗ ದೇವಯಾನಿ ಕೋಪಿಸಿಕೊಳ್ಳಲಿಲ್ಲ; ಬದಲಾಗಿ ಮುಖದಲ್ಲಿ ಗುಳಿಬಿದ್ದು ಮುಗುಳ್ನಗೆ ಮೂಡಿತು. ವರನ ಕಡೆಯವರು ಬಂದು ನೋಡಿಕೊಂಡು ಹೋದ ಮೇಲೆ ಹುಡುಗಿ ತಮಗೊಪ್ಪಿಗೆ ಇದೆಯೆಂದು ಹೇಳಿ ಕಳಿಸಿದ್ದರು. ಇವಳ ಅಣ್ಣ ಸುಂದರಮೂರ್ತಿಯಂತೂ ಖುಷಿಯಾಗಿದ್ದ. ತಂಗಿಯನ್ನು ಕರೆದು 'ಒಪ್ಪಿಗೆ ಇದೆಯಾ?' ಎಂದ. ಇವಳು ನಾಚಿ ಓಡಿಹೋದಾಗಲೇ ಅರ್ಥವಾಗಿತ್ತು. ಮುಂದೆ ನಿಶ್ಚಿತಾರ್ಥ ಆಯಿತು. ವರನ ಕಡೆಯಿಂದ ಅಂತ ಹೆಚ್ಚಿಗೆ ಜನ ಏನೂ ಬಂದಿರಲಿಲ್ಲ. ಅವರಿಗೂ ಬಳಗ ಕಡಿಮೆಯಂತೆ. ವರನ ತಂದೆ ವಾಸುದೇವರಾಯರು ಭದ್ರಾವತಿಯ ವಿ.ಐ.ಎಸ್.ಎಲ್. ನಲ್ಲಿದ್ದು ಸ್ವಯಂ ನಿವೃತ್ತಿ ಪಡೆದವರು. ಅಲ್ಲಿಯೇ ಕಾರ್ಖಾನೆಯ ಕ್ವಾರ್ಟ್ರಸ್ ನ್ನು ಭೋಗ್ಯಕ್ಕೆ ಹಾಕಿಕೊಂಡು ಇದ್ದರು. ಒಬ್ಬನೇ ಮಗ ಅಮರನಾಥ್ ಬ್ಯಾಂಕಿನ ಕೆಲಸಕ್ಕೆ ಸೇರಿ ಅರಸೀಕೆರೆ ಬಳಿಯ ಶಾಖೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ವರನ ಕಡೆಯಿಂದ ಹೆಚ್ಚು ಅಂದರೆ 20-25 ಜನ ಬರಬಹುದು ಎಂದರು. ಸರಿ ಮದುವೆಯೆಲ್ಲಾ ಚೆನ್ನಾಗಿ ಆಯ್ತು. ವಾಸುದೇವರಾಯ ದಂಪತಿಗಳಿಗೂ ಖುಷಿಯಾಯಿತು. ಪದ್ಮಾವತಮ್ಮ ಅತ್ತೆ ಕಡೆಯಿಂದ ಬಂದಿದ್ದ ಸರ ಬಳೆಗಳನ್ನು ಸೊಸೆಗೆ ಹಾಕಿದರು. ದೇವಯಾನಿ ಭದ್ರಾವತಿ ಮನೆ ಸೇರಿದಳು.

ಅಮರನಾಥ್ ಒಂದು ವಾರ ರಜಾ ಹಾಕಿ ಹೆಂಡತಿಯೊಡನೆ ಮೈಸೂರು -ಊಟಿ- ಕೊಡೈಕನಾಲ್ ಎಲ್ಲಾ ತಿರುಗಾಡಿಕೊಂಡು ಬಂದ. ದೇವಯಾನಿಗೂ ಎಲ್ಲವೂ ಹೊಸದು. ಸಂತೋಷದಲ್ಲಿ ದಿನ ಕಳೆದದ್ದೇ ಗೊತ್ತಾಗಲಿಲ್ಲ. ಅಮರನಾಥ ಅರಸೀಕೆರೆಯಲ್ಲಿಯೇ ಮನೆ ಮಾಡಿದ. ವಾರಕ್ಕೊಮ್ಮೆ ಮೈಸೂರು -ಶ್ರೀರಂಗಪಟ್ಟಣ- ಬಲಮುರಿ- ಚುಂಚೇನಹಳ್ಳಿ ಅಂತ ತಿರುಗಾಟಕ್ಕೆ ಕಡಿಮೆ ಮಾಡಲಿಲ್ಲ. ದಿನಗಳು ಕಳೆಯುತ್ತಿದ್ದವು.

ಅಮರನಾಥನ ಅಧಿಕಾರಿ ಮಿತ್ರರನ್ನೆಲ್ಲಾ ನೋಡುತ್ತಿದ್ದ ದೇವಯಾನಿಗೆ ಗಂಡನೂ ಅಧಿಕಾರಿಯಾಗಿದ್ದರೆ ಎಂದೆನಿಸತೊಡಗಿತು. ಗಂಡನಿಗೆ ಮೆಲ್ಲನೆ ಒತ್ತಾಯ ಮಾಡತೊಡಗಿದಳು. ಪದನ್ನೋತಿ ಪರೀಕ್ಷೆಯಲ್ಲಿ ಒಂದೆರಡು ಪ್ರಯತ್ನದಲ್ಲಿಯೇ ತೇರ್ಗಡೆ ಹೊಂದಿ ಅಧಿಕಾರಿಯಾದ. ದೂರದ ಜೆಮ್ ಷೆಡ್‌ಪುರಕ್ಕೆ ವರ್ಗಾವಣೆಯಾಯಿತು. ದೂರದ ರಾಜ್ಯವನ್ನೆಲ್ಲಾ ತಿರುಗಾಡಬಹುದೆಂದು ದೇವಯಾನಿಗೆ ಖುಷಿಯೋ ಖುಷಿ.

ಹೊಸ ಜಾಗ, ಹೊಸ ಭಾಷೆ, ಹೊಸ ಜನ ಎಲ್ಲವನ್ನೂ ಸಂತಸದಿಂದ ಅನುಭವಿಸುತ್ತಾ ಎರಡು ವರ್ಷ ಕಳೆದದ್ದೇ ಗೊತ್ತಾಗಲಿಲ್ಲ. ಮರು ವರ್ಷವೇ ಅಮರನಾಥನಿಗೆ ಗ್ರಾಮೀಣ ಸೇವೆ ಎಂಬ ಹೆಸರಿನಲ್ಲಿ ದಾವಣಗೆರೆ ಬಳಿಯ ಕೆರೆಬಿಳಚಿಗೆ ವರ್ಗವಾಯಿತು. ಶಾಖೆಯ ಜವಾಬ್ದಾರಿಯೆಲ್ಲಾ ಇವನದೇ. ಹೋಗುವಾಗಲೇ ಗೆಳೆಯರು ಎಚ್ಚರಿಸಿದ್ದರು. ಅಲ್ಲಿಯ ಮುಖ್ಯ ನಗದುಗುಮಾಸ್ತನಿಗೆ ಶಿಸ್ತು ಇಲ್ಲ, ದುರಭ್ಯಾಸಗಳಿವೆ; ಹುಷಾರಾಗಿರಿ ಎಂದೆಲ್ಲಾ ಹೇಳಿದ್ದರು. ಅಮರನಾಥ ಸ್ವಭಾವತಃ ಸಾಧು. ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವವನು.

ಶಾಖೆಯ ಅಧಿಕಾರ ವಹಿಸಿಕೊಳ್ಳುವಾಗ ಮೇಲ್ನೋಟದಲ್ಲಿ ಎಲ್ಲವನ್ನೂ ಒಮ್ಮೆ ಪರಿಶೀಲಿಸಿ ಸರಿ ಇದೆಯೆಂದು ಹಳೆಯ ಅಧಿಕಾರಿಯನ್ನು ರಿಲೀವ್ ಮಾಡಿದ್ದ. ಸನಿಹದ ದಾವಣಗೆರೆ ಪಟ್ಟಣದಲ್ಲಿಯೇ ಮನೆ ಮಾಡಿಕೊಂಡು ಓಡಾಡಲು ಅನುಮತಿ ದೊರೆಯಿತು. ದೇವಯಾನಿಗೆ ಅಕ್ಕಪಕ್ಕದಲ್ಲಿ ಸ್ನೇಹಿತೆಯರೂ ದೊರಕಿದರು. ಕಿಟ್ಟಿ ಪಾರ್ಟಿ, ಸಿನೆಮಾ ಅದು ಇದು ಅಂತ ಕಾಲಕಳೆದಿದ್ದೇ ಗೊತ್ತಾಗಲಿಲ್ಲ. ಈ ರೀತಿ ಚೆನ್ನಾಗಿ ನಡೆಯುತ್ತಿದ್ದ ಸಂಸಾರದಲ್ಲಿ ಸಧ್ಯದಲ್ಲಿಯೇ ಬಿರುಗಾಳಿ ಬೀಸುತ್ತದೆ ಎಂದು ಯಾರಿಗೂ ಅನ್ನಿಸಿರಲಿಲ್ಲ.

ಶಾಖೆಯ ಮುಖ್ಯ ನಗದುಗುಮಾಸ್ತ ವಿಪರೀತ ಕುಡಿತದಿಂದಾಗಿ ಅಸುನೀಗಿದ್ದ. ಬ್ಯಾಂಕಿನ ವಾರ್ಷಿಕ ಲೆಕ್ಕ ಪರಿಶೋಧನೆ ನಡೆದಿತ್ತು. ಅವರು ಎಲ್ಲಾ ದಾಖಲೆಗಳನ್ನೂ ಕೂಲಂಕಷವಾಗಿ ತಪಾಸಣೆ ಮಾಡಿದರು. ಒಡವೆ ಸಾಲದಲ್ಲಿನ ಎರಡು ಮೂರು ಖಾತೆಯ ಬಗ್ಗೆ ತನಿಖೆ ಮಾಡಲಾಗಿ ಅದಕ್ಕಾಗಿ ಅಡವಿಟ್ಟಿದ್ದ ಬಂಗಾರದಲ್ಲಿ ಹಲವು ನಕಲಿಯೆಂದು ಸಾಬೀತಾಯಿತು. ಅಡವಿಟ್ಟ ಬಂಗಾರದ ಕುರಿತಾಗಿ ಮುಖ್ಯ ನಗದು ಗುಮಾಸ್ತ ಮತ್ತು ವ್ಯವಸ್ಥಾಪಕರು ಜಂಟಿ ಹೊಣೆ; ಆದರೆ, ಅವನು ತೀರಿಕೊಂಡ ಕಾರಣ ಹೊಣೆಯೆಲ್ಲವೂ ಅಮರನಾಥನ ಹೆಗಲ ಮೇಲೇರಿತು.

ಬಹಳ ಹಿಂದೆಯೇ ಕೊಟ್ಟ ಸಾಲಗಳಾಗಿದ್ದರಿಂದ ತನ್ನ ಏಕಪಕ್ಷೀಯವಾಗಿ ಹೊಣೆ ಮಾಡಲಾಗದು ಎಂದು ಅಮರನಾಥನ ನಂಬಿಕೆ. ಯಾವುದೋ ಮುಸ್ಲಿಂ ಹಬ್ಬ, ಶನಿವಾರ ಭಾನುವಾರಗಳು ಬಂದಿದ್ದರಿಂದ ಬ್ಯಾಂಕಿಗೆ ಸಾಲು ರಜಾ ಇತ್ತು. ಅಪ್ಪ ಅಮ್ಮನನ್ನು ನೋಡಿಕೊಂಡು ಬರಲು ಭದ್ರಾವತಿಗೆ ಹೊರಟರು. ವಾಪಾಸು ಬರುವ ದಿನ ಕೆರೆಬಿಳಚಿಯ ಪೋಲೀಸ್ ಅಧಿಕಾರಿಯಿಂದ ಫೋನು. ತಕ್ಷಣ ಊರಿಗೆ ಬರುವಂತೆ ಆದೇಶ. ಭದ್ರಾವತಿಯಿಂದ ಬರುವ ದಾರಿಯೇ ಆದರಿಂದ ದೇವಯಾನಿಯನ್ನು ದಾವಣಗೆರೆಗೆ ಕಳಿಸಿ ತಾನು ಶಾಖೆಯ ಬಳಿ ಬಂದ.

ಜನರೆಲ್ಲಾ ಸೇರಿದ್ದಾರೆ. ನೋಡಿದರೆ ಬ್ಯಾಂಕಿನ ಗೋಡೆಯಿಂದ ಕಿಟಕಿಯನ್ನು ತೆಗೆದು ಒಳಗಡೆ ಇರುವ ತಿಜೋರಿಯಿಂದ ಒಡವೆ-ಹಣ ಎಲ್ಲಾ ದೋಚಲಾಗಿತ್ತು. ಇವನಿಂದ ಹೇಳಿಕೆಯೊಂದನ್ನು ಪಡೆದು ಸ್ಥಳ ತಪಾಸಣೆ ಎಲ್ಲಾ ನಡೆಯಿತು. ಕೇಂದ್ರ ಕಛೇರಿಯಿಂದ ಮೇಲಧಿಕಾರಿಗಳೂ ಬಂದರು. ಒಡವೆ ಅಡವಿಟ್ಟ ಜನ ತಮ್ಮ ಒಡವೆಯ ಕಥೆ ಏನು ಎಂದು ಪ್ರಶ್ನಿಸತೊಡಗಿದರು. ಮೊದಲೇ ಒಂದು ಮತದವರ ಬಾಹುಳ್ಯ. ಊರ ರಾಜಕೀಯ ಬೇರೆ. ಗ್ರಾಮ ಪಂಚಾಯಿತಿ ಅಧ್ಯಕ್ಷನೇ ಮುಂದೆ ನಿಂತು ಗಲಾಟೆಯ ನೇತೃತ್ವ ವಹಿಸಿದ. ಬ್ಯಾಂಕಿನ ಹಿರಿಯ ಅಧಿಕಾರಿಗಳು ತ್ವರಿತ ನಿರ್ಣಯ ಕೈಗೊಳ್ಳುವುದು ಅನಿವಾರ್ಯವಾಯಿತು. ಅಂತೆಯೇ ಅಡವಿಟ್ಟ ಎಲ್ಲಾ ಒಡವೆಗಳಿಗೂ ಅಂದಿನ ಮೌಲ್ಯದ ಮೇಲೆ ಹೆಚ್ಚುವರಿ ಶೇ. ಹತ್ತರಷ್ಟು ಹಣ ನಿಗದಿ ಮಾಡಿ, ಅದರಲ್ಲಿ ಸಾಲದ ವಜಾ ಮಾಡಿಕೊಂಡು ಉಳಿದ ಹಣ ಪಾವತಿಗೆ ಒಮ್ಮತಕ್ಕೆ ಬರಲಾಯಿತು. ಬಂಗಾರದ ಬೆಲೆ ಕೆಲವು ದಿನಗಳಿಂದ ಸಿಕ್ಕಾಪಟ್ಟೆ ಏರುಮುಖದಲ್ಲಿದ್ದುದರಿಂದ ಎಲ್ಲರೂ ಸಮ್ಮತಿಸಿದರು.

ಪೀಕಲಾಟ ಇಟ್ಟುಕೊಂಡಿದ್ದು ಬ್ಯಾಂಕಿಗೆ. ಲೆಕ್ಕ ಪರಿಶೋಧನೆಯಲ್ಲಿ ಹೊರಬಂದ ನಕಲಿ ಒಡವೆ ಖಾತೆಗಳು ಊರಿನ ಪಂಚಾಯಿತಿ ಅಧ್ಯಕ್ಷ ಅವನ ಬಳಗಕ್ಕೆ ಸೇರಿದ್ದವು; ಆ ಒಡವೆಗಳು ನಕಲಿ ಎಂದು ಈಗ ಹೇಳುವಂತೆಯೂ ಇರಲಿಲ್ಲ, ಕರ್ತವ್ಯ ಲೋಪಕ್ಕಾಗಿ ಅಮರನಾಥ ಮತ್ತಿತರ ಅಧಿಕಾರಿ-ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವಂತೆಯೂ ಇಲ್ಲ. ಆದರೂ ಈ ರೀತಿಯ ಕರ್ತವ್ಯ ಚ್ಯುತಿ ಮರುಕಳಿಸಬಾರದೆಂದು ಅಮರನಾಥನನ್ನು ಅಮಾನತ್ತಿನಲ್ಲಿಡಲು ಸೂಚಿಸಲಾಯಿತು. ಅವನಿಗೆ ಕೊಟ್ಟ ಎಲ್ಲಾ ಸೌಲಭ್ಯಗಳನ್ನೂ ಹಿಂಪಡೆಯಲಾಯಿತು.

ತನ್ನದಲ್ಲದ ತಪ್ಪಿಗೆ ಅನುಭವಿಸಬೇಕಾದ ಶಿಕ್ಷೆಯಿಂದ ಅಮರನಾಥ ಕುಗ್ಗಿಹೋದ. ದೇವಯಾನಿಗೂ ಇನ್ನು ಮುಂದೆ ಸುಖಗಳು ಮರೀಚಿಕೆ ಅನ್ನಿಸತೊಡಗಿದಳು. ಕೆಲದಿನಗಳ ನಂತರ ತವರು ಮನೆಗೆ ಹೋಗಿ ಬರುತ್ತೇನೆಂದು ಹೋದವಳು ಮರಳಿ ಬರಲೇ ಇಲ್ಲ. ಅಮಾನತಿನ ಸಮಯದಲ್ಲಿ ಸ್ವಲ್ಪ ಸಂಬಳ ಬರುತ್ತಿತ್ತಾದರೂ, ಮಾಡಿಕೊಂಡ ಸಾಲಕ್ಕೆ ವಜಾ ಆಗುತ್ತಿತ್ತು.

ತನ್ನ ಲಾಕರಿನಲ್ಲಿದ್ದ ಒಡವೆಗಳನ್ನಾದರೂ ಅಡವಿಟ್ಟು ಸಾಲ ಪಡೆಯೋಣವೆಂದು ದಾವಣಗೆರೆಯ ಬ್ಯಾಂಕಿನ ಶಾಖೆಗೆ ಹೋದವನಿಗೆ ಆಘಾತ ಕಾದಿತ್ತು. ಹೆಂಡತಿಯೊಡನೆ ಜಂಟಿ ಖಾತೆಯಲ್ಲಿದ್ದ ಲಾಕರಿನಿಂದ ಹೆಂಡತಿ ಎಲ್ಲಾ ಒಡವೆಗಳನ್ನೂ ತೆಗೆದುಕೊಂಡೇ, ಊರಿಗೆ ಹೋಗಿದ್ದಳು. ಇವನ ಕೈಯ ಕಂಕಣ, ಸರ, ಉಂಗುರ, ಅಮ್ಮ ಸೊಸೆಗೆ ನೀಡಿದ್ದ ಒಡವೆಗಳೆಲ್ಲವನ್ನೂ ದೇವಯಾನಿ ತೆಗೆದುಕೊಂಡು ಹೋಗಿದ್ದಳು. ಇವನ ಜಂಟಿ ಉಳಿತಾಯ ಖಾತೆಯಲ್ಲಿದ್ದ ಹಣದಲ್ಲೂ ಬಹುಪಾಲು ತೆಗೆದುಕೊಂಡಾಗಿತ್ತು. ಅಮರಾನಾಥನಿಗೆ ದಿಕ್ಕೇ ತೋಚಲಿಲ್ಲ.

ಈ ನಡುವೆ ಬ್ಯಾಂಕಿನ ತನಿಖೆಯ ಪಾಟೀ ಸವಾಲಿಗೆ ನೋಟೀಸ್ ಬಂದಿತ್ತು. ಅದಕ್ಕಾಗಿ ಒಬ್ಬ ಒಳ್ಳೆಯ ವಕೀಲರನ್ನು ಕಂಡು ಬರೋಣವೆಂದು ಹೊರಟ. ಮಧುಸೂಧನ್ ರಾವ್ ದಾವಣಗೆರೆಯ ಹೆಸರಾಂತ ವಕೀಲರು. ಹತ್ತಿರದ ಹಳ್ಳಿಯಲ್ಲಿ ತೋಟವಿದ್ದರೂ ಹೆಂಡತಿ ತೀರಿಕೊಂಡ ಮೇಲೆ ಮಗಳು ಮಾಲವಿಕಳನ್ನು ಓದಿಸಲು ದಾವಣಗೆರೆಯಲ್ಲಿಯೇ ನೆಲೆಸಿದ್ದರು. ಮಗಳು ಓದಿ ಕೆಲಸ ಸೇರಿದ್ದರೂ ವಿಧಿಯಾಟ ಬೇರೆ ಇತ್ತು. ರಸ್ತೆಯಲ್ಲಿ ಗುದ್ದಿದ ಬೈಕಿನಿಂದಾಗಿ ಪಕ್ಕದ ಕಲ್ಲಿನ ಮೇಲೆ ಬಿದ್ದು ಬಲತೊಡೆಯ ಮೂಳೆ ಮುರಿದಿತ್ತು. ಗಾಲಿಕುರ್ಚಿಯಲ್ಲಿ ಓಡಾಡುವಂತೆ ಆಯಿತು. ಕೆಲಸ ಬಿಟ್ಟು ತಂದೆಯೊಡನೆ ಬಂದು ನೆಲೆಸಿ ಅವರಿಗೆ ಚಿಕ್ಕ ಪುಟ್ಟ ಸಹಾಯ ಮಾಡತೊಡಗಿದಳು. ಲೆಕ್ಕ ಪರಿಶೋಧನೆಯ ಬಗ್ಗೆ ಅಭ್ಯಸಿಸಿದ್ದರಿಂದ ತಂದೆಯ ಕಕ್ಷಿದಾರರ ಹಲವು ಕೆಲಸಗಳು ಇವಳಿಗೆ ದೊರಕಿ ತಂದೆಗೆ ಆಸರೆಯಾಗಿ ಅಲ್ಲಿಯೇ ನೆಲೆ ನಿಂತಳು.

ವಕೀಲರನ್ನು ನೋಡ ಬಂದ ಅಮರನಾಥ ಅವರಿಗೆ ಎಲ್ಲಾ ವಿವರಿಸಿದ. ಮಧುಸೂಧನರಾಯರು 'ನೀವೇನೂ ಹೆದರಬೇಡಿ ಅಮರನಾಥ್, ನಿಮ್ಮನ್ನು ಬಚಾವು ಮಾಡಲು ಸಾಕಷ್ಟು ದಾರಿಗಳಿವೆ. ಆ ದರೋಡೆಯಾಗಿರುವುದೂ ನಿಮಗೆ ಅನುಕೂಲವೇ. ಸ್ವಲ್ಪ ವಿಳಂಬ ಆಗಬಹುದು; ಅಂತಿಮ ಜಯ ನಿಮ್ಮದೇ' ಎಂಬ ಭರವಸೆ ಕೊಟ್ಟರು. ಪೋಲೀಸ್ ತನಿಖೆ ನಡೆದಿದ್ದರೂ ದರೋಡೆಗೋರರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗದೆ ಮಾಲು ಸಿಕ್ಕಿರಲಿಲ್ಲ. ಮುಂದೆ ಹಲವು ಬಾರಿ ಅವರನ್ನು ಭೇಟಿಯಾಗಲು ಬಂದಾಗ ಅವರು ಕೋರ್ಟಿಗೆ ಹೋಗಿರುತಿದ್ದರು. ಆಗೆಲ್ಲಾ ಮಗಳು ಮಾಲವಿಕ ಬಳಿಯೇ ಮಾತನಾಡುತ್ತಾ ಕುಳಿತಿರುತ್ತಿದ್ದ. ಇವನ ಕತೆಯೆಲ್ಲಾ ಕೇಳಿದ ಮಾಲವಿಕಗೂ ಇವನ ಬಗ್ಗೆ ಸಹಾನುಭೂತಿ ಮೂಡಿತ್ತು.

ಒಮ್ಮೆ ಹೀಗೆಯೇ ಮಾತನಾಡುವಾಗ ರಾಯರು 'ನೋಡಿ ಮಿ. ಅಮರನಾಥ್ ನೀವೇಕೆ ಒಂಟಿ ರೂಮಿನಲ್ಲಿ ಕಾಲ ಕಳೆಯುತ್ತಿದ್ದೀರಿ? ಇಲ್ಲಿಯೇ ನಮ್ಮ ಕಚೇರಿಯ ಮೇಲ್ಭಾಗದಲ್ಲಿ ಒಂದು ಭಾಗ ಖಾಲಿ ಇದೆ. ನೀವು ಅಲ್ಲಿಯೇ ಬಂದಿರಿ. ಬಿಡುವಿನ ಸಮಯದಲ್ಲಿ ನಮ್ಮ ಮಾಲವಿಕಗೂ ಸಹಾಯ ಮಾಡುತ್ತಿರಿ. ಹೇಗೂ ಬ್ಯಾಂಕಿನಲ್ಲಿದ್ದಿರಿ. ವರಮಾನ ತೆರಿಗೆ, ಜಿ.ಎಸ್.ಟಿ.ಯ ಲೆಕ್ಕಗಳು ನಿಮಗೆ ಹೆಚ್ಚಿನ ಕಷ್ಟ ಆಗಲಿಕ್ಕಿಲ್ಲ' ಎಂದರು. ಅಮರನಾಥನಿಗೂ ಸರಿಯೆನಿಸಿತು. ಅಮಾನತುಗೊಂಡ ಮೇಲೆ, ಹೆಂಡತಿಯು ತವರಿಗೆ ಹೋದ ಮೇಲೆ, ಒಂದು ಸಣ್ಣ ಬಾಡಿಗೆ ರೂಮಿನಲ್ಲಿರುತ್ತಿದ್ದ ಅವನಿಗೆ ಈ ವ್ಯವಸ್ಥೆ ಅನುಕೂಲವೆನಿಸಿತು. ಅಲ್ಲಿಯೇ ಇರತೊಡಗಿದ.

ಈ ಮಧ್ಯೆ, ಒಂದು ದಿನ ರಿಜಿಸ್ಟರ್ಡ್ ಅಂಚೆಯಲ್ಲಿ ಕಡತವೊಂದು ಬಂದಿತು. ತೆಗೆದು ನೋಡಿದರೆ ದೇವಯಾನಿಯದು. ವಿವಾಹ ವಿಚ್ಛೇಧನ ಸಂಬಂಧಿತ ಕಡತ. ಅದರೊಂದಿಗೆ ಪತ್ರವೊಂದೂ ಇತ್ತು. ಅದರಲ್ಲಿ 'ಇದರೊಂದಿಗೆ ವಿಚ್ಛೇಧನಕ್ಕಾಗಿ ದಸ್ತಾವೇಜು ಕಳಿಸುತ್ತಿದ್ದೇನೆ. ನಿಮ್ಮ ಸಮ್ಮತಿ ಸೂಚಕ ಸಹಿಯೊಂದಿಗೆ ಕಳಿಸುವುದು. ನಾನು ಅಲ್ಲಿಂದ ತಂದ ಒಡವೆಗಳ ಬಗ್ಗೆಯಾಗಲೀ ಇತರ ವಿಷಯಗಳ ಬಗ್ಗೆಯಾಗಲೀ ತಕರಾರು ಮಾಡದೇ ಸಹಿ ಮಾಡಿ ಕಳಿಸಿ. ನೀವು ಕಳಿಸದಿದ್ದಲ್ಲಿ ನಿಮ್ಮಿಂದ ಜೀವನಾಂಶ ಬೇಡಿಕೆಯ ಜೊತೆಗೆ ವರದಕ್ಷಿಣೆ ಕಾಯಿದೆ ಅಡಿಯಲ್ಲಿ ದಾವೆಯನ್ನೂ ಹೂಡಬೇಕಾಗುತ್ತದೆ. ಹೇಗೂ ಮದುವೆಯಾಗಿ ಇನ್ನೂ ಏಳು ವರ್ಷ ಪೂರ್ತಿಗೊಂಡಿಲ್ಲ. ಜೈಲು ಸೇರಬೇಕಾಗುತ್ತೆ' ಎಂಬ ಎಚ್ಚರಿಕೆಯನ್ನೂ ರವಾನಿಸಿದ್ದಳು.

ಪತ್ರವೋದಿದ ಅಮರನಾಥ್‌ಗೆ, ನಿರ್ಧಾರ ತೆಗೆದುಕೊಳ್ಳಲು ಸಮಯವೇನೂ ಬೇಕಿರಲಿಲ್ಲ. ಏಕೆಂದರೆ, ಅಮರನಾಥನಿಗೂ ಇವಳ ಸಹವಾಸ ಸಾಕೆನಿಸಿತ್ತು. ಬಿಡುಗಡೆಯ ಅವಕಾಶ ತಾನಾಗಿ ಬಂದಿರವಾಗ ಏಕೆ ಬಿಡಬೇಕು ಎಂದುಕೊಂಡು, ರಾಯರಲ್ಲಿ ಒಂದು ಮಾತು ಕೇಳೋಣವೆಂದು ಅವರೊಡನೆ ಎಲ್ಲಾ ವಿಷಯ ಹೇಳಿದ. ಅವರು 'ನೋಡಿ, ಮಿ.ಅಮರನಾಥ್ ನಾನು ವಿಚ್ಛೇಧನ ಕೇಸ್‌ಗಳಲ್ಲಿ ಸಾಧಾರಣವಾಗಿ ಗಂಡ ಹೆಂಡತಿ ಹೊಂದಿಕೊಂಡು ಹೋಗಿ ಎಂಬ ಸಲಹೆ ನೀಡುತ್ತೇನೆ. ನಿಮ್ಮ ವಿಷಯ ಪೂರ್ಣವಾಗಿ ತಿಳಿದುಕೊಂಡ ಮೇಲೆ ನಿಮ್ಮ ನಿರ್ಧಾರವೇ ಸರಿಯೆನಿಸುತ್ತಿದೆ, ಮುಂದುವರಿಯಿರಿ' ಎಂದರು. ಅವಳ ವಿಚ್ಛೇದನ ಮನವಿ ಪತ್ರಕ್ಕೆ ಸಹಿ ಹಾಕಿ ಕಳಿಸಿದ.

ರಾಯರ ಮಗಳು ಮಾಲವಿಕ ಉತ್ತಮ ಕೆಲಸಗಾರ್ತಿ. ಅಮರನಾಥನೊಂದಿಗೆ ಕೆಲಸ ಮಾಡುವುದು ಅವಳಿಗೆ ಹಿತವಾಗಿ ತೋರಿತು. ಗಾಲಿಕುರ್ಚಿಯಿಂದ ಊರುಗೋಲಿಗೆ ಬಂದಿದ್ದಳು. ಅಮರನಾಥನೂ ಅವಳನ್ನು ಒಮ್ಮೆ ಮುಂಡಗದ್ದೆ ಸಮೀಪದ ಮುಡುಬಕ್ಕೆ ಕರೆದುಕೊಂಡು ಹೋಗಿ, ಅಲ್ಲಿಯ ನಾಟಿ ವೈದ್ಯರಿಂದ ಮೂಳೆ ಕೂಡಿಸುವ ತೈಲ ಇತ್ಯಾದಿಗಳನ್ನು ಕೊಡಿಸಿದ. ಅದೂ ಸ್ವಲ್ಪ ಕೆಲಸಮಾಡಿತು. ಕೆಲದಿನಗಳಲ್ಲಿ ಮಾಲವಿಕ ಊರುಗೋಲು ಬಿಟ್ಟು ಓಡಾಡುವಂತಾದಳು. ಈ ಮಧ್ಯೆ, ಮಧುಸೂಧನರಾಯರು ಒಮ್ಮೆ ಕಛೇರಿಯಲ್ಲಿಯೇ ರಕ್ತದೊತ್ತಡ ಹೆಚ್ಚಿ ಪ್ರಜ್ಞಾಶೂನ್ಯರಾದರು. ಅವರನ್ನು ಅಮರನೇ ಆಸ್ಪತ್ರೆಗೆ ದಾಖಲಿಸಿ ಎರಡು ದಿನ ಅವರ ಶುಶ್ರೂಷೆ ಮಾಡಿದ. ಅಲ್ಲಿಂದ ಬಂದ ಮೇಲೆ ಒಂದು ದಿನ ರಾಯರು ಅಮರನನ್ನು ಕರೆದು 'ನಿಮ್ಮ ಬಳಿ ಈ ವಿಷಯ ಮಾತನಾಡಬೇಕೆಂದು ಬಹಳ ದಿನಗಳಿಂದ ಅಂದುಕೊಂಡಿದ್ದೆ. ನಿಮಗೆ ಅಭ್ಯಂತರವಿಲ್ಲದಿದ್ದಲ್ಲಿ ನಮ್ಮ ಮಾಲವಿಕಳನ್ನು ನೀವೇಕೆ ಮದುವೆಯಾಗಬಾರದು? ಅವಳಿಗೂ ಮೂವತ್ತಾಯಿತು. ಇಲ್ಲಿಯೇ ಸನಿಹದಲ್ಲಿ ನಮ್ಮ ತೋಟ ಇದೆ. ನಿಮ್ಮ ತಂದೆ ತಾಯಿ ಅಲ್ಲಿ ಬಂದು ಬರಿ ಮೇಲ್ವಿಚಾರಣೆ ನಡೆಸಿಕೊಂಡಿದ್ದರಾಯಿತು. ಅಲ್ಲಿಯೇ ಕೆಲಸಕ್ಕೆ ಜನ ಇದ್ದಾರೆ. ಹಾಲು ಮೊಸರು ಅಲ್ಲಿಂದಲೇ ಸರಬರಾಜು ಆಗುತ್ತದೆ. ಬಾವಿ ನೀರು, ವಿಶಾಲವಾದ ಮನೆ, ಹೂವು ಹಣ್ಣು ತರಕಾರಿ ಬೆಳೆಯಲು ಜಾಗ ಎಲ್ಲಾ ಇದೆ. ನನಗೂ ಕೈಕಾಲು ಗಟ್ಟಿ ಇರುವಾಗಲೇ ಮಗಳ ಜೀವನವನ್ನು ದಡ ಸೇರಿಸುವ ಆಸೆ, ವಿಚಾರ ಮಾಡಿ' ಎಂದರು.

ಅಮರನಾಥ ಸ್ವಲ್ಪ ಯೋಚಿಸಿದ; ಈ ವಿಚಾರ ಸರಿ ಎನಿಸಿತು. ಮಾಲವಿಕರವರನ್ನೂ ಒಂದು ಮಾತು ಕೇಳಿ ಸಾರ್ ಎಂದ. ಆ ಕೆಲಸ ಇಂದೇ ಮಾಡುತ್ತೇನೆ ಎಂದರು. ವಿಷಯ ಎಲ್ಲಾ ಕೇಳಿದ ಮಾಲವಿಕಳಿಗೂ ಅಮರನಾಥನೊಂದಿಗೆ ಬಾಳುವೆ ಏಕಾಗಬಾರದು? ಅಪ್ಪನೂ ಜೊತೆಗಿರುತ್ತಾರೆ ಯಾವುದಕ್ಕೂ ಕೊರತೆಯಿರುವುದಿಲ್ಲ ಎಂದುಕೊಂಡು ಸಮ್ಮತಿ ಸೂಚಕ ನಗು ಬೀರಿದಳು. ಮರುವಾರವೇ ಮಧುಸೂಧನ ರಾಯರು ಮಗಳೊಂದಿಗೆ ಅಮರನಾಥನನ್ನೂ ಕರೆದುಕೊಂಡು ಭದ್ರಾವತಿಗೆ ಹೋಗಿ ವಾಸುದೇವರಾಯರಲ್ಲಿ ಎಲ್ಲಾ ವಿಷಯ ತಿಳಿಸಿದರು. ಅವರಿಗೂ ಮಗನ ಜೀವನ ಮತ್ತೆ ಸರಿಯಾಗುವುದಲ್ಲ ಎಂದು ತೃಪ್ತಿಯಾಯಿತು. ಮುಂದಿನ ಏರ್ಪಾಡುಗಳು ಯಾವ ವಿಘ್ನವಿಲ್ಲದೆ ನಡೆದವು.

ಪೋಲೀಸ್ ಅಧಿಕಾರಿ ಶಶಿಕುಮಾರ್ ರಾಠೋಡ್ ಮಧುಸೂಧನರಾಯರ ಭೇಟಿಗೆ ಬಂದಿದ್ದ. ಅಮರನಾಥನೇ ಅವರನ್ನು ಕುಳ್ಳಿರಿಸಿ 'ಏನು ವಿಷಯ?' ಎಂದ. ಅವರು 'ಏನಿಲ್ಲ ಸಾರ್, ಬ್ಲೇಡ್ ಕಂಪನಿ ಕೇಸು. ಶಿವಮೊಗ್ಗ ದಾವಣಗೆರೆ ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಕಂಪನಿ ಹಲವು ಜನರಿಗೆ ಟೋಪಿ ಹಾಕಿ ಕೋಟ್ಯಾಂತರ ಹಣ ಗುಳುಂ ಮಾಡಿದೆ. ಅದರ ಮಾಲೀಕನಿಗೆ ಇಲ್ಲಿ ಯಾವ ಆಸ್ತಿ ಇದ್ದಂತೆ ಕಾಣುವುದಿಲ್ಲ, ಅವನು ಈಗಾಗಲೇ ವಿದೇಶಕ್ಕೆ ಹಾರಿರಬೇಕೆಂದು ಅನುಮಾನ. ಈ ವಿಷಯದಲ್ಲಿ ಕಾನೂನು ಸಲಹೆ ಪಡೆದು ಬರಬೇಕೆಂದು ರಾಯರ ಬಳಿ ನನ್ನನ್ನು ಸಾಹೇಬರು ಕಳಿಸಿದರು. ಅವರು ಬಂದ ಮೇಲೆ ಅವರಿಗೆ ಈ ಕಡತ ಕೊಡಿ ಸಾರ್, ನಾನು ಅವರನ್ನು ನ್ಯಾಯಾಲಯದ ಬಳಿ ಭೇಟಿ ಮಾಡಿ ವಿಷಯ ತಿಳಿಸಿರುತ್ತೇನೆ' ಎಂದು ಹೊರಡಲನುವಾದ.

ಅವನು ಕಡತ ಕೊಡುವಾಗ ಫೋಟೋವೊಂದು ಅದರಿಂದ ಜಾರಿ ಬಿತ್ತು. ಹೆಕ್ಕಿ ನೋಡಿದರೆ ದೇವಯಾನಿಯದು! 'ಈ ಫೋಟೋ ಇಲ್ಲಿ ಹೇಗೆ ಬಂತು ಸಾರ್?' ಎಂದು ಅಮರನಾಥ ಅಂದಾಗ ರಾಠೋಡ್ 'ಇದು ಸಾಗರ ಬಳಿಯ ಹೆಣ್ಣುಮಗಳದ್ದು ಸಾರ್, ಈಕೆ ತನ್ನ ಬಳಿ ಇದ್ದ ಹಣ ಮತ್ತು ಇದ್ದ ಒಡವೆಗಳೆಲ್ಲವನ್ನೂ ಅಡವಿಟ್ಟು ಈ ಕಂಪನಿಯಲ್ಲಿ ಹೆಚ್ಚಿನ ಬಡ್ಡಿಯಾಸೆಗೆ ತೊಡಗಿಸಿದ್ದಳು. ಈಗ ಮೂರುನಾಮವೇ ಗತಿ' ಎಂದು ನಕ್ಕ. ಅಮರನಿಗೆ ನಗು ಬರಲಿಲ್ಲ; ಬದಲಾಗಿ ವಿಷಾದದ ಗೆರೆಯೊಂದು ಮೂಡಿತು.

ಅಮರನಾಥನ ಬ್ಯಾಂಕಿನ ಪ್ರಕರಣದ ತೀರ್ಪು ಹೊರಬಿತ್ತು. ನಿರ್ದೋಷಿ ಎಂಬ ತೀರ್ಮಾನವಾಗಿ ಮರುನೇಮಕ ಆದರೂ ಸಣ್ಣ ಪ್ರಮಾಣದ ನಿರ್ಲಕ್ಷ್ಯ ಎಂದು ದೂರದ ಊರಿಗೆ ವರ್ಗಾವಣೆಗೊಂಡಿದ್ದ. ಅಮಾನತ್ತಿನ ವೇಳೆಯ ಸಂಬಳವೆಲ್ಲವೂ, ಈಗ ಒಟ್ಟಾಗಿ, ಇಡುಗಂಟಾಗಿ ಬಂದಿತ್ತು. ಬ್ಯಾಂಕಿನ ನಡವಳಿಕೆಯಿಂದ ರೋಸಿಹೋಗಿದ್ದ ಅಮರನಾಥ ಇವರ ಸಹವಾಸವೇ ಸಾಕೆಂದು ರಾಜೀನಾಮೆ ನೀಡಿದ . ಮಾಲವಿಕಳಿಗೆ ಮದುವೆಯಾಗಿ ವರ್ಷವಾಗುತ್ತಾ ಬಂತು. ಅವಳು ಬಸುರಿಯಾಗಿದ್ದಾಳೆ ಎಂದು ತಿಳಿದಾಗಿನಿಂದ ಪದ್ಮಾವತಮ್ಮನವರ ಆನಂದಕ್ಕೆ ಪಾರವೇ ಇಲ್ಲ. ವಾರ ವಾರವೂ ಅವಳನ್ನು ತೋಟಕ್ಕೆ ಕರೆಸಿಕೊಂಡು ಎಣ್ಣೆನೀರಿನ ಅಭ್ಯಂಜನ, ಬೇಕು ಬೇಕಾದ ತಿಂಡಿ ತೀರ್ಥಗಳು ಮಾಡಿದ್ದೇ ಮಾಡಿದ್ದು. ದಾವಣಗೆರೆಯ ನರ್ಸಿಂಗ್ ಹೋಂ ಒಂದರಲ್ಲಿ ಸುಖವಾಗಿ ಹೆರಿಗೆ ಆಗಿ, ಮುದ್ದಾದ ಮಗುವೂ ಜನಿಸಿತು.

ಅಮರನಾಥನಿಗೆ ಈ ವಿಧಿವಿಲಾಸ ತನ್ನನ್ನು ಎಲ್ಲಿಂದ ಎಲ್ಲಿಗೆ ಕರೆತಂದಿತು ಎನಿಸಿತು. ಭಾಸನ ಸ್ವಪ್ನ ವಾಸವದತ್ತದ ಯೌಗಂಧರಾಯಣನ ಉಕ್ತಿ ನೆನಪಾಯಿತು. ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ - ಮನುಷ್ಯನ ಭಾಗ್ಯದ ರೇಖೆಗಳು ಚಕ್ರದ ಗಾಲಿಯಂತೆ ತಿರುಗುತ್ತಿರುತ್ತದೆ. ಇದಕ್ಕೆ ತನ್ನ ಜೀವನಕ್ಕಿಂತ ಬೇರೆ ನಿದರ್ಶನ ಬೇಕೆ ಎನ್ನಿಸಿತು.

ವಿರಾಮದ ಪೋಸ್ಟ್ ಆಫೀಸು

ವಿರಾಮ ಪುರವಣಿಯಲ್ಲಿ ಪ್ರಕಟಗೊಂಡ ಲೇಖನದ ಮೂಲಕ 'ಯಕ್ಷಗಾನ ಕಲೆ ಉಳಿದರೂ ಅದರ ಆತ್ಮ ಉಳಿದೀತೆ?' ಎನ್ನುವ ಗಂಭೀರ ಪ್ರಶ್ನೆಯನ್ನು ರವಿ ಮಾಡೋಡಿಯವರು ಎತ್ತಿದ್ದಾರೆ. ಒಂದು ಕಡೆ ಕಲೆ, ಪರಂಪರೆ ಸಂಸ್ಕೃತಿ ಎಂದು ಬೊಬ್ಬೆ ಹೊಡೆಯುತ್ತಿದ್ದರೂ ನಮ್ಮದೇ ನೆಲದ ಕಲೆ ಯಕ್ಷಗಾನದ ಬಗ್ಗೆ ಅದರ ಮೂಲ ಸತ್ವವನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಆತಂಕ ಹುಟ್ಟಿರುವುದೇ ನಮ್ಮತನವನ್ನು ಕಳೆದುಕೊಳ್ಳುತ್ತಿರುವುದರ ಸೂಚನೆ ಎನ್ನಬಹುದು. ಮನುಷ್ಯ ಸಂತೋಷದ ರಾಸಾಯನಿಕಗಳ ಉತ್ಪತ್ತಿಗೆ ಹಾತೊರೆಯುತ್ತಲೇ ಇರುತ್ತಾನೆ. ಆ ರಾಸಾಯನಿಕಗಳ ಉತ್ಪತ್ತಿಗೆ ಅವನು ಅವನು ಅನುಭವಿಸುವ ಕಲಾ ಮಾಧ್ಯಮವೂ ಕಾರಣ. ಅವನಿಗೆ ಎಲ್ಲಿ ಸಂತೋಷ ಸಿಗುತ್ತದೋ, ಅಲ್ಲಿ ಹೆಚ್ಚು ಹೆಚ್ಚು ಆತ ಹೋಗುತ್ತಾನೆ ಅಥವಾ ನೋಡುತ್ತಾನೆ ಅಥವಾ ಅನುಭವಿಸುತ್ತಾನೆ. ಇದನ್ನೇ ರವಿ ಮಾಡೋಡಿ ಹೇಳಿರುವ ಯಕ್ಷ ಪ್ರೇಕ್ಷಕನಿಗೆ ಅನ್ವಯಿಸಿದರೆ, ಹೊಸ ಪ್ರಸಂಗಗಳ ಹೊಸ ಹಾಡುಗಳು, ಹೊಸ ಕಥೆ, ಮಧ್ಯೆ ಬರುವ ಹಾಸ್ಯ ಇವೆಲ್ಲವೇ ತನಗೆ ಖುಷಿ ಕೊಡುತ್ತವೆ ಎಂಬ ಕಾರಣಕ್ಕೆ ಆತ ಅದನ್ನೇ ನೆಚ್ಚಿಕೊಂಡಿದ್ದಾನೆ ಎಂದಾಯಿತು.

ಸಮಸ್ಯೆ ಗಂಭೀರವಾದದ್ದೇ. ಒಂದು ಉದಾಹರಣೆಯನ್ನು ನೋಡೋಣ. ಇದೇ ಡಿಸೆಂಬರ್ 13 ರ ರಾತ್ರಿ, ರವೀಂದ್ರ ಕಲಾಕ್ಷೇತ್ರದಲ್ಲಿ ಶುದ್ಧ ಪೌರಾಣಿಕ ಪ್ರಸಂಗಗಳು ಮೇಳೈಸಿದವು. ಭೀಷ್ಮ ಪರ್ವ ಮತ್ತು ಸುಭದ್ರಾ ಕಲ್ಯಾಣ. ಪೌರಾಣಿಕ ಪ್ರಸಂಗಗಳನ್ನು ಹೊಸ ಆಲೋಚನೆಯಲ್ಲಿ ಕಟ್ಟುವುದು ಹೇಗೆ ಅನ್ನುವ ಮೇಲ್ಮಟ್ಟದ ಪ್ರದರ್ಶನವಾಗಿ ಈ ಕಾರ್ಯಕ್ರಮ ಮೂಡಿಬಂತು. ಮೊದಲ ಪ್ರಸಂಗದಲ್ಲಿ ಕೌರವ ಮತ್ತು ಭೀಷ್ಮರ ಭೇಟಿಯ ಸಂದರ್ಭ, ಇಡೀ ಭಾರತೀಯ ಸಂಸ್ಕೃತಿಯ ಬೇರು- ಭಗವದ್ಗೀತೆಯ ಬೋಧನೆಯ ಸನ್ನಿವೇಶ ಮುಂತಾದ ಸಂದರ್ಭಗಳಲ್ಲಿ ಪೌರಾಣಿಕ ಪ್ರಸಂಗಗಳ ಹೊಸತನ ಯಕ್ಷಗಾನೀಯ ಚೌಕಟ್ಟಿನಲ್ಲಿಯೇ ಕಂಡು ಬಂತು. ಎರಡನೇ ಪ್ರಸಂಗದಲ್ಲಿ ಸದಭಿರುಚಿಯ ಹಾಸ್ಯ, ಬಲರಾಮನ ಗತ್ತು, ಕೃಷ್ಣನ ಲಾಲಿತ್ಯ, ಸತ್ಯಭಾಮೆಯ ಭಾವುಕತೆ, ಸನ್ಯಾಸಿ ಅರ್ಜುನನ ಕಪಟ, ಹೀಗೆ ಎಲ್ಲಾ ರೀತಿಯ ರಸಗಳ ಪ್ರದರ್ಶನ ಮೂಡಿ ಬಂತು. ಇದು ಅಪರೂಪದ ಪೌರಾಣಿಕ ಪ್ರದರ್ಶನ. ಎಲ್ಲವೂ ಯಕ್ಷಗಾನ ಚೌಕಟ್ಟಿನಲ್ಲಿಯೇ ಇತ್ತು. ಆದರೆ ಇಂಥ ಒಂದು ಉತ್ತಮ ಕಾರ್ಯಕ್ರಮಕ್ಕೆ ಪ್ರೇಕ್ಷಕರ ಸಂಖ್ಯೆ ಬಹಳ ಕಡಿಮೆ ಇತ್ತು.

ಪ್ರೇಕ್ಷಕರನ್ನು ರಂಜಿಸುವ ಕಲಾವಿದರು, ತಮ್ಮ ಕಲಾ ಪ್ರದರ್ಶನ ಸುಲಭ ಆಗಬೇಕು ಮತ್ತು ಜನರಿಗೆ ರಂಜನೆ ತಲುಪಬೇಕು ಎಂಬ ಏಕೈಕ ಉದ್ದೇಶದ ಈ ಹೊಸ ಪ್ರಸಂಗವೆಂಬ 'ಫಾಸ್ಟ್ ಫುಡ್ ಯಕ್ಷಗಾನ ಪ್ರದರ್ಶನ' ನಡೆಸುತ್ತಿದ್ದಾರೆ; ಇದನ್ನು ಇಂದಿನ ಯುವ ಜನರಲ್ಲಿ ಕೆಲವರು ಮೆಚ್ಚುತ್ತಿದ್ದಾರೆ. ಪೌರಾಣಿಕ , ಆಧ್ಯಾತ್ಮಿಕ ಚಿಂತನೆಗಳ ಅವಶ್ಯಕತೆ ಇಲ್ಲದ, ಅಧ್ಯಯನ ಬೇಕಿಲ್ಲದ, ಪಾತ್ರ ಪೋಷಣೆಯ ತಲೆ ಬಿಸಿ ಬೇಕಾಗದ ಸಾಮಾಜಿಕ ಪ್ರಸಂಗಗಳು ಕಲಾವಿದರಿಗೆ ಸುಲಭ ಅನ್ನುವ ಕಾರಣವೂ ಇದ್ದೀತು. ಸದಭಿರುಚಿಯ ಮತ್ತು ಪರಂಪರೆಯ ತಳಹದಿಯಲ್ಲಿನ ಯಕ್ಷಗಾನ ಮುಂದುವರಿಯಬೇಕಾದರೆ, ಕಲಾವಿದರು ಪ್ರೇಕ್ಷಕರ ಮನೋಧರ್ಮವನ್ನು ಉನ್ನತೀಕರಿಸುವ ಪೌರಾಣಿಕ ಆಖ್ಯಾನಗಳಿಗೆ ಹೆಚ್ಚು ಮನ ಮಾಡಬೇಕು. ಇನ್ನು ಹೊಸ ಕಲಾವಿದರ ಪ್ರದರ್ಶನಗಳಿಗೆ ನಿರ್ದೇಶನದ ಅಗತ್ಯ ಇದ್ದೇ ಇದೆ. ಯಕ್ಷ ಗುರುಗಳು, ಯಕ್ಷ ಶಾಲೆಗಳು ಕೂಡಾ ಈ ನಿಟ್ಟಿನಲ್ಲೇ ವಿಚಾರ ಮಾಡಿದರೆ ಯಕ್ಷಗಾನದ ಆತ್ಮವಾದ ಪೌರಾಣಿಕ ಕಥಾನಕಗಳಿಗೆ ಹೊಸತನವನ್ನು ಕೊಟ್ಟು ಹೊಸ ಪ್ರೇಕ್ಷಕರನ್ನೂ ಸೆಳೆಯುವ ಸಾಧ್ಯತೆಗಳು ಇದ್ದೇ ಇವೆ.

ಇಲ್ಲದಿದ್ದಲ್ಲಿ, ವಿರಾಮ ಮುಖಪುಟ ಲೇಖನದಲ್ಲಿ ಲೇಖಕ ರವಿ ಮಾಡೋಡಿ ವ್ಯಕ್ತ ಪಡಿಸಿದಂತೆ, ಯಕ್ಷಗಾನದಲ್ಲಿ ಕಲೆ ಎಂಬುದು ಉಳಿದರೂ, ಅದರ ಆತ್ಮ ದೂರವಾಗುವ ದಿನ ದೂರವಿಲ್ಲ.

ವಿನಾಯಕ ಓಣಿ ವಿಘ್ನೇಶ್ವರ

ರವಿವಾರದ ಪುರವಣಿಯಲ್ಲಿ, ರವಿ ಮಡೋಡಿ, ಈ ಆಧುನಿಕ ಯುಗದಲ್ಲಿ, ಯಕ್ಷಗಾನದ ಕಲೆ ಉಳಿದರೂ 'ಅದರ ಆತ್ಮ ಉಳಿದೀತೆ?' ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಯಕ್ಷಗಾನ ಎಂಬುದು ಶತಮಾನಗಳಿಂದ ನಡೆದುಕೊಂಡು ಬರುತ್ತಿರುವ ಕಲೆ. ಇಲ್ಲಿ ಒಂದು ಕಲೆಗೆ ಅವಶ್ಯವಿರುವ ಎಲ್ಲ ಸಂಗತಿಗಳೂ ಮೇಳೈಸುತ್ತವೆ. ಸಾಹಿತ್ಯ, ಸಂಗೀತ, ನಟನೆ, ಭಾಷೆ, ಹಾವ - ಭಾವ, ಸಂಸ್ಕೃತಿ, ಸಂಸ್ಕಾರ, ಪೌರಾಣಿಕ ಕಥೆ, ವೇಷಭೂಷಣ ಎಲ್ಲವೂ ಇಲ್ಲಿದೆ.

ಈ ಯಕ್ಷಗಾನದ ಬಾಹ್ಯ ರೂಪ ಮತ್ತು ಆಂತರಿಕ ರೂಪ ಭಿನ್ನವೇ? ಇಂದು ಯಕ್ಷಗಾನವು ವಾಣೀಜ್ಯೀಕರಣದ ಭರದಲ್ಲಿ, ತನ್ನ ಆತ್ಮವನ್ನು ಕಳೆದುಕೊಳ್ಳುತ್ತಿದೆಯೇ ಎಂಬಲ್ಲೇ ಏನೋ ಅನುಮಾನ ಕಾಡುತ್ತಿರುವಂತೆ ಕಾಣುತ್ತಿದೆ.

ಹಿಂದೆಲ್ಲ ಕೇವಲ ಪೌರಾಣಿಕ ಸನ್ನಿವೇಶವನ್ನಷ್ಟೇ ಯಕ್ಷಗಾನದಲ್ಲಿ ಅಳವಡಿಸಿಕೊಂಡು, ಒಂದಿಷ್ಟು ನೀತಿ ಪಾಠವೂ ಇರುತ್ತಿತ್ತು. ಆದರೆ ಇಂದು, ಬದಲಾವಣೆ, ಆಧುನಿಕತೆ ಹೆಸರಿನಲ್ಲಿ ಸಾಮಾಜಿಕ ವಿಷಯಗಳನ್ನೂ ಎತ್ತಿಕೊಂಡು, ಜನರನ್ನು ರಂಜಿಸುತ್ತದೆ ಎಂಬಂತಹ ಪದ್ಯಗಳನ್ನೂ ಸೇರಿಸಿಕೊಂಡು, ಯಕ್ಷಗಾನದ ಧಾಟಿಯಲ್ಲೇ ಹಾಡಿ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿರುವುದನ್ನು ಕಂಡಾಗ, ಮೂಲ ಯಕ್ಷಗಾನವು ತನ್ನ ಆತ್ಮವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ ಅನಿಸುತ್ತಿದೆ. ಕೇವಲ ಯಕ್ಷಗಾನದ ವೇಷ ತೊಟ್ಟು, ಭಾಗವತ, ಮದ್ದಳೆ, ಚಂಡೆ ಬಡಿದು, ಸಿನಿಮಾದ ಪ್ರೇಮಕಥನವನ್ನು ಹೋಲುವ ಆಟವನ್ನು ಆಡಿದರೆ ಅದನ್ನೂ 'ಯಕ್ಷಗಾನ' ಎನ್ನಬಹುದೆ? ಜನರಿಗೆ ಬೇಗನೆ ಮನರಂಜನೆ ಸಿಗಬಹುದು ಎಂದು ತಿಳಿದು, ಅದರಂತೆ ಬದಲಾವಣೆ ಮಾಡಿಕೊಂಡು, ಒಂದು ಕಲೆ ತನ್ನ ನೆಲೆಯನ್ನೇ ಕಳೆದುಕೊಳ್ಳುವಂತಾದರೆ ಆ ಕಲೆಯ ಭವಿಷ್ಯ ಏನಾದೀತು? ಮನರಂಜನೆಯ ಹೆಸರಿನಲ್ಲಿ, ಏನೇನೋ ಅಸಂಬದ್ಧ ಸಂಭಾಷಣೆ ತುರುಕಿ, ಎರಡು ಅರ್ಥ ಬರುವ ಹಾಸ್ಯಗಳ ಸಾಲುಗಳನ್ನು ವೇದಿಕೆಯಲ್ಲೇ ಉಲಿದು, ಕೆಲವರನ್ನು ಖುಷಿ ಪಡಿಸಿ, ನಗೆ ಹೊರಡಿಸಿ, ಅನೇಕರ ಟೀಕೆಗೆ ಕಶರಣವಾಗುವಂತಹ ಸನ್ನಿವೇಶ ಸ್ವಾಗತಾರ್ಹವೆ ?

ಆತ್ಮವನ್ನು ಕಾಪಿಟ್ಟುಕೊಂಡು, ಕಲೆಯ ಮೂಲ ರೂಪ ಬದಲಾಗದೇ, ಒಂದಿಷ್ಟು ಮನೋರಂಜನೆ, ಇನ್ನೊಂದಿಷ್ಟು ನೀತಿ ಪಾಠ ಮತ್ತು ಮೂಲ ಪರಂಪರೆಯ ಮುಂದುವರಿಕೆ ಇರುವಂತಾದಾಗಲೇ ನಿಜವಾದ ಕಲೆಯ ಬೆಳವಣಿಗೆ ಸಾಧ್ಯ.

ಶಂಕರನಾರಾಯಣ ಭಟ್,
ಮಾಡಗೇರಿ



ಇಪ್ಪತ್ತು ರೂಪಾಯಿ ಡಾಕ್ಟರ್!

ಇಂದಿನ ದುಬಾರಿ ದಿನಗಳಲ್ಲಿ, ಕೇವಲ ಇಪ್ಪತ್ತು ರುಪಾಯಿ ಶುಲ್ಕ ಪಡೆದು, ರೋಗಿಗಳ ತಪಾಸಣೆ ನೀಡುವ ವೈದ್ಯರು, ಆದರ್ಶವನ್ನು ಪಾಲಿಸುವ ಧನ್ವಂತರಿ ಎನ್ನಬಹುದು!

» ಸುರೇಂದ್ರ ಪೈ, ಭಟ್ಕಳ

ಕೇರಳದ ಕಣ್ಣೂರಿನಲ್ಲಿ ಬಡವರಿಗೆ ಕೇವಲ 2 ರೂಪಾಯಿ ಶುಲ್ಕ ಪಡೆದು 5 ದಶಕಗಳ ಕಾಲ ಚಿಕಿತ್ಸೆ ನೀಡಿ '2 ರೂಪಾಯಿ ಡಾಕ್ಟರ್' ಎಂದು ಪ್ರಸಿದ್ಧಿ ಪಡೆದ ದಿ.ಡಾ. ಎ.ಕೆ. ರೈರು ಗೋಪಾಲ್ ಅವರ ಬಗ್ಗೆ ಹಲವರಿಗೆ ತಿಳಿದಿರಬಹುದು.

ಇಂತಹವರೇ ಒಬ್ಬರು ವೈದ್ಯರು ನಮ್ಮ ಕರ್ನಾಟಕದಲ್ಲಿದ್ದಾರೆ!

ಅವರೇ ಹೊಸದುರ್ಗ ತಾಲೂಕಿನ ಡಾ.ಇ ಎಸ್. ಬ್ರಹ್ಮರಾಜು. ಇಂದಿನ ದುಬಾರಿ ಜಗತ್ತಿನಲ್ಲೂ ಕೇವಲ ಇಪ್ಪತ್ತು ರೂಪಾಯಿ ಪಡೆದು ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲ ಬಡವರಿಗೆ ಆರೋಗ್ಯ ಸೇವೆಯನ್ನು ನೀಡುತ್ತಾ ಎಲ್ಲರಿಂದಲ್ಲೂ 'ಇಪ್ಪತ್ತು ರೂಪಾಯಿ ಡಾಕ್ಟರ್' ಎಂದು ಜನಮನ್ನಣೆಯನ್ನು ಪಡೆದ ಸರಳ, ಸಜ್ಜನ ಪ್ರತಿಭಾನ್ವಿತ ವೈದ್ಯರು ಇವರು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ತಮ್ಮದೇ ಆದ ಹೆಸರಿಲ್ಲದ ಚಿಕ್ಕ ಕ್ಲಿನಿಕ್ ನಡೆಸುವ ಇವರು ಫ್ಯಾಮಿಲಿ ಫಿಜಿಶಿಯನ್ ಆಗಿದ್ದಾರೆ. ಇವರ ಕ್ಲಿನಿಕ್‌ಗೆ ಬೋರ್ಡ್ ಇಲ್ಲ. ಕಾರಣ ಇವರು ನೀಡುವ ಆಪ್ತ ಜನಪರ ಆರೋಗ್ಯಸೇವೆಯೇ ಇವರ ಹೆಗ್ಗುರುತು. ಎಂ.ಬಿ.ಬಿ.ಎಸ್. ಪದವಿ ಪಡೆದ ಬಳಿಕ ತಮ್ಮ ಹುಟ್ಟೂರಾದ ಹೊಸದುರ್ಗದಲ್ಲಿ ತಮ್ಮದೇ ಚಿಕ್ಕ ಕ್ಲಿನಿಕ್ ನಡೆಸುತ್ತಾ ಸುತ್ತ ಮುತ್ತ ಹಳ್ಳಿಯ ಜನರ ಪಾಲಿಗೆ ವೈದ್ಯ ನಾರಾಯಣ ಎನಿಸಿಕೊಂಡರು. ರೋಗಿಯನ್ನು ಕೂಲಂಕಷವಾಗಿ ಪರೀಕ್ಷಿಸಿ ಔಷಧಿ ಬರೆದುಕೊಡಲು ಇವರು ಬರೋಬ್ಬರಿ 15 ರಿಂದ 20 ನಿಮಿಷ ತೆಗೆದುಕೊಳ್ಳುತ್ತಾರೆ. ಅವರು ರೋಗಿಯನ್ನು ಪ್ರೀತಿಯಿಂದ ಮಾತನಾಡಿಸಿ ,ಅವರ ಕೌನ್ಸಲಿಂಗ್ ಮಾಡುತ್ತಾ ಧೈರ್ಯ ತುಂಬಿ ಮನೆಯ ಮಗನಂತೆ, ಸ್ನೇಹಿತರಂತೆ ನಡೆದುಕೊಳ್ಳುತ್ತಾರೆ. ಒಂದು ವೇಳೆ ರೋಗಿಯ ಆರ್ಥಿಕ ಸ್ಥಿತಿ ಕಷ್ಟಕರವಾಗಿದ್ದರೆ ಅಂತಹವರಿಗೆ ಶಿವಮೊಗ್ಗ, ಬೆಂಗಳೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತೆ ಮಾರ್ಗದರ್ಶನ ಮಾಡುತ್ತಾರೆ. ಗಂಭೀರ ಹಾಗೂ ತುರ್ತು ಪರಿಸ್ಥಿತಿಯಲ್ಲಿ ತಮಗೆ ಗೊತ್ತಿರುವ ಆಪ್ತ ವೈದ್ಯರ ಬಳಿ ಕಳುಹಿಸಿ ಕಡಿಮೆ ಖರ್ಚಿನಲ್ಲಿ ಉತ್ತಮ ಚಿಕಿತ್ಸೆ ದೊರಕುವಂತೆ ನೋಡಿಕೊಳ್ಳುತ್ತಾರ. ರೋಗಿಗಳಿಗೆ ಅನಗತ್ಯವಾಗಿ ಆ ಟೆಸ್ಟ್, ಈ ಚೆಕಪ್ ಮಾಡಿಸಬೇಕು ಎಂದು ಬರೆದುಕೊಡುವುದಿಲ್ಲ, ಹಾಗಾಗಿ ಇವರ ಬಳಿ ಚಿಕಿತ್ಸೆ ಪಡೆಯಲು ಸಾಲು ಸಾಲು ಜನರು ಕಾದು ಕುಳಿತಿರುತ್ತಾರೆ.

ಜತೆಗೆ, ಇವರೊಬ್ಬ ಸರಳ, ಸಜ್ಜನ ವ್ಯಕ್ತಿತ್ವ ಹೊಂದಿದ ವೈದ್ಯರು. ವಿಶೇಷವೆಂದರೆ ಇವರು ಮೊಬೈಲ್ ಬಳಕೆಯಿಂದ ದೂರವಿದ್ದಾರೆ; ಹಾಗಾಗಿ ಇವರನ್ನು ಭೇಟಿ ಆಗಬೇಕೆಂದರೆ ಅವರ ಕ್ಲಿನಿಕ್ ಅಥವಾ ಮನೆಗೆ ಭೇಟಿ ನೀಡಬೇಕು.

ಓದುವ ಹವ್ಯಾಸ: ಇವರಿಗೆ ಓದುವ ಹವ್ಯಾಸವಿದೆ; ಪರಿಸರದ ಮೇಲೆ ಅಪಾರ ಪ್ರೀತಿ. ಪರಿಸರ, ವಿಜ್ಞಾನಕ್ಕೆ ಸಂಬಂಧಿಸಿದಂತೆ ಇರುವ ಎಲ್ಲಾ ಕನ್ನಡ ಪುಸ್ತಕಗಳನ್ನೂ ಓದಿದ್ದಾರೆ; ಸಂಗ್ರಹಿಸಿದ್ದಾರೆ. ಅವರ ಮನೆಯಲ್ಲೇ ಚಿಕ್ಕ ಗ್ರಂಥಾಲಯವೂ ಇದೆ.

ಇವರ ಆರೋಗ್ಯಸೇವೆಯನ್ನು ಗುರುತಿಸಿ ರೋಟರಿ ಕ್ಲಬ್ , ಜೈನ್ ಸಮಾಜ, ವೀರಶೈವ ಸಮಾಜ, ವೈದ್ಯಕೀಯ ಸಂಘ, ತಾಲೂಕು ಆಡಳಿತ ಸೇರಿದಂತೆ ಇನ್ನಿತರ 18 ಸ್ಥಳೀಯ ಸಂಘ ಸಂಸ್ಥೆಗಳು ಸನ್ಮಾನಿಸಿವೆ.

ಸಂತೃಪ್ತ ಜೀವನ: ಈ ವೈದ್ಯರು ಸರಳ ಜೀವನಕ್ಕೆ ಆದ್ಯತೆ ನೀಡುವವರು; ಮನೆಯಲ್ಲೂ ಸರಳ ಬದುಕು. ಅವರ ಪತ್ನಿಯಾದ ಜ್ವಾಲಾ ರೋಖಡೆ ಅವರೂ ಸರಳ ಜೀವನವನ್ನೇ ಇಷ್ಟಪಸುವವರು. 'ನಮ್ಮದು ಸರಳ ಜೀವನ. ಇರಲು ಸ್ವಂತ ಮನೆಯಿದೆ, ಎರಡು ಹೊತ್ತಿನ ಊಟಕ್ಕೇನು ತೊಂದರೆಯಿಲ್ಲ. ಕೇವಲ ಬಡವರು ಮಾತ್ರವಲ್ಲ, ಆರ್ಥಿಕವಾಗಿ ಸ್ಥಿತಿವಂತರೂ ಸಹ ಡಾಕ್ಟರ್ ಬಳಿ ತಪಾಸಣೆಗೆ ಬರುತ್ತಾರೆ. ಬಡವರಿಗೆ ಕಡಿಮೆ ಶುಲ್ಕ ಪಡೆದು ಚಿಕಿತ್ಸೆ ನೀಡಿದಾಗ, ಬಹಳ ತೃಪ್ತಿ. ಕೆಲವರು, ಶುಲ್ಕವಾದ 20 ರೂಪಾಯಿ ಸಹ ನೀಡದೆ ಹೋಗುವುದೂ ಉಂಟು; ಇನ್ನು ಕೆಲವರು ಹರಿದುಹೋದ ನೋಟು ನೀಡಿ, ಬೇರೆ ಹಣವಿಲ್ಲ ಎಂದು ಚಿಕಿತ್ಸೆ ಪಡೆದ ಉದಾಹರಣೆಗಳೂ ಇವೆ. ಅದೇನೇ ಇದ್ದರೂ, ತಮ್ಮ ಪತಿಯ ಆರೋಗ್ಯ ಸೇವೆಯು ಸಾವಿರಾರು ಬಡ ರೋಗಗಳಿಗೆ ನೆರವಾಗುತ್ತಿದ್ದು, ರೋಗಿಗಳ ಮುಖದಲ್ಲಿ ನೆಮ್ಮದಿಯನ್ನು ನೋಡುವುದೆ ಒಂಥರಾ ಖುಷಿ. ಜೀವನದಲ್ಲಿ ಹಣ ಸಂಪಾದನೆ ಮಾಡುವುದೇ ಮುಖ್ಯವಲ್ಲ. ಹಾಗೂ ನಾಲ್ಕು ಜನರಿಗೆ ಸೇವೆ ಮಾಡಿದಾಗ ಸಿಗುವ ತೃಪ್ತಿ ಹಣದಲ್ಲಿ ಸಿಗುವುದಿಲ್ಲ' ಎನ್ನುತ್ತಾರೆ, ಅವರ ಪತ್ನಿ.

ಖಾಸಗಿ ಆಸ್ಪತ್ರೆ ಎಂದಾಕ್ಷಣ ದುಬಾರಿ ಎಂಬ ಅಭಿಪ್ರಾಯ ಮೂಡುತ್ತಿರುವ ಇಂದಿನ ದಿನಗಳಲ್ಲಿ, ಕೇವಲ ಇಪ್ಪತ್ತು ರೂಪಾಯಿ ಶುಲ್ಕ ಪಡೆದು, ಸಂದರ್ಭೋಚಿತ ಚಿಕಿತ್ಸೆ ನೀಡುವ ಈ ವೈದ್ಯರು, ಜನಸಾಮಾನ್ಯರ ಆರೋಗ್ಯದ ಕುರಿತು ವಹಿಸುವ ಕಾಳಜಿ ಅಪಾರ. ಕಾರ್ಪೊರೇಟ್ ಆಸ್ಪತ್ರೆಗಳು, ದುಬಾರಿ ಆಧುನಿಕ ಚಿಕಿತ್ಸೆಗಳು ಇವುಗಳಿಂದಾಗಿ ಸದಾ ಸುದ್ದಿಯಲ್ಲಿರುವ ಇಂದಿನ ಆಧುನಿಕ ವೈದ್ಯಕೀಯ ಕ್ಷೇತ್ರದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಶುಲ್ಕ ಪಡೆದು ಚಿಕಿತ್ಸೆ ನೀಡುವ ಡಾ. ಬ್ರಹ್ಮರಾಜು ವಿಭಿನ್ನವಾಗಿ ನಿಲ್ಲುತ್ತಾರೆ.

ಕೈಬೆರಳುಗಳಿಂದ ಆಹಾರ ಸೇವಿಸುವುದು ಅನಾಗರಿಕ ಲಕ್ಷಣವಾ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಪ್ರಕಾಶ ಕೆ.ರಾವ್, ಬೆಂಗಳೂರು

- **ಭಟ್ರೇ, ನನಗೆ ವಾರದಲ್ಲಿ ಒಂದಾದರೂ ಡಿನ್ನರ್ ಪಾರ್ಟಿಗೆ ಆಮಂತ್ರಣ ಬರುತ್ತದೆ. ನನಗೆ ಸ್ಪೂನ್ ಮತ್ತು ಫೋರ್ಕ್‌ನಲ್ಲಿ ತಿಂದು ಅಭ್ಯಾಸವಿಲ್ಲ. ನಾನು ಕೈನೆಕ್ಕಿ, ಬೆರಳು ಚೀಪಿ ಊಟ ಮಾಡೋದು. ಇತ್ತೀಚೆಗೆ, ಪಾರ್ಟಿಗೆ ಕರೆದ ನನ್ನ ಸ್ನೇಹಿತನೊಬ್ಬ, ನಿನಗೆ ಟೇಬಲ್ ಮ್ಯಾನರ್ಸ್ ಇಲ್ಲ ಎಂದು ಬೈದುಬಿಟ್ಟ. ಕೈಬೆರಳುಗಳಿಂದ ಆಹಾರ ಸೇವಿಸುವುದು ಅನಾಗರಿಕ ಲಕ್ಷಣವಾ? ಈ ವಿಷಯದಲ್ಲಿ ನಿಮ್ಮ ಸಲಹೆ ಬೇಕು.**

– ಪ್ರಕಾಶ ಅವರೇ, ಈ ವಿಷಯದಲ್ಲಿ ಕೀಳರಿಮೆ ಪಡುವ ಅಗತ್ಯವಿಲ್ಲ. ಇದು ಬಹಳಷ್ಟು ಜನರಿಗೆ ಕಾಡುವ ಪ್ರಶ್ನೆ. ಹಾಗಾದರೆ ಕೈಯಲ್ಲಿ ಊಟ ಮಾಡುವುದು ಅನಾಗರಿಕವೇ?

ಖಂಡಿತ ಇಲ್ಲ. ಕೈಯಲ್ಲಿ ಊಟ ಮಾಡುವುದು ನಮ್ಮ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಆಯುರ್ವೇದದ ಪ್ರಕಾರ, ಆಹಾರವನ್ನು ಕೈಯಿಂದ ಸ್ಪರ್ಶಿಸಿದಾಗ ಜೀರ್ಣಕ್ರಿಯೆಗೆ ಬೇಕಾದ ಸಂಕೇತಗಳು ಮಿದುಳಿಗೆ ರವಾನೆಯಾಗುತ್ತವೆ. ಜಗತ್ತಿನ ಬಹುತೇಕ ಜನರು (ಏಷ್ಯಾ, ಆಫ್ರಿಕಾ, ಮಧ್ಯಪ್ರಾಚ್ಯ) ಇಂದಿಗೂ ಕೈಯಲ್ಲೇ ಊಟ ಮಾಡುತ್ತಾರೆ. ಆದ್ದರಿಂದ, ಇದು ಅನಾಗರಿಕವಲ್ಲ, ಇದು ಒಂದು ಸಂಸ್ಕೃತಿ.

ಹಾಗಾದರೆ ನಿಮ್ಮ ಸ್ನೇಹಿತ ಹೇಳಿದ್ದರಲ್ಲಿ ತಪ್ಪಿಲ್ಲವೇ? ನಿಮ್ಮ ಸ್ನೇಹಿತ ಟೇಬಲ್ ಮ್ಯಾನರ್ಸ್ ಇಲ್ಲ ಎಂದು ಹೇಳಲು ಕಾರಣ ನೀವು ಕೈಯಲ್ಲಿ ತಿನ್ನುತ್ತಿದ್ದೀರಿ ಎಂಬುದಕ್ಕಿಂತ, ನೀವು ಹೇಗೆ ತಿನ್ನುತ್ತಿದ್ದಿರಿ ಎಂಬುದು ಆಗಿರಬಹುದು. ಸಾರ್ವಜನಿಕವಾಗಿ ಅಥವಾ ಪಾರ್ಟಿಗಳಲ್ಲಿ ಊಟ ಮಾಡುವಾಗ ಕೆಲವು ಸೂಕ್ಷ್ಮಗಳನ್ನು ಗಮನಿಸಬೇಕಾಗುತ್ತದೆ.

ಉದಾಹರಣೆಗೆ, ಬೆರಳು ಚೀಪುವುದು ಅಥವಾ ಕೈ ನೆಕ್ಕುವುದು. ಮನೆಯಲ್ಲಿ ನಾವು ಬೆರಳು ಚೀಪಿ ತಿನ್ನುವುದು ಸಹಜ ಮತ್ತು ಅದು ರುಚಿಯೂ ಹೌದು. ಆದರೆ, ಸಾರ್ವಜನಿಕವಾಗಿ ಅಥವಾ ಪಾರ್ಟಿಗಳಲ್ಲಿ ಹೀಗೆ ಮಾಡುವುದು ನೋಡುಗರಿಗೆ ಮುಜುಗರ ಉಂಟುಮಾಡಬಹುದು. ಇದನ್ನು ಬ್ಯಾಡ್ ಮ್ಯಾನರ್ಸ್ ಎಂದು ಪರಿಗಣಿಸಲಾಗುತ್ತದೆ. ಊಟವನ್ನು ಕಲಸುವಾಗ ಅಥವಾ ಬಾಯಿಗೆ ಇಡುವಾಗ ಕೇವಲ ಬೆರಳುಗಳ ತುದಿಯನ್ನು ಮಾತ್ರ ಬಳಸಿ. ಅಂಗೈಗೆಲ್ಲ ಅನ್ನ ಅಥವಾ ಗ್ರೇವಿ ತಾಗದಂತೆ ನೋಡಿಕೊಳ್ಳಿ. ತಿನ್ನುವಾಗ 'ಚಪ್ ಚಪ್' ಎಂದು ಶಬ್ದ ಮಾಡುವುದು ಪಾರ್ಟಿಗಳಲ್ಲಿ ಒಳ್ಳೆಯದಲ್ಲ.

ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ?

ಪಾರ್ಟಿಗಳಲ್ಲಿ ಕೈಯಲ್ಲಿ ತಿನ್ನಲು ಹಿಂಜರಿಯಬೇಡಿ. ಆದರೆ, ಬೆರಳುಗಳನ್ನು ಬಾಯಿಯೊಳಗೆ ಹಾಕಿ ಚೀಪುವುದನ್ನು ಅಥವಾ ಶಬ್ದ ಮಾಡುವುದನ್ನು ನಿಲ್ಲಿಸಿ. ಊಟ ಮುಗಿದ ಮೇಲೆ ಟಿಶ್ಯೂ ಪೇಪರ್ ಅಥವಾ ನ್ಯಾಪ್ಕಿನ್ ಬಳಸಿ ಕೈ ಒರೆಸಿಕೊಳ್ಳಿ, ಆಮೇಲೆ ತೊಳೆಯಿರಿ. ಕೆಲವು ಆಹಾರಗಳನ್ನು (ಉದಾಹರಣೆಗೆ ಸೂಪ್, ಪಾಸ್ತಾ, ನೂಡಲ್ಸ್) ಕೈಯಲ್ಲಿ ತಿನ್ನಲು ಸಾಧ್ಯವಿಲ್ಲ. ಅಂಥ ಸಂದರ್ಭಗಳಲ್ಲಿ ಸ್ಪೂನ್ ಮತ್ತು ಫೋರ್ಕ್ ಬಳಸುವುದು ಅನಿವಾರ್ಯ.

ನಿಮಗೆ ಸ್ಪೂನ್-ಫೋರ್ಕ್ ಇಷ್ಟವಿಲ್ಲದಿದ್ದರೂ, ಬೇರೆ ದಾರಿಯಿಲ್ಲದ ಪರಿಸ್ಥಿತಿಗಾಗಿ (ಉದಾಹರಣೆಗೆ ವಿದೇಶಿ ಸ್ನೇಹಿತರ ಜತೆಗಿನ ಫಾರ್ಮಲ್ ಡಿನ್ನರ್) ಅವುಗಳನ್ನು ಹಿಡಿಯುವ ಮತ್ತು ಬಳಸುವ ಕನಿಷ್ಠ ವಿಧಾನವನ್ನು ಕಲಿಯುವುದು ಒಳ್ಳೆಯದು. ಇದು ನಿಮ್ಮ ವ್ಯಕ್ತಿತ್ವಕ್ಕೆ ಒಂದು ಹೆಚ್ಚುವರಿ ಕೌಶಲವಷ್ಟೇ ಹೊರತು, ನಿಮ್ಮ ಸಂಸ್ಕೃತಿಯನ್ನು ಬಿಟ್ಟಂತಲ್ಲ.

ಮುಂದಿನ ಬಾರಿ ಯಾರಾದರೂ ಹೀಗೆ ಕೇಳಿದರೆ, ನಗುನಗುತ್ತಲೇ ಹೇಳಿ – 'ನನಗೆ ಕೈಯಲ್ಲಿ ಊಟ ಮಾಡಿದರಷ್ಟೇ ಆತ್ಮತೃಪ್ತಿ ಸಿಗೋದು, ಆದರೆ ಪಾರ್ಟಿಯಲ್ಲಿ ಅಸಹ್ಯವಾಗದಂತೆ ಎಚ್ಚರವಹಿಸುತ್ತೇನೆ.' ನೀವು ಕೈಯಲ್ಲಿ ತಿನ್ನುವುದರ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳಬೇಡಿ. ಆದರೆ, ನಾವು ಹೋಗುವ ಜಾಗ ಮತ್ತು ಸಂದರ್ಭಕ್ಕೆ ತಕ್ಕಂತೆ ಸಣ್ಣಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಜಾಣತನದ ಲಕ್ಷಣ.

ಸಂದೀಪ ಹೊನ್ನಾಗರ, (ಇಮೇಲ್ ಮೂಲಕ)

- **ಭಟ್ರೇ, ನನ್ನ ತಂದೆಯವರು ಕಳೆದ ಅರವತ್ತೈದು ವರ್ಷಗಳಿಂದ ತಣ್ಣೀರು ಸ್ನಾನವನ್ನೇ ಮಾಡುತ್ತಿದ್ದಾರೆ. ಚಳಿಗಾಲ ಮತ್ತು ಮಳೆಗಾಲದಲ್ಲೂ ಅವರು ತಣ್ಣೀರು ಸ್ನಾನವನ್ನೇ ಮಾಡೋದು. ಆದರೆ ಮನೆಯಲ್ಲಿರುವ ಎಲ್ಲರೂ ಹಾಗೆ ಮಾಡಬೇಕೆಂದು ಬಯಸುತ್ತಾರೆ. ನನ್ನ ತಾಯಿ ಮತ್ತು ಅಣ್ಣ ಕೂಡ ಹಾಗೆ ಮಾಡುತ್ತಾರೆ. ಆದರೆ ನನಗೆ ಅದು ಸಾಧ್ಯವಾಗುತ್ತಿಲ್ಲ. ನಾನು ಆರು ವರ್ಷ ಹಾಸ್ಟೆಲ್‌ನಲ್ಲಿದ್ದೆ. ಈಗ ಮನೆಗೆ ಬಂದಿದ್ದೇನೆ. ಮನೆಯಲ್ಲಿ ತಣ್ಣೀರು ಸ್ನಾನವನ್ನೇ ಮಾಡಬೇಕು ಎಂದು ತಾಕೀತು ಮಾಡುತ್ತಾರೆ. ಈ ಚಳಿಗಾಲದಲ್ಲಿ ತಣ್ಣೀರು ಸ್ನಾನ ಅಂದ್ರೆ ಪ್ರಾಣ ಹೋದ ಅನುಭವ. ಆದರೆ ಮನೆಯಲ್ಲಿ ಎಲ್ಲರೂ ನನ್ನನ್ನು ಖಳನಾಯಕನಂತೆ ನೋಡುತ್ತಿದ್ದಾರೆ. ನನಗೆ ನಿಮ್ಮ ಮಾರ್ಗದರ್ಶನ ಬೇಕು.**

– ಸಂದೀಪ ಅವರೇ, ನಿಮ್ಮ ಸಂಕಟವನ್ನು ಅರ್ಥಮಾಡಿಕೊಳ್ಳಬಲ್ಲೆ. ಇದು ಕೇಳಲು ಚಿಕ್ಕ ವಿಷಯದಂತೆ ಕಂಡರೂ, ಅನುಭವಿಸುವವರಿಗೆ ಇದು ನಿಜವಾಗಿಯೂ ಚಿತ್ರಹಿಂಸೆಯೇ. ಮನೆಯ ಹಿರಿಯರ ಶಿಸ್ತು ಮತ್ತು ನಿಮ್ಮ ದೈಹಿಕ ಅನಾನುಕೂಲತೆಯ ನಡುವೆ ನೀವು ಸಿಕ್ಕಿಹಾಕಿಕೊಂಡಿದ್ದೀರಿ. ನೀವು ಖಳನಾಯಕನಲ್ಲ, ನೀವು ಕೇವಲ ಬೇರೆ ಅಭ್ಯಾಸವುಳ್ಳ ಮನುಷ್ಯ ಅಷ್ಟೇ. ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕೆಲವು ಪ್ರಾಯೋಗಿಕ ಮತ್ತು ರಾಜತಾಂತ್ರಿಕ (Diplomatic) ಮಾರ್ಗಗಳಿವೆ. ಮೊದಲನೆಯದಾಗಿ, ಅಭ್ಯಾಸಕ್ಕೂ ಮತ್ತು ದೈಹಿಕ ಸಾಮರ್ಥ್ಯಕ್ಕೂ ವ್ಯತ್ಯಾಸವಿದೆ. ನಿಮ್ಮ ತಂದೆಯವರು ಅರವತ್ತೈದು ವರ್ಷಗಳಿಂದ ಈ ರೂಢಿ ಇಟ್ಟುಕೊಂಡಿದ್ದಾರೆ. ಅವರ ದೇಹ ಅದಕ್ಕೆ ಒಗ್ಗಿಕೊಂಡಿದೆ. ನೀವು ಆರು ವರ್ಷ ಹಾಸ್ಟೆಲ್‌ನಲ್ಲಿದ್ದಾಗ ಬಿಸಿ ನೀರಿಗೆ ಅಥವಾ ಸಾಮಾನ್ಯ ತಾಪಮಾನದ ನೀರಿಗೆ ಒಗ್ಗಿಕೊಂಡಿರುತ್ತೀರಿ. ಏಕಾಏಕಿ ಕೊರೆಯುವ ಚಳಿಯಲ್ಲಿ ತಣ್ಣೀರು ಹಾಕಿಕೊಂಡರೆ ದೇಹಕ್ಕೆ ಆಘಾತ (Cold Shock) ಆಗುತ್ತದೆ. ಇದನ್ನು ನಿಮ್ಮ ಮನೆಯವರಿಗೆ ವಿವರಿಸಿ ಹೇಳಿ. ನಾನು ಬೇಡ ಎನ್ನುತ್ತಿಲ್ಲ, ಆದರೆ ನನ್ನ ದೇಹಕ್ಕೆ ಅಪ್ಪನ ಹಾಗೆ ತಾಕತ್ತು ಅಥವಾ ರೂಢಿ ಇಲ್ಲ ಎಂದು ವಿನಯದಿಂದಲೇ ಹೇಳಿ. ಎರಡನೆಯದಾಗಿ, ಆರೋಗ್ಯದ ನೆಪ ಹೇಳಿ (ಸ್ವಲ್ಪ ಜಾಣತನ ಪ್ರದರ್ಶಿಸಿ). ನೇರವಾಗಿ ನನಗೆ ಆಗಲ್ಲ ಎಂದರೆ ಅದು ಸೋಮಾರಿತನ ಅಥವಾ ಅಹಂಕಾರದಂತೆ ಕಾಣಬಹುದು. ಅದರ ಬದಲು, 'ನನಗೆ ಈ ಚಳಿಯಲ್ಲಿ ತಣ್ಣೀರು ಸ್ನಾನ ಮಾಡಿದರೆ ತಲೆನೋವು, ಸೈನಸ್ ಅಥವಾ ಜ್ವರ ಬರುವ ಲಕ್ಷಣಗಳಿವೆ. ನಾನು ಹುಷಾರು ತಪ್ಪಿದರೆ ನಿಮಗೇ ಕಷ್ಟವಾಗುತ್ತದೆ. ನನ್ನ ಆರೋಗ್ಯದ ದೃಷ್ಟಿಯಿಂದ ಚಳಿಗಾಲ ಮುಗಿಯುವವರೆಗಾದರೂ ಸ್ವಲ್ಪ ಉಗುರು ಬೆಚ್ಚಗಿನ ನೀರು ಬಳಸಲು ಅನುಮತಿ ಕೊಡಿ' ಎಂದು ಕೇಳಿ.

ಮೂರನೆಯದಾಗಿ, ನಮ್ಮ ಹಿರಿಯರಿಗೆ ಶಾಸ್ತ್ರ ಅಥವಾ ಆಯುರ್ವೇದದ ಮಾತು ಹೇಳಿದರೆ ಬೇಗ ಅರ್ಥವಾಗುತ್ತದೆ. ಆಯುರ್ವೇದದ ಪ್ರಕಾರ, ತಲೆಗೆ ತಣ್ಣೀರು, ಮೈಗೆ ಬಿಸಿನೀರು ಶ್ರೇಷ್ಠ ಎಂದು ಹೇಳಲಾಗುತ್ತದೆ. ಮೈಗೆ ತೀರಾ ತಣ್ಣೀರು ಹಾಕಿದರೆ ಸ್ನಾಯುಗಳು ಬಿಗಿದುಕೊಳ್ಳುತ್ತವೆ. 'ನಾನು ತಲೆಗೆ ತಣ್ಣೀರು ಹಾಕಿಕೊಳ್ಳುತ್ತೇನೆ, ಆದರೆ ಮೈಗೆ ಸ್ವಲ್ಪ ಬೆಚ್ಚಗಿನ ನೀರು ಹಾಕಿಕೊಳ್ಳುತ್ತೇನೆ, ಇದು ಶಾಸ್ತ್ರ ಸಮ್ಮತವಂತೆ' ಎಂದು ಹೇಳಿ ನೋಡಿ. ಅವರನ್ನು ಸಮಾಧಾನಪಡಿಸಲು, ನಾನು ತಕ್ಷಣ ಪೂರ್ತಿ ತಣ್ಣೀರು ಸ್ನಾನ ಮಾಡಲು ಆಗುವುದಿಲ್ಲ, ಮೊದಲು ಉಗುರು ಬೆಚ್ಚಗಿನ ನೀರಿನಿಂದ ಶುರು ಮಾಡುತ್ತೇನೆ, ಕ್ರಮೇಣ ನೀರಿನ ತಾಪಮಾನ ಕಡಿಮೆ ಮಾಡುತ್ತಾ ಹೋಗುತ್ತೇನೆ ಎಂದು ಮಧ್ಯಮ ಮಾರ್ಗವನ್ನು ಸೂಚಿಸಿ.

ನಾಲ್ಕನೆಯದಾಗಿ, ಸ್ನಾನ ಅನ್ನೋದು ಶಿಕ್ಷೆಯಲ್ಲ, ಹಿತವಾದ ಅನುಭವ. ಸ್ನಾನ ಮಾಡುವುದು ದೇಹ ಮತ್ತು ಮನಸ್ಸನ್ನು ಲವಲವಿಕೆಯಿಂದ ಇಡಲು. ಸ್ನಾನದ ಹೆಸರಿನಲ್ಲಿ ನೀವು ನಡುಗುತ್ತಾ, ಪ್ರಾಣ ಹಿಂಡಿದ ಅನುಭವ ಪಡೆಯುತ್ತಿದ್ದರೆ, ಆ ಸ್ನಾನಕ್ಕೆ ಅರ್ಥವಿಲ್ಲ. ಮನೆಯವರ ಒತ್ತಾಯಕ್ಕೆ ಮಣಿದು ಕಾಯಿಲೆ ಬೀಳುವುದಕ್ಕಿಂತ, ಸ್ವಲ್ಪ ಗಟ್ಟಿಯಾಗಿ (ಆದರೆ ಗೌರವದಿಂದ), 'ಅಪ್ಪಾ, ನಿಮ್ಮ ಶಿಸ್ತಿನ ಬಗ್ಗೆ ನನಗೆ ಗೌರವವಿದೆ. ಆದರೆ ನನ್ನ ದೇಹಕ್ಕೆ ಇದು ಹೊಂದಿಕೊಳ್ಳುತ್ತಿಲ್ಲ. ದಯವಿಟ್ಟು ನನ್ನನ್ನು ನನ್ನಿಷ್ಟದಂತೆ ಸ್ನಾನ ಮಾಡಲು ಬಿಡಿ' ಎಂದು ನಿರ್ಧಾರ ಹೇಳುವುದು ಒಳಿತು.

ಅಷ್ಟಕ್ಕೂ, ಚಳಿಗಾಲದಲ್ಲಿ ತಣ್ಣೀರು ಸ್ನಾನ ಮಾಡುವುದು ಸಾಧನೆಯೂ ಅಲ್ಲ, ಬಿಸಿನೀರು ಸ್ನಾನ ಮಾಡುವುದು ಅಪರಾಧವೂ ಅಲ್ಲ. ಅದು ಅವರವರ ದೇಹದ ಅನುಕೂಲ. ಆದ್ದರಿಂದ ಕೀಳರಿಮೆ ಬಿಟ್ಟುಬಿಡಿ. ಬಿಸಿನೀರು ಸಿಗದೇ ಇದ್ದರೆ, ಕನಿಷ್ಠ ಪಕ್ಷ ನೀರು ಕೊರೆಯದಂತೆ ಸ್ವಲ್ಪ ಬಿಸಿ ನೀರು ಬೆರೆಸಿ ಸ್ನಾನ ಮಾಡಿ. ಮನೆಯವರ ಮಾತಿಗಿಂತ ನಿಮ್ಮ ದೇಹದ ಆರೋಗ್ಯ ಮುಖ್ಯ.

ಸುಜಯಾ ಕೊಣ್ಣೂರು, ವಿದ್ಯಾಮಾನ್ಯನಗರ

- **ಭಟ್ರೇ, ನೀವು ಇಷ್ಟೆಲ್ಲ ದೇಶಗಳನ್ನು ಸುತ್ತಿ, ಅಲ್ಲಿಯ ಸ್ವಚ್ಛತೆ ಬಗ್ಗೆ, ಜನಜೀವನದ ಬಗ್ಗೆ ಬರೆಯುತ್ತೀರಲ್ಲ, ಅದರಿಂದ ನಮ್ಮ ದೇಶದಲ್ಲಿ, ಬೇಡ ಕೊನೆಗೆ ನಮ್ಮ ರಾಜ್ಯದಲ್ಲಿ ನಿಮ್ಮ ಬರವಣಿಗೆಯಿಂದ ಏನಾದ್ರೂ ಪರಿಣಾಮ ಆಗಿದೆಯೇ? ಮುಖ್ಯವಾಗಿ ಸ್ವಚ್ಛತೆ ಬಗ್ಗೆ ಯಾವುದಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?**

– ಸುಜಯಾ ಅವರೇ, ಇದು ಬಹಳ ನೇರವಾದ ಮತ್ತು ಅಷ್ಟೇ ಪ್ರಸ್ತುತವಾದ ಪ್ರಶ್ನೆ. ಒಬ್ಬ ಲೇಖಕನಾಗಿ ನಿಮ್ಮ ಈ ಪ್ರಶ್ನೆಯಲ್ಲಿರುವ ಕಾಳಜಿಯನ್ನು ನಾನು ಗೌರವಿಸುತ್ತೇನೆ.

ಇದಕ್ಕೆ ನನ್ನ ಪ್ರಾಮಾಣಿಕ ಅನಿಸಿಕೆಯನ್ನು ಹೇಳುತ್ತೇನೆ, ಕೇಳಿ. ಬರವಣಿಗೆ ಅಂದ್ರೆ, ಕಸ ಗುಡಿಸುವುದಿಲ್ಲ, ಆದರೆ ಕಸದ ಬಗ್ಗೆ ಅರಿವು ಮೂಡಿಸುತ್ತದೆ. ನನ್ನ ಅಥವಾ ಬೇರೆ ಯಾವ ಲೇಖಕರ ಬರವಣಿಗೆಯಿಂದ ರಾತ್ರೋರಾತ್ರಿ ರಸ್ತೆಗಳು ಸ್ವಚ್ಛವಾಗಿಲ್ಲ ಎಂಬುದು ಸತ್ಯ. ಲೇಖನಿ ಹಿಡಿದವನು ಪೊರಕೆ ಹಿಡಿಯಲು ಸಾಧ್ಯವಿಲ್ಲ, ಆದರೆ ಪೊರಕೆ ಹಿಡಿಯುವವರ ಮತ್ತು ಕಸ ಹಾಕುವವರ ಮನಸ್ಸನ್ನು ತಟ್ಟಲು ಸಾಧ್ಯ. ನನ್ನ ಬರಹ ಓದಿದ ನೂರು ಜನರಲ್ಲಿ, ಕನಿಷ್ಠ ಹತ್ತು ಜನರಾದರೂ ರಸ್ತೆಯಲ್ಲಿ ಕಸ ಬಿಸಾಕುವ ಮುನ್ನ, 'ಛೇ! ವಿದೇಶದಲ್ಲಿ ಜನ ಎಷ್ಟು ಶಿಸ್ತಿನಿಂದ ಇದ್ದಾರೆ, ನಾವು ಯಾಕೆ ಹೀಗಾಡಬೇಕು?' ಎಂದು ಒಂದು ಕ್ಷಣ ಯೋಚಿಸಿ, ಕಸವನ್ನು ಜೇಬಿನಲ್ಲಿಟ್ಟುಕೊಂಡು ಮನೆಗೆ ತಂದಿದ್ದರೆ, ಅಲ್ಲಿಗೆ ನನ್ನ ಬರವಣಿಗೆ ಸಾರ್ಥಕ ಎಂದು ನಾನು ಭಾವಿಸುತ್ತೇನೆ.

ನಾವು ಬಾವಿಯೊಳಗಿನ ಕಪ್ಪೆಯಂತಿರಬಾರದು. ನಮ್ಮದೇ ಶ್ರೇಷ್ಠ ಎಂಬ ಭ್ರಮೆಯಲ್ಲಿದ್ದರೆ ನಾವು ಸುಧಾರಿಸುವುದಿಲ್ಲ. ಬೇರೆ ದೇಶಗಳಲ್ಲಿ ಎಷ್ಟರಮಟ್ಟಿಗೆ ಸ್ವಚ್ಛತೆ ಇದೆ, ಅಲ್ಲಿನ ಜನ ಸಾಲುಗಟ್ಟಿ ನಿಲ್ಲುವ ಶಿಸ್ತು ಹೇಗಿದೆ ಎಂಬುದನ್ನು ಬರೆದಾಗ ಮಾತ್ರ, ಇಲ್ಲಿನ ಜನರಿಗೆ ಓಹ್! ನಾವು ಹೀಗೂ ಬದುಕಲು ಸಾಧ್ಯವಿದೆಯಲ್ಲ ಎಂಬ ಕನಸು ಅಥವಾ ಕಲ್ಪನೆ ಬರುತ್ತದೆ. ಆ ಕಲ್ಪನೆಯೇ ಬದಲಾವಣೆಯ ಮೊದಲ ಮೆಟ್ಟಿಲು. ಬದಲಾವಣೆ ನಿಧಾನಗತಿಯಲ್ಲಿ ಆಗುತ್ತಿದೆ. ಇಂದು ಮೈಸೂರು, ಇಂದೋರ್ ಅಥವಾ ಮಂಗಳೂರಿನಂಥ ನಗರಗಳು ಸ್ವಚ್ಛತೆಯಲ್ಲಿ ಮುಂದಿರಲು ಕಾರಣ, ಅಲ್ಲಿನ ಜನರಿಗೆ ಸ್ವಚ್ಛತೆಯ ಬಗ್ಗೆ ಇರುವ ಜಾಗೃತಿ. ಈ ಜಾಗೃತಿ ಮೂಡಿದ್ದು ಪ್ರಪಂಚ ಸುತ್ತಿದವರು ಬರೆದ ಅನುಭವಗಳಿಂದ ಮತ್ತು ಮಾಧ್ಯಮಗಳ ವರದಿಗಳಿಂದ. ಸರಕಾರಗಳು ಸ್ವಚ್ಛ ಭಾರತದಂಥ ಯೋಜನೆ ತರಲು ಪರೋಕ್ಷವಾಗಿ ಇಂಥ ಜಾಗತಿಕ ಹೋಲಿಕೆಗಳೇ ಕಾರಣ.

ಲೇಖಕನ ಕೆಲಸ ಸಮಾಜಕ್ಕೆ ಕನ್ನಡಿ ಹಿಡಿಯುವುದು. ಕನ್ನಡಿಯಲ್ಲಿ ಮುಖದ ಮೇಲಿನ ಮಸಿ ಕಂಡರೆ, ಕನ್ನಡಿ ಒರೆಸಬಾರದು, ಮುಖ ತೊಳೆದುಕೊಳ್ಳಬೇಕು. ನನ್ನ ಕೆಲಸ ಮಸಿ ಇದೆ ಎಂದು ತೋರಿಸುವುದು, ಮುಖ ತೊಳೆಯಬೇಕಾದ್ದು ಸಮಾಜ ಮತ್ತು ವ್ಯವಸ್ಥೆ. ಕೊನೆಯದಾಗಿ, ನನ್ನ ಬರಹದಿಂದ ರಾಜ್ಯ ಬದಲಾಗಿಲ್ಲದೇ ಇರಬಹುದು, ಆದರೆ ಓದಿದ ಒಬ್ಬ ವ್ಯಕ್ತಿಯ ಮನಸ್ಥಿತಿ ಬದಲಾಗಿದ್ದರೂ ಅದು ದೊಡ್ಡ ಗೆಲುವೇ ಎಂದು ನಂಬಿದವನು ನಾನು. ದೇಶ ಬದಲಾಗುವುದು ಮಣ್ಣಿನಿಂದಲ್ಲ, ಮನುಷ್ಯರ ಮನಸ್ಸಿನಿಂದ.

ವೇದಪ್ರಕಾಶ ಶರ್ಮ, ಶಿವಮೊಗ್ಗ

- **ಸಂಪಾದಕರೇ, ನನ್ನ ಮಗ ಅಂತಿಮ ವರ್ಷದ ಡಿಗ್ರಿ ಓದುತ್ತಿದ್ದಾನೆ. ಆದರೆ ಬೆಳಗ್ಗೆ ಎದ್ದ ತಕ್ಷಣ ಚಾದರ ಮಡಚುವುದಿಲ್ಲ, ಹಾಸಿಗೆಯನ್ನು ನೀಟಾಗಿ ಇಡುವುದಿಲ್ಲ. ಸ್ನಾನಕ್ಕೆ ಹೋದರೆ ಬಾತರೂಮ್ ಗಲೀಜಾಗಿರುತ್ತದೆ. ನಾನು ಎಷ್ಟೇ ಹೇಳಿದರೂ ಕೇಳಿಸಿಕೊಂಡು ಸುಮ್ಮನಾಗುತ್ತಾನೆ, ಆದರೆ ಹೇಳಿದ್ದನ್ನು ಆಚರಣೆಗೆ ತರುವುದಿಲ್ಲ. ಅವನನ್ನು ಸರಿ ದಾರಿಗೆ ತರುವುದು ಹೇಗೆ ಎಂಬುದೇ ತಿಳಿಯುತ್ತಿಲ್ಲ. ನಿಮ್ಮ ಸಲಹೆ ಬೇಕಿತ್ತು.**

– ಶರ್ಮ ಅವರೇ, ನಿಮ್ಮ ಸಮಸ್ಯೆ ನನಗೆ ಅರ್ಥವಾಗುತ್ತಿದೆ. ಇದು ಬಹುತೇಕ ಮನೆಗಳಲ್ಲಿ, ಅದರಲ್ಲೂ ಗಂಡುಮಕ್ಕಳಿರುವ ಮನೆಯಲ್ಲಿ ನಡೆಯುವ ಸಾಮಾನ್ಯ ವಿದ್ಯಮಾನ. ನಿಮ್ಮ ಮಗ ಈಗ ಅಂತಿಮ ವರ್ಷದ ಡಿಗ್ರಿ ಎಂದರೆ ಸುಮಾರು ಇಪ್ಪತ್ತು ವರ್ಷದ ಯುವಕ. ಈ ವಯಸ್ಸಿನಲ್ಲಿ ಅವರಿಗೆ ಹೇಳಿ ಮಾಡಿಸುವುದು ಕಷ್ಟ, ಆದರೆ ಅಸಾಧ್ಯವಲ್ಲ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಎಂಬ ಗಾದೆ ಇದೆ. ಆದರೆ ಈಗ ಅವನು ಮರವಾಗಿ ಬೆಳೆದಿದ್ದಾನೆ, ಬಗ್ಗಿಸಲು ಹೋದರೆ ಮುರಿಯುವ ಸಾಧ್ಯತೆ ಹೆಚ್ಚು. ಆದ್ದರಿಂದ ಇಲ್ಲಿ ತಂತ್ರವನ್ನು (Strategy) ಬದಲಿಸಬೇಕಾಗುತ್ತದೆ. ನಿಮ್ಮ ಮಗನನ್ನು ದಾರಿಗೆ ತರಲು ಕೆಲವು ಸೂತ್ರಗಳನ್ನು ಬಳಸಬಹುದೇನೋ ಎಂದೆನಿಸುತ್ತದೆ.

ನೀವು ಎಷ್ಟೇ ಬೈದರೂ, ಕೊನೆಗೆ ಹಾಸಿಗೆಯನ್ನು ಮಡಚಿಡುವವರು, ಬಾತ್ ರೂಮ್ ಸ್ವಚ್ಛಗೊಳಿಸುವವರು ನೀವೇ ಆಗಿದ್ದರೆ, ಅವನಿಗೆ ಬದಲಾಗುವ ಅವಶ್ಯಕತೆಯೇ ಇರುವುದಿಲ್ಲ. ಅಮ್ಮ ಬೈತಾಳೆ, ಆಮೇಲೆ ಅವಳೇ ಕ್ಲೀನ್ ಮಾಡ್ತಾಳೆ ಎಂಬುದು ಅವನಿಗೆ ಚೆನ್ನಾಗಿ ಗೊತ್ತಿದೆ. ಹಾಗಾದರೆ ಏನು ಮಾಡಬೇಕು? ಇಂದಿನಿಂದ ಅವನು ಹಾಸಿಗೆ ಮಡಚಿಲ್ಲವೆಂದರೆ, ಅದನ್ನು ಹಾಗೆಯೇ ಬಿಡಿ. ಸಂಜೆ ಅವನು ಬಂದು ಮಲಗುವಾಗ ಅದು ಹಾಗೆಯೇ ಗಲೀಜಾಗಿ ಇರಲಿ. ಎರಡು ದಿನ ಕಷ್ಟವಾಗಬಹುದು, ಮೂರನೇ ದಿನ ಅವನೇ ಮಡಚಬಹುದು. ಅವನ ಕೋಣೆಯ ಬಾಗಿಲು ಹಾಕಿಬಿಡಿ, ಆ ಗಲೀಜು ನಿಮಗೆ ಕಾಣಿಸದಿದ್ದರೆ ನಿಮಗೂ ಕೋಪ ಬರುವುದಿಲ್ಲ.

ಬಾತ್‌ರೂಮ್ ಗಲೀಜು ಮಾಡಿದ್ದು ಕಂಡ ತಕ್ಷಣ, ಅವನು ಎಷ್ಟೇ ಬ್ಯುಸಿ ಇದ್ದರೂ ಅಥವಾ ಹೊರಗೆ ಹೋಗಲು ರೆಡಿಯಾಗಿದ್ದರೂ, ಅವನನ್ನು ಕರೆದು, 'ಇದನ್ನು ಈಗಲೇ ಕ್ಲೀನ್ ಮಾಡು, ಇಲ್ಲದಿದ್ದರೆ ಮುಂದಿನವರಿಗೆ ಸ್ನಾನಕ್ಕೆ ಹೋಗಲು ಆಗುವುದಿಲ್ಲ' ಎಂದು ಶಾಂತವಾಗಿ ಆದರೆ ಖಡಕ್ ಆಗಿ ಹೇಳಿ. ನೀವು ಬೈಯುತ್ತಾ ಕ್ಲೀನ್ ಮಾಡಲು ಹೋಗಬೇಡಿ. ಅವನು ಕ್ಲೀನ್ ಮಾಡುವವರೆಗೂ ಅಲ್ಲಿಂದ ಕದಲಬೇಡಿ.

ನಿಮ್ಮ ಮಗನಿಗೆ ಉಪದೇಶ ಬೇಡ, ವಾಸ್ತವ ತಿಳಿಸಿ. ಈಗ ಅವನು ಚಿಕ್ಕ ಹುಡುಗನಲ್ಲ. ಅವನಿಗೆ ಒಳ್ಳೆಯವನಾಗು ಎಂದು ಹೇಳಿದರೆ ಕೆಲಸವಾಗಲ್ಲ. ಅದರ ಬದಲು, 'ನೋಡು ಮಗನೇ, ಮುಂದೆ ಕೆಲಸಕ್ಕೆ ಸೇರಿದಾಗ ಪಿಜಿಯಲ್ಲೋ ಅಥವಾ ರೂಮ್ ಮಾಡಿಕೊಂಡೋ ಇರಬೇಕಾಗುತ್ತದೆ. ಅಲ್ಲಿ ನಿನ್ನ ಗಲೀಜನ್ನು ಯಾರೂ ಸಹಿಸುವುದಿಲ್ಲ. ಅಥವಾ ಮುಂದೆ ಮದುವೆಯಾದಾಗ ನಿನ್ನ ಹೆಂಡತಿ ಇದನ್ನು ಖಂಡಿತ ಒಪ್ಪುವುದಿಲ್ಲ. ಅವಾಗ ಅವಮಾನ ಆಗೋದು ನಿನಗೆ. ಈಗಲೇ ಕಲಿತುಕೊ, ಇದು ಜೀವನ ಕೌಶಲ' ಎಂದು ಸ್ನೇಹಿತನಂತೆ ತಿಳಿಹೇಳಿ.

ಅವನು ಎಂದಾದರೂ ಒಮ್ಮೆ (ವರ್ಷಕ್ಕೊಮ್ಮೆಯಾದರೂ) ಹಾಸಿಗೆ ಮಡಚಿದರೆ, ವಾವ್! ರೂಮ್ ಎಷ್ಟು ಚೆನ್ನಾಗಿ ಕಾಣಿಸ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿ. ಹಾಗೆಯೇ, ಬೇರೆ ಯಾರಾದರೂ ಶಿಸ್ತಿನಿಂದ ಇರುವವರ ಉದಾಹರಣೆಯನ್ನು (ಅವನಿಗೆ ಇಷ್ಟವಾಗುವವರನ್ನು ಮಾತ್ರ) ಕೊಡಿ.

ಕೊನೆಗೊಂದು ಮಾತು ಹೇಳುತ್ತೇನೆ. ಗಂಡು ಮಕ್ಕಳಿಗೆ ಜವಾಬ್ದಾರಿ ಬರುವುದು ಅವರು ಮನೆಯಿಂದ ಹೊರಗೆ ಹೋಗಿ ಸ್ವತಂತ್ರವಾಗಿ ಬದುಕಲು ಕಲಿತಾಗ ಮಾತ್ರ. ಅಲ್ಲಿಯವರೆಗೂ ತಾಯಿಯ ಪ್ರೀತಿಯ ಅಡಿಯಲ್ಲಿ ಸ್ವಲ್ಪ ಸೋಮಾರಿತನ ಇದ್ದೇ ಇರುತ್ತದೆ. ನೀವು ಚಿಂತೆ ಬಿಡಿ, ಅವನಿಗೆ ಸ್ವಲ್ಪ ಸಮಯ ಕೊಡಿ ಮತ್ತು ನಿಮ್ಮ ಸೇವೆಯನ್ನು ನಿಲ್ಲಿಸಿ. ಹಸಿವಾದಾಗ ಅಡುಗೆ ಮಾಡಿಕೊಳ್ಳುವವನು, ಗಲೀಜಾದಾಗ ಸ್ವಚ್ಛ ಮಾಡಿಕೊಳ್ಳುವುದನ್ನೂ ಕಲಿಯುತ್ತಾನೆ!

ನಮಿತಾ, (ಇಮೇಲ್ ಮೂಲಕ)

- **ಸಾರ್, ನಿಮಗೆ ಸಂಪಾದಕರೇ ಎಂದು ಕರೆಯಲೇ, ಭಟ್ರೇ ಎಂದು ಕರೆಯಲೇ? ನಿಮಗೆ ಏನಂತ ಕರೆದರೆ ಇಷ್ಟ? ದಯವಿಟ್ಟು ಹೇಳಿ.**

– ನಮಿತಾ ಅವರೇ, ಭಟ್ರೇ ಅಂದ್ರೆ ದಕ್ಷಿಣೆ ಕೊಡಬೇಕಾಗುತ್ತೆ, ಸಂಪಾದಕರೇ ಅಂದ್ರೆ ಚಂದಾ (subscription) ಕಟ್ಟಬೇಕಾಗುತ್ತೆ. ಅದಕ್ಕೆ ಸುಮ್ಮನೆ ಗುರು ಅಂದುಬಿಡಿ. ಖರ್ಚಿಲ್ಲದೆ ಪುಕ್ಸಟ್ಟೆ ಸಲಹೆ ಕೊಡ್ತೀನಿ!

ಇವೆಲ್ಲಾ ಬೇಕಿಲ್ಲವೇ ನಮ್ಮ ಮುಂದಿನ ತಲೆಮಾರಿಗೆ?

← ಮೊದಲಪುಟದಿಂದ

ಉಪಾಹಾರಕ್ಕೆ ಹಪ್ಪಳ!

ಹಲಸಿನ ಕಾಯಿ ಬಲಿತ ನಂತರ, ತೊಳೆಗಳನ್ನು ಬೇಯಿಸು ಹಪ್ಪಳ ತಯಾರಿಸುವುದು ಎಲ್ಲರಿಗೂ ಗೊತ್ತು. ಹಲಸಿನ ಹಣ್ಣಿನಿಂದಲೂ ಹಪ್ಪಳ ತಯಾರಿಸುವುದುಂಟು. ಜಾಸ್ತಿ ಹಪ್ಪಳಗಳನ್ನು ಮಾಡಿಟ್ಟುಕೊಂಡು, ಮಳೆಗಾಲದ ಕಷ್ಟದ ದಿನಗಳಲ್ಲಿ ಬೆಳಗಿನ ಉಪಾಹಾರದ ಸ್ವರೂಪದಲ್ಲಿ ಹಪ್ಪಳಗಳನ್ನು ಸುಟ್ಟು ತಿನ್ನುವ ಪದ್ಧತಿಯೂ ಇತ್ತು! ಹಲಸಿನ ಬೀಜಗಳನ್ನು ಸುಟ್ಟು ತಿಂದರೆ ರುಚಿಕರ. ಅವುಗಳನ್ನು ಚೆನ್ನಾಗಿ ಅರೆದು, ಸಿಹಿ ರೊಟ್ಟಿಯನ್ನೂ ಮಾಡುವುದುಂಟು. ಹಲಸಿನ ಕಾಯಿ ಪಲ್ಯ ತಿಂದರೆ ಹಸಿವು ದೂರ; ಜತೆಗೆ, ಮಧುಮೇಹದವರಿಗೆ ಸಕ್ಕರೆ ನಿಯಂತ್ರಣಕ್ಕೆ ಸಹಕಾರಿ. ಹಲಸಿನ ಹಣ್ಣಿನ ಮುಳುಕ, ಪಾಯಸ ಮೊದಲಾದ ನಾನಾ ತಿನಿಸುಗಳಿವೆ. ಹಲಸಿನ ಹಣ್ಣಿನ ರುಚಿ ಎಲ್ಲರಿಗೂ ಗೊತ್ತು; ಆದರೆ, ತರಕಾರಿಯಾಗಿ ಹಲಸು, ಕೇವಲ ಕರಾವಳಿ ಮತ್ತು ಮಲೆನಾಡಿನ ಜನರಿಗೆ ಮಾತ್ರ ಗೊತ್ತು. ಇದೇಕೆ ಹೀಗೆ?

ಹಲಸಿನ ಮರವು ಪೀಠೋಪಕರಣಗಳಿಗೆ ಪ್ರಶಸ್ತ; ಬಾಗಿಲು, ಕಿಟಕಿ ತಯಾರಿಸಲು ಉತ್ತಮ; ಹೊಳೆವ ಹಳದಿ ಬಣ್ಣದ ಉತ್ತಮ ಮೋಪು ಹಲಸು. ಈ ಮರದಿಂದ ತಯಾರಿಸಿದ ಒಂದು ಟೇಬಲ್, ಒಂದು ಕುರ್ಚಿ ಕಳೆದ ಐದು ದಶಕಗಳಿಂದ ನಮ್ಮ ಮನೆಯಲ್ಲಿ ಉಪಯೋಗದಲ್ಲಿದೆ! ಚೆನ್ನಾಗಿ ಪಾಲಿಶ್ ಮಾಡಿದ ಹಲಸಿನ ಹಲಗೆಯ ಬಣ್ಣವು ಕಣ್‌ಸೆಳೆಯುವಂತಹದ್ದು. ಇದೇ ರೀತಿ, ಹೆಬ್ಬಲಸಿನ ಹಲಗೆಗಳೂ ಬಹೂಪಯೋಗಿ.

ಹಣ್ಣಿನ ಬೀಜದ ಎಣ್ಣೆ!

ಹೆಬ್ಬಲಸು ಎಂಬುದು ಹಲಸಿನ ಸಂಬಂಧಿ ಸಸ್ಯ; ಅದರ ಹಣ್ಣಿನ ಗಾತ್ರ ಕಿರಿದು; ತೊಳೆ ಇನ್ನೂ ಕಿರಿದು; ರುಚಿ ಮಾತ್ರ ಚೆಂದ. ಬೇಸಗೆಯ ದಿನಗಳಲ್ಲಿ ಹೆಬ್ಬಲಸಿನ ಹಣ್ಣಾಗುತ್ತದೆ; ಒಂದೊಂದು ಮರದಲ್ಲೂ ಸಾವಿರಾರು ಹಣ್ಣುಗಳು. ಹಣ್ಣಿನ ತೊಳೆಯಲ್ಲಿರುವ ಪುಟಾಣಿ ಬೀಜಗಳನ್ನು ರಾಶಿ ರಾಶಿ ಸಂಗ್ರಹಿಸಿ, ಎಣ್ಣೆ ತಯಾರಿಸುವ ಪರಿಪಾಠ ನಮ್ಮ ಹಳ್ಳಿಯಲ್ಲಿತ್ತು; ಇದೇ ರೀತಿ ಎಣ್ಣೆ ಕೊಡುವ ಕಾಯಿ ಬಿಡುವ ಇನ್ನೊಂದು ಮರವೂ ನಮ್ಮ ಮನೆಯ ಹಿಂಭಾಗದ ಹಕ್ಕಲಿನಲ್ಲಿದೆ; ಮುಳ್ಳು ಹರಳು ಎಂಬುದು ಗಿಡದ ಹೆಸರು. ಅದರ ಕಾಂಡದ ತುಂಬಾ ಮುಳ್ಳುಗಳು. ಅದರ ಕಾಯಿಯನ್ನು ಒಣಗಿಸಿ, ಜಜ್ಜಿ, ಬೇಯಿಸಿ ಎಣ್ಣೆ ತೆಗೆದು, ತಲೆಗೆ ಹಚ್ಚಿಕೊಳ್ಳುತ್ತಿದ್ದರಂತೆ. ಅದರ ಕಾಯಿಗಳು ಬುಗುರಿಯ ರೀತಿ ಮಕ್ಕಳಿಗೆ ಆಟಕ್ಕೆ ಒದಗುತ್ತಿದ್ದವು. ಆದರೆ, ಈಚಿನ ವರ್ಷಗಳಲ್ಲಿ ಇದರ ಎಣ್ಣೆ ತಯಾರಿಸುವುದನ್ನು ನಮ್ಮೂರಿನ ಜನರು ಮರೆತೇಬಿಟ್ಟಿದ್ದಾರೆ. ಅಂಗಡಿಗಳಲ್ಲಿ ದೊರಕುವ ರಿಫೈನ್ಡ್ ಆಯಿಲ್ ಬಳಕೆಗೆ ಬಂದ ನಂತರದ ಬದಲಾವಣೆ ಇದು. ದೂಪದ ಎಣ್ಣೆ, ಹೊನ್ನೆಣ್ಣೆ, ಹೆಬ್ಬಲಸಿನ ಬೀಜದ ಎಣ್ಣೆ, ಮುಳ್ಳು ಹರಳಿನ ಎಣ್ಣೆ – ಕಾಡು ಸಸ್ಯಗಳಿಂದ ತಯಾರಿಸುತ್ತಿದ್ದ, ಇಂದು ಮರೆಯಾಗುತ್ತಿರುವ ಎಣ್ಣೆಗಳ ಉದಾಹರಣೆಗಳು; ಇಂತಹ ಸ್ಥಳೀಯ ಎಣ್ಣೆಗಳ ಬಳಕೆ ನಿಂತುಹೋದರೆ, ಅಷ್ಟರ ಮಟ್ಟಿಗೆ ನಮಗೆ ನಷ್ಟ ಅಲ್ಲವೆ! ಅವುಗಳ ಜಾಗದಲ್ಲಿ ಕೃತಕ ಮತ್ತು ರಿಫೈನ್ಡ್ ಹೆಸರಿನ ಎಣ್ಣೆಗಳು ಬಳಕೆಗೆ ಬಂದು, ನಮ್ಮ ಆರೋಗ್ಯವನ್ನು ನಲುಗಿಸುತ್ತಿವೆ. ರಿಫೈನ್ಡ್ ಎಣ್ಣೆಯಿಂದ ಆರೋಗ್ಯಕ್ಕೆ ಹಾನಿ ಎಂದು ವೈದ್ಯರು ಅದಾಗಲೇ ಎಚ್ಚರಿಸಿದ್ದಾರೆ. ಹೇಗೆ ನಮ್ಮ ಸುತ್ತಲಿನ ಮರಗಿಡಗಳ ಮತ್ತು ಪರಿಸರದ ನಾಶವು, ನಮ್ಮ ಬದುಕನ್ನೇ ಬದಲಿಸುತ್ತಿದೆ ಎಂಬುದಕ್ಕೆ ಇದೂ ಒಂದು ಉದಾಹರಣೆ.

ಚಿರುಟಿದ ಮಿಡಿ ನಾಲಗೆಗೆ ರುಚಿ

ನಮ್ಮ ಹಳ್ಳಿಯಲ್ಲಿದ್ದ ನೂರಾರು ಕಾಟು ಮಾವಿನ ಮರಗಳ ವೈವಿಧ್ಯ ಮಾತ್ರ, ಎಂಥವರಲ್ಲೂ ವಿಸ್ಮಯ ಹುಟ್ಟಿಸೀತು! ಈಚಿನ ವರ್ಷಗಳಲ್ಲಿ ಹಳೆಯ ಮರಗಳು ಮರೆಯಾಗಿ, ಅಷ್ಟರ ಮಟ್ಟಿಗೆ ನಷ್ಟವಾಗಿದೆ. ಎಳೆಯ ಮಾವಿನ ಮಿಡಿಗಳನ್ನು ಕೊಯ್ದು, ಉಪ್ಪಿನಲ್ಲಿ ಚಿರುಟಿಸಿ, ಮೆಣಸಿನ ಕಾಯಿಯನ್ನು ಅರೆದು, ಬೆರೆಸು, ಜಾಲಿಗಳಲ್ಲಿ ತುಂಬಿಟ್ಟರೆ, ದೀರ್ಘಕಾಲ ಬಾಳಿಕೆ ಬರುವ 'ಮಿಡಿ ಉಪ್ಪಿನ ಕಾಯಿ' ಸಿದ್ಧ! ಹದವಾಗಿ ತಯಾರಿಸಿದ ಮಿಡಿ ಉಪ್ಪಿನಕಾಯಿಯು, ಕನಿಷ್ಟ ಮೂರು ವರ್ಷ ಕೆಡದೇ ಉಳಿಯುತ್ತದೆ. ಸರಿಯಾಗಿ ಕಾಪಿಟ್ಟರೆ, ಇನ್ನೂ ದೀರ್ಘ ಕಾಲ ಬಾಳಿಕೆ ಬರಬಲ್ಲದೇನೋ! ಒಂದೆರಡು ವರ್ಷ ಹಳೆಯದಾದ ಉಪ್ಪಿನಕಾಯಿಯಲ್ಲಿ ಕೆಲವು ಔಷಧೀಯ ಗುಣಗಳು, ಪ್ರೊಬಯೋಟಿಕ್ ಪೂರಕ ಅಂಶಗಳು ಇವೆ ಎನ್ನುತ್ತಿದ್ದಾರೆ ಆಹಾರ ತಜ್ಞರು. ಹಿಂದಿನ ದಿನಗಳಲ್ಲಿ, ಜ್ವರ ಬಂದಾಗ, ಮಿಡಿ ಉಪ್ಪಿನಕಾಯಿ ರಸದೊಂದಿಗೆ ಊಟ ಮಾಡಿದರೆ, ಬೇಗನೆ ವಾಸಿಯಾಗುತ್ತದೆ ಎಂದು ಅಜ್ಜಿಯರು ಹೇಳುತ್ತಿದ್ದರು; ಅಂದಿನ ಅನುಭವದ ಮಾತಿನಲ್ಲಿ ಸತ್ಯ ಅಡಗಿದೆ ಎನಿಸುತ್ತದೆ.

ಕಾಡು, ಗುಡ್ಡ, ಹಾಡಿ, ಹಕ್ಕಲು, ತೋಡಿನ ಅಂಚು, ತೋಟದ ಬೇಲಿಗುಂಟ, ಕೆರೆಯ ದಡ, ನದಿ ದಡ, ಮನೆಯ ಅಂಗಳದ ಅಂಚು – ಹೀಗೆ ಎಲ್ಲೆಂದರಲ್ಲಿ ಬೃಹದಾಕಾರವಾಗಿ ಬೆಳೆದುಕೊಂಡಿರುತ್ತಿದ್ದ ಕಾಟು ಮಾವಿನ ಒಂದೊಂದು ಮರದಲ್ಲೂ ನೂರಾರು, ಸಾವಿರಾರು ಕಾಯಿಗಳಾಗುತ್ತಿದ್ದವು! ಆ ಕಾಯಿಗಳನ್ನು ಕತ್ತರಿಸಿ, ಒಣಗಿಸಿ, ಮಳೆಗಾಲದಲ್ಲಿ ಹುಳಿಗಾಗಿ ಬಳಸುವ ಪದ್ಧತಿಯೂ ಇತ್ತು. ಒಂದೊಂದು ಮರವೂ ಸಾವಿರಾರು ಹಣ್ಣುಗಳನ್ನು ನೀಡುವ ಸಮಯವೆಂದರೆ, ಬಿರು ಬೇಸಗೆಯ ಕೊನೆಯ ಮತ್ತು ಮಳೆಗಾಲದ ಆರಂಭದ ದಿನಗಳು. ಮುಂಗಾರಿನ ಗಾಳಿ ಬೀಸಿದಾಗ, ಒಂದೊಂದು ಮರದಿಂದಲೂ ಒಂದು ಹೊತ್ತಿಗೆ ನೂರಾರು ಹಣ್ಣುಗಳು ಉದುರಿ ಬೀಳುತ್ತಿದ್ದವು! ಅವುಗಳನ್ನು ಆಯ್ದು ಬುಟ್ಟಿಯಲ್ಲಿ ತುಂಬಿ ಮನೆಗೆ ತರುವುದು ಮಕ್ಕಳ ಕೆಲಸ; ಆ ಪುಟಾಣಿ ಹಣ್ಣುಗಳ ಸಿಪ್ಪೆ ತೆಗೆದು, ಅರೆಯುವ ಕಲ್ಲಿಗೆ ಹಾಕಿ, ತಿರುಗಿಸಿ, ರಸಮಾಡಿ, ಒಂದು ಗೆರಸಿಯ ಮೇಲೆ ಸುರಿದು, ಒಣಗಿಸುವುದು ಅಕ್ಕ, ತಂಗಿ, ಅಮ್ಮನ ಕೆಲಸ. ಈ ರೀತಿ ಆರೆಂಟು ದಿನ ರಸವನ್ನು ತೆಗೆದು, ಅದೇ ಗೆರಸಿಗೆ ಸುರಿದು, ಚೆನ್ನಾಗಿ ಒಣಗಿಸಿಟ್ಟರೆ, 'ಹಣ್‌ಚಟ್' ಸಿದ್ಧ. ಮಳೆಗಾಲದಲ್ಲಿ ರುಚಿರುಚಿಯಾಗಿ ತಿನ್ನಲು, ಗೊಜ್ಜು, ಚಟ್ನಿ ಮಾಡಲು ಅನುಕೂಲ. ಹಳ್ಳಿಗಳು ನಗರೀಕರಣಗೊಳ್ಳುತ್ತಾ ಸಾಗಿದಂತೆ, ಕಳೆದು ಹೋಗುತ್ತಿರುವ ಅಮೂಲ್ಯ ವಸ್ತುಗಳಲ್ಲಿ ಈ 'ಹಣ್‌ಚಟ್' ಕೂಡಾ ಒಂದು.



ನಾಯಿ ಭಟ್ಕಳ!

ಈಗ ನಮ್ಮೂರಲ್ಲಿ ಅಷ್ಟೊಂದು ಸಂಖ್ಯೆಯ ಬೃಹದಾಕಾರದ ಕಾಟು ಮಾವಿನ ಮರಗಳಿಲ್ಲ; ಒಂದೊಂದು ಮರದ ಹಣ್ಣು ಒಂದೊಂದು ರುಚಿ; ಕೆಲವು ಮರಗಳ ಹಣ್ಣುಗಳು ರುಚಿ ಥೇಟ್ ರಸಪೂರಿಯದು. ಆದರೆ ಗಾತ್ರ ಮಾತ್ರ ಚಿಕ್ಕದು. ಈ ಕಾಟು ಮಾವಿನ ತಳಿಗಳಲ್ಲೇ, ಮಧ್ಯಮ ಗಾತ್ರದ ಕಾಯಿ ಬಿಡುವ ಕೆಲವು ಮರಗಳಿದ್ದವು. ಇಂತಹ ಮಾವನ್ನು 'ನಾಯಿ ಭಟ್ಕಳ' ಎಂದೂ ಕರೆಯುವುದುಂಟು. ತುಸು ದೊಡ್ಡ ಗಾತ್ರದ ಈ ಕಾಯಿಗಳನ್ನು ಉಪ್ಪುನೀರಿಗೆ ಹಾಕಿಟ್ಟರೆ, ನಾಲ್ಕಾರು ತಿಂಗಳುಗಳ ನಂತರ, ಅದರಿಂದ ಮಾವಿನ ಕಾಯಿಯ ಚಟ್ನಿ ಮಾಡಬಹುದು! ಸೀಸನ್ ಮುಗಿದ ನಂತರವೂ ಮಾವಿನ ಕಾಯಿಯ ಚಟ್ನಿ ಬೇಕೆಂದರೆ, 'ನೀರಿಗೆ ಹಾಕಿದ ಮಾವಿನ ಕಾಯಿ' ಸೂಕ್ತ.

ನಮ್ಮ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿರುವ ಹಕ್ಕಲಿನಲ್ಲಿ ಹಲವು ಬಗೆಯ ಬಹೂಪಯೋಗಿ ಮರಗಳಿವೆ. ಅವುಗಳಲ್ಲಿ ಹೆಚ್ಚು ವಾಣಿಜ್ಯಕ ಪ್ರಾಮುಖ್ಯತೆ ಇರುವುದು ಗೋಡಂಬಿ ಮರಗಳಿವೆ. ನಮ್ಮವರು ಅದನ್ನು 'ಗೋಯ್ ಮರ' ಎಂದೇ ಕರೆಯುವುದು: ಗೋವೆಯ ಪ್ರದೇಶದಿಂದ ಆಮದಾದ ಮರ ಎಂಬ ಹಿನ್ನೆಲೆಯಲ್ಲಿ, ಜತೆಗೆ ಗೇರು ಮರ ಎಂದೂ ಹೇಳುವುದುಂಟು. 'ಗೇರು' ಎಂಬ ಇನ್ನೊಂದು ಮರದ ಹೋಲಿಕೆ ಇದಕ್ಕೆ ಇರುವುದರಿಂದಾಗಿ ಆ ಹೆಸರು. ಗೋಯ್ ಮರಗಳಿಗೆ ವಿಶೇಷ ಆರೈಕೆ ಬೇಡ; ನೀರಿನಾಶ್ರಯ ಇಲ್ಲದ ಗುಡ್ಡದ ಪ್ರದೇಶದಲ್ಲೂ ಸೊಂಪಾಗಿ ಬೆಳೆಯಬಲ್ಲದು. ಅದರಲ್ಲಿ ಬಣ್ಣ ಬಣ್ಣದ ಹಣ್ಣು, ಅದರ ತುದಿಯಲ್ಲಿ ಬೀಜ; ಈ ಬೀಜದ ತಿರುಳೇ ಗೋಡಂಬಿ. ಬಣ್ಣದ ಹಣ್ಣು ಮಕ್ಕಳಿಗೆ ತಿನ್ನಲು ಮಾತ್ರ ಉಪಯೋಗ; ಕೊಯ್ದು ಅರ್ಧ ದಿನದಲ್ಲೇ ಹುಳಿ ಬರುವುದರಿಂದ, ಹಣ್ಣುಗಳ ಸಾಲಿನಲ್ಲಿ ಗೋಡಂಬಿ ಹಣ್ಣು ನಿಲ್ಲಲಾರದು. ತುಸು ಒಗರು, ತುಸು ಸಿಹಿ.

ಪ್ರಭುತ್ವದ ಮಧ್ಯಪ್ರವೇಶ!

ಸ್ವತಂತ್ರ ಪೂರ್ವದ ದಿನಗಳಲ್ಲಿ ಗೋಯ್ ಹಣ್ಣನ್ನು ಕೊಳೆಯಿಸಿ, ಅದಕ್ಕೆ ಬೆಲ್ಲದ ವೇಸ್ಟ್ ಸೇರಿಸಿ ಸಾರಾಯಿಯನ್ನು ನಮ್ಮ ಹಳ್ಳಿಯಲ್ಲೇ ಅಲ್ಲಲ್ಲಿ ತಯಾರಿಸುತ್ತಿದ್ದರಂತೆ. ಈ ಸ್ಥಳೀಯ ಸಾರಾಯಿಗೆ 'ಕಿಕ್' ಬರಲೆಂದು, ಭಟ್ಟಿ ಇಳಿಸುವ ಮೊದಲೇ ಅದಕ್ಕೆ ಕೋಳಿ ಹೇಲು, ಬ್ಯಾಟರಿ ಶೆಲ್ ಪುಡಿ ಸೇರಿಸು ತ್ತಿದ್ದರು ಎಂದೂ ಹೇಳುತ್ತಿದ್ದರು. ಆದರೆ, ಸಾರಾಯಿಯನ್ನು ತಯಾರಿಸಿ, ಮಾರಿ, ಅದರಿಂದ ಲಾಭ ಪಡೆಯುವ ಹಕ್ಕು ತನಗೆ ಮಾತ್ರ ಎಂದು ಪ್ರಭುತ್ವ ಸಾರಿದ ನಂತರ, ಅದಕ್ಕಾಗಿ ಬಿಗಿ ಕಾನೂನು ಮಾಡಿದ ನಂತರ, ಆ ರೀತಿ ಹಳ್ಳಿಗಳಲ್ಲಿ ಗೋಯ್ ಹಣ್ಣಿನಿಂದ ಸ್ಥಳೀಯರೇ ಸಾರಾಯಿಯನ್ನು ಭಟ್ಟಿ ಇಳಿಸುದುವು ಕಾನೂನು ಬಾಹಿರ ಚಟುವಟಿಕೆ ಎಂದಾಯಿತು! ಸ್ಥಳೀಯ ವಸ್ತುಗಳನ್ನು ಬಳಸಿ, ಸ್ಥಳೀಯರೇ ಭಟ್ಟಿ ಇಳಿಸುವ ಕ್ರಿಯೆಯನ್ನು ಕಳ್ಳಭಟ್ಟಿ ಎಂದು ಕರೆಯಲಾಯಿತು. ಸಹಜವಾಗಿ, ನಿಧಾನವಾಗಿ ಆ ಚಟುವಟಿಕೆ ನಿಂತು ಹೋಯಿತು.

ನಮ್ಮ ಹಕ್ಕಲಿನಲ್ಲಿದ್ದ ಆರೆಂಟು ಗೋಡಂಬಿ ಮರಗಳಿಂದ ಪ್ರತಿ ಬೇಸಗೆಯಲ್ಲಿ ಸಾಕಷ್ಟು ಬೀಜಗಳು ಸಿಗುತ್ತಿದ್ದವು. ಅವುಗಳ ಹಸಿ ಬೀಜದ ತಿರುಳಿನ ಪಲ್ಯ, ನಿಜಕ್ಕೂ ಬಲುರುಚಿ. ಒಣಗಿಸಿದ ಗೋಡಂಬಿ ಬೀಜವನ್ನು ಮನೆಯ ಬಳಿಯೇ ಸುಟ್ಟು, ತಿರುಳನ್ನು ಬೇರ್ಪಡಿಸಿ, ಬಿಸಿಬಿಸಿ ಇರುವಾಗಲೇ ತಿಂದರೆ ಬಲುರುಚಿ!

ಪಿತ್ತದೋಷಕ್ಕೆ ಪರಿಹಾರ

ಆ ಹಕ್ಕಲಿನಲ್ಲಿದ್ದ ಆರೆಂಟು ಗೋಡಂಬಿ ಮರಗಳಿಂದ ತುಸು ದೂರದಲ್ಲಿ ಎರಡು 'ಮುರಿನ ಮರ'ಗಳಿದ್ದವು (ಗಾರ್ಸೀನಿಯಾ ಇಂಡಿಕಾ). ಮುರಿನ ಹಣ್ಣು ಎಂದರೆ ಕೋಕಂ ಹಣ್ಣು. ಆ ಹಣ್ಣಿನ ತಿರುಳು ಹುಳಿ ಮಿಶ್ರಿತ ಸಿಹಿ. ಹಣ್ಣಿನ ಕೆಂಪನೆಯ ಸಿಪ್ಪೆಯನ್ನು ಒಣಗಿಸಿಟ್ಟರೆ, ಬಹುಕಾಲ ಬಾಳಿಕೆ ಬರುತ್ತದೆ; ಅದರಿಂದ ತಿಳಿಸಾರು ಮಾಡಬಹುದು; ಕೋಕಂ ಜ್ಯೂಸ್ ಸಹ ಮಾಡಬಹುದು. ಪಿತ್ತದ ಸಮಸ್ಯೆ ಇರುವವರು, ಮುರಿನ ಹಣ್ಣಿನ ಸಿಪ್ಪೆಯ ಸಾರನ್ನು ಸೇವಿಸಿದರೆ ಉತ್ತಮ ಎಂಬ ನಂಬಿಕೆ ನಮ್ಮೂರಲ್ಲಿದೆ.

ನಮ್ಮ ಮನೆಯಂಗಳದ ಅಂಚಿನಲ್ಲೇ ಬೆಳೆದಿದ್ದ ಬೃಹದಾಕಾರದ ಇನ್ನೊಂದು ಮರದ ಕುರಿತು ಹೇಳಲೇಬೇಕು – ಅದೇ ಅಮಟೆ ಮರ. ಎಷ್ಟು ವರ್ಷಗಳಿಂದ ಅದು ಬೆಳೆದಿತ್ತೋ ಅರಿಯೆ – ಪಕ್ಕದಲ್ಲಿದ್ದ ಇನ್ನೊಂದು ಬೃಹದಾಕಾರದ ಬಾಗಾಳು ಹೂವಿನ ಮರ (ರಂಜ, ಬಕುಳ)ಕ್ಕೆ ಸ್ಪರ್ಧೆ ನೀಡುವಂತೆ ಬೆಳೆದುಕೊಂಡಿತ್ತು, ಆ ಅಮಟೇ ಮರ. ಪ್ರತಿವರ್ಷ ಅದು ನೀಡುತ್ತಿದ್ದ ಸಾವಿರಾರು ಅಮಟೆ ಕಾಯಿಗಳು ಬಹೂಪಯೋಗಿ; ಎಳೆಯ ಅಮಟೆ ಕಾಯಿಗಳಿಗೆ ಹುಳಿರುಚಿ; ಅದನ್ನು ಉಪ್ಪಿನ ಕಾಯಿ ಮಾಡಬಹುದು. ಕಾಯಿ ಬಲಿತ ನಂತರ, ಒಳಗಿನ ಓಟೆ ಬಿರುಸಾಗುತ್ತದೆ – ಮಾವಿನ ಕಾಯಿಯ ರೀತಿ. ಆಗ, ಅವುಗಳನ್ನು ಕತ್ತರಿಸಿ, ತೊಗಟೆ ಬೇರ್ಪಡಿಸಿ, ಉಪ್ಪಿನಕಾಯಿ ತಯಾರಿಸುವರು. ಹಿಂಡಿಗೊಜ್ಜು ಎಂಬ ವ್ಯಂಜನವನ್ನೂ ಅಮಟೆಕಾಯಿಯಿಂದ ತಯಾರಿಸಬಹುದು. ಮಳೆಗಾಲದಲ್ಲಿ ತಯಾರಿಸುವ ಹುರುಳಿ ಸಾರಿಗೆ, ಅಮಟೆಕಾಯಿಯನ್ನು ಜಜ್ಜಿ ಹಾಕಿದರೆ, ಸಾರಿನ ರುಚಿಯು ಒಂದು ಹಂತ ಮೇಲೇರುತ್ತದೆ. ಮನೆಯಂಗಳದಲ್ಲೇ ಬೆಳೆಯುತ್ತಿದ್ದ ಬೆಂಡೆಕಾಯಿಯ ಹುಳಿಗೂ ಅಮಟೆಕಾಯಿಯನ್ನು ಸೇರಿಸಿದರೆ, ಆ ಪದಾರ್ಥದ ರುಚಿ ಹೆಚ್ಚುತ್ತದೆ.

ನಮ್ಮ ಹಳ್ಳಿಯಲ್ಲಿ ಇಂತಹ ಹಲವು ಬಹೂಪಯೋಗಿ ಮರಗಳಿದ್ದವು; ನಮ್ಮ ನಾಡಿನ ಹೆಚ್ಚಿನ ಹಳ್ಳಿಗಳಲ್ಲೂ ಕೆಲವು ವರ್ಷಗಳ ಹಿಂದೆ ಇಂತಹ ಮರ, ಗಿಡ, ಬಳ್ಳಿಗಳಿದ್ದವು. ಈ ಬರಹದಲ್ಲಿ ಹಲವು ಕಡೆ 'ಬೃಹದಾಕಾರದ ಮರಗಳು' ಎಂದೇ ಕರೆದಿದ್ದೇನೆ; ಅವು ಬೃಹದಾಕಾರವಾಗಿಯೂ ಇದ್ದವು. ದೂಪದ ಮರ, ಹಲಸಿನ ಮರ, ಹೆಬ್ಬಲಸು, ಮಾವು, ಅಮಟೆ ಮೊದಲಾದವು ಅಂದು ಮನೆಯ ಪಕ್ಕದಲ್ಲೇ ಬಹು ಎತ್ತರ ಬೆಳೆದಿದ್ದವು. ಆದರೆ, ಇಂದು ಅಂತಹ ಬೃಹದಾಕಾರದ ಮರಗಳು ಕಡಿಮೆ; ಅದರಲ್ಲೂ ಮನೆಗಳ ಸುತ್ತಮುತ್ತ ಇನ್ನೂ ಕಡಿಮೆ. ಮನೆಯ ಅಂದ ದೂರಕ್ಕೆ ಕಾಣಿಸುವುದಿಲ್ಲ ಎಂದು ಮನೆಯ ಹತ್ತಿರದ ಮರಗಳನ್ನು ಕಡಿದುಹಾಕಿದವರೂ ಉಂಟು. ಜತೆಗೆ, ಮನೆಯ ಕೂಗಳತೆಯಲ್ಲಿದ್ದ ಹಕ್ಕಲು, ಹಾಡಿಗಳಲ್ಲೂ ಇಂದು ಮರಗಳ ಸಂಖ್ಯೆ ಕಡಿಮೆಯಾಗಿದೆ. ಹಕ್ಕಲು, ಹಾಡಿ, ಗುಡ್ಡಗಳು ಕೆಲವು ಕಡೆ ಸೈಟುಗಳಾಗಿ ಮಾರ್ಪಟ್ಟಿವೆ; ಇನ್ನು ಕೆಲವು ಕಡೆ, ಅಕೇಶಿಯಾ ಬೆಳೆಸುವ ಪ್ರದೇಶವಾಗಿವೆ; ಬಹುಬೇಗನೆ ಬೆಳೆಯುವ ಸಸ್ಯ ಅಕೇಶಿಯಾ ಎಂದು ಸರಕಾರದ ಇಲಾಖೆಗಳೇ ಪ್ರಚಾರ ಮಾಡಿ, ಅಕೇಶಿಯಾ ಬೆಳೆಯಲು ಕೃಷಿಕರಿಗೆ ಪ್ರೋತ್ಸಾಹ ನೀಡಿದವು. ಬೃಹತ್ ಕಳೆ ಸ್ವರೂಪದ ಅಕೇಶಿಯಾ ಇಂದು, ನಮ್ಮ ಹಳ್ಳಿಯ ಸುತ್ತಮುತ್ತಲಿನ ಸಹಜ ಕಾಡನ್ನು ನಿಧಾನವಾಗಿ ನುಂಗಿಹಾಕುತ್ತಿದೆ – ಪೇಟೆಯಿಂದಲೋ, ದೂರದ ದೇಶದಿಂದಲೋ ಹರಿದು ಬಂದ ಹೆಬ್ಬಾವಿನ ರೀತಿ, ಅಕೇಶಿಯಾವು ನಿಧಾನವಾಗಿ ನಮ್ಮ ಹಳ್ಳಿಯ ಸಹಜ ಸಸ್ಯವೈವಿಧ್ಯವನ್ನು ನುಂಗಿ, ಜೀರ್ಣಿಸಿಕೊಳ್ಳುತ್ತಿದೆ. ಸಹಜವಾಗಿ ಬೆಳೆಯುವ ವೈವಿಧ್ಯಮಯ ಕಾಡು, ದೂಳನ್ನು ಸಹ ತಡೆಯಬಲ್ಲದು; ಅವುಗಳ ಎಲೆಗಳು ಗಾಳಿಯಲ್ಲಿರುವ ದೂಳನ್ನು ತಡೆದು, ಶುದ್ಧಗಾಳಿಯನ್ನು ನಮಗೆ ಕೊಡುತ್ತವೆ. ಆದ್ದರಿಂದಲೇ, ದೆಹಲಿಯ ಜನರು ಅರಾವಳಿ ಬೆಟ್ಟಗಳನ್ನು ಅಲ್ಲಿನ ಕಾಡನ್ನು ಉಳಿಸುವಂತೆ ಹೋರಾಟ ಆರಂಭಿಸಿದ್ದಾರೆ; ಅಷ್ಟರ ಮಟ್ಟಿಗೆ ತಮ್ಮ ನಗರದ ಗಾಳಿಯನ್ನು ಚೊಕ್ಕಟವಾಗಿಡುವ ಆಸೆ ಅವರದ್ದು. ನಮ್ಮ ಪಶ್ಚಿಮಘಟ್ಟಗಳನ್ನು, ನಮ್ಮ ನಿಮ್ಮ ಊರಿನ ಸನಿಹದಲ್ಲಿರುವ ಕಾಡುಗಳನ್ನು, ಕುರುಚಲು ಪ್ರದೇಶವನ್ನು ಇದೇ ರೀತಿಯ ಹಲವು ಕಾರಣಗಳಿಗೆ ನಾವು ಉಳಿಸಿಕೊಳ್ಳಬೇಕಾಗಿದೆ.

ಈ ಬರಹದಲ್ಲಿ ಬಂದಿರುವ, ನಾನು ಬಾಲ್ಯದಲ್ಲಿ ಕಂಡಿದ್ದ ದೂಪದ ಎಣ್ಣೆ, ದುಗಳುದೂಪದ ರಾಳ, ಹೊನ್ನೆ ಎಣ್ಣೆ ಮೊದಲಾದವುಗಳನ್ನು ಇಂದಿನ ಮಕ್ಕಳಿಗೆ, ಕೇವಲ ಚಿತ್ರದ ಮೂಲಕ ಮಾತ್ರ ತೋರಿಸಲು ಸಾಧ್ಯ. ಮುಂದಿನ ತಲೆಮಾರಿನವರು ಇನ್ನಷ್ಟು ಕಳೆದುಕೊಳ್ಳುತ್ತಿದ್ದಾರೆ; ಇದೇ ರೀತಿ ನಮ್ಮ ಪರಿಸರವನ್ನು ನಾವು ಮರೆತರೆ, ನಿರ್ಲಕ್ಷ್ಯ ಮಾಡಿದರೆ, ಮುಂದಿನ ತಲೆಮಾರಿನವರು ಸಹಜಕಾಡನ್ನು ನೋಡಲು ಛಾಯಾಚಿತ್ರ, ವಿಡಿಯೋ ಮತ್ತು ಎಐ ಚಿತ್ರಗಳ ಮೊರೆಹೋಗಬೇಕಾದೀತು. (ಪ್ರತಿಕ್ರಿಯಿಸಿ : viramapost@gmail.com)

ಮನಸೆಳೆದ ಗೇಯ ನಾಟಕ

» ಕೆ. ರಾಮಮೂರ್ತಿರಾವ್

ಮೈಸೂರಿನ ಸಂಗೀತ ವಿದುಷಿ ಡಾ. ಸುಕನ್ಯಾ ಪ್ರಭಾಕರ ರವರು ಕರ್ನಾಟಕ ಸಂಗೀತದ ವಾಗ್ಗೇಯಕಾರರ ಜೀವನ ಸಾಧನೆ ಸಿದ್ಧಿಗಳ ಜತೆ ಅವರ ಅಪೂರ್ವ ರಚನೆಗಳನ್ನು ಹುಡುಕಿ ತೆಗೆದು ಕಲಾರಂಗಕ್ಕೆ ದೊರಕಿಸಿಕೊಡುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. 'ವೆಂಕಟ ಕವಿ' ಎಂದೇ ಪ್ರಖ್ಯಾತರಾಗಿರುವ ಊತ್ತುಕ್ಕಾಡು ವೆಂಕಟಸುಬ್ಬಯ್ಯರ್ ಅವರ ಜೀವನ ಸಾಧನೆಗಳನ್ನು ಬಿಂಬಿಸುವ, 'ವೆಂಕಟ ಕವಿ'ಯ ಕುರಿತಾದ ಗೇಯ ನೃತ್ಯ ನಾಟಕವೊಂದನ್ನು ಸಂಯೋಜಿಸಿ, ಮೈಸೂರಿನಲ್ಲಿ ಪ್ರಸ್ತುತಪಡಿಸಿದರು. ಸಂಗೀತವೇ ಈ ನಾಟಕದ ಜೀವಾಳ. ಬೇರೆಲ್ಲವೂ ಪೋಷಕ. ಮೂರು ಮಂದಿ ಸೂತ್ರಧಾರಿಗಳು ವೆಂಕಟ ಕವಿಯ ಕಥೆಯನ್ನು ವೇದಿಕೆಗೆ ಬಂದು ನಿರೂಪಿಸುತ್ತ, ಕವಿಯ ರಚನೆಗಳಲ್ಲಿನ ಸ್ವಾರಸ್ಯವನ್ನು ವಿವರಿಸುತ್ತಿದ್ದ ಪರಿ ಮನಮುಟ್ಟಿತು. ಹಲವು ಸಂದರ್ಭಗಳಲ್ಲಿ ಕವಿಯ ಪಾತ್ರಧಾರಿಯೇ ರಂಗಪ್ರವೇಶ ಮಾಡಿ, ಕವಿಯ ಜೀವನದ ವಿವಿಧ ಮಜಲುಗಳನ್ನು ಕವಿಯ ಬಾಯಿಯಿಂದಲೇ ಕೇಳಿದಂತೆ ನಿರೂಪಿಸಿದ ಕ್ರಮವೂ ಮೆಚ್ಚುಗೆ ಗಳಿಸಿತು.

ಊತ್ತುಕ್ಕಾಡು ವೆಂಕಟಸುಬ್ಬಯ್ಯರ್ ಸುಮಾರು 1700–1750 ರ ಸುಮಾರಿಗೆ ಇದ್ದವರು. ಅವರು ರಚಿಸಿದ ಮೋಹನ ರಾಗದ ಸ್ವಾಗತಂ ಕೃಷ್ಣ ಶರಣಾಗತಂ ಕೃಷ್ಣಾ, ತೋಡಿ ರಾಗದ ತಾಯೇ ಯಶೋದಾ ಉಂದನ್, ಕಾನಡಾ ರಾಗದ ಅಲೈ ಪಾಯ್ವುದೇ ಕಣ್ಣಾ ಪ್ರಸಿದ್ಧವಾಗಿವೆ. ಇವರು ಬರೆದಿರುವ ಸುಮಾರು 378 ರಚನೆಗಳು ಲಭ್ಯವಿದ್ದು ಅವುಗಳಲ್ಲಿ ಕೆಲವು ಮಾತ್ರ ಬಳಕೆಯಲ್ಲಿವೆ. ತಮಿಳು, ತೆಲುಗು, ಸಂಸ್ಕೃತ ಹಾಗೂ ಮರಾಠಿ ಭಾಷೆಗಳಲ್ಲೂ ಇವರು ಕೃತಿರಚಿಸಿದ್ದಾರೆ. ಸಂಗೀತ ಕ್ಷೇತ್ರದ ಇವರ ಜೀವನ ಸಾಧನೆಯ ಗಾಥೆಯೇ ಒಂದು ಮಹತ್ವದ ವಿಚಾರವಾಗಿದ್ದು ಸಂಶೋಧಕರಿಗೆ ಒಂದು ದೊಡ್ಡ ವಿಷಯ ಆಗಬಲ್ಲುದು. ಅಂತಹ ಮಹತ್ವದ ವಿಚಾರವನ್ನು ಗೇಯ ನಾಟಕದ ರೂಪದಲ್ಲಿ ಸಂಗೀತ ರಸಿಕರ ಮುಂದೆ ಪ್ರದರ್ಶಿಸಿದ ಕೀರ್ತಿ ಡಾ. ಸುಕನ್ಯಾ ಪ್ರಭಾಕರ್ ಅವರ ತಂಡದ್ದಾಗಿದೆ. ಕಳೆದ ವಾರ ಪ್ರದರ್ಶನಗೊಂಡ ನೂರೈವತ್ತು ನಿಮಿಷಗಳ ಈ ಗೇಯ ನಾಟಕದಲ್ಲಿ ಸಮೃದ್ಧ ಸಂಗೀತ, ಸಕಾಲಿಕ ಸಂದರ್ಭೋಚಿತ ಶಾಸ್ತ್ರೀಯ ನೃತ್ಯಗಳ ಅಳವಡಿಕೆ, ಅಲ್ಲಲ್ಲಿ ಸೂತ್ರಧಾರಿಗಳ ವಿವರಣಾತ್ಮಕ ಸಂಭಾಷಣೆ ಎಲ್ಲವೂ ಒಂದು ಸಿನಿಮಾ ನೋಡಿದಂತೆಯೇ ಗೋಚರವಾಗುತ್ತಿತ್ತು. ಇದರ ಪರಿಕಲ್ಪನೆ ಸ್ವತಃ ಡಾ. ಸುಕನ್ಯಾ ಪ್ರಭಾಕರ್ ಅವರದ್ದು; ಅದನ್ನು ನಾಟಕ ಶೈಲಿಗೆ ಲಲಿತಾ ಶ್ರೀನಿವಾಸನ್ ಅವರು ಹೊಂದಿಸಿ ರೂಪಾಂತರಿ ಸಿದ್ದರಲ್ಲದೆ ವಿಜಯಮಾಲಾ ನಿರ್ದೇಶಿಸಿದ್ದರು. ಇದೊಂದು ಅಪರೂಪದ, ಮನಸೆಳೆಯುವ ಸಂಗೀತ ಪ್ರಧಾನ ಪ್ರದರ್ಶನವಾಗಿ ಯಶಸ್ವಿಯಾಯಿತು.